
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

02 ನವೆಂಬರ್ 2016 ಪುಟ 20 ರೂ. 15/-



ಹೀಗಿದ್ದರು
ಕೆ.ಎಚ್.ರಂಗನಾಥ್



ಸ್ಟೀಲ್ ಬ್ರಿಡ್ಜ್

ತಾಳೆಯಾಗದ ಲೆಕ್ಕಾಚಾರ



ಪೇಜಾವರ ಶ್ರೀಗಳ
ಪ್ರಸ್ತಾಪಿತ ಉಪವಾಸ




ರುದ್ರೇಶ್ ಕೊಂದದ್ದು ಯಾರು?

ಬೆಳಗಾವಿ:
KLE ಸಂಸ್ಥೆಯ ತಾಲಿಬಾನಿ ಲೂಟಿ

ಕೊಡಗು:
ಬಿಜೆಪಿ ಒಡೆದ ಮನೆ



ರೈತರ ಸಾಲಮನ್ನಾ ಏಕೆ? ಹೇಗೆ? ಸಾಧ್ಯವೆ



ಕರ್ನಾಟಕದ ರೈತರು ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಸಾಲಮನ್ನಾ ಮತ್ತು ಬೆಳೆನಷ್ಟ ಪರಿಹಾರದ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ. ಕರ್ನಾಟಕ ಸರ್ಕಾರದ ವತಿಯಿಂದ ನಿನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಸಹಕಾರಿ ಸಂಸ್ಥೆಗಳಿಂದ ಪಡೆದ ಸಾಲದ ಬಡ್ಡಿ ಮನ್ನಾ (ಅಸಲು ಪಾವತಿಸಿದರೆ ಮಾತ್ರ) ಮಾತ್ರ ಮಾಡುವ ಅವಧಿಯನ್ನು ಇನ್ನು 6 ತಿಂಗಳು ವಿಸ್ತರಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಇನ್ನು ಕೇಂದ್ರ ಸರ್ಕಾರವಂತೂ ಅಂತಹ ಒಂದು ಆಲೋಚನೆಯಲ್ಲೇ ಇಲ್ಲ.

ಜನಾಂದೋಲನಗಳ ಮಹಾಮೈತ್ರಿಯ ನೇತೃತ್ವದಲ್ಲಿ ರೈತಸಂಘ, ಕರ್ನಾಟಕ ಜನಶಕ್ತಿ ಮತ್ತಿತರ ಸಂಘಟನೆಗಳು ಹಮ್ಮಿಕೊಂಡಿರುವ ಈ ಹೋರಾಟಕ್ಕೆ ಸರ್ಕಾರವು ಯಾವ ರೀತಿ ಸ್ಪಂದಿಸುತ್ತದೆಂಬುದು ಗೊತ್ತಿಲ್ಲ. ಆದರೆ, ಕೆಲವರಿಗಾದರೂ ರೈತರ ಸಾಲಮನ್ನಾ ಏಕೆ ಮಾಡಬೇಕು ಎಂಬ ಪ್ರಶ್ನೆ ಬಂದೇ ಬರುತ್ತದೆ. ಇದು ಸೋಮಾರಿ ರೈತರನ್ನು ಸರ್ಕಾರ ಮುದ್ದು ಮಾಡಿ ಸಾಕುತ್ತಿರುವುದು ಎಂಬುದು ಕೆಲವರ ಅಭಿಪ್ರಾಯವಾದರೆ, ಕೃಷಿಯನ್ನು ಲಾಭದಾಯಕವಾಗಿ ನಡೆಸುವ ಉದ್ಯಮಶೀಲತೆಯಿಲ್ಲದವರನ್ನು ಈ ರೀತಿ ಪೋಷಿಸುವುದು ಸರಿಯಲ್ಲ ಎಂಬುದು ಇನ್ನು ಕೆಲವರ ಅಭಿಪ್ರಾಯ. ಎರಡನೆಯ ರೀತಿ ಅನಿಸಿಕೆ ಹೊಂದಿರುವವರ ಪ್ರಕಾರ ಕೃಷಿಯನ್ನು ಯಾವ ಸಬ್ಸಿಡಿ, ಸಾಲಮನ್ನಾ, ರಿಯಾಯಿತಿಗಳಿಲ್ಲದೇ ಲಾಭದಾಯಕವಾಗಿ ಸಬಹುದು; ಆದರೆ, ಈ ದೇಶದ ಹಿಂದುಳಿದ ರೈತರ ಮನೋಭಾವದ ಕಾರಣದಿಂದ ಅದು ಸಾಧ್ಯವಾಗಿಲ್ಲ. ಆದ್ದರಿಂದ ಕಂಪೆನಿ ಕೃಷಿ ಅಥವಾ ಕರಾರು ಕೃಷಿಯ ಮೂಲಕ ಭೂಮಿಯ ಕೇಂದ್ರೀಕರಣವನ್ನು ಸಾಧಿಸಿ ಅದನ್ನು ಲಾಭದಾಯಕವಾಗಿಸಬೇಕು ಎಂದು ಇಂತಹವರು ಹೇಳುತ್ತಾರೆ.

ಇದಲ್ಲದೇ ಇನ್ನೂ ಹತ್ತು ಹಲವು ರೀತಿಯ ನಕಾರಾತ್ಮಕ ಅಭಿಪ್ರಾಯಗಳು ಸಮಾಜದಲ್ಲಿವೆ. ಬಹಳ ಮುಖ್ಯವಾಗಿ ಮೇಲ್ಮಧ್ಯಮ ವರ್ಗದ ಒಂದು ಗುಂಪು 'ನಾವು ಕೊಡುವ ತೆರಿಗೆ ಹಣವನ್ನು ಇಂತಹ ಸೋಮಾರಿಗಳನ್ನು ಸಾಕಲು ಸರ್ಕಾರ ಬಳಸುತ್ತದೆ. ಅದರ ಒಂದು ಸ್ವರೂಪವೇ ಸಾಲಮನ್ನಾ' ಎಂದು ಭಾವಿಸುತ್ತದೆ. ಇದೆಲ್ಲಾ ಹೌದೇ? ಹಾಗಾದರೆ, ರೈತ ಸಮುದಾಯವು ಸರ್ಕಾರದಿಂದ ಮಾನವೀಯ ನೆಲೆಯಲ್ಲಿ ಪಡೆದುಕೊಳ್ಳುತ್ತಿರುವ ಭಿಕ್ಷೆ ಇದಾಗಿದೆಯೇ ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಿದೆ. ಏಕೆಂದರೆ, ಈಗ ರೈತರು ಮತ್ತು ಸಂಘಟನೆಗಳು ಸರ್ಕಾರದ ಬಳಿ ಕೇಳುತ್ತಿರುವ ನಷ್ಟ ಪರಿಹಾರ ಹಾಗೂ ಸಾಲಮನ್ನಾಗಳನ್ನು ಹಕ್ಕಾಗಿ ಕೇಳಬೇಕೇ, ಅಥವಾ 'ನೋಡಿ ಸ್ವಾಮಿ, ನಾವು ಬಡವರು, ಕೈಲಾಗದವು, ಸ್ವಲ್ಪ ಸಹಾಯ ಮಾಡಿ' ಎಂದು ಕೇಳಿಕೊಳ್ಳಬೇಕೇ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು.

ಬಹಳ ಹಿಂದೆ ಪ್ರೊ.ಎಂ.ಡಿ.ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ರೈತಸಂಘವು 'ರೈತ ಸಾಲಗಾರನಲ್ಲ; ಸರ್ಕಾರವೇ ಬಾಕಿದಾರ' ಎಂದು ಘೋಷಿಸಿತ್ತು. ಅದಕ್ಕೂ ಹಿಂದೆ ಅಸ್ತಿತ್ವದಲ್ಲಿದ್ದ ಭತ್ತದ ಲೆವಿಯ ಉದಾಹರಣೆಯನ್ನು ಅವರು ನೀಡುತ್ತಾ ಇಂತಿಷ್ಟು ವರ್ಷಗಳ ಕಾಲ ರೈತರು ಭತ್ತವನ್ನು ಬೆಳೆದು ಅದನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ದರದಲ್ಲಿ ಸರ್ಕಾರಕ್ಕೆ ನೀಡಿದ್ದಾರೆ. ಈ ವ್ಯತ್ಯಾಸದ ಮೊತ್ತ ಇಷ್ಟು ಸಾವಿರ ಅಥವಾ ಲಕ್ಷ ಕೋಟಿಗಳಾಗುತ್ತವೆ. ಹಾಗಾಗಿ ಸರ್ಕಾರವೇ ನಮಗಿನ್ನೂ ಕೊಡಬೇಕಾದ ಬಾಕಿಯನ್ನು ಉಳಿಸಿಕೊಂಡಿದೆ; ಮೊದಲು ಅದನ್ನು ತೀರಿಸಿ ದೂಸರಾ ಮಾತಾಡಲಿ ಎಂಬುದು ಅವರ ವಾದವಾಗಿತ್ತು.

ಆ ವಾದವೂ ಸರಿಯಾಗಿದೆ. ಅದರ ಜೊತೆಗೆ ಇನ್ನೂ ಕೆಲವು ಅಂಶಗಳನ್ನು ಪರಿಶೀಲಿಸಬೇಕಿದೆ. ಎಲ್ಲಾ ಉತ್ಪನ್ನಗಳಂತೆ, ಒಂದು ಸರಕನ್ನು ತಯಾರಿಸಲು ಆಗುವ ಖರ್ಚು ಮತ್ತು ಅದರ ಮೇಲಿನ ಲಾಭಾಂಶವನ್ನು ಸೇರಿಸಿದರೆ ಈಗಿನ ಕೃಷಿ ಉತ್ಪನ್ನಗಳಲ್ಲಿ ಶೇ.95ರಷ್ಟು ಪದಾರ್ಥಗಳ ಬೆಲೆ ಈಗಿರುವುದಕ್ಕಿಂತ ಶೇ.50ರಿಂದ ಶೇ.100ರಷ್ಟು ಹೆಚ್ಚುತ್ತಿತ್ತು, ಇದಕ್ಕೆ ಸಂಬಂಧಿಸಿದಂತೆ ನಮ್ಮದೇ ಆದ ಲೆಕ್ಕವೊಂದನ್ನು ಮಾಡುವುದು ಬೇಡ. ಕರ್ನಾಟಕ ಸರ್ಕಾರವು ಕೃಷಿ ಬೆಲೆ ನಿಗದಿ ಆಯೋಗವನ್ನು ರಚಿಸಿದೆ. ಅದು ಪ್ರತಿಯೊಂದು ಬೆಳೆಗೆ ತಗುಲುವ ಖರ್ಚನ್ನು ಲೆಕ್ಕ ಹಾಕಿದೆ. ಇದರ ಮೇಲೆ ಲಾಭಾಂಶವೆಂದರೆ ಎಷ್ಟು ಕೊಡಬೇಕು. ಖರ್ಚಿನ ಮೇಲೆ ಶೇ.50ರಷ್ಟು ಕೊಡಬೇಕೆಂದು ರಾಷ್ಟ್ರೀಯ ರೈತ ಆಯೋಗ ಶಿಫಾರಸ್ಸು ಮಾಡಿತ್ತು. ಅದರಂತೆ ಕೊಡುವುದಾದಲ್ಲಿ ದೇಶದಲ್ಲಿ ಒಬ್ಬ ರೈತರೂ ಸಾಲದ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ.

ಇದರರ್ಥ ರೈತರ ಯಾವ ಬೆಳೆಗೂ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ಹೆಚ್ಚು ಕಡಿಮೆ ಅರ್ಧ ಬೆಲೆಗೆ ಅವರು ದೇಶದ ಜನರಿಗೆ ಅನ್ನವನ್ನೋ ರೊಟ್ಟಿಯನ್ನೋ ಉಣಿಸುತ್ತಿದ್ದಾರೆ. ಇದೇ ನಿಜವಾದರೆ, ಈ ದೇಶದ ರೈತರು ಬದುಕುತ್ತಿರುವುದಾದರೂ ಹೇಗೆ? ತಾವು ಖರ್ಚು ಮಾಡುತ್ತಿರುವುದಕ್ಕಿಂತಲೂ ಕಡಿಮೆ ಹಣದಲ್ಲಿ ಯಾರೂ ಯಾವ ಉತ್ಪನ್ನವನ್ನೂ ಮಾರಲು ಸಾಧ್ಯವಿಲ್ಲ, ಹಾಗಾಗಿ ಇದು ಸುಳ್ಳು ಎಂದು ಹೆಚ್ಚಿನವರು ಭಾವಿಸುತ್ತಾರೆ. ಇಲ್ಲ, ಇದು ನಿಜ. ಅದು ಹೇಗೆ? ಯಾವ ರೈತ ಕುಟುಂಬವೂ ಕೃಷಿಗೆ ಮಾಡಿದ ತನ್ನ ಒಟ್ಟಾರೆ ಖರ್ಚನ್ನು ಲೆಕ್ಕ ಹಾಕುವಾಗ, ತನ್ನ ಕುಟುಂಬ ಸದಸ್ಯರ ದುಡಿಮೆಯ ಕೂಲಿಯನ್ನು ಲೆಕ್ಕ ಹಾಕುವುದಿಲ್ಲ, ತಾವು ಖರ್ಚು ಮಾಡಿದ ಹಣದ ಮೇಲೆ ಎಷ್ಟು ಲಾಭ ಬಂತು ಎಂದಷ್ಟೇ ನೋಡುತ್ತಾರೆ. ಎರಡನೆಯದಾಗಿ, ತಾವು ಹೂಡಿರುವ ಹಣದ ಮೇಲಿನ ಬಡ್ಡಿ ಲೆಕ್ಕ ಹಾಕುವುದಿಲ್ಲ, ಇನ್ನು ಭೂಮಿಯ ಬೆಲೆ, ಅದನ್ನು ಹೂಡಿಕೆಯಂತೆ ನೋಡುವುದಂತೂ ಇಲ್ಲವೇ ಇಲ್ಲ.

ಇವೆಲ್ಲಕ್ಕಿಂತ ಮುಖ್ಯವಾಗಿ ಕಳೆದ 20 ವರ್ಷಗಳಲ್ಲಿ ಇನ್ನೊಂದು ವಿದ್ಯಮಾನ ಸಹ ನಡೆಯುತ್ತಿದೆ. ಅದೇನೆಂದರೆ, ಹಳ್ಳಿಯಲ್ಲೇ ನೆಲೆಸಿರುವ ರೈತ ಕುಟುಂಬವು ಕೃಷಿಯ ಜೊತೆಗೆ ಇನ್ನೊಂದು ಉಪಕಸುಬು ಮಾಡುತ್ತಿರುತ್ತದೆ ಅಥವಾ ಈ ಕುಟುಂಬದ ಒಬ್ಬಿಬ್ಬರು ಬೇರೆ ಕಡೆಗೆ ಹೋಗಿ ಇನ್ನೊಂದು ಉದ್ಯೋಗ ಮಾಡುತ್ತಿರುತ್ತಾರೆ. ಉಪಕಸುಬಿನಲ್ಲಿ ಅಥವಾ ಹೊರಗಿನ ಉದ್ಯೋಗದಲ್ಲಿ ಬರುವ ಲಾಭದಿಂದ ಕೃಷಿಗೆ ಸ್ವಯಂ ಸಬ್ಸಿಡಿ ಕೊಟ್ಟುಕೊಳ್ಳುತ್ತಾರೆ. ಅಂದರೆ ರೈತರೇ ಸಬ್ಸಿಡಿಯನ್ನು ಕೊಟ್ಟು ನಡೆಸುತ್ತಿರುವ ಕೃಷಿ ಇದಾಗಿದೆ.



ಈಗ್ಗೆ 25 ವರ್ಷಗಳ ಹಿಂದೆ ಹೀಗಿರಲಿಲ್ಲ. ಆಗ, ಸರ್ಕಾರವು ಕೃಷಿ ಒಳಸುರಿಗಳಿಗೆ (ಗೊಬ್ಬರ, ಬೀಜ, ಕೀಟನಾಶಕ, ಯಂತ್ರೋಪಕರಣಗಳು) ಸಾಕಷ್ಟು ಸಬ್ಸಿಡಿ ನೀಡುತ್ತಿತ್ತು, ಆ ಸಬ್ಸಿಡಿ ಈಗ ತುಂಬಾ ಕಡಿಮೆಯಾಗಿದೆ. ಇವೆಲ್ಲದರ ಪರಿಣಾಮವಾಗಿ ರೈತ ಕುಟುಂಬಕ್ಕೆ ಕೃಷಿಯಿಂದ ಏನೂ ಉಳಿಯುವುದಿಲ್ಲ, ಇದು ವರ್ಷದಿಂದ ವರ್ಷಕ್ಕೆ ಏರುತ್ತಾ ಹೋಗುತ್ತದೆ. ಪದೇ ಪದೇ ಬಂದು ಮೇಲೇರುವ ಸಂಕಷ್ಟ (accumulated crisis) ಹಾಗೂ ಭವಿಷ್ಯದ ಬಗ್ಗೆ ಭರವಸೆ ಇಲ್ಲದಿರುವುದು ಅವರನ್ನ ಆತ್ಮಹತ್ಯೆಗೆ ದೂಡುತ್ತಿದೆ. ಅಂದರೆ, ಈ ದೇಶದ ರೈತರು ತ್ಯಾಗ ಮಾಡಿ ಜಮೀನಿನಲ್ಲಿ ಉಳಿದುಕೊಂಡಿದ್ದಾರೆ ಮತ್ತು ಆ ಮೂಲಕ ಅವರು ದೇಶಕ್ಕೆ ಕೊಡುತ್ತಿರುವುದು ದೇಶದ ಆಹಾರ ಭದ್ರತೆ ಮತ್ತು ಸಾರ್ವಭೌಮತೆಯನ್ನಾಗಿದೆ.

ಹೀಗಿದ್ದ ಮೇಲೆ ಉಳಿದ ದೇಶಗಳಲ್ಲಿ ಹೇಗೆ ನಡೆಯುತ್ತಿದೆ? ಪ್ರಪಂಚದಲ್ಲಿ ಎಲ್ಲೂ ಸಬ್ಸಿಡಿರಹಿತ ಕೃಷಿ ಇಲ್ಲ, ಅಲ್ಲೆಲ್ಲಾ ಯಥೇಚ್ಛವಾಗಿ ಸಬ್ಸಿಡಿ ನೀಡಲಾಗುತ್ತಿದೆ. ಸಬ್ಸಿಡಿ ಇಲ್ಲದೇ ಕೃಷಿ ನಡೆಯಲಾಗದು ಏಕೆಂದರೆ ಆಹಾರ ಪದಾರ್ಥಗಳಿಗೆ ಒಂದು ದೇಶದ ಶೇ.100ರಷ್ಟು ಗ್ರಾಹಕರು. ಅದರಲ್ಲಿ ಭಿನ್ನ ವರ್ಗಗಳವರು ಇರುತ್ತಾರೆ. ಹೆಚ್ಚಿನವರು ದುಡಿಯುವ ವರ್ಗವಾಗಿರುತ್ತಾರೆ. ಹೀಗಿದ್ದ ಮೇಲೆ ಅವರು ತಮ್ಮ ದುಡಿಮೆಯ ಶೇ.80-90ರಷ್ಟನ್ನು ಆಹಾರ ಪದಾರ್ಥಗಳಿಗೆ ವ್ಯಯಿಸುವುದು ಸಾಧ್ಯವೇ ಇಲ್ಲ. ಈಗಾಗಲೇ 'ಅಭಿವೃದ್ಧಿ'ಯಾಗಿರುವ ದೇಶಗಳು ಮತ್ತು ನಮ್ಮ ದೇಶದ 'ಅಭಿವೃದ್ಧಿ' ಹೊಂದಿರುವ ಪ್ರದೇಶಗಳಲ್ಲಿ ಮನೆ ವೆಚ್ಚ (ಬಾಡಿಗೆ ಅಥವಾ ಮನೆ ಸಾಲದ ಕಂತು) ಅವರ ಸಂಪಾದನೆಯ ಶೇ.30ರಷ್ಟಾಗಿದೆ. ಆಹಾರಕ್ಕೂ ಅಷ್ಟೇ ಕೊಡಬೇಕೆಂದರೆ ಕಥೆ ಮುಗಿದೇಹೋಯಿತು. ಹೀಗಾಗಿ ನಮ್ಮ ದೇಶದಲ್ಲೂ ಕೃಷಿಗೆ ಸಾಕಷ್ಟು ಸಬ್ಸಿಡಿ ನೀಡಲಾಗುತ್ತಿತ್ತು. ಗ್ಯಾಟ್ ಒಪ್ಪಂದ ಮತ್ತು ಡಬ್ಲ್ಯುಟಿಓ ಒಪ್ಪಂದದ ನಂತರ, ಜಾಗತೀಕರಣ ನೀತಿಗಳ ಫಲವಾಗಿ ಅದು ಇಲ್ಲವಾಯಿತು.

ಈಗ ಸ್ವಯಂಸಬ್ಸಿಡಿಯ ಮೂಲಕ ಒಂದಷ್ಟು ಕೃಷಿ ನಡೆಯುತ್ತಿದ್ದರೆ, ಉಳಿದವು ಪದೇಪದೇ ಬಿಕ್ಕಟ್ಟಿಗೆ ಈಡಾಗುತ್ತಿವೆ. ಈ ಕಾರಣದಿಂದ ಕೃಷಿ ಸಬ್ಸಿಡಿಯನ್ನು ಹೆಚ್ಚಿಸುವುದು, ಸಾಲಮನ್ನಾ ಮಾಡುವುದು ರೈತರಿಗೆ ಮಾಡುತ್ತಿರುವ ಉಪಕಾರವಲ್ಲ, ಅದು ದೇಶದ ಉಳಿವಿಗೆ ಕಡ್ಡಾಯವಾಗಿ ಮಾಡಲೇಬೇಕಾದ ಕೆಲಸ.

ಇನ್ನು ಮುಂದಿನ ಪ್ರಶ್ನೆ, ಸಾಲಮನ್ನಾ ಮಾಡುವುದು ಹೇಗೆ? ಪಾಪ ನಮ್ಮ ಬಡ ದೇಶದ ಬಡ ಸರ್ಕಾರದ ಹತ್ತಿರ ಇಷ್ಟೊಂದು ಸಾಲಮನ್ನಾ ಮಾಡುವುದಕ್ಕೆ ಹಣ ಎಲ್ಲಿಂದ ಬರುತ್ತದೆ ಎಂಬ ಚಿಂತೆ. ಸರ್ಕಾರಗಳು ಸಾಲಮನ್ನಾ ಮಾಡುತ್ತಲೇ ಇಲ್ಲವಾ? ಅಥವಾ ಸರ್ಕಾರೀ ಬ್ಯಾಂಕುಗಳು ಸರ್ಕಾರದ ನಿರ್ದೇಶನದ ಮೇರೆಗೆ ಯಾರಿಗೂ ಸಾಲಮನ್ನಾ ಮಾಡುತ್ತಲೇ ಇಲ್ಲವಾ? ಮಾಡುತ್ತಿದ್ದಾರೆ. ಅದು ದೇಶದ ಬಂಡವಾಳಶಾಹಿ ಕಾರ್ಪೋರೇಟ್ ಕಂಪೆನಿಗಳಿಗೆ ಮಾತ್ರ. ಎಲ್ಲರಿಗೂ ಸಾಲಮನ್ನಾ ಅಂತಲೇ ಮಾಡಿಲ್ಲ, ಸಾಲವನ್ನು ಬ್ಯಾಂಕುಗಳು ಮತ್ತು ಸರ್ಕಾರದ ವಿವಿಧ ಹಣಕಾಸು ಕಂಪೆನಿಗಳಿಂದ ಸಾಲ ಪಡೆದುಕೊಂಡು ತೀರಿಸದೇ ಹೋಗುವ ಬೇಕಾದಷ್ಟು ಜನರಿದ್ದಾರೆ. ಅವರು ಸಾಲ ಹಿಂತಿರುಗಿಸದೇ ಹೋದಾಗ ಅದನ್ನು 'ಹಿಂತಿರುಗಿ ಬಾರದ ಸಾಲ' ಎಂಬ ವರ್ಗೀಕರಣ ಮಾಡಿ ಮೂಲೆಗೆ ದೂಡುತ್ತಾರೆ. ಕೆಲವರಿಗೆ ಸಾಲ ಮರುಹೊಂದಾಣಿಕೆ ಎಂಬ ಇನ್ನೊಂದು ಕಣ್ಕಟ್ಟಿನಡಿ ಅಡ್ಜಸ್ಟ್ ಮಾಡುತ್ತಾರೆ. ಅಂದರೆ 10 ವರ್ಷಗಳಲ್ಲಿ 150 ಕೋಟಿ ಸಾಲ ತೀರಿಸಬೇಕಾದವರಿಗೆ, 75 ಕೋಟಿ ಬಿಟ್ಟುಕೊಟ್ಟು, 30 ವರ್ಷಗಳಲ್ಲಿ 75 ಕೋಟಿ ತೀರಿಸಿ ಎಂಬ ಹೊಂದಾಣಿಕೆ. ಇವ್ಯಾವುವೂ ಮನ್ನಾ ಲೆಕ್ಕದಲ್ಲಿ ಬರುವುದಿಲ್ಲ.

ಯಾರು, ಎಷ್ಟು ಸಾಲ ಉಳಿಸಿಕೊಂಡಿದ್ದಾರೆ

1.	ಉಷಾ ಇಸ್ಪಾಲ್	ಗಣಿ ಉದ್ಯಮ	16,911 ಕೋಟಿ
2.	ಲಾಯ್ಡ್ ಸ್ಟೀಲ್ಸ್	ಉಕ್ಕು ಉದ್ಯಮ	9,478 ಕೋಟಿ
3.	ಹಿಂದುಸ್ತಾನ ಕೇಬಲ್ಸ್	ದೂರಸಂಪರ್ಕ	4,917 ಕೋಟಿ
4.	ಹಿಂದುಸ್ತಾನ ಫೋಟೋ ಫಿಲ್ಮ್	ಫೋಟೋ ಫಿಲ್ಮ್	3,928 ಕೋಟಿ
5.	ಝೂಮ್ ಡೆವಲಪರ್ಸ್	ರಿಯಲ್ ಎಸ್ಟೇಟ್	3,843 ಕೋಟಿ
6.	ಪ್ರಕಾಶ್ ಇಂಡಸ್ಟ್ರೀಸ್	ಗಣಿ, ವಿದ್ಯುತ್	3,665 ಕೋಟಿ
7.	ಕ್ರೇನ್ಸ್ ಸಾಫ್ಟ್‌ವೇರ್	ಮಾಹಿತಿ ತಂತ್ರಜ್ಞಾನ	3,580 ಕೋಟಿ
8.	ಬೋಸಮಿ ಸಿಂಥೆಟಿಕ್ಸ್	ಜವಳಿ ಸಿದ್ಧ ಉಡುಪು	3,558 ಕೋಟಿ
9.	ಕಿಂಗ್ ಫಿಶರ್	ವಿಮಾನಯಾನ	3,258 ಕೋಟಿ
10.	ಮಾಳವಿಕಾ ಸ್ಟೀಲ್ಸ್	ಉಕ್ಕು ಉದ್ದಿಮೆ	3,057 ಕೋಟಿ

ಮರುಪಾವತಿ ಮಾಡಲು ಬೇಕಾದಷ್ಟು ಹೊಂದಿದ್ದೂ ಸಾಲ ಮರುಪಾವತಿ ಮಾಡದ ಉ ಸಂಖ್ಯೆ 7686. ಅಂದರೆ ಉದ್ದೇಶಪೂರ್ವಕವ ಮರುಪಾವತಿ ಮಾಡದ ಉದ್ಯಮಿಗಳಿವರು. ಇ ಮೋದಿ ಸರ್ಕಾರ ಬರುವುದಕ್ಕೆ ಮುಂಚೆ 55 ಈಗ ಇನ್ನೂ ಹೆಚ್ಚಾಗಿದೆ. ಇವರಲ್ಲಿ 1365 ಉ 500 ಕೋಟಿಗಿಂತಲೂ ಹೆಚ್ಚಿನ ಬಾಕಿದಾರರಾ

ಇನ್ನು 3,000 ಕೋಟಿಗಿಂತಲೂ ಹೆ ಉಳಿಸಿಕೊಂಡಿರುವವರು ಯಾರು, ಎಷ ಉಳಿಸಿಕೊಂಡಿದ್ದಾರೆ, ನೋಡೋಣ. (ಬಾಕ್ಸ್

ಇದರಲ್ಲಿ 9ನೇ ಉದ್ದಿಮೆದಾರ ಮ ವಿಮಾನಯಾನ ಕಂಪೆನಿ ಒಂದರಿಂದಲೇ 3,258 ಬಾಕಿ ಉಳಿಸಿಕೊಂಡಿದ್ದರೆ, ಒಟ್ಟಾರೆ 9,000 ಸಾಲ ಬಾಕಿ ಉಳಿಸಿಕೊಂಡಿದ್ದಾನೆ. ಅಂಬಾನಿ, ಎಸ್ಸಾರ್ ಇತ್ಯಾದಿಗಳ ಸಾಲ ಸದ್ಯಕ್ಕೆ 'ಹಿಂತಿರುಗಿ ಸಾಲ', 'ಮರು ಹೊಂದಾಣಿಕೆ' ಇತ ಲೆಕ್ಕದಲ್ಲಿದೆಯಷ್ಟೇ.

ಇನ್ನು ತೆರಿಗೆ ಮನ್ನಾ ಎಂಬ ಇನ್ನೊಂದು ಈ ತೆರಿಗೆ ಮನ್ನಾ ಎಷ್ಟಾಗಿದೆ ನೋಡೋಣ. ನೇತೃತ್ವದ ಯುಪಿಎ ಸರ್ಕಾರ ತನ್ನ ಹತ್ತು ಅವಧಿಯಲ್ಲಿ ಕಾರ್ಪೋರೇಟ್ ಕಂಪೆನಿಗಳಿಗೆ ನೀಡಿ ಸಹಾಯಧನ/ತೆರಿಗೆ ವಿನಾಯಿತಿ 13 ಲಕ್ಷ ರೂ.ಗಳಾಗಿವೆ. ಮೋದಿ ನೇತೃತ್ವದ ಎನ್‌ಡಿಎ ಎರಡು ವರ್ಷದ ಅವಧಿಯಲ್ಲಿ ನೀಡಿದ ಸಹಾ ತೆರಿಗೆ ವಿನಾಯಿತಿ 5.94 ಲಕ್ಷ ಕೋಟಿ ರೂ.

ಯಾವ ತೆರಿಗೆ	ಮನ್ನಾ ಮಾಡಿದ್ದು
1. ಕಸ್ಟಮ್ಸ್ ಡ್ಯೂಟಿ	46,934
2. ಆದಾಯ ತೆರಿಗೆ	62,399
3. ಅಬಕಾರಿ ತೆರಿಗೆ	1,84,000
4. ಕಸ್ಟಮ್ಸ್ ತೆರಿಗೆ	3,01,000
ಒಟ್ಟು ಮನ್ನಾ	5,94,323

ಇವೆಲ್ಲವೂ ಅಧಿಕೃತ ಲೆಕ್ಕಗಳು ಎಂ ಮರೆಯದಿರೋಣ.

ಇವೆಲ್ಲದರ ಆಚೆಗೆ ಸಾಲಮನ್ನಾವನ್ನೂ ಮಾಡಲ ಈಗ ಕೋಟ್ಯಾಧೀಶರಿಗೆ ಮಾಡಿರುವ ಸಾಲಮನ್ನಾವ

ಈ ವರ್ಷದ ಫೆಬ್ರವರಿಯಲ್ಲಿ ಇಂಡಿಯನ್ ಪತ್ರಿಕೆಯು ಭಾರತದ ರಿಸರ್ವ್ ಬ್ಯಾಂಕ್‌ಗೆ ಒಂದು ಹಕ್ಕು ಅರ್ಜಿಯನ್ನು ಹಾಕಿ, ರಾಷ್ಟ್ರೀಕೃತ ಬ್ಯಾಂಕ ಪಡೆದ ಸಾಲದಲ್ಲಿ ಉದ್ದಿಮೆದಾರರಿಗೆ ಮನ್ನಾ ಆದ ಪ್ರಮಾಣ ಎಷ್ಟು ಎಂದು ಕೇಳಿತು. ಅದಕ್ಕೆ ಬ್ಯಾಂಕು ತನ್ನಲ್ಲಿದ್ದ ಉತ್ತರ ನೀಡಿತು. ಅದರ 2013ರಿಂದ 2015ರ ನಡುವೆ 29 ರಾ ಬ್ಯಾಂಕುಗಳಿಂದ ಉದ್ದಿಮೆದಾರರಿಗೆ ಒಟ್ಟು 1. ಕೋಟಿ ರೂ. ಸಾಲಮನ್ನಾ ಮಾಡಲಾಗಿದೆ ಅಧಿಕೃತವಾಗಿ ಹೇಳಿತು. ಇದು ಯುಪಿಎ ಸ ಅವಧಿಯಲ್ಲಿ ಆಗಿರಲಿಲ್ಲವೆಂದೇನೂ ಅಲ್ಲ, ಆದರೆ, ಒಟ್ಟು 9 ವರ್ಷಗಳಲ್ಲಿ ಮಾಡಿದ್ದ ಸಾಲಮನ್ನಾವನ್ನು ಸರ್ಕಾರವು (ಮತ್ತು ಯುಪಿಎ ಅವಧಿಯ ಕಡೆಯ ಎರಡೇ ವರ್ಷದಲ್ಲಿ ಮಾಡಿದೆ ಅಷ್ಟೇ.

ಈ ರೀತಿ ಸಾಲಮನ್ನಾ ಮಾಡಿಸಿಕೊಂಡವ ಕೊಡಿ ಎಂದು ಮತ್ತೆ ಮಾಹಿತಿ ಹಕ್ಕು ಹಾಕಲಾಯಿತು. ಅದಕ್ಕೆ ಇದುವರೆಗೂ ಉತ್ತರ ಈ ರೀತಿ ಸಾರ್ವಜನಿಕ ಸ್ವಾಮ್ಯದ ಬ್ಯಾಂಕು ಸಾಲಪಡೆದು ಹಿಂದೆ ಕೊಡದೇ ಇದ್ದುದರಿಂದಲ ದಿವಾಳಿ ಏಳುವ ಸ್ಥಿತಿಗೆ ಬಂದವು. ಹಾಗ ಮೋದಿ-ಜೇಟ್ಲಿ ಸರ್ಕಾರವು 'ಇಂದ್ರಧನುಷ್' ಹ ಬ್ಯಾಂಕುಗಳ ಮರುಬಂಡವಾಳೀಕರಣ ವ ಆರಂಭಿಸಲಾಯಿತು. 2015-16ರ ಆಗಸ್ಟ್‌ನಿಂದ ರೀತಿ ಸರ್ಕಾರೀ ಹಣವನ್ನು ಬ್ಯಾಂಕ ನೀಡಲಾರಂಭಿಸಿತು. 2016-17ರಲ್ಲಿ 22,915 ಹಣ ನೀಡಿದರೆ, 2017-18 ಮತ್ತು 2018- ತಲಾ 10,000 ಕೋಟಿ ರೂ.ಗಳನ್ನು ನೀಡುವ ಮಾಡಲಾಗಿದೆ.

ಸರ್ಕಾರದ ಹತ್ತಿರ ಸಿಕ್ಕಾಪಟ್ಟೆ ಹಣ ಇದೆ ಎಂದಾ ಇರಲಿ, ಕೆಲವು ಉದ್ದಿಮೆದಾರರಿಗೆ (ಎಷ್ಟು ಸಂಖ್ಯೆ 100 ಎಂದಿಟ್ಟುಕೊಳ್ಳೋಣ) ಮಾಡಿರುವ ಸಾ 1.14 ಲಕ್ಷ ಕೋಟಿ. ಈ ದೇಶದ 9 ಕೋಟಿ ರೈತ ಕುಟುಂಬಗಳ ಒಟ್ಟು ಸಾಂಸ್ಥಿಕ ಸಾಲ ಎಷ್ಟು 1.15 ಲಕ್ಷ ಕೋಟಿ. 100 ಜನರಿಗೆ ಕೊಟ್ಟಷ್ಟೇ ಹ 9 ಕೋಟಿ ಜನರಿಗೆ ಕೊಡಲಾಗುವುದಿಲ್ಲವೇ? ಕೊ ಅದಕ್ಕಾಗಿ ಬೀದಿಗಿಳಿಯುತ್ತಿರುವ ರೈತರ ಜೊತೆಗೆ ನೀವು ನಿಲ್ಲಬೇಕು.

'ಮಧ್ವ ನಡೆ'ಯ ವಿರುದ್ಧ 'ಸ್ವಾಭಿಮಾನಿ ನಡೆ'




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ನಿಮ್ಮೆಲ್ಲರಿಗೂ ಗೊತ್ತಿರುವಂತೆ ಅಕ್ಟೋಬರ್ ...ಂದ 9ರ ತನಕ 'ಚಲೋ ಉಡುಪಿ' ಎಂಬ ದಲಿತ ದಮನಿತರ ಸ್ವಾಭಿಮಾನಿ ಸಂಘರ್ಷ ಜಾಥಾ ನಡೆಯಿತು. 'ಆಹಾರ ನಮ್ಮ ಆಯ್ಕೆ, ಭೂಮಿ ನಮ್ಮ ಹಕ್ಕು' ಎಂಬ ಘೋಷವಾಕ್ಯದೊಂದಿಗೆ ನಡೆದ ಈ ಜಾಥಾದಲ್ಲಿ ರಾಜ್ಯದ ಮೂಲೆಮೂಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ದಲಿತರು, ಹಿಂದುಳಿದ ವರ್ಗಗಳ ಜನರು, ದಮನಿತ ಸಮುದಾಯಗಳ ಪ್ರತಿನಿಧಿಗಳು, ಸಮಾನ ಮನಸ್ಕರು, ಕಾರ್ಯಕರ್ತರು, ಹೋರಾಟಗಾರರು, ಸಾಹಿತಿಗಳು, ಚಿಂತಕರು, ಮಠಾಧಿಪತಿಗಳು ಭಾಗವಹಿಸಿದ್ದರು. ಜಾಥಾದ ಅಂತಿಮ ಹಂತವಾಗಿ ಅಕ್ಟೋಬರ್ 9 ರಂದು ಉಡುಪಿಯಲ್ಲಿ ನಡೆದ ಬೃಹತ್ ಸಮಾವೇಶಕ್ಕೆ ಐದು ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು.

ಅವತ್ತು ನೀಲಿಮಯವಾಗಿದ್ದ ಉಡುಪಿಯಲ್ಲಿ ನಮ್ಮ ಮೆರವಣಿಗೆ ನಡೆಯುತ್ತಿದ್ದಾಗಲೇ ಚಡ್ಡಿಗಳಿಗೆ ಭಯದೊಂದಿಗೆ ಹೊಟ್ಟೆ ಉರಿಯೂ ಪ್ರಾರಂಭವಾಗಿತ್ತು. ಯಾಕೆಂದರೆ ನಮ್ಮ ಈ ಜಾಥಾ ಅಷ್ಟು ಯಶಸ್ವಿಯಾಗುತ್ತದೆಂದು ಅವರ್‍ಯಾರೂ



ಸಮಿತಿ ವತಿಯಿಂದ ಓಂಕಾರ್ ಅವರಿಗೆ ದೂರು ಸಲ್ಲಿಸುತ್ತಿರುವುದು

ನಿರೀಕ್ಷಿಸಿರಲಿಲ್ಲ. ಆ ಕಾರಣಕ್ಕೇ ಸಮಾವೇಶ ಸಭೆ ಶುರುವಾಗುವ ಮುನ್ನವೇ 'ಯುವಬ್ರಿಗೇಡ್'ನ ಸಂಸ್ಥಾಪಕರಲ್ಲೊಬ್ಬನಾದ ಮಿಥುನ್ ಚಕ್ರವರ್ತಿ ಅಲಿಯಾಸ್ ಚಕ್ರವರ್ತಿ ಸೂಲಿಬೆಲೆ ಎಂಬ ವ್ಯಕ್ತಿಯು ದಲಿತರು ನಡೆದಿದ್ದರಿಂದ ಉಡುಪಿ ಮಲಿನಗೊಂಡಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಬೊಬ್ಬೆಹಾಕಲಾರಂಭಿಸಿದ. ಆತ "ಇವರೆಲ್ಲ ಮಲಿನಗೊಳಿಸಿರುವ ಉಡುಪಿಯನ್ನು ಶುದ್ಧೀಕರಿಸೋಣ ಬನ್ನಿ" ಎಂದು ಕರೆ ನೀಡಿದನಲ್ಲದೆ ಅದಕ್ಕೆ 'ಕನಕ ನಡೆ' ಎಂದೂ ಹೆಸರಿಟ್ಟು ಪ್ರಚಾರ ಮಾಡಲಾರಂಭಿಸಿದ. ವಾಸ್ತವವಾಗಿ ದಲಿತರು ಮತ್ತು ದಮನಿತರು ನಡೆದ ಉಡುಪಿಯನ್ನು ಸ್ವಚ್ಛಗೊಳಿಸಬೇಕೆಂದು ಕರೆ ಕೊಡುವುದು ಅಸ್ಪೃಶ್ಯತೆಯನ್ನು ಆಚರಿಸುವ ಕಾನೂನುಬಾಹಿರ, ಸಂವಿಧಾನಬಾಹಿರ ಕೃತ್ಯವಾಗಿದೆ ಎಂದೂ ಈ ಸೂಲಿಬೆಲೆ ತರಹದವರ ತಲೆಗೆ ಹೊಳೆಯುವುದಿಲ್ಲ. ಅವರ ಮೆದುಳನ್ನು ಜಾತಿ ಎಂಬ ಅನಾಹುತಕಾರಿ ವ್ಯವಸ್ಥೆ ಅಷ್ಟರಮಟ್ಟಿಗೆ ಆಕ್ರಮಿಸಿಕೊಂಡಿದೆ. ಯಾವ ಕನಕದಾಸರನ್ನು ಕೃಷ್ಣ ದೇವಸ್ಥಾನದಿಂದ ಹೊರಗಿಡಲಾಗಿದೆಯೋ ಆ ನಗರದಲ್ಲೇ 'ಕನಕ ನಡೆ' ಹೆಸರಿನಡಿ ಇಂತಹ ಕೃತ್ಯಕ್ಕೆ ಕರೆ ಕೊಟ್ಟಿರುವುದು ಚೋದ್ಯವಲ್ಲದೆ ಇನ್ನೇನಲ್ಲ, ಅದಕ್ಕೂ ಮುಖ್ಯವಾಗಿ ಇದು ಹಿಂದುಳಿದ ವರ್ಗವನ್ನು ದಲಿತರ ಮತ್ತು ದಮನಿತರ ವಿರುದ್ಧ ಎತ್ತಿಕಟ್ಟುವ ಚಡ್ಡಿಗಳ ತಾಪತಿಯಾಗಿದೆ. ಯಾಕೆಂದರೆ ಈ ನಡೆಗೆ ಕನಕರ ಹೆಸರಿಟ್ಟಿದ್ದರೂ ಅಂತರಾಳದಲ್ಲಿ ಇದು ಅಷ್ಟ ಮಠಗಳನ್ನು ಸ್ಥಾಪಿಸಿದ, ಇವತ್ತು ಹಿಂದೂತ್ವ ಸಿದ್ಧಾಂತಕ್ಕೆ ಬೆಂಬಲವಾಗಿ ನಿಂತಿರುವ ಮಧ್ವ ಬ್ರಾಹ್ಮಣರ ಪುರಸ್ಕಾರವಾಗಿದೆ. ಆ ಕಾರಣಕ್ಕೆ ಇದನ್ನು 'ಕನಕ ನಡೆ' ಎಂದು ಕರೆಯುವ ಬದಲು 'ಮಧ್ವ ನಡೆ' ಎಂದರೆ ಸೂಕ್ತವಾಗಿರುತ್ತದೆ.

ಮನುವಾದಿಗಳು ದಲಿತರನ್ನು ಅಪಮಾನಿಸುವ ಇಂತಹ ಕೃತ್ಯಗಳನ್ನು ನೂರಾರು ವರ್ಷಗಳಿಂದ ಮಾಡುತ್ತಲೇ ಬಂದಿದ್ದಾರೆ. ನಮ್ಮ ದಲಿತ ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿಯು ಗುರುತಿಸಿರುವಂತೆ "1927 ರಲ್ಲಿ ಮಹಾರಾಷ್ಟ್ರದ ಮಹಾಡ್ ಕೆರೆಯ ನೀರನ್ನು ದಲಿತರು ಮುಟ್ಟಕೂಡದೆಂದು ಹೇರಿದ್ದ ನಿಷೇಧವನ್ನು ಮುರಿದ ಡಾ.ಬಿ.ಆರ್.ಅಂಬೇಡ್ಕರ್ ಅವರು ಮಹಾಡ್ ಕೆರೆ ನೀರನ್ನು ಕುಡಿದಿದ್ದರು. ಆದರೆ ಮಾರನೇ ದಿನ ಅಸ್ಪೃಶ್ಯರು ಕೆರೆಯ ನೀರನ್ನು ಮೈಲಿಗೆಯಾಗಿಸಿದರೆಂದು ಮನುವಾದಿಗಳ ತಂಡ ಗೋಗಂಜಲ ಮತ್ತು ಸೆಗಣಿಯನ್ನು ಕೆರೆಗೆ ಸುರಿದು ಮಂತ್ರ ಪಠಿಸಿ ಶುದ್ಧೀಕರಿಸಿ ದಲಿತರನ್ನು ಅವಮಾನಿಸಿತ್ತು."

ಅಷ್ಟೇ ಅಲ್ಲ, ಹೇಗೆ ಇತ್ತೀಚೆಗೆ ಗುಜರಾತಿನ ದಲಿತರು ಜಿಗ್ನೇಶ್ ಮೇವಾನಿ ಎಂಬ ಯುವ ನಾಯಕನ ನೇತೃತ್ವದಡಿ ಉನಾದಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿ ತಮ್ಮ ಮನೆಗಳಿಗೆ ಹಿಂದಿರುಗುತ್ತಿದ್ದಾಗ ಅವರೆಲ್ಲರ ಮೇಲೆ ದಾಳಿ ಮಾಡಲಾಗಿತ್ತೋ ಹಾಗೆ 1927ರಲ್ಲೂ ಅಂಬೇಡ್ಕರ್ ಅವರ ಬೆಂಬಲಿಗರ ಮೇಲೆ ದಾಳಿ ಮಾಡಲಾಗಿತ್ತು.

ದಲಿತರಿಗೂ ದೇವಸ್ಥಾನ ಪ್ರವೇಶಿಸುವ ಹಕ್ಕಿಗಾಗಿ ಹೋರಾಡಿದ್ದ ಬಾಬು ಜಗಜೀವನ್‌ರಾಮ್ ಅವರಿಗೇನೋ ಒಡಿಸ್ಸಾದ ಪುರಿ ಜಗನ್ನಾಥ ದೇವಾಲಯವನ್ನು ಪ್ರವೇಶಿಸಲು ಅನುಮತಿ ಕೊಡಲಾಗಿತ್ತು. ಆದರೆ ಅವರೊಂದಿಗೆ ಇದ್ದ ಅವರ ಪತ್ನಿ ಇಂದ್ರಾನಿ ಅವರಿಗೆ ಅನುಮತಿಯನ್ನು ನೀಡಿರಲಿಲ್ಲ. ಆಗ ಇಂದ್ರಾನಿ ಅವರು ತಮ್ಮ ಡೈರಿಯಲ್ಲಿ ಹೀಗೆ ದಾಖಲಿಸಿದ್ದಾರೆ: "ದೇವರ ದರ್ಶನವನ್ನು ಪಡೆಯಬೇಕೆಂಬ ನನ್ನ ಹೃದಯದಲ್ಲಿದ್ದ ಆಶೆ ಬತ್ತಿಹೋಯಿತು. ತಮ್ಮ ಭಕ್ತರ ನಡುವೆಯೇ ಭೇದಭಾವ ಮಾಡುವ ಈ ಜಗನ್ನಾಥನು ಹೇಗೆ ಈ ಜಗತ್ತಿಗೇ ದೇವರಾಗುತ್ತಾನೆ?" ಇರಲಿ, ಬಾಬು ಜಗಜೀವನ್‌ರಾಮ್ ಅವರನ್ನು ಒಳಗೆ ಬಿಟ್ಟುಕೊಂಡಿದ್ದ ದೇವಸ್ಥಾನದ ಮಂದಿ ಅವರು ಹೋದನಂತರ ಇಡೀ ದೇವಸ್ಥಾನ ಶುದ್ಧೀಕರಿಸುವ ಮೂಲಕ ಅವರಿಗೆ ಮಾತ್ರವಲ್ಲ, ಎಲ್ಲಾ ದಲಿತರನ್ನು ಅವಮಾನಿಸಿದ್ದರು.

ಅಂಬೇಡ್ಕರ್ ಮತ್ತು ಜಗಜೀವನ್ ರಾಮ್ ಅವರಂತೆಯೇ ಬಡತನದಲ್ಲಿ ಬೆಳೆದ ಕೆ.ಆರ್.ನಾರಾಯಣ್ ಎಂಬ ಪ್ರತಿಭಾವಂತ ವಿದ್ಯಾರ್ಥಿ ಟ್ರಾವೆಂಕೂರ್ ವಿಶ್ವವಿದ್ಯಾಲಯದಲ್ಲಿ ಬಿಎ ಮತ್ತು ಎಮ್‌ಎ ಓದಿದರಲ್ಲದೆ ಮೊದಲನೆ ದರ್ಜೆಯಲ್ಲಿ ಉತ್ತೀರ್ಣರಾದರು. ಸಾಮಾನ್ಯವಾಗಿ ಆಗ ಆ ವಿಶ್ವವಿದ್ಯಾಲಯದಲ್ಲಿ ಅವರಂತಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಮ್ಮಲ್ಲೇ ಕೆಲಸವನ್ನು ನೀಡಲಾಗುತ್ತಿತ್ತು, ಆದರೆ ನಾರಾಯಣ್ ಅವರು ದಲಿತರಾಗಿದ್ದ ಕಾರಣ ಅವರಿಗೆ ಅಂತಹ ಅವಕಾಶವನ್ನು ನೀಡಲಿಲ್ಲ. ಇದರಿಂದ ನೊಂದ ನಾರಾಯಣ್ ಅವರು ಪದವಿ ಪ್ರದಾನ ಸಮಾರಂಭವನ್ನು ಧಿಕ್ಕರಿಸಿದ್ದರು. ಇದಾದ ಐವತ್ತು ವರ್ಷಗಳ ನಂತರ ನಾರಾಯಣ್ ಅವರು ಭಾರತದ ರಾಷ್ಟ್ರಪತಿ ಆದನಂತರ ಆ ವಿಶ್ವವಿದ್ಯಾಲಯವು ವಿಶೇಷ ಸಭೆ ಆಯೋಜಿಸಿ ಅವರ ಪದವಿ ಪ್ರಮಾಣಪತ್ರವನ್ನು ಅವರಿಗೆ ಕೊಟ್ಟಿತ್ತು.

ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಸಂವಿಧಾನದ ಪರಿಚ್ಛೇದ 17ರಡಿ ಅಸ್ಪೃಶ್ಯತೆಯನ್ನು ನಿಷೇಧಿಸಲಾಗಿದ್ದರೂ ದಲಿತ ನ್ಯಾಯಾಧೀಶ ಕೂತಿದ್ದರಿಂದ ಒಂದು ಹೈಕೋರ್ಟಿನಲ್ಲಿ ಅವರ ಪೀಠಕ್ಕೆ ಗಂಗಾಜಲ ಹಾಕಿ 'ಶುದ್ಧಿ' ಮಾಡಲಾಗಿತ್ತು. ದೇವಸ್ಥಾನ ಪ್ರವೇಶಿಸಿದ್ದಕ್ಕೆ ದಾಳಿ, ಜಾತಿ ದೌರ್ಜನ್ಯವನ್ನು ಪ್ರಶ್ನಿಸಿದ್ದಕ್ಕೆ ಅತ್ಯಾಚಾರ ಮತ್ತು ಕೊಲೆ, ಸಾಲ ಪಡೆದದ್ದಕ್ಕೆ ಜೀತದಲ್ಲಿ ಬಂಧನ, ವಾಚ್ ಕಟ್ಟಿದ್ದಕ್ಕೆ, ಬೈಕ್ ಸವಾರಿ ಮಾಡಿದ್ದಕ್ಕೆ, ಕುದುರೆ ಏರಿದ್ದಕ್ಕೆ, ಮೇಲುಜಾತಿಯವರ ಮನೆ ನಾಯಿಗೆ ರೊಟ್ಟಿಯ ಚೂರು ಕೊಟ್ಟದ್ದಕ್ಕೆ ಥಳಿತ.... ಹೀಗೆ ಹತ್ತಾರು ರೀತಿಯಲ್ಲಿ ದಲಿತರ ಮೇಲಿನ ದಬ್ಬಾಳಿಕೆ ನಮ್ಮ ದೇಶದಲ್ಲಿ ಮುಂದುವರಿಯುತ್ತಲೇ ಇದೆ. ಈಗ ಉಡುಪಿಯಲ್ಲಿ ಯುವ ಬ್ರಿಗೇಡ್ ಮತ್ತು ಅದರ ಹಿಂದಿರುವ ಸಂಘ ಪರಿವಾರ ಮಾಡಲು ಹೊರಟಿರುವುದೂ ಇಂತಹ ಕೃತ್ಯಗಳ ಮುಂದುವರಿಕೆಯಾಗಿದೆ.

ಆ ಕಾರಣಕ್ಕೆ ನಮ್ಮ ದಲಿತ ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿಯು ಮಧ್ವ ನಡೆಗೆ ಅನುಮತಿ ಕೊಡಬಾರದೆಂದು ಪೊಲೀಸ್ ಮಹಾನಿರ್ದೇಶಕರಾದ ಓಂಪ್ರಕಾಶ್ ಅವರಿಗೆ ಮನವಿ ಮಾಡಿದೆ. ಜೊತೆಗೆ ಇಂತಹ ದಲಿತ ವಿರೋಧಿ ನಡೆಗೆ ಕರೆ ಕೊಟ್ಟಿರುವವರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯತಡೆ ಕಾಯ್ದೆಯಡಿ ಪೊಲೀಸರು ಸ್ವಯಂಪ್ರೇರಿತ ಕೇಸು ದಾಖಲಿಸಬೇಕೆಂದು ಒತ್ತಾಯಿಸಿದೆ.

ಅಷ್ಟೇ ಅಲ್ಲ, 'ದಲಿತ ದಮನಿತರ ಸ್ವಾಭಿಮಾನಿ ಸಮಿತಿಯ ಯಾರೂ ಉಡುಪಿಯನ್ನು ಪ್ರವೇಶಿಸಕೂಡದು, ಪ್ರವೇಶಿಸಿದರೆ ಅವರು ವಾಪಸ್ ಹೋಗಲು ಬಿಡುವುದಿಲ್ಲ' ಎಂದು ಹಲವರು ಪ್ರಾಣಬೆದರಿಕೆಯನ್ನೂ ಹಾಕಿದ್ದಾರೆ. ಅವರು ಬೇರೆ ಯಾರೂ ಅಲ್ಲ, ಶ್ರೀರಾಮ ಸೇನೆಯ ರಾಜ್ಯ ಮುಖಂಡ ಪ್ರಮೋದ್ ಮುತಾಲಿಕ್, ಉಡುಪಿ ಜಿಲ್ಲೆಯ ವಿಶ್ವ ಹಿಂದೂ ಪರಿಷತ್‌ನ ಅಧ್ಯಕ್ಷ ಪಿ.ವಿಲಾಸ್ ನಾಯಕ್ ಮತ್ತು ಉಡುಪಿ ಜಿಲ್ಲೆಯ ಬಜರಂಗ ದಳದ ಸಂಚಾಲಕ ದಿನೇಶ್ ಮೆಂಡನ್. "ಇವರೆಲ್ಲರೂ ಇಡೀ ದಲಿತ ದಮನಿತ ಸಮುದಾಯಗಳಿಗೆ ಪ್ರಾಣಬೆದರಿಕೆ ಒಡ್ಡುವ ಉದ್ಧಟತನ ಮೆರೆದಿದ್ದಾರೆ. ಆದ್ದರಿಂದ ಈ ಮೇಲ್ಕಂಡ ಎಲ್ಲರ ಮೇಲೆ ಸಂವಿಧಾನ ವಿರೋಧಿ, ದೇಶದ್ರೋಹ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯತಡೆ ಕಾಯ್ದೆ ಮತ್ತು ಪ್ರಾಣ ಬೆದರಿಕೆ ಆರೋಪಗಳ ಅಡಿಯಲ್ಲಿ ಮೊಕದ್ದಮೆಗಳನ್ನು ದಾಖಲಿಸಿ ಬಂಧಿಸಬೇಕು" ಎಂದು ನಮ್ಮ ಸಮಿತಿ ಒತ್ತಾಯಿಸಿದೆ.




ಇನ್ನು ಪಂಕ್ತಿಭೇದ ನಿಷೇಧಿಸಬೇಕೆಂಬ ನಮ್ಮ ಆಗ್ರಹಕ್ಕೆ ಪೇಜಾವರ ಶ್ರೀಗಳು ಹೇಗೆ ಪ್ರತಿಕ್ರಿಯಿಸಿದ್ದಾರೆಂದು ನಿಮ್ಮೆಲ್ಲರಿಗೂ ಗೊತ್ತು. ಆ ಕುರಿತು ಇದೇ ಸಂಚಿಕೆಯಲ್ಲಿ ಜಿ.ರಾಜಶೇಖರ ಅವರ ಲೇಖನವಿದೆ. ದಲಿತರು ಉಡುಪಿಗೆ ಮುತ್ತಿಗೆ ಹಾಕಿ ತಮ್ಮ ಪರ್ಯಾಯವನ್ನು ಕೆಡಿಸುತ್ತಾರೆಂದು ಭಯಗೊಂಡಿರುವ ಪೇಜಾವರ ಶ್ರೀಗಳು "ಪಂಕ್ತಿಭೇದ ನಿಷೇಧಕ್ಕೆ ಒತ್ತಾಯಿಸಿ ಮಠಕ್ಕೆ ಬಂದರೆ ನಾನು ಉಪವಾಸ ಕೂರುತ್ತೇನೆ. ಸರ್ಕಾರವೇ ರಕ್ಷಣೆ ಕೊಡಬೇಕು" ಎಂದು ಅವಲತ್ತುಕೊಂಡಿದ್ದಾರಲ್ಲದೆ ಅನವಶ್ಯಕವಾಗಿ ಬಸವಣ್ಣನವರನ್ನು ಎಳೆದು ತಂದು ಆ ಕ್ರಾಂತಿಯೋಗಿಯೂ ಪಂಕ್ತಿಭೇದದ ಪರವಾಗಿದ್ದರು ಎಂದು ಬಿಂಬಿಸಲು ಯತ್ನಿಸಿದ್ದಾರೆ.

ಅವರ ಈ ಕುತಂತ್ರಕ್ಕೆ ಪ್ರತಿಕ್ರಿಯಿಸಿರುವ ಕೆ.ನೀಲಾ ಅವರು "ಉಪವಾಸ ಕೂತಾದರೂ ವೈದಿಕ ಕರ್ಮಠತೆಯನ್ನು, ತನ್ಮೂಲಕ ಅಸಮಾನತೆಯ ಕ್ರೌರ್ಯವನ್ನು ಉಳಿಸಿಕೊಳ್ಳಲು ಪೇಜಾವರ ಸ್ವಾಮಿ ಹೆಣಗುತ್ತಿದ್ದಾರೆ. ತಾವು ಸಹಪಂಕ್ತಿಭೋಜನಕ್ಕೆ ಸಿದ್ಧವಿಲ್ಲದೆ ಬಸವಣ್ಣನ ನೆರಳಲ್ಲಿ ನಿಲ್ಲುವ ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ ಪೇಜಾವರ ಸ್ವಾಮಿ. ಶರಣರು ತಮ್ಮ ಕಣ್ಣು ಕಿತ್ತರೂ, ಆನೆ ಕಾಲಿಗೆ ಕಟ್ಟಿ ಎಳೆಸಿದರೂ ಚಾತುರ್ವರ್ಣ ಊಳಿಗಶಾಹಿ ವ್ಯವಸ್ಥೆಯ ವಿರುದ್ಧದ ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ಶರಣ ಸಂಗಾತಿಗಳು ತಮ್ಮ ಪ್ರಾಣ ಕೊಟ್ಟಾದರೂ ವೈದಿಕತೆಯನ್ನು ಹಿಮ್ಮೆಟ್ಟಿಸಿ ಸಮತೆ ನಾಡು ಕಟ್ಟಲು ಪಣ ತೊಟ್ಟರೆ, ಈ ಪೇಜಾವರ ಸ್ವಾಮಿಗಳು ಉಪವಾಸ ಕೂತಾದರೂ ಅಸಮಾನತೆಯ ಅಮಾನವೀಯತೆಯ ಕ್ರೂರ ವೈದಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಹಟ ತೊಟ್ಟಂತಿದೆ" ಎಂದು ಸರಿಯಾಗಿಯೇ ಚುಚ್ಚಿದ್ದಾರೆ.

ಅದೆಲ್ಲಕ್ಕಿಂತ ಮುಖ್ಯವಾಗಿ ಚಡ್ಡಿಗಳ ಈ ಕುತಂತ್ರಗಳನ್ನು ಗಂಭೀರವಾಗಿ ಪರಿಗಣಿಸಿರುವ ನಮ್ಮ ಸಮಿತಿಯು ಒಂದು ಮುಖ್ಯ ನಿರ್ಧಾರವನ್ನು ತೆಗೆದುಕೊಂಡಿದೆ. ಅದೇನೆಂದರೆ ಯಾವತ್ತು 'ಕನಕ ನಡೆ'ಯು ಉಡುಪಿಯಲ್ಲಿ ನಡೆಯಲಿದೆಯೋ ಅಂದೇ ನಾವು ಅದೇ ಉಡುಪಿಯಲ್ಲಿ ಸ್ವಾಭಿಮಾನಿ ದಲಿತ ದಮನಿತರು 'ಸ್ವಾಭಿಮಾನದ ನಡಿಗೆ'ಯನ್ನು ನಡೆಸಲು ನಿರ್ಧರಿಸಲಾಗಿದೆ. ಈ ನಡೆಯಲ್ಲಿ ನಾಡಿನ ಅಸಂಖ್ಯಾತ ಜನರು ಭಾಗವಹಿಸಲಿದ್ದಾರೆ.

ನೀವೂ ಬನ್ನಿ, ನಡೆಯಲ್ಲಿ ಭಾಗವಹಿಸಿ. •

ಮೈಸೂರು: ಶ್ರೀನಿವಾಸ್ ಪ್ರಸಾದ್ ಬೇಟೆಗೆ ಬಿಜೆಪಿ ಬಲ


ಶ್ರೀನಿವಾಸ್ ಪ್ರಸಾದ್


ಹಿರಿಯ ರಾಜಕಾರಣಿ ವಿ.ಶ್ರೀನಿವಾಸ್ ಪ್ರಸಾದ್‌ರು ಈಗ ಸುದ್ದಿಯಲ್ಲಿದ್ದಾರೆ. ಅಸಲಿಗೆ ಸತತ ಮೂರು ಅಧಿವೇಶನಗಳಿಗೆ ಗೈರುಹಾಜರಾಗಿದ್ದ ಅವರ ಶಾಸಕ ಸ್ಥಾನ ಕಾನೂನುಬದ್ಧವಾಗಿ ಅನರ್ಹಗೊಳ್ಳಲಿದೆ ಅನ್ನೋದು ಖಾತ್ರಿಯಾಗುತ್ತಿದ್ದಂತೆಯೇ ಸಚಿವ ಸ್ಥಾನದಿಂದ ತನ್ನನ್ನು ಕಿತ್ತು ಹಾಕಿದ್ದಕ್ಕೆ ಆಕ್ರೋಶಗೊಂಡು ಪ್ರತೀಕಾರದಂತೆ ತಮ್ಮ ಶಾಸಕ ಸ್ಥಾನ ಮತ್ತು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡುವ ಮೂಲಕ ಸುದ್ದಿಯಾಗಿದ್ದಾರೆ. ಶಾಸಕ ಸ್ಥಾನದಿಂದ ಅನರ್ಹಗೊಂಡು ಅವಮಾನ ಅನುಭವಿಸುವುದಕ್ಕಿಂತ ಮೊದಲು ತಾವೇ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್‌ಗೆ ತಿರುಗೇಟು ನೀಡುವ ನಿರ್ಧಾರಕ್ಕೆ ಪ್ರಸಾದ್ ಬಂದಿದ್ದಾರೆ ಎಂದರೆ ಸರಿಹೋಗುತ್ತದೆ.

ಇದಕ್ಕೆ ಇಂಬು ನೀಡುವಂತೆ "ರಾಜೀನಾಮೆ ಅಂಗೀಕಾರವಾದ ನಂತರ ನನ್ನ ಕ್ಷೇತ್ರದಲ್ಲಿ ಬಹಿರಂಗ ಸಭೆ ನಡೆಸಿ ಮತದಾರರ ಎದುರು ನನ್ನ ವಿರುದ್ಧ ಪಿತೂರಿ ಮಾಡಿದ ರಾಜಕಾರಣದ ಬಗ್ಗೆ ಹೇಳುತ್ತೇನೆ" ಎಂದು ಗುಡುಗಿದ್ದಾರೆ. "ನಾನು ಬರೀ ಹುಳುಗಳನ್ನು ಹೊರಹಾಕುವ ಸಾಮಾನ್ಯ ರಾಜಕಾರಣಿಯಲ್ಲ, ಕಾಂಗ್ರೆಸ್‌ನ ಅಪ್ರಾಮಾಣಿಕರ ಬಣ್ಣ ಬಯಲು ಮಾಡುತ್ತೇನೆ" ಎಂದೆಲ್ಲ ಎಗರಾಡಿದ್ದಾರೆ. ಇದು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಸಾಮಾನ್ಯ ಜನರಲ್ಲಿ ತರ್ಕವೂ ಆಗದ, ಚರ್ಚೆಯೂ ಅಲ್ಲದ ವಿಷಯವಾಗಿ ಚದುರಿಹೋಗಿದೆ. ಆದರೆ ಇದೇ ಜಿಲ್ಲೆಗಳ ಮಂತ್ರಿಗಳು, ಶಾಸಕರು, ರಾಜಕೀಯ ಪಕ್ಷಗಳ ರಾಜ್ಯ ನಾಯಕರು, ರಾಷ್ಟ್ರ ನಾಯಕರು, ಪುಢಾರಿಗಳು, ಮರಿ ಪುಢಾರಿಗಳು, ಪೇರು, ಪಾವು, ಚಟಾಕು ರಾಜಕಾರಣಿಗಳಲ್ಲಿ ಚಿತ್ರವಿಚಿತ್ರ ಸಂಚಲನ ಮೂಡಿ ಚರ್ಚೆಗಳು ನಡೆಯುತ್ತಿವೆ. ರಾಜಕೀಯ ಮೇಲಾಟಗಳು ಆರಂಭವಾಗಿವೆ.

ಉದ್ದೇಶಪೂರ್ವಕವಾಗಿಯೇ ಯಾವುದೇ ಸೂಚನೆ ಇಲ್ಲದೆ ತಮ್ಮನ್ನು ಸಂಪುಟದಿಂದ ತೆಗೆದುಹಾಕಲಾಗಿದೆ, ಇದು ತನ್ನ ಆತ್ಮಾಭಿಮಾನ, ಸ್ವಾಭಿಮಾನಕ್ಕೆ ಧಕ್ಕೆ ಉಂಟುಮಾಡಿದೆ ಅನ್ನೋದು ಪ್ರಸಾದ್ ಸಾಹೇಬರ ಆರೋಪ. ಅವರು ಹಚ್ಚಿರುವ ಈ ಕಿಡಿಗೆಂಡಗಳು ನೇರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿ ದಿಗ್ವಿಜಯ್ ಸಿಂಗ್, ಮಲ್ಲಿಕಾರ್ಜುನ ಖರ್ಗೆ, ಗೃಹಮಂತ್ರಿ ಡಾ.ಜಿ.ಪರಮೇಶ್ವರ್, ಮಂತ್ರಿಗಳಾದ ಎಚ್.ಸಿ.ಮಹದೇವಪ್ಪ ಕೆ.ಜೆ.ಜಾರ್ಜ್, ಡಿ.ಕೆ.ಶಿವಕುಮಾರ್ ಅವರ ಅಂಗಳದಲ್ಲಿ ಬೀಳುತ್ತಿವೆ.


ಪ್ರಸಾದ್ ಅವರನ್ನು ಹತ್ತಿರದಿಂದ ಬಲ್ಲವರ ಪ್ರಕಾರ "ಹೀಗೆ ಹೇಳದೆಕೇಳದೆ ಅವರನ್ನು ಮಂತ್ರಿಮಂಡಲದಿಂದ ಕಿತ್ತು ಹಾಕುವ ಬದಲು ಅವರನ್ನೇ ಕೇಳಿದ್ದರೆ ಸಚಿವ ಸ್ಥಾನವನ್ನು ಬಿಟ್ಟುಕೊಡುತ್ತಿದ್ದರು. ಅದುಬಿಟ್ಟು ಹೀಗೆ ಹಿಂಬದಿಯಿಂದ ಚೂರಿ ಇರಿಯಬಾರದಿತ್ತು" ಎಂಬ ಮಾತುಗಳು ಕೇಳಿಬರುತ್ತಿವೆ. ಆದರೆ ಈ ಹಿಂದೆ ಪ್ರಸಾದ್ ಅವರೇ ಸಂಪುಟ ಪುನರಚನೆ ವಿಚಾರದಲ್ಲಿ ಪತ್ರಕರ್ತರ ಪ್ರಶ್ನೆಗೆ ಸಿದ್ದರಾಮಯ್ಯನವರ ವಿರುದ್ಧ ಹರಿಹಾಯ್ದಿದ್ದರು. ಇನ್ನು ಸಚಿವ ಸ್ಥಾನವನ್ನು ಬಿಟ್ಟುಕೊಡಿ ಎಂದು ಸಿದ್ದರಾಮಯ್ಯ ಅವರು ಕೇಳಿದ್ದರೆ ಅವರು ಬಿಟ್ಟುಕೊಡುತ್ತಿದ್ದರೆ?

"ಶ್ರೀನಿವಾಸ ಪ್ರಸಾದ್ ಅವರನ್ನು ಸಚಿವ ಸಂಪುಟದಿಂದ ಕೈಬಿಟ್ಟಿರುವುದು ಕಾಂಗ್ರೆಸ್ ಸರ್ಕಾರ ದಲಿತರಿಗೆ ಮಾಡಿದ ದೊಡ್ಡ ಅನ್ಯಾಯ" ಎಂಬುದು ಕೆಲವು ದಲಿತ ಸಂಘಟನೆಗಳು, ಇನ್ನು ಕೆಲವು ರಾಜಕೀಯ ಬಕೆಟ್‌ಗಳ ಆಕ್ರೋಶದ ಮಾತು. ಮುತ್ಸದ್ದಿ ದಲಿತ ನಾಯಕನನ್ನು ಸಂಪುಟದಿಂದ ಕೈಬಿಟ್ಟಿರುವುದು ಸಹಜವಾಗೇ ಈ ಆಕ್ರೋಶಕ್ಕೆ ಕಾರಣವಾಗಿದೆ. ಆದರೆ ಹೀಗೆ ವದರಾಡುವ ಮುನ್ನ ಸಂಪುಟಕ್ಕೆ ಸೇರ್ಪಡೆಗೊಂಡ ಪ್ರಿಯಾಂಕ್ ಖರ್ಗೆ ಅದೇ ದಲಿತ ಸಮುದಾಯಕ್ಕೆ ಸೇರಿದವರು ಎಂಬುದನ್ನು ತೂಗಿ ನೋಡುವ ಕೆಲಸ ನಡೆಯುತ್ತಿಲ್ಲ.


ದೇವೇಗೌಡ

ರಾಜ್ಯದಲ್ಲಿ ಪ್ರಸಾದ್ ಅವರಂತ ದಲಿತ ನಾಯಕರೊಬ್ಬರು ಸಂಪುಟದಲ್ಲಿರ ಬೇಕಾದುದೇನೋ ಸತ್ಯ. ಆದರೆ, ಪ್ರಸಾದ್ ಅವರಿಗೆ ಈಗಿರುವ ಅನಾರೋಗ್ಯದ ಸ್ಥಿತಿಯಲ್ಲಿ ಪರಿಣಾಮಕಾರಿ ಕೆಲಸಗಳು ನಡೆಯುವುದು ಕಷ್ಟವೆ. ಪ್ರಸಾದ್ ಅವರು ಸಚಿವರಾಗಿದ್ದಾಗ ಕೊನೆಕೊನೆಯ ದಿನಗಳಲ್ಲಿ ಮೈಸೂರು ಭಾಗ ಹೊರತುಪಡಿಸಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದು, ಕಂದಾಯ ಇಲಾಖೆಯಲ್ಲಿ ಸಾಗರೋಪಾದಿಯಲ್ಲಿ ಕೆಲಸಕಾರ್ಯ ನಡೆದದ್ದು ಕಡಿಮೆ. ಆಗ ನಡೆದ ಕಂದಾಯ ಅದಾಲತ್‌ನಲ್ಲಿ ಸರಿಯಾಗಿರುವ ದಾಖಲಾತಿಗಳನ್ನು ಸರಿಪಡಿಸಲಾಯಿತೇ ಹೊರತು ಲೋಪ ದೋಷಗಳಿರುವ ಜಮೀನು ದಾಖಲೆಗಳು ಸರಿಹೋಗಲೇ ಇಲ್ಲ. ಅಧಿಕಾರಿಗಳು ಬೇಕಾಬಿಟ್ಟಿ ಕೆಲಸ ಮಾಡಿದರು. ಈ ಬೇಕಾಬಿಟ್ಟಿ ಕೆಲಸಕ್ಕೆ ಪ್ರಸಾದ್ ಅವರ ಆರೋಗ್ಯ, ಅವರು ಸುತ್ತಾಡಲಾಗದ ಪರಿಸ್ಥಿತಿಯೂ ಕಾರಣ. ಹಾಗಾಗಿ ಪ್ರಸಾದ್ ಅವರು ತಾವೇ ರೂಪುಗೊಳಿಸಿದ ಯುವಕರಿಗೆ ಅಥವಾ ಯುವ ಸಚಿವರಿಗೆ ಜಾಗ ಬಿಟ್ಟುಕೊಟ್ಟು ಅವರಿಗೆ ಮಾರ್ಗದರ್ಶಕರಾಗಿದ್ದರೆ ಅವರ ರಾಜಕೀಯ ಜೀವನದ ಕೊನೆ ಘಟ್ಟದಲ್ಲಿ ಇತಿಹಾಸ ನಿರ್ಮಿಸಬಹುದಿತ್ತು.


ಸಿದ್ದರಾಮಯ್ಯ


ಧ್ರುವ ನಾರಾಯಣ

ಪ್ರಸಾದ್ ಅವರಿಗೆ ಇಂತಹ ಮನಸ್ಥಿತಿ ಇದ್ದರೂ ಅಕ್ಕಪಕ್ಕದವರು ಸುಮ್ಮನಿರಬೇಕಲ್ಲ. ಅವರು ತಮ್ಮತಮ್ಮ ಉಳಿವಿಗೆ ಕಡ್ಡಿ ಅಲ್ಲಾಡಿಸುವ ಕೆಲಸ ಮಾಡುತ್ತಿರುತ್ತಾರೆ. ಅದು ಸಹಜವಾಗೇ ನಾಲ್ಕೈದು ದಶಕಗಳ ಕಾಲ ರಾಜಕೀಯದ ಮೇಲುಸ್ತರದಲ್ಲಿದ್ದ ಪ್ರಸಾದ್ ಅವರಂತವರ ಆತ್ಮಾಭಿಮಾನವನ್ನು ಕೆಣಕುತ್ತದೆ. ಹಾಗಾಗಿ ಪ್ರಸಾದ್ ಅವರು ಮುಂದಿನ ರಾಜಕೀಯದ ನಡೆ ಬಗ್ಗೆ ಲೆಕ್ಕಾಚಾರ ಹಾಕುತ್ತಿರಬಹುದು.


ಸಂದೇಶ ನಾಗರಾಜ್

ಈಗಿನ ರಾಜಕೀಯ ಕೇವಲ ಲೆಕ್ಕಾಚಾರಗಳಲ್ಲೇ ನಡೆಯುವುದಂತೂ ಸತ್ಯ. ಪ್ರಸಾದ್ ಅವರ ರಾಜೀನಾಮೆಯಿಂದ ಮುಂದಿನ ದಿನಗಳಲ್ಲಿ ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಕಾಂಗ್ರೆಸ್‌ಗೆ ಸಣ್ಣ ಪ್ರಮಾಣದ ಹೊಡೆತ ಬೀಳಲಿದೆ. ಅದನ್ನು ಸಮರ್ಥವಾಗಿ ಎದುರಿಸುವ ಇಂಗಿತವನ್ನು ಕಾಂಗ್ರೆಸ್‌ನ ಕೆಲ ನಾಯಕರು ಹೊರಹಾಕುತ್ತಿದ್ದಾರೆ. ಪ್ರಸಾದ್ ಕಾಂಗ್ರೆಸ್‌ಗೆ ಎಳ್ಳು ನೀರು ಬಿಡಲು ನಿರ್ಧರಿಸಿರುವುದಕ್ಕೆ ಪ್ರತಿಕ್ರಿಯಿಸಿರುವ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ "ಪ್ರಸಾದ್ ಅವರ ಮನವೊಲಿಸುವ ಮಾತೇ ಇಲ್ಲ, ಅಧಿಕಾರವಿದ್ದಾಗ ಪಕ್ಷ ಚೆನ್ನಾಗಿತ್ತು, ಅಧಿಕಾರ ಹೋದಮೇಲೆ ಪಕ್ಷ ಸರಿ ಇಲ್ಲ ಎಂದರೆ ಹೇಗೆ?" ಎಂದು ಖಾರವಾಗಿ ಪ್ರಶ್ನಿಸಿದ್ದಾರೆ. ಹಾಗೆಯೇ ಮಾಜಿ ಕೇಂದ್ರ ಸಚಿವ ಕೆ.ಎಚ್.ಮುನಿಯಪ್ಪ "ಪ್ರಸಾದ್ ಅವರು ಪಕ್ಷ ಬಿಡಲು ನಿರ್ಧರಿಸಿರುವ ಬಗ್ಗೆ ನಾನು ಯಾವುದೇ ಪ್ರಶ್ನೆ ಮಾಡುವುದಿಲ್ಲ" ಅಂತ ತಲೆ ಕೊಡವಿಕೊಂಡಿರೋದು. ಇನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಎಚ್.ಸಿ.ಮಹದೇವಪ್ಪನಂತವರು ತುಟಿ ಎರಡು ಮಾಡದೆ ಡೋಂಟ್ ಕೇರ್ ರೀತಿ ವರ್ತಿಸಿರೋದು ಇವೆಲ್ಲಾ ಶ್ರೀನಿವಾಸ್ ಪ್ರಸಾದ್‌ರ ಬೀಳ್ಕೊಡುಗೆಗೆ ಪಕ್ಷ ಸಜ್ಜಾಗಿದೆ ಅನ್ನೋದನ್ನು ಸಾಬೀತುಮಾಡುತ್ತವೆ.

ಇನ್ನು ಈ ಭಾಗದ ಸಜ್ಜನ ರಾಜಕಾರಣಿ, ಉತ್ತಮ ಸಂಸದ ಎನಿಸಿಕೊಂಡ ಆರ್.ಧ್ರುವನಾರಾಯಣ್ ಅವರು ಪ್ರಸಾದ್ ಅವರನ್ನು ಬೆಂಬಲಿಸಿ ಅವರೊಡನೆಯೇ ಇರುತ್ತಾರೆ, ಪ್ರಸಾದ್ ಅವರನ್ನು ಹಿಂಬಾಲಿಸುತ್ತಾರೆ ಎಂಬ ಸುದ್ದಿ ಹರಡಿತ್ತು. ಆದರೆ ಮೊನ್ನೆ ಧ್ರುವನಾರಾಯಣ್ "ಕಾಂಗ್ರೆಸ್ ಪಕ್ಷ ನನಗೆ ತಾಯಿ ಇದ್ದಂತೆ, ಕಾಂಗ್ರೆಸ್‌ನಿಂದಲೇ ಎಂಎಲ್‌ಎ, ಎಂಪಿ ಆಗಿದ್ದೇನೆ. ಹೀಗಾಗಿ ಕಾಂಗ್ರೆಸ್ ಪಕ್ಷ ಬೆಳೆಸುವ ಕೆಲಸ ಮಾಡುತ್ತೇನೆಯೇ ವಿನಃ ಕಾಂಗ್ರೆಸ್‌ಗೆ ಹಾನಿಯಾಗುವ ಕೆಲಸ ಮಾಡುವುದಿಲ್ಲ" ಎಂದು ಹೇಳಿ ಪ್ರಸಾದ್ ಅವರ ಹಿಂದೆ ಹೋಗುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.


ಇದರ ಲಾಭ ಪಡೆಯಲು ಹೊರಟಿರುವ ಜೆಡಿಎಸ್ ನಾಯಕರು ಪ್ರಸಾದ್ ಅವರ ಮನೆಗೆ ಎಡತಾಕುತ್ತಿದ್ದಾರೆ. ಮೊನ್ನೆ ಸಾ.ರಾ.ಮಹೇಶ್, ಚಿಕ್ಕಮಾದು, ಕೆ.ಟಿ.ಶ್ರೀಕಂಠೇಗೌಡ ಮೂವರು ಜೆಡಿಎಸ್ ಶಾಸಕರು ಪ್ರಸಾದ್ ಅವರ ಮನೆಯಲ್ಲಿ ಕುಳಿತು "ನೀವು ನಂಜನಗೂಡು ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ಜೆಡಿಎಸ್‌ನಿಂದ ಬೆಂಬಲ ನೀಡ್ತೇವೆ" ಎಂದು ಹೇಳಿ ಬುಟ್ಟಿಗೆ ಹಾಕಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಆದರೆ ಜೆಡಿಎಸ್‌ನಲ್ಲಿ ಪ್ರಸಾದ್ ಅವರಿಗೆ ಸಂಪೂರ್ಣ ಬೆಂಬಲ ಇದೆ ಎಂದು ಹೇಳಲಾಗುವುದಿಲ್ಲ. ಯಾಕೆಂದರೆ ವಿಧಾನ ಪರಿಷತ್ ಸದಸ್ಯ, ಈ ಭಾಗದ ಪ್ರಭಾವಿ ರಾಜಕಾರಣಿ ಸಂದೇಶ್ ನಾಗರಾಜ್ ಈ ಮೂವರು ಶಾಸಕರ ಮೇಲೆ ಕಿಡಿ ಕಾರಿದ್ದು "ಇವರು ಪ್ರಸಾದ್ ಅವರನ್ನು ಪಕ್ಷಕ್ಕೆ ಸ್ವಾಗತಿಸಿರುವುದು ಸರಿ. ಆದರೆ ಪ್ರಸಾದ್ ಅವರು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದರೆ ಜೆಡಿಎಸ್ ಬೆಂಬಲ ನೀಡುತ್ತದೆ ಎಂದು ಹೇಳಿರುವುದು ಸರಿಯಲ್ಲ, ಪ್ರಸಾದ್ ಅವರು ನಮ್ಮ ಪಕ್ಷಕ್ಕೆ ಬಂದು ನಮ್ಮ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಡಲಿ" ಎಂದು ಪಕ್ಷದೊಳಗೆ ಪ್ರಸಾದ್ ಅವರ ಸ್ಥಾನಕ್ಕೆ ಗೊಂದಲ ಸೃಷ್ಟಿಸಿದರೆ, ಮತ್ತೊಬ್ಬ ಪ್ರಭಾವಿ ನಾಯಕ ಜಿ.ಟಿ.ದೇವೇಗೌಡ ಅವರು ಮೌನವಾಗಿರುವುದು ಮತ್ತಷ್ಟು ಗೊಂದಲ ಸೃಷ್ಟಿಸಿದ್ದಾರೆ. ಇನ್ನು ಪಕ್ಷದ ಕೀಲಿ ಕೈ ಎಚ್.ಡಿ.ದೇವೇಗೌಡ ಅವರು "ನಾನು ಪ್ರಸಾದ್ ಅವರನ್ನು ಪಕ್ಷಕ್ಕೆ ಬರಲು ಕೇಳಿಕೊಂಡಿಲ್ಲ, ಅವರಾಗೇ ಬಂದರೆ ಸ್ವಾಗತ" ಎಂದು ಹೇಳುವ ಮೂಲಕ ಪಕ್ಷದಲ್ಲಿ ಪ್ರಸಾದ್ ಅವರಿಗೆ ಆಯಕಟ್ಟಿನ ಜಾಗ ಖಾಲಿ ಇಲ್ಲ ಎಂಬ ಸಂದೇಶ ರವಾನಿಸಿದ್ದಾರೆ. ಇದನ್ನು ನೋಡಿದರೆ ಪ್ರಸಾದ್ ಅವರಿಗೆ ಕುರುಡುಗಣ್ಣಿಗಿಂತ ಮೆಳ್ಳಗಣ್ಣೆ ಲೇಸು ಎಂಬಂತೆ ಜೆಡಿಎಸ್‌ಗಿಂತ ಕಾಂಗ್ರೆಸ್ಸೇ ಲೇಸು ಎನ್ನುವಂತಿದೆ.

ಇನ್ನು ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಬಿಜೆಪಿಯನ್ನು ಮೈಸೂರು ಭಾಗದಲ್ಲಿ ಗುತ್ತಿಗೆ ತೆಗೆದುಕೊಂಡಿರುವ ಪ್ರತಾಪ ಸಿಂಹ ಅವರು ... ಅವರಿವರೊಂದಿಗೆ ಪ್ರಸಾದ್ ಅವರ ಮನೆಯಲ್ಲಿ ... ಹೂಡುತ್ತಿದ್ದಾರೆ. ಪ್ರತಾಪ ಸಿಂಹನಂತೂ ಅಧಿ... ಬಿಜೆಪಿ ರಾಜಕಾರಣಿಯಾದ ಮೇಲೆ ದೊಡ್ಡ ... ಮಾಸ್ಟರ್ ಆಗಿಬಿಟ್ಟಿದ್ದಾರೆ. ಈ ಮೊದಲು ಕಾಂಗ್ರೆ... ಶ್ರೀನಿವಾಸ್ ಪ್ರಸಾದ್‌ರನ್ನು ಬಾಯಿಗೆಬ... ಹೀಯಾಳಿಸುತ್ತಿದ್ದ ಸಿಂಹ ಈಗ ಪ್ರಸಾದ... ಹಾಡಿಹೊಗಳುತ್ತಿದ್ದಾರೆ. ಪ್ರಸಾದ್‌ರ ಮನೆಯೊಳಗೆ ... ಬನ್ನಿ" ಎಂದು ದುಂಬಾಲು ಬೀಳುವ ಪೇಪರ್ ... ಹೊರಗೆಬಂದು ಮಾಧ್ಯಮದವರ ಮುಂದೆ "... ಅವರ ಆರೋಗ್ಯ ವಿಚಾರಿಸಲು ಪಕ್ಷದ ವ... ಸೂಚಿಸಿದ್ದರು, ಹಾಗಾಗಿ ಪ್ರಸಾದ್ ಅವರ ಮನೆ... ನೀಡಿದ್ದೆ" ಅಂತ ಅಣಿಮುತ್ತು ಉದುರಿಸುತ್ತಾನೆ. ಪ್ರ... ಆರೋಗ್ಯ ಕೈಕೊಟ್ಟಿದ್ದು ತೀರಾ ಇತ್ತೀಚೆ... ಮಂತ್ರಿಯಾಗಿದ್ದಾಗಿನಿಂದಲೂ ಅವರ ಆ... ಏರುಪೇರಾಗುತ್ತಲೇ ಇತ್ತು. ಆಗ ಪ್ರಸಾದ್ ಅ... ವಿಚಾರಿಸಬೇಕು ಅಂತ ಪೇಪರ್ ಸಿಮ್ಮನಿಗಾಗಲಿ ... ಪಕ್ಷದ ವರಿಷ್ಠರಿಗಾಗಲಿ ಅನ್ನಿಸಿರಲಿಲ್ಲವೇ? ... ಶ್ರೀನಿವಾಸ ಪ್ರಸಾದ್ ಅವರು ಬಿಜೆಪಿಗೆ ಬಂದ... ದಲಿತ ಸಮುದಾಯವನ್ನು ಸಶಕ್ತೀಕರಣಗೊಳಿಸಲು ... ಅವಕಾಶ ಸಿಕ್ಕಂತಾಗುತ್ತದೆ ಅಂತ ಪೇಪರ್ ... ಕುಂಯ್‌ಗುಟ್ಟುತ್ತದೆ. ಅಂದರೆ ಇಲ್ಲಿಯವರೆಗೆ ಬಿಜೆಪಿ... ದಲಿತರ ಸಶಕ್ತೀಕರಣ ಆಗಿಲ್ಲ ಅನ್ನೋದನ್ನು ... ಒಪ್ಪಿಕೊಂಡಂತಾಯ್ತು. ದಲಿತರೇ ದಲಿತರ ... ಮಾಡಬೇಕೆ? ಇವರ ಕೈಯಲ್ಲಿ ದಲಿತರ ... ಸಾಧ್ಯವಿಲ್ಲವೆ? ಇವರ ಪ್ರಕಾರ ಸಂಸತ್ತಿನಲ್ಲಿ ಬಿಜೆ... 62 ಎಸ್‌ಸಿ- ಎಸ್‌ಟಿ ಸದಸ್ಯರಿದ್ದಾರೆ. ಅವರಲ್ಲಿ ... ಜನರಿಗೆ ಆಯಕಟ್ಟಿನ ಮಂತ್ರಿ ಸ್ಥಾನ ಕೊಟ್ಟಿದ್ದಾರೆ... ಬಂಗಾರು ಲಕ್ಷ್ಮಣ್ ಅವರಿಗೆ ಕೊಟ್ಟು ಕಿತ್ತುಕೊಂ... ಎಂತದು. ಪ್ರಸಾದ್ ಅವರನ್ನು ಕರೆದುಕೊಂಡು ... ಯಾವ ಜಾಗಕ್ಕೆ ಕೂರಿಸುತ್ತಾರೆ ಎಂಬುದನ್ನು ... ಹೇಳಬಲ್ಲರೆ. ಪಕ್ಷಕ್ಕೆ ಹೋದಮೇಲೆ ಪ್ರಸಾದ್ ಅ... ಬಂಗಾರು ಲಕ್ಷ್ಮಣ್‌ಗೆ ಮಾಡಿದಂತೆ ಮಾಡಿ ನಡು... ಕೈಬಿಡುವುದರಲ್ಲಿ ಯಾವ ಅನುಮಾನವೂ ಇಲ್ಲ. ಇದ... ನೋಡಿದರೆ ಜೆಡಿಎಸ್ ಮತ್ತು ಬಿಜೆಪಿ ನಂಬಿಕ... ರಾಜಕಾರಣದ ಮುಸ್ಸಂಜೆಯ ಇನ್ನಿಂಗ್ಸ್‌ಗೆ ... ಕೈಹಾಕಿದರೆ ಇಷ್ಟುದಿನ ಅವರು ಸಂಪಾದಿಸಿಕೊಂಡ... ಘನತೆ ಮೂರಾಬಟ್ಟೆಯಾಗುವುದರಲ್ಲಿ ಅನುಮಾ...

ಇನ್ನೂ ಬಿಎಸ್‌ಪಿ ರಾಷ್ಟ್ರೀಯ ಪ್ರಧಾನ ಕಾಯ... ಅಶೋಕ್ ಸಿದ್ಧಾರ್ಥ ಪ್ರಸಾದ್ ಅವರನ್ನು ಭೇಟಿ... ಪಕ್ಷಕ್ಕೆ ಆಹ್ವಾನಿಸಿದ್ದಾರೆ. ಆದರೆ ಕರ್ನಾಟಕದಲ್ಲಿ ... ಗುರುತರ ರಾಜಕಾರಣ ಮಾಡುವುದು ಕಷ್ಟವೇ... ಪ್ರಸಾದ್‌ಗೆ ಯಾವ ಜಾಗ ಸಿಗುತ್ತದೆ ಎಂಬುದೂ ಸ್ಪ... "ಇನ್ನು ಉಳಿದರಿರುವುದು ದಲಿತರ ಹಿತಕ್ಕಾಗಿ, ಸಮ... ಏಳಿಗಾಗಿ ಎಂದು ವಿವಿಧ ಸಂಘಟನೆಗಳು ಒಗ್ಗೂಡಿ... ದೇವನೂರ ಮಹಾದೇವ ನೇತೃತ್ವದ ಮಹಾಮೈತ್ರಿ... ಪ್ರಸಾದ್ ಅವರ ಕಣ್ಣು ನೆಟ್ಟಂತೆ ಕಾಣುತ್ತಿಲ್ಲ. ಯಾ... ಸದ್ಯ ಮಹಾಮೈತ್ರಿಯಲ್ಲಿ ಅಧಿಕಾರ ರಾಜಕಾರ... ಯಾವುದೇ ರೂಪುರೇಷೆ ಇಲ್ಲ. ಆದರೆ ದಮನಿತರ ಹಿ... ನಿಲ್ಲಬಹುದು. ದಲಿತರ ಸ್ವಾಭಿ... ನಾಯಕರೆನಿಸಿಕೊಂಡಿರುವ ಪ್ರಸಾದ್ ಅವರು ಇದೆ... ಲೆಕ್ಕಾಚಾರ ಹಾಕಿ ರಾಜಕೀಯದ ಕೊನೆಯ ಘ... ಕಾಂಗ್ರೆಸ್‌ನಲ್ಲೇ ಮಾರ್ಗದರ್ಶಕರಾಗಿ ಉಳಿಯುತ್ತಾ... ಅಥವಾ ದಮನಿತರ ಹಿತಕ್ಕಾಗಿ ಇತಿಹಾಸ ನಿರ್ಮಿ... ಕೆಲಸ ಮಾಡುತ್ತಾರೆಯೇ ಕಾದು ನೋಡಬೇಕಿದೆ.


ಪ್ರತಾಪ್ ಸಿಂಹ

ಉತ್ತರ ಕನ್ನಡ: ಯಡ್ಡಿಜಿಗೆ 'ಕೀರ್ತಿ' ತರುತ್ತಿರುವ ಅನಂತ್ಮಾಣಿ!


ಅನಂತಕುಮಾರ್ ಹೆಗಡೆ


ಉತ್ತರ ಕನ್ನಡದ ಕರ್ಮಗೇಡಿ ಸಂಸದ ನಂತಕುಮಾರ್ ಹೆಗಡೆ ಉರುಫ್ ಅನಂತ್ಮಾಣಿಯ ೋಗ-ರುಜಿನ-ಬಾಧ್ಯಗಳೆಲ್ಲವೂ ವಾಸಿಯಾಗಿದೆಯಾ? ಆತ ಸದ ಕರ್ತವ್ಯಕ್ಕೆ ಫಿಟ್ ಆಗಿದ್ದಾನಾ? ಹಿಂದೂಕಾರಣಕ್ಕೆ ದ್ಧನಾಗಿದ್ದಾನಾ? "ನಂಗೆ ಆರಾಮ್ ಇಲ್ಲ... ಕೀಕು.... ರಿಕಿರಿ ಮಾಡ್ಬೇಡಿ..." ಎಂದು ಕ್ಷೇತ್ರದ ಸಮಸ್ಯೆ ೊತ್ತುಕೊಂಡು ಬರುತ್ತಿದ್ದವರ ಮೇಲೆ ರೇಗಾಡಿ ತಲೆ ುರಿಸಿಕೊಳ್ಳುತ್ತಿದ್ದ ಅನಂತ್ಮಾಣಿ ಈಗ ಕಾಲಿಗೆ ಚಕ್ರ ್ಟಿಕೊಂಡಂತೆ ಉತ್ತರ ಕನ್ನಡದಾದ್ಯಂತ 'ದಂಡ'ಯಾತ್ರೆ ಾಡುತ್ತಿರುವುದರ ರಹಸ್ಯವೇನು? ಅನಂತ್ಮಾಣಿಗೆ ರಾಜ್ಯ ಜೆಪಿ ಉಪಾಧ್ಯಕ್ಷನಾಗಿ ಯಡ್ಡಿ ಮಹಾತ್ಮ ದೀಕ್ಷೆ ಾಡುತ್ತಿದ್ದಂತೆಯೇ ಆತ ಆರೋಗ್ಯವಂತನಾದ ಾಡವಾದರೂ ಏನು?


ಇಂಥ ಮಜ್‌ಮಜಾ ಪ್ರಶ್ನೆಗಳು ಪಕ್ಕಾ ಬಜೆಪಿಗಳನ್ನಷ್ಟೇ ಲ್ಲ, ಅನಂತ್ಮಾಣಿಗೆ ಮತ ನೀಡಿದ-ನೀಡದ ಉತ್ತರ ಕನ್ನಡದ ಲ್ಲರನ್ನೂ ಕೆಣಕುತ್ತಲೇ ಇವೆ. ಇದಕ್ಕೆ ಕಾರಣವೂ ಇದೆ. ನಂತ್ಮಾಣಿ ಎಂದರೆ ಎಲೆಕ್ಷನ್ ಹೊತ್ತಲ್ಲಷ್ಟೇ ಕೋಮು ಾಮತ್ತಿನ ವೇಷ ಕಟ್ಟಿಕೊಂಡು ಬಂದುಹೋಗುವ ಫ್ರೂನ್ ಎಂತಲೇ ಚಿರಪರಿಚಿತ. ಆತ ತನ್ನ ಪೂರ್ವಾಧಿಕಾರಿ ೇವರಾಯನಾಯ್ಕ್‌ಗಿಂತಲೂ ಪರಮ ಮೈಗಳ್ಳ. "ರಸ್ತೆ- ್ಕಟು-ಶಾಲೆ-ಆಸ್ಪತ್ರೆಯೆಲ್ಲ ಎಮ್ಮೆಲ್ಲೆ ಜವಾಬ್ದಾರಿ... ದೇನಿದ್ರೂ ಡಿಲ್ಲಿ ಲೆವಲ್‌ನಲ್ಲಿ ಶಾಸನ ಮಾಡೋ ಕೆಲ್ಸಾ..." ಂತಿದ್ದ ಕಾಂಗ್ರೆಸ್‌ನ ದೇವರಾಯ ನಾಯ್ಕನ ಡೈಲಾಗ್ ಜೆಪಿಯ ಅನಂತ್ಮಾಣಿಯೂ ಉರು ಹೊಡೆದಿದ್ದಾನೆ. ಐದು ಾರಿ ಗೆದ್ದರೂ ವೈವಿಧ್ಯಮಯ ಜಾತಿ-ಜನಾಂಗ, ವಿಶಿಷ್ಟ ಾಮಾಜಿಕ-ಆರ್ಥಿಕ-ರಾಜಕೀಯ ಸ್ಥಿತಿ-ಗತಿಗಳ ಉತ್ತರ ನ್ನಡದ ಅಂತಪಾರವೇ ಗೊತ್ತಾಗಿಲ್ಲ ಈ ಹೆಡ್ಡನಿಗೆ!


ಮಾತೆತ್ತಿದರೆ ಮುಸ್ಲಿಮರ ಮೂದಲಿಸೋದು, ಕ್ರಿಶ್ಚಿಯನ್ನರ ಬಾಯಿಸೋದು, ಅವರ ಧರ್ಮವನ್ನು ಅವಹೇಳನ ಮಾಡಿ ಆನಂದ ಅನುಭವಿಸೋದು, ಜಾತ್ಯತೀತರು-ವಿಚಾರವಾದಿಗಳು ಪ್ಪಾಲ್ಲದ ಬೇವರ್ಸಿಗಳು ಎನ್ನೋದು ಬಟ್ಟರೆ ಬೇರೇನೂ ೊತ್ತಿಲ್ಲ. ಒಂದೂವರೆ ದಶಕದಿಂದ ಈತ ಎಂಪಿಯಾಗಿದ್ದರೂ ಲ್ಲೆಗೆ ಪೈಸೆಯ ಪ್ರಯೋಜನವಾಗಿಲ್ಲ. ಕೇಂದ್ರ ಸರ್ಕಾರವೇ ಬಹರಿಸಬೇಕಾದ ಕಾರವಾರದ ನೌಕಾನೆಲೆ ನಿರಾಶ್ರಿತರ ಸಮಸ್ಯೆ ್ಟೀಯ ಹೆದ್ದಾರಿ ಮಾರಿ, ಅಡಿಕೆ ಬೆಳೆಗಾರರ ಬೆಲೆ ಸಂಕಷ್ಟ... ್ಯಾದಿಯಲ್ಲಿ ಯಾವುದೂ ಅನಂತ್ಮಾಣಿಯಿಂದ ಬಗೆಹರಿಸಲು ಗಿಲ್ಲ, ದಿಲ್ಲಿ ಮಟ್ಟದಲ್ಲಿ ಹೋರಾಡುವ ತಿಳಿವಳಿಕೆ ಜಾಣ್ಮೆ ಚಿಡ್ಡಿ ಲೀಡರ್‌ನಲ್ಲಿ ಇಲ್ಲ. ಸಮಸ್ಯೆ ಪರಿಹರಿಸಿ ಜನರ ಣ ತೀರಿಸಬೇಕೆಂಬ ಕೃತಜ್ಞತಾಭಾವ ಮೊದಲೇ ಇಲ್ಲ.

ರೈತ-ಮೀನುಗಾರ-ತೋಟಗರಿಗೆಲ್ಲ ಅನಂತ್ಮಾಣಿ ಂಗೈಲೇ ಅರಮನೆ ತೋರಿಸಿದ ಕತೆ ಒಂದೆರಡಲ್ಲ. ತನ್ನ ಂಘಿ ಸಂಗಾತಿಗಳು ಅಸಹಾಯಕ ಬಡವರ ಶೋಷಿಸಿದರೆ, ್ಕಾರದ ಬೊಕ್ಕಸಕ್ಕೆ ಕೋಟಿ-ಕೋಟಿ ಹಾನಿ ಮಾಡಿ ಹೈವೆಯನ್ನೇ ಹೈಜಾಕ್ ಮಾಡಿದೆ. ಈ ಸ್ವಯಂಘೋಷಿತ ದೇಶಭಕ್ತನಿಗೆ ಆದ್ಯೋರು ಸಣ್ಣ ತ್ಯಾಗ ದೇಶೋದ್ಧಾರಕ್ಕಾಗಿ ಎಂಬಂತೆ ಕಾಣಿಸುತ್ತದೆ. ಸಂಸದ ನಿಧಿಯ ಕಾಮಗಾರಿಯಲ್ಲಿ ನಿರ್ದಾಕ್ಷಿಣ್ಯವಾಗಿ ಪರ್ಸಂಟೇಜ್ ಪಡೆಯುವ, ಅಧಿಕಾರಿಗಳ ಸುಲಿಯುವ ಅನಂತ್ಮಾಣಿ ವೈಯಕ್ತಿಕ ಮುನ್ನಡೆ ನತದೃಷ್ಟ ಉತ್ತರ ಕನ್ನಡ ಜಿಲ್ಲೆಯ ಹಿನ್ನಡೆಯ ಗತಿಗಿಂತಲೂ ಹೆಚ್ಚೇ ಇದೆ!! ಶಿರಸಿ ಪೇಟೆಯಲ್ಲಿ ಚಪ್ಪಲಿ ಇಲ್ಲದೆ ಅಂಡಲೆಯುತ್ತಿದ್ದ ಭಟ್ಟರ ಹಳ್ಳಿಗಳಲ್ಲಿ ವಾರಾನ್ನದ ಹಿಂದುತ್ವದ ಭಿಕಮತ್ತಿನ ಹುಡುಗನಾಗಿ ಅಂಡಲೆಯುತ್ತಿದ್ದ ಅನಂತ್ಮಾಣಿ ಇವತ್ತು ಐಷಾರಾಮಿ ಜೀವನ ನಡೆಸುತ್ತಿದ್ದಾನೆ. ಇದೇ ನೋಡಿ ದೇಶಭಕ್ತಿಯ ಅಸಲಿಮರ್ಮ ಅನ್ನುತ್ತಿದ್ದಾರೆ ಅನಂತ್ಮಾಣಿ ಚರಿತ್ರೆ ಬಲ್ಲವರು!!

ಬಳ್ಳಾರಿ-ಬೇಲೇಕೇರಿ ಗಣಿ ಅವ್ಯವಹಾರದಲ್ಲಿ ಹಿಷ್ಟಾ ಪಡೆದ ಸಾಧನೆಯ ಅನಂತ್ಮಾಣಿಯ ಅವಾಂತರ-ಅನ್ಯಾಯ-ಅಕ್ರಮಗಳಿಗಿಂತಲೂ ರೋಚಕ ಆತನ ಅನಾರೋಗ್ಯದ ಪುರಾಣ. ಕಳೆದ ಪಾರ್ಲಿಮೆಂಟ್ ಎಲೆಕ್ಷನ್ ಮೊದಲಿಂದಲೂ ಜನರ ಪಾಲಿಗೆ ನಾಟ್‌ರೀಚೆಬಲ್ ಎಂಪಿ ಆಗಿದ್ದ ಈತ ದೇಶಪಾಂಡೆ ವಿರೋಧಿ ಅಲೆಯಲ್ಲಿ ಮತ್ತೆ ಸಂಸದನಾದ ನಂತರವಂತೂ ನಾಪತ್ತೆಯೇ ಆಗಿಹೋದ. ಅನಂತ್ಮಾಣಿಗೆ ಎದ್ದು ಓಡಾಡಲಿಕ್ಕೂ ಆಗದಂಥ ರೋಗ ಕಾಡುತ್ತಿದೆ ಎಂಬ ಸುದ್ದಿಗಳು ಹಬ್ಬಿದವು. ಕೆಲವರು ಆತನಿಗೆ ನರಮಂಡಲಕ್ಕೆ ಸಂಬಂಧಿಸಿದ್ದ ವ್ಯಾಧಿ ಎಂದರು; ಇನ್ನೂ ಕೆಲವರು ಬೆನ್ನುನೋವು ಆತನ ಹಿಂಡಿ ಹಿಪ್ಪೆ ಮಾಡಿ ಹಾಸಿಗೆ ಹಿಡಿಸಿದೆ ಎಂದರು. ದಿಲ್ಲಿ-ಕೋಲ್ಕತ್ತಾ-ಕೇರಳದ ಆಸ್ಪತ್ರೆಗಳಲ್ಲಿ ಮಲಗೇಳುತ್ತಿದ್ದಾನಂತೆ ಎಂಬ ಚರ್ಚೆಗಳು ಜೋರಾದವು. ಅಂತೂ ಕೊನೆಗೊಂದು ದಿನ ಎಂಪಿ ಸಾಹೇಬರ ವಕ್ತಾರನಿಂದಲೇ ಬಾಸ್‌ಗೆ ಕ್ಷೇತ್ರದ ಸಮಸ್ಯೆ ನಿಭಾಯಿಸಲಾಗದ-ಜನರ ಭೇಟಿ ಮಾಡಲಾಗದಂಥ ಆರೋಗ್ಯ ಸಮಸ್ಯೆ ಬಾಧಿಸುತ್ತಿದೆ ಎಂಬ ಹೇಳಿಕೆ ಬಂತು! ಚುನಾವಣೆ ಹೊತ್ತಲ್ಲಿ ಕಂಡ ಅನಂತ್ಮಾಣಿ ಆ ಬಳಿಕ ಕಾಣಿಸಲೇ ಇಲ್ಲ!!


ಅನಂತಕುಮಾರ್




ಕಾಗೇರಿ ಹೆಗಡೆ

ಉತ್ತರ ಕನ್ನಡಿಗರ ಪಾಲಿಗೆ ಇದ್ದೂ ಇಲ್ಲದಂತಾಗಿದ್ದ ಸಂಸದ ಸಾಹೇಬ ಇದ್ದಕ್ಕಿದ್ದಂತೆಯೇ ಎದ್ದು ಕುಂತಿದ್ದು ಯಡ್ಡಿ ರಾಜ್ಯ ಬಜೆಪಿ ಯಜಮಾನನಾದ ದಿನ!! ತನ್ನ ಆಜನ್ಮ ವೈರಿ ಮಾಜಿ ಮಂತ್ರಿ ಕಾಗೇರಿ ಹೆಗಡೆಯನ್ನು ಎಂದೂ ಹತ್ತಿರ ಸೇರಿಸಿಕೊಳ್ಳದ, ತನಗೆ ಕೇಂದ್ರ ಮಂತ್ರಿಯಾಗದಂತೆ ಅಡ್ಡಗಾಲು ಹಾಕುತ್ತಿರುವ ಸ್ವ-ಜಾತಿ ಬ್ರಾಹ್ಮಣ ಲೀಡರ್‌ಗಳಾದ ಅನಂತಕುಮಾರ್ ಶಾಸ್ತ್ರಿ ಪ್ರಹ್ಲಾದ್ ಜೋಶಿ ವಗೈರೆಗಳ ಕಂಡರಾಗದ ಯಡ್ಡಿಯ ಪಕ್ಕಕ್ಕೆ ಸೇರಿಕೊಂಡ ಅನಂತ್ಮಾಣಿಯ ರೋಗಗಳೆಲ್ಲವೂ ಆ ಕ್ಷಣವೇ ಮಾಯವಾಗಿ ಹೋಯ್ತು! ಎದುರಾಳಿ ಬ್ರಾಹ್ಮಣ ಬ್ರಿಗೇಡ್‌ಗೆ ಬುದ್ಧಿ ಕಲಿಸಲು ಅನಂತ್ಮಾಣಿಯನ್ನು ಬಳಸಿಕೊಂಡ ಯಡ್ಡಿಜೀ ಆತನನ್ನು ರಾಜ್ಯ ಬಜೆಪಿ ಉಪಾಧ್ಯಕ್ಷನಾಗಿ ಮಾಡಿಬಿಟ್ಟರು. ಆಗ ಅನಂತ್ಮಾಣಿಯ ಆವಾಜ್ ಜಿಲ್ಲೆಯಲ್ಲಿ ಜೋರಾಗಿ ಹೋಯ್ತು! ಇಷ್ಟು ದಿನ ಅನಂತ್ಮಾಣಿ ಅನಾರೋಗ್ಯವೆಂದು ಅಡಗಿಕೊಂಡಿದ್ದು ಬರಿ ನಾಟಕ ಎಂದು ಜನ ಅನುಮಾನಪಡುವಷ್ಟು ಆತನ ಹಾರಾಟ ಹೆಚ್ಚಾಗಿ ಹೋಯ್ತು!!

ಜಿಲ್ಲಾ ಬಜೆಪಿಯಲ್ಲಿರೋದು ಇಬ್ಬರೇ ನಾಯಕರು. ಒಬ್ಬ ಮಂತ್ರಿಯಾಗಿ ಐದು ವರ್ಷ ಮೆರೆದ ಎಬಿವಿಪಿ ಕ್ಯಾಡರಿನ ಕಾಗೇರಿ. ಇನ್ನೊಬ್ಬ ಹದಿನೈದು ವರ್ಷ ಎಂಪಿಯಾಗಿ ವ್ಯರ್ಥ ಕಳೆದ ಹಿಂದೂ ಜಾಗರಣ ವೇದಿಕೆ ಕಟಿಗರಿಯ ಈ ಅನಂತ್ಮಾಣಿ. ಇಬ್ಬರೂ ಹಾವು-ಮುಂಗುಸಿ. ಪಾರ್ಟಿ ಮೀಟಿಂಗ್‌ಗಳಲ್ಲಿ ಎರಡೂ ಬಣದವರು ಕುರ್ಚಿ-ಮೇಜು ಎತ್ತಿ ಎಸೆದು ರ್‍ಯಾಂಬೋ ಕಾಳಗ ಮಾಡಿದ್ದೂ ಇದೆ. ಶಿವಾನಂದ ನಾಯ್ಕ ಎಂಬ ಶೂದ್ರ ಮಂತ್ರಿ-ಶಾಸಕನಾಗದಂತೆ ಜನಿವಾರ ರಾಜಕಾರಣ ಮಾಡಿದ್ದ ಅನಂತ್ಮಾಣಿಗೆ ಕಾಗೇರಿ ಮಂತ್ರಿಯಾದಾಗ ಹಾವು ಹೊಡೆದು ಹದ್ದಿಗೆ ಹಾಕಿದಂತಾಗಿತ್ತು! ಕಾಗೇರಿ ಮಂತ್ರಿಗಿರಿ ದರ್ಬಾರು ನಡೆಸಿದಾಗ ಅನಂತ್ಮಾಣಿ ಹತಾಶೆಯಿಂದ ಚಡಪಡಿಸಿದ್ದು ಹೇಳತೀರದು. ಈಗ ಜಿಲ್ಲಾ ಬಜೆಪಿಯ ಚಕ್ರ ಒಂದು ಸುತ್ತು ತಿರುಗಿದಂತಾಗಿದೆ. ಕಾಗೇರಿ ಮಾಣಿ ಕೆಳಕ್ಕಿಳಿದಿದ್ದಾನೆ; ಅನಂತ್ಮಾಣಿ ಅನಾಯಾಸವಾಗಿ ಮೇಲೇರಿದ್ದಾನೆ. ಕಾಗೇರಿ ಮಾಜಿ ಮಂತ್ರಿ, ಬರೀ ಶಿರಸಿ ಶಾಸಕ. ಅನಂತ್ಮಾಣಿ ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ಪಾರ್ಟಿಯ ಗುಡ್ ಓಲ್ಡ್ ಸಂಸದ. ಜತೆಗೆ ರಾಜ್ಯ ಬಜೆಪಿ ಪಾರುಪತ್ಯ ಮಂಡಳಿಯ ಉಪಾಧ್ಯಕ್ಷ ಬೇರೆ. ಕೇಳಬೇಕೆ ಗುಡುಮುರಿಗೆ ಗುಣಧರ್ಮದ ಅನಂತ್ಮಾಣಿಯ ಒಕ್ಕೈ ಆಟ!!

ಇಡೀ ಜಿಲ್ಲಾ ಬಜೆಪಿ ಹಿಡಿತಕ್ಕೆ ಒಳಪಡಿಸಿಕೊಂಡಿರುವ ಅನಂತ್ಮಾಣಿ ಜಿಲ್ಲೆಯಲ್ಲಿ ಗಿರಗಿಟ್ಲೆ ಹೊಡೆಯುತ್ತಲೇ ಇದ್ದಾನೆ. ಆತ ಹಿಂದೂ ರಾಷ್ಟ್ರಪ್ರೇಮ, ಮೋದಿ ಗುಣಗಾನ, ಪಾರ್ಟಿ ಕಟ್ಟುವ ಕೆಚ್ಚು ಏನೇ ಪ್ರದರ್ಶಿಸಿದರೂ ಪರೋಕ್ಷವಾಗಿ ಶತ್ರು ಕಾಗೇರಿಗೊಂದು ಟೋಂಟು-ಟಾಂಗು ಇದ್ದೇ ಇರುತ್ತದೆ. ಮುಂದಿನ ಬಾರಿ ರಾಜ್ಯದಲ್ಲಿ ಬಜೆಪಿ ಅಧಿಕಾರಕ್ಕೇರುತ್ತದೆ. ತಾನು ಯಡ್ಡಿ ಸರ್ಕಾರದಲ್ಲಿ ಗೃಹಮಂತ್ರಿಯಾಗ್ತೇನೆಂದು ಈಗಲೇ ಸೂಟು ಹೊಲಿಸಲು ಹಾಕಿರುವ ಅನಂತ್ಮಾಣಿ ಎಮ್ಮೆಲ್ಲೆಯಾಗಲು ಕುಮಟಾ ಕ್ಷೇತ್ರವೇ ವಾಸಿಯೆಂದು ಲೆಕ್ಕ ಹಾಕಿ ಕುಂತಿದ್ದಾನೆ. ಆದರೆ ತಾನು ಶಿರಸಿಯಿಂದಲೇ ಅಸೆಂಬ್ಲಿಗೆ ಸ್ಪರ್ಧಿಸ್ತೇನೆ. ಹಿರಿಯರಾದ ಕಾಗೇರಿಯವರು ಯಾವಾದ್ದರೂ ರಾಜ್ಯಕ್ಕೆ ರಾಜ್ಯಪಾಲರಾಗಿ ಹೋಗ್ತಾರೆ ಎಂದು ಆತನ ಮರ್ಮಕ್ಕೆ ಕೈಹಾಕಿ ಕಿರಿಕಿರಿ ಮಾಡುತ್ತಿದ್ದಾನೆ.


ಸದ್ಯಕ್ಕೆ ಕಾಗೇರಿ ಮಾಣಿ ಸುಮ್ಮನಿದ್ದಾನೆ. ಅನಂತ್ಮಾಣಿ ಅಧಿಕ ಪ್ರಸಂಗದ ಬೊಬ್ಬೆ ಕೇಳಿದರೂ ಕೇಳಿಸದಂತೆ ಮಾಡಿ ಪ್ರತ್ಯುತ್ತರ ಕೊಡುವ ಗೋಜಿಗೆ ಹೋಗುತ್ತಿಲ್ಲ. ಆತನ ಕುಚೋದ್ಯ ಅವಡುಗಚ್ಚಿ ಸಹಿಸಿಕೊಳ್ಳುತ್ತಿದ್ದಾನೆ. ನರಿ ತಂತ್ರಗಾರಿಕೆಯಲ್ಲಿ ನಿಸ್ಸೀಮನಾದ ಕಾಗೇರಿ ಸಮಯಕ್ಕಂತೂ ಕಾಯುತ್ತಲೇ ಇದ್ದಾನೆ. ಜಿಲ್ಲಾ ಬಜೆಪಿಯ ಹಿರಿ ತಲೆಗಳನ್ನೆಲ್ಲ ಒಂದೊಂದಾಗಿ ಉರುಳಿಸಿದ ಕಾಗೇರಿಗೆ ಕೂಗುಮಾರಿ ಅನಂತ್ಮಾಣಿ ಯಾವ ಲೆಕ್ಕವೂ ಅಲ್ಲ ಎಂಬ ಚರ್ಚೆ ಬಜೆಪಿ ಬಿಡಾರದಲ್ಲಿ ನಡೆಯುತ್ತಿದೆ. ಅಷ್ಟಕ್ಕೂ ಸಂಘಪರಿವಾರದಲ್ಲಿ ಕೊಳಕು ನಾಲಿಗೆಯ ಅನಂತ್ಮಾಣಿಗಿಂತ ನಾಜೂಕಯ್ಯ ಕಾಗೇರಿ ಮಾಣಿಗೆ ಮಾನ-ಮರ್ಯಾದೆ ಹೆಚ್ಚು. ಅನಂತ್ಮಾಣಿ ಚೆಡ್ಡಿ ಪರಿವಾರದಲ್ಲಿ ಹಿಂದೂತ್ವದ ಹೋರಾಟದ ಕಾಲಾಳಷ್ಟೆ. ಹೇಗೆ ಅನಂತ್ಮಾಣಿ ಶೂದ್ರರನ್ನು ಛೂಬಿಟ್ಟು ಆಟ ಆಡುತ್ತಾನೋ ಅದೇ ರೀತಿ ಸಂಘಿ ಸರದಾರರು ಹುಂಬ ಅನಂತ್ಮಾಣಿಯನ್ನು ಹತಾರದಂತೆ ಬಳಸಿಕೊಳ್ಳುತ್ತಿದ್ದಾರೆ.

ಬಜೆಪಿಯಲ್ಲಿ ತಾನೀಗ ಕಾಗೇರಿಗಿಂತ ತೂಕದ-ಛಾತಿಯ ನೇತಾರನೆಂದು ತೋರಿಸಿಕೊಳ್ಳುವ ಭರದಲ್ಲಿ ಅನಂತ್ಮಾಣಿಯ ನಾಲಿಗೆ ಲಂಗು-ಲಗಾಮಿಲ್ಲದೆ ಹರಿದಾಡುತ್ತಿದೆ. ಮುಸ್ಲಿಂ-ಕ್ರಿಶ್ಚಿಯನ್-ಜಾತ್ಯತೀತರು-ಸ್ವಪಕ್ಷದ ಎದುರಾಳಿಗಳು... ಹೀಗೆ ಯಾರಿಗೆ ಬೇಕಿದ್ದರೂ ಬಾಯಿಗೆಬಂದಂತೆ ಬೈದು ತಾನೊಬ್ಬ ಪಕ್ಷಾತೀತ ಹಿಂದೂ ಸಂಸದನೆಂದು ಪೋಸು ಕೊಡುತ್ತಿದ್ದಾನೆ. ಅನಂತ್ಮಾಣಿಯ ಪಾರ್ಟಿ ಕಟ್ಟುವ 'ಕಟಪಿಟ' ಬಜೆಪಿ ರಾಜ್ಯಾಧ್ಯಕ್ಷ ಯಡ್ಡಿಗೆ 'ಕೀರ್ತಿ' ತರುತ್ತಿದೆ. ಆತನ ಅಸಂಬದ್ಧ ಮಾತುಗಾರಿಕೆ ಕೇಳಿದ ಬಜೆಪಿಗರೇ 'ಸೂಕ್ತ ವ್ಯಕ್ತಿ'ಯನ್ನು ಯಡ್ಡಿ ರಾಜ್ಯ ಬಜೆಪಿಯ ಉಪಾಧ್ಯಕ್ಷತೆಯಂಥ ದೊಡ್ಡ ಸ್ಥಾನ-ಮಾನಕ್ಕೇರಿಸಿದ್ದಾರೆಂದು ಮಾತಾಡಿಕೊಳ್ಳುತ್ತಿದ್ದಾರೆ. ಒಂದು ಸಭೆಯಲ್ಲಿ "ಬೋಲೋ ಭಾರತ್ ಮಾತಾಕಿ ಜೈ" ಎನ್ನದವರು ಬೇವರ್ಸಿಗಳೆಂದ ಅನಂತ್ಮಾಣಿ ಮತ್ತೊಂದೆಡೆ ಜಾತ್ಯತೀತರು-ವಿಚಾರವಾದಿಗಳು ಅಪ್ಪನಿಲ್ಲದೆ ಹುಟ್ಟಿದವರು ಅಂದಿದ್ದಾನೆ.

ಕುಮಟೆಯಲ್ಲಿ ನಡೆದ ಮೋದಿ ಸರ್ಕಾರದ ಎರಡು ವರ್ಷದ ಸಾಧನೆಯ ಸಮಾರಂಭದಲ್ಲಿ ಅನಂತ್ಮಾಣಿ ತನ್ನ ಅಸಲಿ ಸಂಸ್ಕೃತಿ-ಹಿಂದೂತ್ವದ ಗುಣಧರ್ಮ ತೋರಿಸಿಕೊಂಡಿದ್ದಾನೆ. ಅಲ್ಲಾತ ಪತ್ರಿಕೆ-ಮಾಧ್ಯಮಗಳನ್ನು ಕೊಳಕು ಕೊಳಕಾಗಿ ತೆಗಳಿ ತೀಟೆ ತೀರಿಸಿಕೊಂಡಿದ್ದಾನೆ. "ನೆಮ್ಮದಿಯಿಂದ ಬದುಕಬೇಕೆಂದಾದರೆ ಪತ್ರಿಕೆಗಳನ್ನು ಓದೋದು ಬಿಟ್ಟುಬಿಡಿ.... ನಾನು ಪತ್ರಿಕೆಗಳನ್ನು ಓದೋದೆ ಇಲ್ಲ... ಪೀತಪತ್ರಿಕೆಗಳು... ಟಾಯ್ಲೆಟ್ ಪತ್ರಿಕೆಗಳು....." ಎಂದೆಲ್ಲ ಜರೆದ ಅನಂತ್ಮಾಣಿ ಒಂದು ಹಂತದಲ್ಲಿ ತೀರಾ ಹಲ್ಕಟ್ ಶಬ್ದಗಳನ್ನೂ ಬಳಸಿ ವಿಕೃತಾನಂದ ಪಡೆದಿದ್ದಾನೆ. ಈತನ ಅಸಹ್ಯ ಭಾಷಣ ಕೇಳಿದ ಕಟ್ಟರ್ ಬಜೆಪಿ-ಸಂಘಿಗಳೇ ಅವಮಾನದಿಂದ ತಲೆತಗ್ಗಿಸಿದ್ದಾರೆ. "ನನ್ನ ಬಗ್ಗೆ ಟೀಕಿಸಿ ಬರೆಯುವ ಪತ್ರಿಕೆಗಳಿಗೆ ನನ್ನದೇನೂ ಕಿತ್ತುಕೊಳ್ಳಲಿಕ್ಕೆ ಆಗಲಿಲ್ಲ..." ಎಂದಾತ ಹಲುಬುವ ಮೂಲಕ ತನ್ನ ನಾಲಿಗೆ-ಮೆದುಳು-ಮನಸ್ಸು ಅದೆಂಥ ಕೊಳಚೆ ಹೊಂಡ ಎಂಬುದನ್ನು ಸ್ವಯಂ ಸಾಬೀತು ಪಡಿಸಿಕೊಂಡು ಬಿಟ್ಟಿದ್ದಾನೆ.

ಮಜಾ ಎಂದರೆ ಅನಂತ್ಮಾಣಿಯಿಂದ ಜಿಲ್ಲಾ ಬಜೆಪಿಗೆ ಲಾಭಕ್ಕಿಂತ ಹಾನಿಯೇ ಹೆಚ್ಚಾಗುತ್ತಿದೆ. ಆತ ಹುಚ್ಚುಚ್ಚಾಗಿ ಹಲುಬಿದಂತೆಲ್ಲ ಬಜೆಪಿಯ ಬೋಗಸ್ ಬಂಡವಾಳ ಬಯಲಾಗುತ್ತಿದೆ. ಇದು ಯಡ್ಡಿ ಗಮನಕ್ಕೆ ಬಂದಿದೆಯಾ? ಅಥವಾ ಅನಂತ್ಮಾಣಿಯೇ ಯಡ್ಡಿ ಮೇಲೆ ಸವಾರಿ ಹೊರಟಿದ್ದಾನಾ? ಸಂಸದನ ಗಲೀಜು ಭಾಷೆ, ಹೊಣೆಗೇಡಿತನ ಬಳಸಿಕೊಳ್ಳುವ ಜಾಣ್ಮೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಯಾರಿಗೂ ಇಲ್ಲ. ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕ್, ಜಿಲ್ಲಾ ಮಂತ್ರಿ ದೇಶಪಾಂಡೆ, ಭಾವಿ ಜಿಲ್ಲಾ ನಾಯಕ ಪ್ರಶಾಂತ್ ದೇಶಪಾಂಡೆ, ಕಾಂಗ್ರೆಸ್‌ನ ನಾಲ್ಕು ದಂಡಪಿಂಡ ಶಾಸಕರೆಲ್ಲ ನರಸತ್ತಂತೆ ಬದುಕಿಕೊಂಡಿದ್ದಾರೆ. ಆದರೆ ಒಂದಂತೂ ಖರೆ. ಅನಂತನ ಅಸಡ್ಡಾಳತನದ ಲಾಭ ಕಾಗೇರಿ ಎತ್ತದೇ ಬಿಡಲಾರ!

■ ವರದಿಗಾರ


ಯಡಿಯೂರಪ್ಪ

ಕೆಎಲ್‌ಇ ಶಿಕ್ಷಣ ಸಂಸ್ಥೆಯ 'ತಾಲಿಬಾನಿ' ಲೂಟಿಗಳ

ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ ಹೆಸರಿನಲ್ಲಿ ಸತ್ಯ, ಪ್ರೇಮ, ಸೇವೆ, ಸ್ವಾರ್ಥತ್ಯಾಗ ಉದ್ದೇಶದೊಂದಿಗೆ ಕಟ್ಟಿದ ಏಳು ಜನ ಸಪ್ತರ್ಷಿಗಳಿಂದ (ಎಂದು ಹೇಳುವ) ಆರಂಭವಾದ ಪ್ರಖ್ಯಾತ ಕೆ.ಎಲ್.ಇ ಸಂಸ್ಥೆಯು ಇಂದು ಹೆಮ್ಮರವಾಗಿ ಬೆಳೆದಿದ್ದರೂ ಹಣ ನುಂಗುವ ಛಾಳಿಯನ್ನು ಮಾತ್ರ ಬಿಟ್ಟಿಲ್ಲ. ಹೋಗಲಿ ಗೌರವಕ್ಕಾದರೂ ಸಂಸ್ಥೆ ಕಟ್ಟಿದ ಸಪ್ತರ್ಷಿಗಳ ವಂಶಸ್ಥರಿಗಾದರೂ ಸಂಸ್ಥೆಯಲ್ಲಿ ಸದಸ್ಯತ್ವ ನೀಡಿ ಗೌರವಿಸಲಾಗುತ್ತಿದೆಯಾ ಎಂದರೆ ಅದೂ ಇಲ್ಲ. ಮೂಲ ಸಂಸ್ಥಾಪಕರು ಬೆಳಕಿಗೆ ಬರದ ಹಾಗೆ ದಮನಿಸಲಾಗಿದೆ.

ಹಲವಾರು ವರ್ಷಗಳಿಂದ ಶಿಕ್ಷಣದ ಹೆಸರಲ್ಲಿ ಬೇಕಾದಷ್ಟು ದುಡ್ಡು ಮಾಡಿದರೂ ಇಂದಿಗೂ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳಿಂದ ಸುಲಿಗೆ ಮಾಡುವುದನ್ನು ನಿರಂತರವಾಗಿ ಮುಂದುವರೆಸುತ್ತಲೇ ಇದೆ. ಕೇವಲ ಸಂಸ್ಥೆಯ ವಿದ್ಯಾರ್ಥಿಗಳಿಂದ ಮಾತ್ರವಲ್ಲದೇ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳಿಂದ, ಸಂಸ್ಥೆಯ ನೌಕರರು ಮತ್ತು ಅಧ್ಯಾಪಕರಿಂದಲೂ ಭಾರೀ ಪ್ರಮಾಣದ ಹಣ ವಸೂಲಿ ಇಲ್ಲಿ ಮಾಮೂಲಿಯ ಸಂಗತಿಯಾಗಿದೆ. ಅದೂ ಕೂಡ ಯಾವುದೇ ಸಮರ್ಪಕ ಲೆಕ್ಕಗಳಿಲ್ಲದೇ, ರಸೀದಿ ಪತ್ರಗಳಿಲ್ಲದೆ ಬಾಯಿಮಾತಿನಲ್ಲೇ ನೂರು ಕೋಟಿಗೂ ಅಧಿಕ ಹಣ ಎತ್ತುವ ಸಾಹಸಕ್ಕೆ ಕೈ ಹಾಕಿದೆ ಸಂಸ್ಥೆಯ ಆಡಳಿತ ಮಂಡಳಿ. ಇದಕ್ಕೆ ನೆಪವಾಗಿ ಬಳಸಿಕೊಳ್ಳುತ್ತಿರೋದು ಸಂಸ್ಥೆಯ ಶತಮಾನೋತ್ಸವ ಕಾರ್ಯಕ್ರಮದ ಹೆಸರನ್ನು.

ಕೆ.ಎಲ್.ಇ ಸೊಸೈಟಿಯ ಸ್ಥೂಲನೋಟ

1916ರಲ್ಲಿ ಬಾಂಬೆ ಪ್ರೆಸಿಡೆನ್ಸಿಯ ಕನ್ನಡ ಮಾತನಾಡುವ ಜನರಿಗೆ ಶಿಕ್ಷಣ ನೀಡುವ ಸದುದ್ದೇಶದಿಂದ ಆರಂಭವಾದ ಈ ಸಂಸ್ಥೆಯು ಇಂದು ಕರ್ನಾಟಕ, ಮಹಾರಾಷ್ಟ್ರ, ದೆಹಲಿ, ಚೀನಾ, ಜಾಂಬಿಯಾ, ದುಬೈ, ಮಲೇಷ್ಯಾ, ಇಂಗ್ಲೆಂಡ್ ಹಾಗೂ ಅಮೆರಿಕದಾದ್ಯಂತ ತನ್ನ ಶಿಕ್ಷಣ ಶಾಖೆಗಳನ್ನು ಹೊಂದಿರುವ ಬಲಾಢ್ಯ ಖಾಸಗಿ ಸಂಸ್ಥೆಗಳಲ್ಲೊಂದಾಗಿದೆ. ಪ್ರಸ್ತುತ ಒಟ್ಟು 262 ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ, ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಕಲಿಯುತ್ತಿರುವ, ಹತ್ತು ಸಾವಿರಕ್ಕೂ ಮಿಕ್ಕಿದ ನೌಕರ ವರ್ಗವನ್ನು ಇದು ಹೊಂದಿದೆ. ಈ ಕೆ.ಎಲ್.ಇ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಡಾ. ಪ್ರಭಾಕರ ಕೋರೆ, ಅಧ್ಯಕ್ಷರಾಗಿ ಶಿವಾನಂದ ಕೌಜಲಗಿ, ಉಪಾಧ್ಯಕ್ಷರಾಗಿ ಶಂಕರ ಎಸ್. ಬೆಳಗಾವಿ ಮತ್ತು ಮಲ್ಲಿಕಾರ್ಜುನ ಸಿ. ಕೊಳ್ಳಿ, ಉಪ ಕಾರ್ಯಾಧ್ಯಕ್ಷರಾಗಿ ಅಶೋಕ ಜೆ. ಬಾಗೇವಾಡಿ, ಕಾರ್ಯದರ್ಶಿಗಳಾಗಿ ಡಾ. ಬಿ.ಜಿ ದೇಸಾಯಿ (ಇವರು ಡಾ.ಪ್ರಭಾಕರ ಕೋರೆಯವರ ಅಣ್ಣನ ಮಗಳನ್ನು ವಿವಾಹವಾಗಿದ್ದಾರೆ. ವರಸೆಯಲ್ಲಿ ಇವರು ಅಳಿಯಂದಿರು) ಮತ್ತು ಡಾ. ಪ್ರೀತಿ ಕೆ. ದೊಡವಾಡ (ಇವರು ಡಾ.ಪ್ರಭಾಕರ ಕೋರೆಯವರ ಪುತ್ರಿ) ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ. ಒಂದು ನಿರ್ದಿಷ್ಟ ಜಾತಿಯ ಮತ್ತು ಒಂದು ಸಿದ್ಧಾಂತದ ರಾಜಕೀಯ ಪಕ್ಷವನ್ನು ಈ ಸಂಸ್ಥೆ ಬೆಂಬಲಿಸುತ್ತಾ ಬಂದಿದೆ ಎಂಬ ಆರೋಪ ಕೇಳಿಬಂದರೂ ಸಹ ಇದು ಇಂದಿನವರೆಗೂ ಯಶಸ್ವಿಯಾಗಿ ನಡೆದುಬಂದಿದೆ ಎಂಬುದು ಮಾತ್ರ ಸುಳ್ಳಲ್ಲ.


ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳಂತೆಯೇ ಶಿಕ್ಷಣ ಸೇವೆ ನೀಡುತ್ತೇವೆ ಎನ್ನುವ ಘೋಷಣೆಯಿಂದಲೇ ನಡೆಯುತ್ತಿರುವ ಈ ಸಂಸ್ಥೆಯು ಶುಲ್ಕ, ಡೊನೇಷನ್ ಹೆಸರಿನಲ್ಲಿ ಪ್ರತಿ ವಿದ್ಯಾರ್ಥಿಯಿಂದ ಭಾರೀ ಹಣವನ್ನು ಲೂಟಿ ಮಾಡುತ್ತಿದೆ. ಶಿಕ್ಷಣದ ಎಲ್ಲಾ ಪ್ರಕಾರದ ಕಾಲೇಜುಗಳನ್ನು, ಕೋರ್ಸುಗಳನ್ನು ಹೊಂದಿರುವ ಸಂಸ್ಥೆಯು ಅತಿ ಹೆಚ್ಚಿನ ಶುಲ್ಕವನ್ನೇ ವಿಧಿಸುತ್ತಾ ಬಂದಿದೆ. 1983ರ ಕರ್ನಾಟಕ ಶಿಕ್ಷಣ ಕಾಯ್ದೆಯು ಸಂಸ್ಥೆಯ ಒಟ್ಟು ಶಿಕ್ಷಕರ ಸಂಬಳದ ಜೊತೆಗೆ ಶೇ.30 ರಷ್ಟನ್ನು ಸೇರಿಸಿ ಸಂಸ್ಥೆಯ ಒಟ್ಟು ಮಕ್ಕಳ ಸಂಖ್ಯೆಯಿಂದ ಭಾಗಿಸಿದಾಗ ಬರುವ ಹಣದಷ್ಟನ್ನು ಮಾತ್ರ ಖಾಸಗಿ ಸಂಸ್ಥೆಗಳು ಶುಲ್ಕ ನಿಗದಿ ಮಾಡಬೇಕೆಂದು ಸ್ಪಷ್ಟವಾಗಿ ತಿಳಿಸಿದೆ. ಆದರೆ ಇಲ್ಲಿ ಸದ್ಯಕ್ಕೆ ಪದವಿ ತರಗತಿಗಳಿಗೆ ವರ್ಷಕ್ಕೆ ದಾಖಲಾತಿ ಶುಲ್ಕವನ್ನೆ ಸರಾಸರಿ 30 ಸಾವಿರ ಎಂದು ನಿಗದಿ ಮಾಡಿದೆ. ಅಲ್ಲದೇ ಪರೀಕ್ಷಾ ಶುಲ್ಕವನ್ನು ಸರಾಸರಿ 2 ಸಾವಿರಕ್ಕೆ ನಿಗದಿಗೊಳಿಸಿದೆ. ಅನುತ್ತೀರ್ಣವಾದ ವಿಷಯ ಒಂದಕ್ಕೆ 800 ರೂ. ಪರೀಕ್ಷಾ ಶುಲ್ಕ ಕಟ್ಟಿಸಲಾಗುತ್ತಿದೆ. ಜೊತೆಗೆ ಹಾಜರಾತಿ ಕೊರತೆ ಕಂಡಬಂದಲ್ಲಿ ಅಂತಹ ವಿದ್ಯಾರ್ಥಿಗಳಿಂದ ಯಾವುದೇ ರಸೀದಿ ನೀಡದೇ 5-10 ಸಾವಿರದವರೆಗೂ ವಸೂಲಿ ಮಾಡಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ದಲಿತ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮತ್ತು ವಿದ್ಯಾರ್ಥಿವೇತನ ಸೌಲಭ್ಯ ಇದ್ದರೂ ಸಹ ಅದನ್ನು ಪಾರದರ್ಶಕವಾಗಿ ಜಾರಿಗೊಳಿಸದೇ ವಂಚಿಸಲಾಗುತ್ತಿದೆ ಎಂದು ಕಾಲೇಜಿನ ಹಲವು ಹಿರಿಯ ವಿದ್ಯಾರ್ಥಿಗಳೇ ಆರೋಪಿಸುತ್ತಾರೆಂದರೆ ಇಲ್ಲಿ ನಡೆಯುತ್ತಿರುವ ಅವ್ಯವಹಾರಗಳು ಅದಿನ್ನೆಂತವಿರಬೇಡ.

ಶತಮಾನೋತ್ಸವದ ಶತಕೋಟಿ ಸಂಗ್ರಹ

ಇಂತಹ ಕೆ.ಎಲ್.ಇ ಸಂಸ್ಥೆಗೆ ಈ ವರ್ಷಕ್ಕೆ ಶತಮಾನ ತುಂಬಿದೆ. 100 ವರ್ಷಗಳಿಂದ ಶಿಕ್ಷಣ ನೀಡುತ್ತಾ ಸಾವಿರಾರು ಕೋಟಿ ರೂಪಾಯಿ ಲಾಭ ಗಳಿಸಿರುವ ಪ್ರಖ್ಯಾತ ಸಂಸ್ಥೆಯು ತನ್ನ ನೂರು ವರ್ಷದ ಶತಮಾನೋತ್ಸವ ಕಾರ್ಯಕ್ರಮವನ್ನು ನವೆಂಬರ್ 13 ರಿಂದ 19ನೇ ತಾರೀಖಿನವರೆಗೆ ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಿದೆ. ದುರಂತವೇನೆಂದರೆ ಇಂತಹ ಸಂದರ್ಭವನ್ನು ದುರುಪಯೋಗಮಾಡಿಕೊಂಡು ಈ ಕಾರ್ಯಕ್ರಮಕ್ಕೂ ವಿದ್ಯಾರ್ಥಿಗಳು, ಪೋಷಕರು, ಹಳೆ ವಿದ್ಯಾರ್ಥಿಗಳು, ನೌಕರರು ಮತ್ತು ಅಧ್ಯಾಪಕ ವರ್ಗದಿಂದ ಭಾರೀ ಪ್ರಮಾಣದ ಹಣ ವಸೂಲಿ ನಡೆಯುತ್ತಿದೆ. 262 ಶಿಕ್ಷಣ ಸಂಸ್ಥೆಗಳಲ್ಲಿ ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಕಲಿಯುತ್ತಿದ್ದು ಎಸ್.ಎಸ್.ಎಲ್.ಸಿ.ವರೆಗಿನ ಪ್ರತಿ ವಿದ್ಯಾರ್ಥಿಗೆ 50 ರಿಂದ 100 ರೂ., ಪದವಿಪೂರ್ವ ಹಂತದ ಪ್ರತಿ ವಿದ್ಯಾರ್ಥಿಗೆ 200-250 ರೂ. ಮತ್ತು ಪದವಿ ನಂತರದ ಪ್ರತಿ ವಿದ್ಯಾರ್ಥಿಗೆ ತಲಾ 250-500 ರೂಪಾಯಿಯಂತೆ ಹಣವನ್ನು ಕಳೆದ ದಶಕದ ಹಿಂದಿನ ವರ್ಷಗಳಿಂದ ಸಂಗ್ರಹಿಸಲಾಗುತ್ತಿದೆ.

ಪ್ರಸ್ತುತ ಸುಮಾರು 10 ಸಾವಿರಕ್ಕೂ ಅಧಿಕವಿರುವ ಉದ್ಯೋಗಿಗಳು ಮತ್ತು ಅಧ್ಯಾಪಕರಿಗೆ ತಮ್ಮ ತಿಂಗಳ ಸಂಬಳದಲ್ಲಿ ಶೇ. 30 ರಷ್ಟು ಹಣವನ್ನು ಕಡ್ಡಾಯವಾಗಿ ಕೊಡಬೇಕೆಂದು ತಾಕೀತು ಮಾಡಲಾಗಿದೆ. ಈ ಎಲ್ಲಾ ಶುಲ್ಕ ಸಂಗ್ರಹಕ್ಕೂ ಯಾವುದೇ ಅಧಿಕೃತ ರಸೀದಿಗಳನ್ನು ನೀಡಲಾಗುತ್ತಿಲ್ಲ. ಬದಲಿಗೆ ಈ ಎಲ್ಲವೂ ಮೌಖಿಕವಾಗಿಯೇ ನಡೆಯುತ್ತಿದ್ದು ಯಾರಾದರೂ ಹಣ ಕೊಡಲು ಸಾಧ್ಯವಿಲ್ಲದಿದ್ದರೆ ಏಕೆಂದು ಲಿಖಿತವಾಗಿ ಬರೆದುಕೊಡಬೇಕೆಂದು ಫರ್ಮಾನನ್ನೂ ಆಡಳಿತ ಮಂಡಳಿ ಹೊರಡಿಸುವ ಮೂಲಕ ತನ್ನದೆಂತಹ ತಾಲಿಬಾನ್ ಸಂಸ್ಕೃತಿ ಅಂತ ಸಾಬೀತುಮಾಡಿದೆ.

ಒಂದು ಶತಮಾನೋತ್ಸವ ಕಾರ್ಯಕ್ರಮಕ್ಕೆ 100 ಕೋಟಿಗೂ ಅಧಿಕ ಹಣ ಖರ್ಚಾಗಲಿದೆಯೇ ಎಂಬ ಅನುಮಾನ ಎಲ್ಲಾ ನೌಕರರನ್ನು ಕಾಡತೊಡಗಿದೆ. ಅಲ್ಲದೇ


ಪ್ರಭಾಕರ ಕೋರೆ

ಏಕಾಏಕಿ ತಮ್ಮ ಸಂಬಳದಲ್ಲಿ 30% ಕೊಡಿ ಎಂದರೆ ಅವರು ಆ ಸಂಬಳದಲ್ಲಿ ಇತರೆ ತಮ್ಮ ವೈಯಕ್ತಿಕ ಖರ್ಚುಗಳನ್ನು ಹೇಗೆ ನಿಭಾಯಿಸಲು ಸಾಧ್ಯ ಅನ್ನೋ ಕಾಳಜಿ ಆಡಳಿತ ಮಂಡಳಿಗೆ ಬೇಕಿಲ್ಲ. ನಿಪ್ಪಾಣಿ ಬೆಳಗಾವಿ ಕಾಲೇಜಿನ ಭಾಗದ ಕೆಲವು ಅಧ್ಯಾಪಕರು ಮಾತ್ರ ಈ ಹಗಲುದರೋಡೆಯನ್ನು ವಿರೋಧಿಸಿ ನಾವು 30% ರಷ್ಟು ವಂತಿಗೆ ನೀಡುತ್ತೇವೆ ಆದರೆ ಅದಕ್ಕೆ ಆದಾಯ ತೆರಿಗೆ ವಿನಾಯತಿಗೆ ಅನುಕೂಲವಾಗುವ ಅಧಿಕೃತ ರಶೀದಿ ನೀಡಿ ಎಂದು ಒತ್ತಾಯಿಸಿದ್ದಾರೆ. ನಾವು ವಂತಿಕೆ ನೀಡಿದರೆ ನಮಗೆ ಅನುಕೂಲವಾಗಲು 80ಜಿ ತೆರಿಗೆ ಕಾಯ್ದೆ ಪ್ರಕಾರ ಅವಕಾಶವಿದೆ ಎಂದು ಕೇಳಿದ್ದಾರೆ. ಆದರೆ ಅದ್ಯಾವುದಕ್ಕೂ ಕೆ.ಎಲ್.ಇ ಆಡಳಿತ ಸಂಸ್ಥೆ ಸೊಪ್ಪು ಹಾಕಿಲ್ಲ. ವಂತಿಗೆ ಕೊಡಲಾಗದಿದ್ದರೆ ಯಾಕೆಂದು ತಿಳಿಸಿ, ನಾವು ಏನು ಮಾಡಬೇಕೆಂದು ನಮಗೆ ಗೊತ್ತು ಎಂದು ಬೆದರಿಕೆ ಹಾಕಿದ್ದಾರೆ.

ಅಧ್ಯಾಪಕರಿಗೆ ನಿತ್ಯ ಕಿರುಕುಳ

ಕೆ.ಎಲ್.ಇ ಸಂಸ್ಥೆಯಲ್ಲಿ ಸರ್ಕಾರಿ ಅನುದಾನಿತ ಕಾಲೇಜೊಂದರ ಕಾಯಂ ಅಧ್ಯಾಪಕರ ಪ್ರಕಾರ ಅವರ ಕೆಲಸ ಆಧುನಿಕ ಜೀತವಿದ್ದಂತೆ. ಏಕೆಂದರೆ ಒಮ್ಮೆ ಈ ಸಂಸ್ಥೆಗೆ ಅಧ್ಯಾಪಕರಾಗಿ ಸೇರ್ಪಡೆಗೊಂಡ ನಂತರ ಆಡಳಿತ ಮಂಡಳಿ ಹೇಳಿದ ಪ್ರತಿ ಕೆಲಸವನ್ನು ತಪ್ಪದೇ ಮಾಡಬೇಕಿದೆ. ಚೆನ್ನಾಗಿ ಕೆಲಸ ಮಾಡುವವರಿಗೇನೆ ಹೆಚ್ಚಿನ ಕೆಲಸದ ಹೊರೆ ಹೊರಿಸಲಾಗುತ್ತದೆ. ಒಂದುವೇಳೆ ಪ್ರಶ್ನಿಸಿದರೆ ಅವರನ್ನು ದೂರದ ಊರಿಗೆ ಏಕಾಏಕಿ ವರ್ಗಾವಣೆ ಮಾಡುವುದು, ಇನ್ನೂ ಹೆಚ್ಚಿನ ವಿರೋಧ ತೋರಿದರೆ ಅಂತಾರಾಜ್ಯ ವರ್ಗಾವಣೆಯ ಶಿಕ್ಷೆಗಳು ಸಹ ಕಾದಿರುತ್ತವೆ. ಸ್ವತಂತ್ರವಾಗಿ ವಿದ್ಯಾರ್ಥಿಗಳೊಂದಿಗೆ ಬೆರೆತು ಕೆಲಸ ಮಾಡಲು ಯಾರಿಗೂ ಸಾಧ್ಯವಾಗುವುದಿಲ್ಲ. ಒಂದುವೇಳೆ ವಿದ್ಯಾರ್ಥಿಗಳು ಯಾರಾದರೂ ಅಧ್ಯಾಪಕರ ಜೊತೆ ಹೆಚ್ಚು ಸಂಪರ್ಕವಿಟ್ಟುಕೊಂಡರೆ ಆ ಅಧ್ಯಾಪಕರಿಗೆ ನೋಟಿಸ್ ಜಾರಿಯಾಗುತ್ತದೆ. ಸಂಸ್ಥೆಯ ಅನೀತಿಯ ವಿರುದ್ಧ ಯಾರೂ ಮಾತನಾಡುವಂತಿಲ್ಲ. ಯಾರಾದರೂ ಮಾತನಾಡಿದಲ್ಲಿ ಅವರಿಗೆ ವರ್ಗಾವಣೆ ಮಾತ್ರವಲ್ಲದೇ ನಿವೃತ್ತಿ ನಂತರ ದೊರಕಬೇಕಾದ ಹಲವು ಸೌಲಭ್ಯಗಳು ಸಕಾಲದಲ್ಲಿ ದೊರಕದಂತೆ ತಡೆ ಹಿಡಿಯುವ ಸಂಚುಗಳು ನಡೆಯುತ್ತವೆ.

ಈ ಸಂಸ್ಥೆಯಲ್ಲಿ ಎಷ್ಟೇ ಚೆನ್ನಾಗಿ ಕಾರ್ಯನಿರ್ವಹಿಸಿದರೂ ಆಡಳಿತ ವರ್ಗದಿಂದ ಒಂದೂ ಒಳ್ಳೆಯ ಮಾತುಗಳು ಸಿಗುವುದಿಲ್ಲ. ಕೆಲಸ ಮಾಡಿದವರಿಗೆ ಸಿಗಬೇಕಾದ ಗೌರವ ಮನ್ನಣೆ ಯಾವುದು ಇಲ್ಲಿ ಇಲ್ಲದ ಪರಿಸ್ಥಿತಿ ತಲೆದೋರಿದೆ. ಆತಂಕದ ವಿಷಯವೆಂದರೆ ಹೊರಜಗತ್ತಿಗೆ ಪ್ರತಿಷ್ಠಿತ ಸಂಸ್ಥೆ ಎಲ್ಲಾ ಸೌಲಭ್ಯಗಳು ಇವೆ ಎಂದು ಬಿಂಬಿಸುವ ಈ ಸಂಸ್ಥೆಗಳಲ್ಲಿ ಸಾಕಷ್ಟು ಸಂಖ್ಯೆ ಉಪನ್ಯಾಸಕರೇ ಇಲ್ಲವಾಗಿದೆ.

ಮಾನವ ಹಕ್ಕುಗಳು, ಭಾರತೀಯ ಸಂವಿಧಾನ ಇ... ವಿಷಯಂಗಳು ಒಂದು ಸಿಲೆಬಸ್ ಎ... ಪರಿಗಣಿಸಲ್ಪಟ್ಟಿದ್ದರೂ ಇವುಗಳನ್ನು ಬೋಧಿಸಲು ಉಪನ್ಯಾಸಕರೂ ಇಲ್ಲ ಬೋಧನೆಯೂ ಇಲ್ಲವಾಗಿದೆ. ಕೆಲವು ವಿಷಯಗಳಿಗೆ ಇರುವ ಕೆಲವೇ ಉಪನ್ಯಾ... ಹೆಚ್ಚಿನ ಸಮಯ ಹೆಚ್ಚಿನ ತರಗತಿಗಳಿಗೆ ಬೋಧಿಸಬೇ... ಅನಿವಾರ್ಯತೆ ಎದುರಾಗಿದೆ. ಸಂಸ್ಥೆಯ ನಿಯಮದ ... ಪ್ರತಿಯೊಬ್ಬ ಅಧ್ಯಾಪಕ ಸರ್ಕಾರಿ ನಿಯಮದಂತೆ ... ತಾಸು ಪಾಠ ಮಾಡಬೇಕು. ಆದರೆ ಇಲ್ಲಿ ವಾರಕ್ಕೆ ... ರಿಂದ 20 ತಾಸು ಪಾಠ ಹೇಳುವ ಅನಿವಾರ್ಯತೆ ಇದಾದ ಮೇಲೂ ಸಂಸ್ಥೆ ವಹಿಸುವ ಇತರ ಚಟುವಟಿ... ನಿಭಾಯಿಸುವುದು ತಪ್ಪಿದ್ದಲ್ಲ.

ಇನ್ನು ಅತಿಥಿ ಉಪನ್ಯಾಸಕರ ಪಾಡು ಕೇಳುವ... ಇವರಿಂದ ತಿಂಗಳು ಪೂರ್ತಿ ದುಡಿಸಿಕೊಂಡು ಕ... ಸಂಬಳ ಕೊಡುವುದಲ್ಲದೇ ಅದರಲ್ಲೂ ತಾರ... ಮಾಡಲಾಗುತ್ತಿದೆ. ಇಂಗ್ಲಿಷ್ ಮತ್ತು ವಿಜ್ಞಾನ ವಿಭ... ಉಪನ್ಯಾಸಕರಿಗೆ ಮಾಸಿಕ 16 ಸಾವಿರ ನೀಡ... ವಾಣಿಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ಉಪನ್ಯಾಸಕರಿಗೆ ... ಸಾವಿರ ಸಂಬಳ. ಸಮಾಜ ವಿಜ್ಞಾನ (ಇತಿಹಾಸ, ಸಮಾಜ... ಭೂಗೋಳಶಾಸ್ತ್ರ ಇತ್ಯಾದಿ) ಹಾಗೂ ಭಾಷಾ (ಕನ್ನಡ, ಹಿ... ಮರಾಠಿ, ಉರ್ದು) ಉಪನ್ಯಾಸಕರಿಗೆ ಕೇವಲ 8 ಸಾ... ಮಾತ್ರ ನೀಡಲಾಗುತ್ತಿದೆ. ಅಂದರೆ ವಿಜ್ಞಾನ ... ಇಂಗ್ಲಿಷ್‌ಗಿಂತ- ವಾಣಿಜ್ಯಶಾಸ್ತ್ರ ಮತ್ತು ಅರ್ಥ... ವಿಷಯಗಳು ಕೀಳು, ಇವೆಲ್ಲವುಗಳಿಗಿಂತ ಸಮಾಜ ವಿ... ಮತ್ತು ಭಾಷಾ ವಿಷಯಗಳು ಇನ್ನೂ ಕೀಳು ಅಂತ ಆ... ಮಂಡಳಿ ಭಾವಿಸಿದಂತಿದೆ. ಒಟ್ಟಾರೆ ಸಂಸ್ಥೆಯ... ಜೀತಪದ್ಧತಿ ಬೇರೊಂದು ರೂಪದಲ್ಲಿ ಜೀವಂತವಿರು... ನಿಜವಾಗಿದೆ.

'ಹಳೆಯ' ಹೆಸರಲ್ಲಿ ಹೊಸಬರ ಸು...

ಪ್ರತಿ ವರ್ಷ ಪ್ರವೇಶ ಪಡೆಯುವ ಹೊಸ ವಿದ್ಯಾರ್ಥಿ... ಪ್ರವೇಶ ಶುಲ್ಕದಲ್ಲಿ ಹಳೆಯ ವಿದ್ಯಾರ್ಥಿಗಳ ಸ... ವಂತಿಗೆಯೆಂದು ಶುಲ್ಕ ಸಂಗ್ರಹಿಸಲಾಗುತ್ತದೆ. ... ಉಪಯೋಗದ ಬಗ್ಗೆ ಎಲ್ಲಿಯೂ ಕಾಣಿಸುವುದಿಲ್ಲ. ... ಹಿಂದಿನಿಂದಲೂ ಈ ಪದ್ಧತಿ ಜಾರಿಯಲ್ಲಿದ... ಇದುವರೆಗೂ ಎಷ್ಟು ಹಣ ಸಂಗ್ರಹವಾಗಿದೆ ಮತ್ತು ಅ... ಯಾವುದಕ್ಕೆ ಬಳಸಲಾಗಿದೆ ಎಂಬುದರ ಬಗ್ಗೆ ಯ... ಬಾಯಿ ಬಿಡುತ್ತಿಲ್ಲ. ಯಾವುದೇ ಖರ್ಚುಗಳಿಲ್ಲದೆ ... ರೀತಿ ಹಣ ಸಂಗ್ರಹಿಸುತ್ತಿರುವುದಕ್ಕೂ ಯಾ... ದಾಖಲೆಗಳನ್ನು ಇಡುತ್ತಿಲ್ಲ. ಇದು ಸರ್ಕಾರದ ... ನೀತಿಯ ಸ್ಪಷ್ಟ ಉಲ್ಲಂಘನೆಯಾಗಿದೆ.

ಇನ್ನು ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳ ನಡು... ಮುಕ್ತ ಸಂವಾದ, ಸಂಬಂಧವನ್ನು ಸಹ ಇಲ್ಲಿ ನಿಷೇಧಿಸಲ... ಆಡಳಿತ ಮಂಡಳಿಯ ಭ್ರಷ್ಟಾಚಾರಗಳು, ಸ್ವಜನಪಕ್ಷಪಾ... ಮುಚ್ಚಿಹಾಕಲು ಈ ನಿಷೇಧ ಜಾರಿಯಲ್ಲಿದೆ. ವಿದ್ಯಾರ್ಥಿ... ಕೇವಲ ಪಠ್ಯಕ್ರಮ ಕಲಿಯುವುದಕ್ಕಷ್ಟೇ ಸೀಮಿತವಾಗ... ಅಧ್ಯಾಪಕರು ಕಲಿಸುವುದಕಷ್ಟೇ ಸೀಮಿತವಾಗಿರಬೇ... ಹುನ್ನಾರವಿದು. ಇದನ್ನು ಶಿಕ್ಷಣ ಎಂದು ಕರೆ... ಸಾಧ್ಯವೇ?


ಇಷ್ಟೆಲ್ಲಾ ಮೋಸ, ಅನ್ಯಾಯಗಳು ಕಣ್ಣೆ... ನಡೆಯುತ್ತಿದ್ದರೂ ಯಾರೂ ಇದನ್ನು ವಿರೋಧಿಸುವ... ಮಾಡುವ ಪ್ರಯತ್ನಕ್ಕೆ ಮುಂದಾಗುತ್ತಿಲ್ಲ. ಇದರ ... ಪರಿಣಾಮ ಎದುರಿಸುತ್ತಿರುವ ವಿದ್ಯಾರ್ಥಿಗಳಾಗಲಿ, ... ಅಧ್ಯಾಪಕ ವರ್ಗವಾಗಲಿ ಪ್ರಶ್ನೆಮಾಡುವ ಧೈ... ತೋರುತ್ತಿಲ್ಲ. ಒಂದುವೇಳೆ ಪ್ರಶ್ನಿಸಿದರೆ ಎಲ್ಲಿ ಸ... ಕೆಂಗಣ್ಣಿಗೆ ತಾವು ಗುರಿಯಾಗಿ ಶಿಕ್ಷೆ ಅನುಭವಿಸಬೇಕಾಗ... ಎಂಬ ಭಯದಲ್ಲಿ ಎಲ್ಲವನ್ನು ಸಹಿಸಿಕೊಳ್ಳುತ್ತಿದ್ದಾರೆ...

ಇದನ್ನೇ ಬಂಡವಾಳ ಮಾಡಿಕೊಂಡಿರುವ ಕೆ.ಎ... ಸಂಸ್ಥೆಯು ತನ್ನ ಅವ್ಯವಹಾರ, ಮೋಸ, ಲೂಟಿ... ಮತ್ತಷ್ಟು ಹೆಚ್ಚಿಸುತ್ತಿವೆ. ಇಂತಹ ಅನ್ಯಾಯವನ್ನು ಕಾನ... ಮೂಲಕ ನಿಯಂತ್ರಿಸಬೇಕಾದ ಸರ್ಕಾರ ಇದಕ್ಕೂ ತ... ಸಂಬಂಧವೇ ಇಲ್ಲವೆಂದು ಕಣ್ಮುಚ್ಚಿ ಕುಳಿತಿದೆ. ಶಿಕ್ಷಣವನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ... ಎಲ್ಲರಿಗೂ ಶಿಕ್ಷಣ ನೀಡಬೇಕಾದ ತನ್ನ ಸಾಮ... ಜವಾಬ್ದಾರಿಯಿಂದ ಹಿಂದೆ ಸರಿಯಲು ಯತ್ನಿಸು... ಸರ್ಕಾರ ಇಂತಹ ಸಂಸ್ಥೆಗಳ ಮೇಲೆ ಹೇಗೆತಾನೆ ... ಕೈಗೊಂಡೀತು? ಅಲ್ಲದೆ ನೇರವಾಗಿ ಒಂದು ಪಕ್ಷದೊ... ಗುರುತಿಸಿಕೊಂಡಿರುವ ರಾಜ್ಯಸಭಾ ಸದಸ್ಯರೂ ಆ... ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆಯ... ಪ್ರಭಾವಿ ವ್ಯಕ್ತಿಗಳು ಇರುವಾಗ ಇವರ ವಿರುದ್ಧ ಯಾರ... ದನಿ ಎತ್ತಿಯಾರು? ಹಾಗಾಗಿ ಶಿಕ್ಷಣದ ಹೆಸರಲ್ಲಿ ಸ... ಲೂಟಿ ನಿರಂತರವಾಗಿ ಮುಂದುವರೆದುಕೊಂಡೇ ಬ...

■ ವರದಿ...


ಕೆ.ಎಲ್.ಇ ಶಿಕ್ಷಣ ಸಂಸ್ಥೆಯ ಪ್ರಧಾನ ಕಚೇರಿ, ಬೆಳಗಾವಿ

ಕೊರಟಗೆರೆ: ಪರಮೇಶ್ವರ್ ಚಿತ್ತ ಬೇರೆ ಕ್ಷೇತ್ರದತ್ತ?



2013ರ ಚುನಾವಣಾ ಫಲಿತಾಂಶ ಹತ್ತು ಹಲವು ಅಚ್ಚರಿಗಳನ್ನು ಹೊತ್ತು ತಂದಿದ್ದು ಸುಳ್ಳಲ್ಲ. ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಸಿಗದೆ ಅತಂತ್ರ ಪರಿಸ್ಥಿತಿ ನಿರ್ಮಾಣವಾಗುತ್ತೆ ಜೆಡಿಎಸ್ ಕಿಂಗ್ ಮೇಕರ್ ಆಗುತ್ತೆ, ಯಡ್ಯೂರಪ್ಪನ ಕೆಜೆಪಿ ಕೀ ರೋಲ್ ನಿರ್ವಹಿಸುತ್ತೆ ಅಂತ ಹಾಕಿದ್ದ ಲೆಕ್ಕಾಚಾರಗಳೆಲ್ಲ ತಲೆಕೆಳಗಾಗಿ ಕಾಂಗ್ರೆಸ್ ಮೆಜಾರಿಟಿಗೆ ಬಂದು ನಿಂತಿತು. ಇನ್ನು ನಿರ್ದಿಷ್ಟವಾಗಿ ಕೆಲವು ಕ್ಷೇತ್ರಗಳ ಸೋಲುಗೆಲುವುಗಳೂ ಹುಬ್ಬೇರುವಂತೆ ಮಾಡಿದ್ದವು. ಅವುಗಳಲ್ಲೆಲ್ಲ ಅತಿಹೆಚ್ಚು ಚರ್ಚೆಗೆ ಬಂದದ್ದು ಕೊರಟಗೆರೆಯ ಶಾಕಿಂಗ್ ಫಲಿತಾಂಶ. ಯಾಕೆಂದರೆ ಈ ಮೀಸಲು ಕ್ಷೇತ್ರದಿಂದ ಕಾಂಗ್ರೆಸ್ ಪಾರ್ಟಿಯ ಪರವಾಗಿ ಅಖಾಡಕ್ಕಿಳಿದದ್ದು ಕೆಪಿಸಿಸಿಯ ಅಧ್ಯಕ್ಷ ಡಾ.ಜಿ. ಪರಮೇಶ್ವರ್. ಗೆದ್ದರೆ ಅವರೇ ಮುಖ್ಯಮಂತ್ರಿ ಆಗಲಿದ್ದಾರೆ ಅನ್ನುವ ಮಾತುಗಳೂ ಇದ್ದವು. ಇವರಿಗೆ ಎದುರಾಗಿ ಜೆಡಿಎಸ್‌ನಿಂದ ನಿಂತದ್ದು ಫೇಸ್‌ವ್ಯಾಲ್ಯೂ ನೇಮ್‌ವ್ಯಾಲ್ಯೂ ಯಾವುದೂ ಇಲ್ಲದ ಸುಧಾಕರ್ ಲಾಲ್ ಎಂಬ ಖಾಲಿದೋಸೆ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಪರಮೇಶ್ವರ್ ಮುಗುಚಿಕೊಳ್ಳುವ ಸೂತ್ರವೇ ಕಂಡುಬರುತ್ತಿರಲಿಲ್ಲ. ಆದರೆ ಆದದ್ದೇ ಬೇರೆ. ಪರಮೇಶ್ವರ್, ಲಾಲ್‌ನ ಎದುರು ಸೋತು ಸುಣ್ಣವಾದರು.

ಪರಮೇಶ್ವರ್ ಸಾಹೇಬರ ಸೋಲನ್ನು ಸಿದ್ದರಾಮಯ್ಯನ ಮುಖ್ಯಮಂತ್ರಿ ಹಾದಿಗೆ ತಳುಕು ಹಾಕುವ ಒಂದಷ್ಟು ಪ್ರಯತ್ನಗಳೂ ನಡೆದವು. ಪರಮೇಶ್ವರ್ ಗೆದ್ದರೆ ಮುಖ್ಯಮಂತ್ರಿ ಹುದ್ದೆಗೆ ತನಗೆ ಪೈಪೋಟಿ ಕೊಡುವ ಆತಂಕದಿಂದ ಸಿದ್ದರಾಮಯ್ಯ ಕ್ಷೇತ್ರದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಕುರುಬ ಮತಗಳನ್ನು ಹಾಗೂ ಜಿಲ್ಲೆಯ ಮತ್ತೊಬ್ಬ ಪ್ರಭಾವಿ ರಾಜಕಾರಣಿ ನಾಯಕ ಜನಾಂಗದ ಕೆ.ಎನ್. ರಾಜಣ್ಣನ ಮೂಲಕ ನಾಯಕರ ಮತಗಳನ್ನು ಗೈಡ್ ಮಾಡಿ ಪರಮೇಶ್ವರ್‌ರನ್ನು ಸೋಲಿಸಿದರು ಅನ್ನೋ ತಲೆಬುಡವಿಲ್ಲದ ಆರೋಪಗಳು ಹರಿದಾಡಿದ್ದವು. ಸ್ವತಃ ಕಾಂಗ್ರೆಸ್ ರಾಜಕುಮಾರ ರಾಹುಲ್ ಗಾಂಧಿಯೇ ಪರಮೇಶ್ವರ್ ಸೋಲಿನ ಬಗ್ಗೆ ಪಕ್ಷದಲ್ಲಿ ತನಿಖೆ ನಡೆಸುವುದಾಗಿ ಹೇಳಿಕೆಯನ್ನೂ ನೀಡಿದ್ದು. ತನಿಖೆ ಯಾವ ಹಳ್ಳ ಹಿಡಿಯಿತೋ ಗೊತ್ತಿಲ್ಲ ಆದರೆ ಪರಮೇಶ್ವರ್ ಅವರ ಸೋಲಿಗೆ ಅವರೇ ಮಾಡಿಕೊಂಡ ಹಲವು ಎಡವಟ್ಟುಗಳು ಕಾರಣವಾಗಿದ್ದವು.

ಮಧುಗಿರಿ ವಿಧಾನಸಭಾ ಕ್ಷೇತ್ರ ಪರಿಶಿಷ್ಟ ಜಾತಿಗೆ ಮೀಸಲಾಗಿದ್ದಂತಹ ಸಮಯದಲ್ಲಿ ಮೂರು ಬಾರಿ ಶಾಸಕರಾಗಿ, ಸಚಿವರಾಗಿದ್ದರೂ ಪರಮೇಶ್ವರ್ ಕ್ಷೇತ್ರದಲ್ಲಿ ಹೆಚ್ಚು ಮುಖ ತೋರಿಸಲಿಲ್ಲ. ಆನಂತರ ಕೊರಟಗೆರೆಯಲ್ಲೂ ತನ್ನ ನಾಲ್ವರು ಆಪ್ತರನ್ನು ಮುಖಂಡರಂತೆ ಬಿಂಬಿಸಿ, ಅವರ ಸುತ್ತ ಸಾಮಾನ್ಯ ಜನರು ಕೆಲಸಗಳಿಗಾಗಿ ಅಲೆಯುವಂತೆ ಮಾಡಿ ಕ್ಷೇತ್ರದಿಂದ ಕಣ್ಮರೆಯಾದದ್ದು ಅವರ ಸೋಲಿನ ಕೀಲಿಕೈ ಆಗಿತ್ತು ಎಂದೇ ವಿಶ್ಲೇಷಿಸಲಾಗಿತ್ತು.


ಅನ್ಯ ಕ್ಷೇತ್ರದತ್ತ ಪರಮ ಚಿತ್ತ

ಪರಮೇಶ್ವರರಿಗೆ 2013ರ ಸೋಲು ಭಾರೀ ಲುಕ್ಸಾನನ್ನೇ ತಂದಿಕ್ಕಿತು. ಆ ಸೋಲಿನಲ್ಲಿ ಸಿದ್ದರಾಮಯ್ಯನ ಪಾತ್ರ ಇತ್ತೋ ಇಲ್ಲವೋ ಆದರೆ ದಲಿತ ಸಿಎಂ ಕೂಗನ್ನು ಬಡಿದೆಬ್ಬಿಸಿದ ಹೊರತಾಗಿಯೂ ಪರಮೇಶ್ವರ್ ವಿಧಿ ಇಲ್ಲದೆ ಗೃಹ ಮಂತ್ರಿ ಸ್ಥಾನಕ್ಕೆ ತೃಪ್ತಿಪಡುವಂತೆ ಮಾಡಿದುದರಲ್ಲಿ ಆ ಸೋಲಿನ ಪ್ರಭಾವವೂ ಇತ್ತು. ಆದಕ್ಕೇ ಮುಂದಿನ ಎಲೆಕ್ಷನ್‌ನಲ್ಲಿ ಶತಾಯಗತಾಯ ಗೆದ್ದು ಅತಂತ್ರ ವಿಧಾನಸಭೆ ನಿರ್ಮಾಣವಾದರೆ ದೇವೇಗೌಡರೊಂದಿಗೆ ಇರುವ ಸಖ್ಯವನ್ನೇ ಬಳಸಿಕೊಂಡು ಮುಖ್ಯಮಂತ್ರಿ ಆಗಬಹುದೆನ್ನುವ ಲೆಕ್ಕಾಚಾರ ಅವರೊಳಗೆ ಶುರುವಾಗಿದೆ. ಹಾಗಾಗಿ ಸೋತ ಕೊರಟಗೆರೆಯಲ್ಲೇ ಚಾನ್ಸ್ ತೆಗೆದುಕೊಳ್ಳಲು ಅವರು ಹಿಂದೇಟು ಹಾಕುತ್ತಿದ್ದು ಗೆಲುವಿನ ಸಾಧ್ಯತೆ ದಟ್ಟವಾಗಿರುವ ಹೊಸ ಕ್ಷೇತ್ರದ ಹುಡುಕಾಟದಲ್ಲಿದ್ದಾರೆ ಎನ್ನುವ ಮಾತುಗಳು ಕಾಂಗ್ರೆಸ್ ಕಚೇರಿಯಿಂದಲೇ ಕೇಳಿಬರುತ್ತಿವೆ.


ಇತ್ತೀಚಿನ ಬೆಳವಣಿಗೆಗಳ ಪ್ರಕಾರ ಪರಮೇಶ್ವರ್ ಸಾಹೇಬರು 2018ರ ಚುನಾವಣೆಗೆ ಚಿಕ್ಕಮಗಳೂರಿನ ಮೂಡಿಗೆರೆ ಮೀಸಲು ಕ್ಷೇತ್ರ ಆಯ್ಕೆ ಮಾಡಿಕೊಳ್ಳಬಹುದೆನ್ನುವ ಮಾತುಗಳು ಕೇಳಿಬಂದಿದ್ದವು. ಅವರೀಗ ಚಿಕ್ಕಮಗಳೂರಿನ ಜಿಲ್ಲಾ ಉಸ್ತುವಾರಿ ಮಂತ್ರಿಯೂ ಆಗಿರುವುದರಿಂದ ಮತ್ತು ಈ ಹಿಂದೆ ತಮ್ಮದೇ ಪಾರ್ಟಿಯ ತಮ್ಮದೇ ಬಲಗೈ ದಲಿತ ಸಮುದಾಯದ ಮೋಟಮ್ಮ ಇದೇ ಕ್ಷೇತ್ರದಿಂದ ಗೆದ್ದಿದ್ದು ಅಂತಹ ಆಲೋಚನೆಗಳತ್ತ ಮುಖ ಮಾಡಿಸಿರಬಹುದು. ಇತ್ತೀಚೆಗೆ ಮೂಡಿಗೆರೆಗೆ ಪದೇಪದೇ ಭೇಟಿ ನೀಡುತ್ತಿರುವುದೂ ಇದಕ್ಕೆ ಇಂಬು ನೀಡುತ್ತವೆ. ಆದರೆ ಪರಮೇಶ್ವರ್ ಅಂತಹ ಸಾಹಸಕ್ಕೆ ಕೈಹಾಕುವ ಸಾಧ್ಯತೆ ತುಂಬಾ ಕಮ್ಮಿ. ಯಾಕೆಂದರೆ ಪರಮೇಶ್ವರ್ ತುಮಕೂರಿನಿಂದ ದೂರ ಹೋಗಿ ರಾಜಕೀಯ ಮಾಡುವುದು ಡೌಟು. ಅದಕ್ಕೂ ಕಾರಣವುಂಟು. ಅವರ ವ್ಯವಹಾರ ಹಾಗೂ ಶಿಕ್ಷಣ ಸಂಸ್ಥೆಗಳು ತುಮಕೂರಿನಲ್ಲೇ ಇದ್ದು ಆ ಸಾಮ್ರಾಜ್ಯವನ್ನು ಕಾಪಾಡಿಕೊಳ್ಳಬೇಕೆಂದರೆ ಅವರು ತುಮಕೂರು ಇಲ್ಲ ಬೆಂಗಳೂರಿನಲ್ಲೇ ರಾಜಕಾರಣಿಯಾಗಿ ತಳವೂರಬೇಕು.

ಈ ಕಾರಣಕ್ಕೆ ತುಮಕೂರಿಗೆ ಹೊಂದಿಕೊಂಡಂತಿರುವ ನೆಲಮಂಗಲ ಮೀಸಲು ಕ್ಷೇತ್ರ ಹಾಗೂ ಪುಲಕೇಶಿನಗರ ಮೀಸಲು ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ ಎನ್ನಲಾಗಿದೆ.


ಹಾಗೊಮ್ಮೆ ಪರಮೇಶ್ವರ್ ಬೇರೆ ಕ್ಷೇತ್ರಕ್ಕೆ ಜಿಗಿದರೆ ಕೊರಟಗೆರೆಯಲ್ಲಿ ಕಾಂಗ್ರೆಸ್ ಚುಕ್ಕಾಣಿಯನ್ನು ಯಾರು ಹಿಡಿಯಲಿದ್ದಾರೆ ಎನ್ನುವುದಕ್ಕೂ ಆದಾಗಲೇ ಉತ್ತರ ಸಿದ್ಧವಾಗಿದೆ. ತುಮಕೂರಿನ ಗುಂಪುಗಾರಿಕೆ ಮತ್ತು ಕೈ ರಾಜಕಾರಣದ ನಡುವೆಯೂ ಜಿಲ್ಲೆಯ ಎಲ್ಲಾ ಕಾಂಗ್ರೆಸ್ ನಾಯಕರೊಂದಿಗೆ ಉತ್ತಮ ಬಾಂಧವ್ಯ ಉಳಿಸಿಕೊಂಡಿರುವ ಮಿಡಿಗೇಶಿ ಕ್ಷೇತ್ರದ ಜಿಲ್ಲಾ ಪಂಚಾಯ್ತಿ ಸದಸ್ಯರಾಗಿರುವ ಕೆಂಚ ಮಾರಯ್ಯನ ಹೆಸರು ಪರಮೇಶ್ವರಿಗೆ ಪರ್ಯಾಯವಾಗಿ ಮುನ್ನಲೆಗೆ ಬರುತ್ತಿದೆ. ಕೆಂಚಮಾರಯ್ಯ ಮೂಲತಃ ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಯಾಗಿ ಕೆಲಸ ಮಾಡಿದ್ದವರು. ನಿವೃತ್ತಿಯ ನಂತರ ಜೆಡಿಎಸ್ ಮೂಲಕ ರಾಜಕೀಯ ಪ್ರವೇಶಿಸಿದ ಅವರು ಈಗ ಕಾಂಗ್ರೆಸ್ ಪಾರ್ಟಿಯಲ್ಲಿ ನೆಲೆ ಕಂಡುಕೊಂಡಿದ್ದಾರೆ. ರಾಜಕಾರಣದಲ್ಲಿ ಸಾಕಷ್ಟು ಏಳು-ಬೀಳು ಕಂಡಿರುವ ಕೆಂಚಮಾರಯ್ಯ ಜನರ ಜೊತೆ ಸ್ವಲ್ಪ ಚೆನ್ನಾಗಿಯೇ ಒಡನಾಟವನ್ನು ಇಟ್ಟುಕೊಂಡಿದ್ದಾರೆ. ಅಲ್ಲದೇ ಕೆ.ಎನ್.ರಾಜಣ್ಣನ ಆಪ್ತರೂ ಹೌದು. ಇದೇ ರಾಜಣ್ಣನ ಪರಮೇಶ್ವರರ ಪರಮವೈರಿ ಜಿಲ್ಲಾ ಉಸ್ತುವಾರಿ ಮಂತ್ರಿ ಟಿ.ಬಿ.ಜಯಚಂದ್ರರ ಆತ್ಮೀಯರೂ ಹೌದು. ಅಷ್ಟೇ ಏಕೆ ಸ್ವತಃ ಪರಮೇಶ್ವರ್‌ರ ಬಳಿಯೂ ಉತ್ತಮ ಬಾಂಧವ್ಯ ಉಳಿಸಿಕೊಂಡಿದ್ದಾರೆ. ಹಾಗಾಗಿ ಅಕಸ್ಮಾತ್ ಪರಮೇಶ್ವರ್ ಕೊರಟಗೆರೆ ಕ್ಷೇತ್ರದಿಂದ ಕಾಲ್ಕಿತ್ತರೆ ಎಮ್.ಎಲ್.ಎ ಅಭ್ಯರ್ಥಿಯಾಗಿ ಕೆಂಚಮಾರಯ್ಯ ಕಣಕ್ಕೆ ಬರುವುದು ನಿಶ್ಚಯವಾಗಿದೆ. ಇನ್ನು ಕಾರ್ಯಕರ್ತರ ವಲಯದಲ್ಲೂ ಕೆಂಚಮಾರಯ್ಯನಿಗೆ ಯಾವ ಆಕ್ಷೇಪಣೆಗಳೂ ಇದ್ದಂತಿಲ್ಲ.



ಸುಧಾಕರ್ ಲಾಲ್



ಕೆಂಚಮಾರಯ್ಯ



ಗೊಂದಲದಲ್ಲಿ ಸುಧಾಕರ್ ಲಾಲ್

ಇತ್ತ ಕಾಂಗ್ರೆಸ್‌ನೊಳಗೆ ಇಷ್ಟೆಲ್ಲ ಅನಿಶ್ಚಿತತೆಗಳು ತಾಂಡವವಾಡುತ್ತಿದ್ದರೆ ಅತ್ತ ಹಾಲಿ ಎಂಎಲ್‌ಎ ಸ್ಥಾನ ಅಲಂಕರಿಸಿರುವ ಜೆಡಿಎಸ್‌ನೊಳಗೂ ಅಂತೆಕಂತೆಗಳ ಪುಕಾರು ಜೋರಾಗಿದೆ. ಅಚ್ಚರಿಯ ಫಲಿತಾಂಶದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಎಂದೇ ಬಿಂಬಿತವಾಗಿದ್ದ ಪರಮೇಶ್ವರರನ್ನು ಸೋಲಿಸಿ ಗೆದ್ದು ಶಾಸಕನಾದ ಸುಧಾಕರ್ ಲಾಲ್ ಅದಕ್ಕೂ ಮುನ್ನ ಜಿಲ್ಲಾಪಂಚಾಯ್ತಿ ಸದಸ್ಯನಾಗಿದವ. ತಾನು ಗೆದ್ದರೂ ತನ್ನ ಸ್ವಂತ ಪಕ್ಷ ಅಧಿಕಾರದಲ್ಲಿ ಇಲ್ಲದೇ ಇರುವುದರಿಂದ ಹೆಚ್ಚು ಅನುದಾನವನ್ನು ತಂದು ಕ್ಷೇತ್ರದಲ್ಲಿ ಹೆಚ್ಚಿನ ಕೆಲಸಗಳನ್ನು ಮಾಡಲಾಗದೆ ಜನರ ದೃಷ್ಟಿಯಲ್ಲಿ ಯೂಸ್‌ಲೆಸ್ ಎಂಎಲ್‌ಎ ಎಂಬ ಕುಹಕಕ್ಕೆ ಗುರಿಯಾಗಿರುವ ಲಾಲ್‌ಗೂ ಮುಂದಿನ ಚುನಾವಣೆಯಲ್ಲಿ ಕೊರಟಗೆರೆ ಮಂದಿ ತನ್ನನ್ನು ಸೋಲಿಸಬಹುದೆನ್ನುವ ಆತಂಕ ಶುರುವಾಗಿದೆ. ಈ ಕ್ಷೇತ್ರದಲ್ಲಿ ಎಲ್ಲಾ ಜನಾಂಗಗಳು ಸರಿಸುಮಾರು ಸಮಾನ ಸಂಖ್ಯೆಯಲ್ಲಿದ್ದು ಜಾತಿಲೆಕ್ಕದಲ್ಲಿ ಇಂತಹದ್ದೇ ಬಲಾಢ್ಯ ಗ್ಯಾರಂಟಿ ಜನಸಮುದಾಯ ಎನ್ನುವುದಿಲ್ಲ. ಹಾಗಾಗಿ ತಾನು ಸೇರುವ ಲಂಬಾಣಿ ಜನಾಂಗ ಗಣನೀಯ ಸಂಖ್ಯೆಯಲ್ಲಿರುವ ಪಾವಗಡ ಕ್ಷೇತ್ರದಿಂದ ಮುಂದಿನ ಎಲೆಕ್ಷನ್‌ಗೆ ಟಿಕೆಟ್ ಕೊಡಿ ಅಂತ ಸುಧಾಕರ್ ಲಾಲ್ ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿಗೆ ದುಂಬಾಲು ಬಿದ್ದಿದ್ದಾರೆ ಎನ್ನಲಾಗಿದೆ.

ಆದರೆ ಇದನ್ನು ಹೆಚ್.ಡಿ.ಕೆ ನಿರಾಕರಿಸಿದ್ದು "ಈಗಾಗಲೇ ಗೆದ್ದಿರುವಂತಹ ಶಾಸಕರಿಗೆ ಮತ್ತೆ ಅಲ್ಲಿಯೇ ಟಿಕೆಟ್ ಕೊಡಲಾಗುವುದು. ಹೊಸಬರಿಗೆ ಮಾತ್ರ ಹೊಸ ಕ್ಷೇತ್ರ" ಎಂದು ಹೇಳಿದ್ದಾರೆ ಎನ್ನುವ ಮಾಹಿತಿ ಇದೆ. ಜೆಡಿಎಸ್‌ನ ಈ ಅನಿಶ್ಚಿತತೆಯ ಲಾಭ ಮಾಡಿಕೊಳ್ಳಲು ಬಿ.ಜೆ.ಪಿ ಮುಖಂಡರು ಈಗಾಗಲೇ ಲಾಲ್‌ಗೆ ಬಲೆ ಬೀಸಿದ್ದು ತಮ್ಮ ಪಾರ್ಟಿಗೆ ಬಂದರೆ ಮುಂದಿನ ಎಲೆಕ್ಷನ್‌ನಲ್ಲಿ ಅವರು ಕೇಳಿದ ಪಾವಗಡದಲ್ಲೇ ಟಿಕೆಟ್ ನೀಡಲಾಗುವುದೆನ್ನುವ ಆಮಿಷವಿಟ್ಟಿದ್ದಾರಂತೆ. ಒಟ್ಟಿನಲ್ಲಿ ಯಾವಕಡೆ ಕಾಲಿಡುವುದೆಂಬ ಗೊಂದಲದಲ್ಲಿರುವ ಸುಧಾಕರ್ ಲಾಲ್ ಆತಂಕದಲ್ಲಿದ್ದಾರೆ.

ಬಿಜೆಪಿ ಹುಚ್ಚಾಟಕ್ಕೆ ಹುಚ್ಚಯ್ಯ ಅನಾಥ

ಕಾಂಗ್ರೆಸ್, ಜೆಡಿಎಸ್ ಪಾರ್ಟಿಗಳ ತೊಳಲಾಟ ಒಂದು ಬಗೆಯಾದರೆ ಬಿಜೆಪಿಯ ಹಾಕ್ಯಾಟವೇ ಮತ್ತೊಂದು ಬಗೆಯದ್ದು. ಇಡೀ ರಾಜ್ಯದಲ್ಲಿ ಬಿಜೆಪಿ ಈಗ ಮೂರು ಭಾಗವಾಗಿಹೋಗಿದೆ. ಒಂದು ಯಡ್ಯೂರಪ್ಪ ಬಣ, ಮತ್ತೊಂದು ಬ್ರಿಗೇಡ್ ಭೀಷ್ಮ ಈಶು ಬಣ, ಇನ್ನೊಂದು ಇವೆರಡೂ ಬಣಗಳ ನಡುವೆ ತಂದಿಕ್ಕಿ ತಮಾಷೆ ನೋಡುವ ಬಣ. ತುಮಕೂರಿನಲ್ಲಿ ಮೂರನೇ ಬಣದ ಹವಾ ಇಲ್ಲವಾದರು ಯಡ್ಯೂರಪ್ಪನ ಪರವಾಗಿ ಮಾಜಿ ಸಂಸದ ಜಿ.ಎಸ್. ಬಸವರಾಜು ನೊಗ ಹೆಗಲಿಗೇರಿಸಿಕೊಂಡಿದ್ದರೆ ಈಶು ಪರವಾಗಿ ಸೊಗಡು ಶಿವಣ್ಣ ಬ್ಯಾಟಿಂಗ್ ನಡೆಸುತ್ತಿದ್ದಾರೆ. ಯಡ್ಯೂರಪ್ಪ ಬಣದ ಬಸವರಾಜು ಈಗಾಗಲೇ ಕೊರಟಗೆರೆಯಲ್ಲಿ ಈ ಮೊದಲು ಕಾಂಗ್ರೆಸ್‌ನಲ್ಲಿದ್ದ ವೈ.ಹೆಚ್.ಹುಚ್ಚಯ್ಯ ಎಂಬ ದಲಿತ ಮುಖಂಡನನ್ನು ತಮ್ಮ ಪಕ್ಷಕ್ಕೆ ಕರೆತಂದು ಕ್ಷೇತ್ರವನ್ನು ಸುತ್ತಿಸುತ್ತ ಆತನೇ ಬಿಜೆಪಿಯ ಮುಂದಿನ ಅಭ್ಯರ್ಥಿ ಎನ್ನುವಂತೆ ಬಿಂಬಿಸುತ್ತಿದ್ದಾರೆ. ಆದರೆ ಇದಕ್ಕೆ ಮೂಲ ಬಿಜೆಪಿಗರು ವಿರೋಧ ವ್ಯಕ್ತಪಡಿಸಿದ್ದಾರೆ. ಇಷ್ಟುದಿನ ಕಾಂಗ್ರೆಸ್‌ನಲ್ಲಿದ್ದು ಮೊನ್ನೆಮೊನ್ನೆ ಪಕ್ಷಕ್ಕೆ ಬಂದವರಿಗೆ ಟಿಕೆಟ್ ಕೊಡುವುದಾದರೆ ಕಾರ್ಯಕರ್ತರಾಗಿ ನಾವ್ಯಾಕೆ ದುಡಿಯಬೇಕು ಅಂತ ತಕರಾರು ತೆಗೆದಿದ್ದಾರೆ. ಇಂತಹದ್ದೊಂದು ತಕರಾರಿನ ಹಿಂದೆ ಈಶ್ವರಪ್ಪನ ಬಣದ ಸೊಗಡು ಶಿವಣ್ಣನ ಸಾರಥ್ಯ ಇರುವುದು ರಹಸ್ಯವೇನೂ ಅಲ್ಲ. ಈ ಇಬ್ಬರ ಕಿತ್ತಾಟದಲ್ಲಿ ಹುಚ್ಚಯ್ಯನನ್ನು ಅನಾಥವಾಗಿಸಿ ಬೇರೊಬ್ಬರಿಗೆ ಟಿಕೆಟ್ ದಕ್ಕುವ ಸಾಧ್ಯತೆಯೇ ದಟ್ಟವಾಗಿರುವುದರಿಂದ ಬಿಜೆಪಿ ನಂಬಿಕೊಂಡು ಕಾಂಗ್ರೆಸ್‌ಗೆ ಟಾಟಾ ಮಾಡಿದ್ದ ಹುಚ್ಚಯ್ಯನೂ ಆತಂಕದಲ್ಲಿದ್ದಾರೆ.

ಒಟ್ಟಿನಲ್ಲಿ ಇನ್ನೂ ಒಂದುವರೆ ವರ್ಷದ ನಂತರ ಎದುರಾಗುವ ಚುನಾವಣೆಗೆ ಈಗಾಗಲೇ ತಯಾರಿಯ ಬಿರುಸು ಕೊರಟಗೆರೆಯಲ್ಲಿ ರಂಗೇರುತ್ತಿದೆ. ಮೂರೂ ಪಕ್ಷಗಳೊಳಗೆ ಅವರ್‌ನ್ನ ಬಿಟ್ ಇವರ್‌ನ್ನ ಬಿಟ್ ಮತ್ತಾರು ಅನ್ನೋ ಜೂಟಾಟ ನಡೆಯುತ್ತಿದ್ದು ಮುಂದೆ ಏನೇನಾಗುತ್ತೋ ಕಾದು ನೋಡಬೇಕು.

■ ಅನಿಲ್‌ಕುಮಾರ್ ಚಿಕ್ಕದಾಳವಟ್ಟ


ಪೇಜಾವರ ಪೇಜು ಹ್ಯಾಕ್ ಆದ ಕತೆ

ಪೇಜಾವರ ಕಥೆ ಮಹಾ ಮೋಜು. ಪೇಜಾವರಗಿಲ್ಲ ಪಂಕ್ತಿ ಭೇದದ ಗೋಜು. ಮನಸ್ಸೆಲ್ಲಾ ಗಲೀಜು ಆದರೂ ಮಹಾ ಸಾತ್ವಿಕತೆಯ ಪೋಜು! ಪೇಜಾವರ ವೆಬ್‌ಪೇಜ್ ಹ್ಯಾಕ್ ಆಗಿದೆಯಂತೆ. ಅದನ್ನು ಅವರ ಪ್ಲಂಬರ್ ಬಂದು ಸರಿಮಾಡಿದನಂತೆ. ಪಾಕಿಸ್ತಾನದ ಪ್ಲಂಬರ್‌ಗಳು ಪೇಜಾವರ ವೆಬ್ಬಿಗೆ ನುಗ್ಗಿ ಕಂಪ್ಯೂಟರ್ ಹ್ಯಾಕ್ ಮಾಡಿದ್ದರಂತೆ. ಇಂಜಿನಿಯರ್‌ಗೂ ಪ್ಲಂಬರ್‌ಗೂ ಭೇದ ಗೊತ್ತಿಲ್ಲದ ಪೇಜಾವರ ಪಂಕ್ತಿಭೇದ ಮಾಡುವುದರಲ್ಲಿ ಮಾತ್ರ ಅತಿ ಮುಂದು. ಮಠದವರು ಹ್ಯಾಕ್ ಸರಿ ಮಾಡಿಸುವ ಮೊದಲೇ ಪೊಲೀಸರಿಗೆ ದೂರು ಕೊಟ್ಟು ಪಾಕಿಗಳು ಹ್ಯಾಕ್ ಮಾಡಿದ್ದರ ಪುರಾವೆ ಪೊಲೀಸರಿಗೆ ತೋರಿಸಬೇಕಿತ್ತಲ್ಲವೇ? ಅದರಬದಲು ಇಂಜಿನಿಯರ್ ಬಂದು ಹ್ಯಾಕ್ ಸರಿ ಮಾಡಿದ ನಂತರ ಪೊಲೀಸರಿಗೆ ಮಠದವರು ಮಾಹಿತಿ ಕೊಟ್ಟದ್ದು ಯಾಕೆ? ಮಠದವರು ಕೊಟ್ಟದ್ದು ಕೇವಲ ಮಾಹಿತಿ ಆಗಿದೆಯೇ ಹೊರತು ಅಧಿಕೃತ ದೂರು ಆಗಿರಲಿಲ್ಲ ಎಂದು ಉಡುಪಿ ಪೊಲೀಸ್ ಎಸ್‌ಪಿಯವರೇ ಹೇಳಿರುವರು. ಇದರಲ್ಲೆಯೇ ಅಡಗಿದೆ ಸತ್ಯಸಂಗತಿ. ಆದುವೇ ಹ್ಯಾಕ್ ಆಗಿರುವುದೆಲ್ಲಾ ಬರೀ ಸುಳ್ಳಿನಬುಡು! ಅದಿಕೆಗೆ ಹೋದ ಮಾನ ಆನೆ ಕೊಟ್ಟರೂ ಮರಳಿಬಾರದು. ಪಂಕ್ತಿ ಭೇದದಿಂದ ಹೋದಮಾನ ಪಾಕ್-ಹ್ಯಾಕ್ ಸಹಾನುಭೂತಿಯಿಂದ ಮರಳಿಬಾರದು.

ಚಕ್ರ ಸುಳ್ಳುಬೆಲೆಯ ಸ್ವಚ್ಛ ಉಡುಪಿಯ ತುಚ್ಛ ನಡೆ ನರಕದ ಕಡೆ. ಚಲೋ ಉಡುಪಿಯ ದಲಿತರನ್ನು ಹೀಯಾಳಿಸಿ ಗಳಿಸಿದ ದಮನಿತರ ಅಭಿಶಾಪದಿಂದ ಬಚಾವಾಗಲು ಈ ಪೇಜಾವರ ಅವರ ಪಾಕ್-ಹ್ಯಾಕ್ ನಾಟಕ!! ಯಾವುದೇ ವೆಬ್‌ಸೈಟ್ ಹ್ಯಾಕ್ ಮಾಡಿದಾಗ ಸಂದೇಶ ಬರುವುದು ನಿಜ. ಆದರೆ ಇಂತಹದ್ದೇ ದೇಶದವರು ಹ್ಯಾಕ್ ಮಾಡಿದ್ದು ಎಂದು ಸಂದೇಶ ಬರುತ್ತದೆಯೇ? ಇಂತಹ ಸಂದೇಶ ಬಂದರೂ ಪಾಕಿಸ್ತಾನ ಎಂದು ಆ ದೇಶದ ಪೂರ್ಣ ಹೆಸರು ಬರೆಯದೆ ಕೇವಲ 'ಪಾಕ್' ಎಂದು ಹ್ರಸ್ವ ಹೆಸರು ಬರುತ್ತದೆಯೇ?


750 ವರ್ಷಗಳ ಹಿಂದೆಯೇ ವೈದಿಕರು ನಮ್ಮ ಕರಾವಳಿಯ ತುಳು ಸಂಸ್ಕೃತಿಯ ವೆಬ್‌ಸೈಟ್ ಹ್ಯಾಕ್ ಮಾಡಿ ವೈಷ್ಣವ ಮತ ಎಂಬ ಭೀಕರ ವೈರಸ್ ಹರಡಿ ತುಳುನಾಡಿನ ಜನರ ಸೌಹಾರ್ದವನ್ನು ಪೂರಾ ಕರಪ್ಟ್ ಮಾಡಿರುವಾಗ ಈಗ ಒಂದು ಮಠದ ಜುಜುಬಿ ವೆಬ್ ಹ್ಯಾಕ್ ಮಾಡಿ ಕರಪ್ಟ್ ಮಾಡಿದ್ದೇನು ದೊಡ್ಡ ವಿಷಯ? ಮಠದ ವೆಬ್‌ಸೈಟಿನಲ್ಲಿ ಸಂಘ ಪರಿವಾರದ ಗುಪ್ತ ಅಜೆಂಡಾದ ಗುಪ್ತ ಮಾಹಿತಿ ಏನೂ ಇರಲಿಲ್ಲವಲ್ಲ? ಬಾಬ್ರಿ ಗುಮ್ಮಟದ ಮೇಲೆ ನಿಂತು ಕುಡ್ಸೆವ್ ಕುಡ್ಸೆವ್ ಎಂದಿದ್ದರ ಗುಪ್ತ ಅರ್ಥ ವೇನಾದರೂ ವೆಬ್‌ಸೈಟಿನಲ್ಲಿ ಇತ್ತೇ? ಬಾಬ್ರಿ ಉರುಳಿ 24 ವರ್ಷಗಳ ನಂತರವೂ ಪೇಜಾವರರು ತನ್ನ ಕುಡ್ಸೆವ್ ಶಬ್ದದ ಗುಪ್ತ ಅರ್ಥ ಯಾರಿಗೂ ಇನ್ನೂ ಹೇಳಿಯೇ ಇಲ್ಲ!

ಅದು ಬಿಡಿ, 750 ವರ್ಷಗಳ ಹಿಂದೆ ಉಡುಪಿಯ ವಡಭಾಂಡೇಶ್ವರ ಕಡಲ ತೀರದಲ್ಲಿ ಒಬ್ಬ ವೈಷ್ಣವ ಆಚಾರ್ಯರು ಸಂಧ್ಯಾವಂದನೆ ಮಾಡುತ್ತಿದ್ದಾಗ ದೂರ ಸಮುದ್ರದಲ್ಲಿ ಒಂದು ಹಡಗು ಮುಳುಗುತ್ತಿತ್ತಂತೆ. ಆಚಾರ್ಯರು ಅದನ್ನು ನೋಡಿ ಆ ಹಡಗನ್ನು ಉಳಿಸಲು ತನ್ನ ಕೌಪೀನ ಬಿಚ್ಚಿ ಬೀಸಿ ಆ ಹಡಗನ್ನು ತನ್ನ ಕೌಪೀನದಿಂದ ಕಟ್ಟಿ ದಡಕ್ಕೆ ಎಳೆದು ಹಡಗಿನಲ್ಲಿದ್ದವರನ್ನು ರಕ್ಷಿಸಿದರಂತೆ. ಒಂದು ದೊಡ್ಡ ಹಡಗನ್ನು ಕೌಪೀನದಿಂದ ಕಟ್ಟಿ ಎಳೆಯಬೇಕಾದರೆ ಆ ಕೌಪೀನ ಎಷ್ಟು ದೊಡ್ಡದಿರಬಹುದು? ಅಂತೆಯೇ ಇಂತಹ ಭಾರಿ ಕೌಪೀನ ಬಳಸುತ್ತಿದ್ದ ಆಚಾರ್ಯರ ಅಂಗಾಂಗಗಳ ಗಾತ್ರ ಎಷ್ಟಿರಬಹುದು ಎಂದು ಈ ಕಥೆ ಕೇಳಿದ ಸಣ್ಣ ಮಕ್ಕಳು ಹಿರಿಯರನ್ನು ಪ್ರಶ್ನಿಸುತ್ತವೆ. ಈ 750 ವರ್ಷ ಹಳೆಯ ಕೌಪೀನದ ಅಳತೆಯ ಗುಟ್ಟೇನಾದರೂ ಪೇಜಾವರ ವೆಬ್‌ಸೈಟಿನಲ್ಲಿ ಇತ್ತೇ?




ನಾವೆಲ್ಲಾ ಈವರೆಗೆ ನೋಡಿದ ಅತೀ ಉದ್ದದ ದಿನಬಳಕೆಯ ವಸ್ತ್ರವೆಂದರೆ ರಾಜಸ್ಥಾನಿ-ಮಾರ್ವಾಡಿಗಳ 30 ಗಜ ಉದ್ದದ ಮುಂಡಾಸು! ಏನೇ ಆಗಲಿ ಪಂಕ್ತಿಭೇದ ಮತ್ತು ವೆಬ್-ಹ್ಯಾಕ್ ಗುಮ್ಮದಿಂದಾಗಿ ಚಲೋ ಉಡುಪಿ ಸಮಾವೇಶದ ಮುಖ್ಯ ಅಜೆಂಡವಾದ ದಲಿತರ 'ಆಹಾರದ ಆಯ್ಕೆ ಮತ್ತು ಭೂಮಿಯ ಹಕ್ಕು' ಬದಿಗೆ ಸರಿದಿದ್ದು ಮಾತ್ರ ವಿಷಾದಕರ. ವೈದಿಕರ ಪಂಕ್ತಿಭೇದದ ವಿವಾದವನ್ನು ಸದ್ಯ ಬದಿಗಿಟ್ಟು ನಮ್ಮ ಚಲೋ ಉಡುಪಿ ಆಯೋಜಕರು ಆಹಾರದ ಆಯ್ಕೆ ಮತ್ತು ಭೂಮಿಯ ಹಕ್ಕಿನ ಬಗ್ಗೆ ಮಾತ್ರ ಹೋರಾಟ ಕೇಂದ್ರೀಕರಿಸುವುದು ಉಚಿತ.


■ ಜೆ. ರವಿಕಿರಣ, ಮೈಸೂರು


ಕಲ್ಲಡ್ಕ ಪ್ರಭಾಕರ್



ಪ್ರತಾಪ್ ಸಿಂಹ


ಕೆ.ಜಿ. ಬೋಪಯ್ಯ


ಎನ್.ಯು. ನಾಚಪ್ಪ


ರಂಜನ್

ಟಿಪ್ಪು ಜಯಂತಿ: ಒಡೆದ ಮನೆಯಾದ ಕೊಡಗು ಬಿಜೆಪಿ


ಎ.ಕೆ. ಸುಬ್ಬಯ್ಯ

ನವೆಂಬರ್ 10ರಂದು ಟಿಪ್ಪು ಜನ್ಮ ದಿನಾಚರಣೆಯನ್ನು ಈ ವರ್ಷ ಆಚರಿಸುವ ಬಗ್ಗೆ ಕೊಡಗಿನಲ್ಲಿ ಗೊಂದಲದ ವಾತಾವರಣ ಕಂಡುಬರುತ್ತಿದೆ. ಕಳೆದ ವರ್ಷ ಮೊದಲ ಬಾರಿಗೆ ರಾಜ್ಯ ಸರಕಾರ ಟಿಪ್ಪು ಜನ್ಮ ದಿನಾಚರಣೆಯನ್ನು ಆಚರಿಸುವ ನಿರ್ಧಾರವನ್ನು ತೆಗೆದುಕೊಂಡಿತ್ತು. ಈ ಕಾರ್ಯಕ್ರಮಕ್ಕೆ ಕೊಡಗಿನ ಬಿಜೆಪಿ ಮತ್ತು ಸಂಘ ಪರಿವಾರ ವ್ಯಾಪಕವಾದ ವಿರೋಧವನ್ನು ವ್ಯಕ್ತಪಡಿಸಿತ್ತು. ಆದರೆ ರಾಜ್ಯ ಸರಕಾರ ಮಾಡಿದ್ದ ಎಡವಟ್ಟಿನಿಂದಾಗಿ ಈ ಕಾರ್ಯಕ್ರಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಆಗುವ ಬದಲು, ಅಲ್ಪಸಂಖ್ಯಾತ ಇಲಾಖೆಯ ಮೂಲಕ ನಡೆದಿತ್ತು. ಆ ಇಲಾಖೆಯವರು ಎಲ್ಲಾ ಜಮಾಯತ್‌ಗಳಿಗೂ ಪತ್ರವನ್ನು ಬರೆದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಾಕಷ್ಟು ಸಂಖ್ಯೆಯಲ್ಲಿ ಅಲ್ಪಸಂಖ್ಯಾತರು ಭಾಗವಹಿಸಬೇಕೆಂದು ಮನವಿ ಮಾಡುವ ಮೂಲಕ ಬ್ರಿಟಿಷರ ವಿರುದ್ಧ ಹೋರಾಡಿದ್ದ ಮತ್ತು ಸ್ವಾತಂತ್ರ್ಯ ಹೋರಾಟಗಾರನೆಂದೇ ಕರೆಸಿಕೊಂಡಿದ್ದ ಟಿಪ್ಪು ಸುಲ್ತಾನನನ್ನು ಒಬ್ಬ ಮುಸ್ಲಿಂ ದೊರೆ ಎಂದಾಗಿಸಿದ್ದಲ್ಲದೆ, ಆತ ಮುಸ್ಲಿಮರ ನಾಯಕ ಎನ್ನುವಂತಹ ಚಿತ್ರಣವನ್ನು ನೀಡಿತ್ತು.

ಕೊಡಗಿನಲ್ಲಿ ವ್ಯಾಪಕವಾದ ವಿರೋಧವನ್ನು ಬಿಜೆಪಿಯವರು ಮಾಡಿದ ಪರಿಣಾಮ, ಕೊಡಗು ಜಿಲ್ಲೆಯಲ್ಲಿ ಕರಾಳ ದಿನಾಚರಣೆ ಆಚರಿಸಲ್ಪಟ್ಟಿತ್ತು. ಇದಕ್ಕೆ ಕಾರಣ ಜಿಲ್ಲೆಯ ಇಬ್ಬರು ಶಾಸಕರು ಮತ್ತು ಸಂಸದರಾದ ಪ್ರತಾಪ ಸಿಂಹ. ಸರಕಾರಿ ಕಾರ್ಯಕ್ರಮವನ್ನು ತಾವು ಆಚರಿಸಲು ಬಿಡುವುದಿಲ್ಲ ಎಂದು ಇವರೆಲ್ಲ ಹೇಳುವ ಮೂಲಕ ಭಯಾನಕ ಪರಿಸ್ಥಿತಿಯನ್ನು ಸೃಷ್ಟಿಸಿದ್ದರು. ಸರಕಾರ ಒಂದು ಕಡೆ ಕಾರ್ಯಕ್ರಮ ನಡೆಸಲು ಆಹ್ವಾನವನ್ನು ನೀಡಿದರೆ, ಮತ್ತೊಂದು ಕಡೆ ಅದನ್ನು ತಡೆಯುವ ಯತ್ನವನ್ನು ಸಂಘ ಪರಿವಾರ ಮಾಡಿದ್ದರಿಂದ ಜಿಲ್ಲೆಯಲ್ಲಿ ಸಂಘರ್ಷ ಉಂಟಾಗಿತ್ತು. ವಿಶ್ವ ಹಿಂದೂ ಪರಿಷತ್ತಿನ ಕಾರ್ಯದರ್ಶಿ ಕುಟ್ಟಪ್ಪ ಈ ಘಟನೆಯ ವೇಳೆಯಲ್ಲಿ ಕಲ್ಲು ಎಸೆತದಿಂದ ಪಾರಾಗಲು ಓಡುವ ವೇಳೆಯಲ್ಲಿ ಪ್ರಪಾತಕ್ಕೆ ಜಾರಿ ಬಿದ್ದು ಸಾವನ್ನಪ್ಪಿದ್ದರು.

ಇದಕ್ಕೆ ತಕ್ಕ ಉತ್ತರವನ್ನು ನೀಡುತ್ತೇವೆ ಎಂದು ಶಾಸಕ ಕೆ.ಜಿ. ಬೋಪಯ್ಯ ಹೇಳಿದ ಕೆಲವೇ ಕ್ಷಣಗಳಲ್ಲಿ ಲಾರಿಯಲ್ಲಿ ತೆರಳುತ್ತಿದ್ದ ಶಾಹುಲ್ ಹಮೀದ್ ಎಂಬಾತ ಗುಂಡಿಗೆ ಬಲಿಯಾಗಿದ್ದ. ಇಷ್ಟೆಲ್ಲಾ ಆಗಲು ಪ್ರಮುಖ ಕಾರಣ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದವರು ಟಿಪ್ಪು ಜನ್ಮ ದಿನಾಚರಣೆಯಲ್ಲಿ ಸರಕಾರಿ ಕಾರ್ಯಕ್ರಮದಲ್ಲೂ ಭಾಗವಹಿಸದೆ, ಕಾಂಗ್ರೆಸ್ ಕಚೇರಿಯ ಬಾಗಿಲನ್ನು ಹಾಕಿಕೊಂಡದ್ದು ಮತ್ತು ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು ತಮ್ಮ ಮೊಬೈಲನ್ನು ನಾಲ್ಕು ದಿನಗಳ ಕಾಲ ಸ್ವಿಚ್ ಆಫ್ ಮಾಡಿದ್ದು ಆಗಿತ್ತು. ಕೊಡಗಿನ ಕಾಂಗ್ರೆಸ್ ಈ ವಿಚಾರದಲ್ಲಿ ಇನ್ನೂ ಗೊಂದಲದಿಂದ ಹೊರಬಂದಿಲ್ಲ. ಬಿಜೆಪಿಯವರು ತಮ್ಮ ಕಾರ್ಯಸೂಚಿಯಂತೆ ಟಿಪ್ಪು ಜನ್ಮ ದಿನಾಚರಣೆ ನಡೆಸಬಾರದು ಎಂದು ಹೇಳುತ್ತಿದ್ದಾರೆ. ಆದರೆ ಎರಡನೇ ವರ್ಷದ ಕಾರ್ಯಕ್ರಮಕ್ಕೆ ಇನ್ನೇನು ಕೆಲವೇ ದಿನಗಳು ಇವೆ ಎಂದಾದರೂ ಜಿಲ್ಲಾ ಕಾಂಗ್ರೆಸ್ ಸಮಿತಿ ಈ ಬಗ್ಗೆ ಯಾವುದೇ ರೀತಿಯಲ್ಲಿ ಹೇಳಿಕೆಯನ್ನು ನೀಡುತ್ತಿಲ್ಲ. ಈ ಹಿಂದೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಿ.ಟಿ. ಪ್ರದೀಪ್‌ರವರು ತಮ್ಮ ಕುಟುಂಬದವರನ್ನು ಟಿಪ್ಪು ಮತಾಂತರ ಮಾಡಿದ್ದ ಎಂದು ಹೇಳಿಕೊಂಡು ಕಾರ್ಯಕ್ರಮಕ್ಕೆ ವಿರೋಧವನ್ನು ಅಂತರಂಗದಲ್ಲಿ ವ್ಯಕ್ತಪಡಿಸಿದ್ದರು. ಆದರೆ ಈಗ ಆ ಘಟನೆಯ ನಂತರ ಹಂಗಾಮಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಟಿ.ಪಿ.ರಮೇಶ್ ಕೂಡ ಇದೇ ಧೋರಣೆಯನ್ನು ಮುಂದುವರೆಸಿದ್ದಾರೆ. ಈ ಎಲ್ಲಾ ವಿಚಾರಗಳ ಬಗ್ಗೆ ಕಾಂಗ್ರೆಸ್ ಪಕ್ಷದ ನಿಲುವು ಏನು ಎಂದು ಪ್ರಶ್ನಿಸಿದರೆ, ಸೂಕ್ತ ಸಮಯದಲ್ಲಿ ಉತ್ತರಿಸುವುದಾಗಿ ಹೇಳುತ್ತಾ ಒಂದು ವರ್ಷ ಕಳೆದಿದ್ದಾರೆ.

ದೇವಟ್‌ಪರಂಬು ವಿವಾದ

ಈ ಘಟನೆಯ ನಂತರ ಜಿಲ್ಲೆಯಲ್ಲಿ ದೇವಟ್‌ಪರಂಬು ಎಂಬ ಹೊಸದಾದ ಒಂದು ವಿಚಾರವನ್ನು 'ಕೊಡವ ನ್ಯಾಷನಲ್ ಕೌನ್ಸಿಲ್'ನ ಅಧ್ಯಕ್ಷ ಎನ್.ಯು.ನಾಚಪ್ಪ ಸೃಷ್ಟಿಸಿ, ಟಿಪ್ಪು ಸುಲ್ತಾನ್ ದೇವಟ್‌ಪರಂಬು ಎಂಬ ಪ್ರದೇಶದಲ್ಲಿ 65 ಸಾವಿರಕ್ಕೂ ಹೆಚ್ಚು ಕೊಡವರನ್ನು ಕೊಂದಿದ್ದಾನೆ; ಸುಮಾರು ಒಂದು ವಾರಗಳ ಕಾಲ ಕಾವೇರಿ ನದಿಯಲ್ಲಿ ಸೈನಿಕರ ರಕ್ತ ಹರಿದು ನೀರು ಕೆಂಪು ಬಣ್ಣಕ್ಕೆ ತಿರುಗಿತ್ತು ಎಂದಿದ್ದೇ ಅಲ್ಲದೆ, ಇಷ್ಟೇ ಕೊಡವ ಮಹಿಳೆಯರನ್ನು ಟಿಪ್ಪು ಮತ್ತು ಆತನ ಸೈನಿಕರು ಮಾನಭಂಗ ಮಾಡಿದ್ದಾರೆ ಎಂದು ಹೇಳಿ, ಭಾಗಮಂಡಲದ ಸಮೀಪದಲ್ಲಿರುವ ಅಯ್ಯಂಗೇರಿ ಗ್ರಾಮದಲ್ಲಿ ಮೀಸಲು ಅರಣ್ಯದಲ್ಲಿ ಒಂದು ಕಲ್ಲನ್ನು ನೆಟ್ಟು, ಅದನ್ನು ಸ್ಮಾರಕ ಎಂದು ಘೋಷಿಸಿಕೊಂಡು, ಕೆಲವು ತಿಂಗಳುಗಳ ಕಾಲ ಕೊಡಗಿನಲ್ಲಿ ಸಂಘರ್ಷದ ವಾತಾವರಣವನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಿದ್ದರು.

ಅಲ್ಲಿ ಕಲ್ಲನ್ನು ನೆಟ್ಟಿದ್ದನ್ನು ಕೊಡಗಿನ ಮತ್ತೊಂದು ಪ್ರಮುಖ ಜನಾಂಗವಾದ ಅರೆಭಾಷೆ ಗೌಡ ಜನಾಂಗದವರು ವಿರೋಧಿಸಿದ ಕಾರಣ ಮತ್ತು ಆ ಕಲ್ಲು ಕಿತ್ತು ಹಾಕಲ್ಪಟ್ಟ ಕಾರಣ ಎರಡು ಜನಾಂಗಗಳ ನಡುವೆ ಘರ್ಷಣೆಯ ವಾತಾವರಣ ಉಂಟಾಗಿತ್ತು. ಈ ಸಂಪೂರ್ಣ ಘಟನಾವಳಿಯ ಹಿಂದೆ ಇದ್ದದ್ದು ಸಂಘ ಪರಿವಾರ ಮತ್ತು ಬಿಜೆಪಿ ಪಕ್ಷ. ಟಿಪ್ಪುವಿನ ಹೆಸರಿನಲ್ಲಿ ಸ್ಮಾರಕವೊಂದನ್ನು ನಿರ್ಮಿಸಿದರೆ ಕೊಡವರು, ಅರೆಭಾಷೆ ಗೌಡರು ಮತ್ತು ಇತರೇ ಹಿಂದೂ ಜನಾಂಗದವರು ಅಪಾರವಾದ ಬೆಂಬಲವನ್ನು ನೀಡುತ್ತಾರೆ. ಹೀಗೆ ಕೊಡಗಿನಲ್ಲಿ ತಮ್ಮ ಓಟ್ ಬ್ಯಾಂಕ್‌ನ್ನು ಖಾತ್ರಿಪಡಿಸಿಕೊಳ್ಳಬಹುದು ಎಂಬ ಉದ್ದೇಶದಿಂದ ಈ ಯೋಜನೆಯನ್ನು ಸಂಘ ಪರಿವಾರ ನಾಚಪ್ಪನವರ ಮೂಲಕ ಕಾರ್ಯಗತ ಮಾಡಿತ್ತು. ಕೊಡವರ ಸ್ಮಾರಕಕ್ಕೆ ವಿರೋಧ ಉಂಟಾದ ಕಾರಣ ಕಲ್ಲಡ್ಕ ಪ್ರಭಾಕರ ಭಟ್ಟ, ಜಗದೀಶ್ ಕಾರಂತ, ಚಕ್ಕೇರ ಮನು ಮುಂತಾದವರು ಇಲ್ಲಿ ಹಿಂದೂ ಸ್ಮಾರಕ ಮಾಡಬೇಕು ಎಂದು ಹೊರಟರು. ಆದರೆ ಅದಕ್ಕೆ ಬೆಂಬಲ ಸಿಗದೆ ಇಂಗು ತಿಂದ ಮಂಗಗಳಂತಾಗಿದ್ದರು.

ಕೊಡವ ಸಮಾಜಗಳು ಮತ್ತು ಫೆಡರೇಷನ್ ಆಫ್ ಕೊಡವ ಸಮಾಜಾಸ್ ದೇವಟ್‌ಪರಂಬುನಲ್ಲಿ ಸ್ಮಾರಕವನ್ನು ನಿರ್ಮಿಸಲೇಬೇಕು ಎಂದು ಪಟ್ಟು ಹಿಡಿದಿದ್ದರು. ಹಲವು ವೇಷಗಳನ್ನು ಹಾಕುವ ನಾಚಪ್ಪ ಅಲ್ಲಿ ತಾವು ಹಾಕಿದ್ದ ಸ್ಮಾರಕವನ್ನು ಕೆಡವಿದ್ದು, ರಾಜ್ಯ ಸರಕಾರ ಅಕ್ಟೋಬರ್ 17ರ ಒಳಗೆ ಅಂದರೆ ಕೊಡಗಿನಲ್ಲಿ ನಡೆಯುವ ಕಾವೇರಿ ತೀರ್ಥೋದ್ಭವದ ಒಳಗೆ ಮತ್ತೆ ಸ್ಥಾಪಿಸದಿದ್ದಲ್ಲಿ 'ಕರಸೇವೆ' ಮೂಲಕ ಅದನ್ನು ಮತ್ತೆ ನೆಡುವುದಾಗಿ ಬೆದರಿಕೆಯನ್ನು ಹಾಕಿದ್ದರು ಮತ್ತು ಈ ವೇಳೆಯ ಒಳಗೆ ಟಿಪ್ಪುವಿಗೆ ಯುದ್ಧಕ್ಕೆ ಸಹಕಾರವನ್ನು ನೀಡಿದ ಫ್ರೆಂಚ್ ಸರಕಾರ ಬಹಿರಂಗ ಕ್ಷಮೆಯನ್ನು ಯಾಚಿಸಬೇಕು. ಇಲ್ಲದಿದ್ದರೆ ಅವರ ರಾಜತಾಂತ್ರಿಕ ಕಚೇರಿಯ ಮುಂದೆ ಪ್ರತಿಭಟನೆ ನಡೆಸುವುದಾಗಿಯೂ ಘೋಷಿಸಿ ನಗೆಪಾಟಲಿಗೆ ಈಡಾಗಿದ್ದರು. ನಾಚಪ್ಪ ನಿಗದಿಪಡಿಸಿದ್ದ ದಿನಾಂಕ ಮುಗಿದಿದೆ. ಯಾವುದೇ ರೀತಿಯ ಪ್ರತಿರೋಧವನ್ನು ನಾಚಪ್ಪ ಇಲ್ಲಿಯವರೆಗೆ ಮಾಡಿಲ್ಲ.


ಟಿಪ್ಪು ಜನ್ಮದಿನಾಚರಣೆಗೆ ವಿರೋಧ

ಟಿಪ್ಪು ಜನ್ಮ ದಿನಾಚರಣೆಯನ್ನು ಈ ಸಾಲಿನ ನವೆಂಬರ್ 10ರಂದು ಆಚರಿಸಲಾಗುತ್ತದೆ ಎಂಬ ಮಾಹಿತಿ ದೊರಕಿದ ಕೂಡಲೇ, ಮಡಿಕೇರಿ ಕೊಡವ ಸಮಾಜ ಟಿಪ್ಪು ಜನ್ಮ ದಿನಾಚರಣೆಯನ್ನು ಆಚರಿಸಬಾರದು ಎಂಬ ಹೇಳಿಕೆಯನ್ನು ನೀಡಿತು. ಅಲ್ಲದೆ ಈ ಬಗ್ಗೆ ಕೊಡಗು ಜಿಲ್ಲಾಧಿಕಾರಿಗಳಿಗೆ ಕೊಡವ ಸಮಾಜದ ಪದಾಧಿಕಾರಿಗಳು ಮನವಿಯನ್ನು ನೀಡಿದರು.

ಇದರ ಬೆನ್ನಿಗೆ ಹಲವು ಕೊಡವ ಸಮಾಜಗಳು ಇದೇ ರೀತಿಯ ಹೇಳಿಕೆಗಳನ್ನು ನೀಡುತ್ತಾ ಬಂದವು. ಆದರೆ ಜಿಲ್ಲೆಯ ಬಿಜೆಪಿ ಪಕ್ಷ ಇಲ್ಲಿಯವರೆಗೆ ಈ ಬಗ್ಗೆ ಯಾವುದೇ ರೀತಿಯ ಅಧಿಕೃತ ಹೇಳಿಕೆಯನ್ನು ನೀಡಿಲ್ಲ. ಇದಕ್ಕೆ ಕಾರಣವೆಂದರೆ ದೇವಟ್‌ಪರಂಬು ವಿಚಾರವನ್ನು ಮುಂದಿಟ್ಟುಕೊಂಡು ಹೋದ ಬಿಜೆಪಿಗೆ ಸರಿಯಾದ ಪೆಟ್ಟಾಗಿತ್ತು. ಬಿಜೆಪಿಯ ಪರಂಪರಾಗತ ಮತದಾರರಾದ ಅರೆಭಾಷೆ ಗೌಡರು ಬಿಜೆಪಿಯ ನಿಲುವಿನಿಂದ ಸಿಟ್ಟಾಗಿದ್ದರು. ಆದರಿಂದಾಗಿ ಬಿಜೆಪಿ ಸ್ಪಷ್ಟವಾಗಿ ಇಬ್ಭಾಗವಾಗಿತ್ತು. ಕಲ್ಲಡ್ಕ ಪ್ರಭಾಕರ ಭಟ್ಟ ಸಭೆಯನ್ನು ಕರೆದರೂ ಅರೆಭಾಷೆ ಗೌಡ ಜನಾಂಗದವರು ಈ ಸಭೆಯಲ್ಲಿ ಭಾಗವಹಿಸದೇ ಇದ್ದದ್ದು ಬಿಜೆಪಿಗೆ ದೊಡ್ಡ ಪೆಟ್ಟಾಗಿತ್ತು. ಹಾಗಾಗಿ ಈ ಬಾರಿ ಈ ವಿಚಾರದಲ್ಲಿ ಎಚ್ಚರಿಕೆಯ ನಡೆಯನ್ನು ಬಿಜೆಪಿ ಹಾಕುವ ಸಾಧ್ಯತೆಗಳು ಕಂಡುಬರುತ್ತಿದೆ.

ಆದರೆ ಹಿಂಬಾಗಿಲಿನಿಂದ ಟಿಪ್ಪು ಜನ್ಮದಿನಾಚರಣೆಗೆ ವಿರೋಧ ವ್ಯಕ್ತಪಡಿಸುವ ಕಾರ್ಯಕ್ರಮವನ್ನು ಸಂಘ ಪರಿವಾರ ಮಾಡುತ್ತಿದೆ. ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷರಾದ ಕೆ.ಎಸ್. ದೇವಯ್ಯ ಎಂಬ ವ್ಯಕ್ತಿ ವಿಶ್ವ ಹಿಂದೂ ಪರಿಷತ್ತಿನ ಮಾಜಿ ಅಧ್ಯಕ್ಷ. ಸೋಮವಾರಪೇಟೆ ಕೊಡವ ಸಮಾಜದ ಅಧ್ಯಕ್ಷರಾಗಿರುವ ಅಭಿಮನ್ಯು ಕುಮಾರ್ ಬಿಜೆಪಿಯ ವಕ್ತಾರ. ಅವರ ಮೂಲಕ ಕೊಡವ ಸಮಾಜದ ಹೆಸರಿನಲ್ಲಿ ವಿರೋಧದ ಹೇಳಿಕೆಯನ್ನು ಕೊಡಿಸುವ ಕಾರ್ಯವನ್ನು ಬಿಜೆಪಿ ಮಾಡುತ್ತಿದೆ.

ಕೊಡವ ಸಮಾಜಗಳು ಟಿಪ್ಪು ಜನ್ಮದಿನಾಚರಣೆಗೆ ವಿರೋಧವನ್ನು ವ್ಯಕ್ತಪಡಿಸುತ್ತಿರುವುದಕ್ಕೆ ಜಿಲ್ಲೆಯ ಯಾವೊಬ್ಬ ವ್ಯಕ್ತಿಯೂ ಪ್ರತಿರೋಧ ವ್ಯಕ್ತಪಡಿಸಲಿಲ್ಲ, ತಮಗೇಕೆ ಈ



ವಿಚಾರ ಎಂಬಂತೆ ಮೌನವಾಗಿದ್ದಾರೆ. ಆದರೆ ... ವಿಚಾರಗಳು ಬಂದಾಗ, ಕೊಡಗಿನ ಸಾಕ್ಷಿಪ್ರಜ್ಞೆಯಾ... ಚಿಂತಕ ಎ.ಕೆ.ಸುಬ್ಬಯ್ಯ ಮಾತ್ರ ಪ್ರತಿಕ್ರಿಯಿಸುತ್ತಾರೆ. ... ಪತ್ರಿಕಾಗೋಷ್ಠಿಯನ್ನು ಕರೆದು, ಕೊಡವ ಸಮಾ... ಬಿಜೆಪಿಯ ಬ್ರಾಂಚ್ ಆಫೀಸ್ ಆಗುವುದು ಬೇಡ. ... ಕೊಡವ ಸಮುದಾಯದ ಆಚಾರ-ವಿಚಾರಗಳು ... ಸಂಸ್ಕೃತಿಯ ಬಗ್ಗೆ ಕಾಳಜಿ ವಹಿಸಲಿ. ಟಿಪ್ಪು ... ದಿನಾಚರಣೆಯನ್ನು ವಿರೋಧಿಸುವುದು ಬಿಜೆಪಿಯ ಅ... ಅದು ನಿಮಗೆ ಬೇಡ ಎಂಬ ಕಿವಿಮಾತನ್ನು ಹೇಳ... ಕೊಡವರು ಅಧ್ಯಯನಶೀಲರಾಗಬೇಕು ಮತ್ತು ... ಇತಿಹಾಸವನ್ನು ಮುಂದಿಟ್ಟುಕೊಂಡು ನಗೆಪಾ... ಈಡಾಗಬಾರದು ಎಂದು ಅವರು ಕೊಡ... ತಿಳಿಹೇಳಿದ್ದಾರೆ.

ಜಿಪಂನ ಬಿಜೆಪಿಗೆ ಮುಖಭಂಗ

ಕೊಡಗು ಜಿಲ್ಲಾ ಪಂಚಾಯಿತಿಯ ಸಾಮಾನ... ಅಕ್ಟೋಬರ್ 5ರಂದು ನಡೆದಿತ್ತು. ಆ ಸಭೆಯ ಕೊನ... ಇತರ ವಿಚಾರಗಳ ಬಗ್ಗೆ ಚರ್ಚೆ ನಡೆಯುವಾಗ ಬಿಜ... ಸಿ.ಕೆ. ಬೋಪಣ್ಣ ಎಂಬವರು ಟಿಪ್ಪು ಜನ್ಮದಿನಾ... ನಡೆಸದಂತೆ ನಿರ್ಣಯವನ್ನು ಕೊಡಗು ಜಿಲ್ಲಾ ಪಂಚಾ... ಕೈಗೊಳ್ಳಬೇಕು ಮತ್ತು ಸರಕಾರಕ್ಕೆ ನಿರ್ಣಯ... ಕಳುಹಿಸಬೇಕು ಎಂದು ಮಂಡಿಸಿದರು. ಇದಕ್ಕೆ ಬಿಜ... ಕೊಡವ ಜನಾಂಗಕ್ಕೆ ಸೇರಿದ ಸದಸ್ಯರುಗಳು ... ಧ್ವನಿಗೂಡಿಸಿದರು. ಕೊಡಗು ಜಿಲ್ಲಾ ಪಂಚಾಯಿತಿ ಆಡಳಿತ ಬಿಜೆಪಿಯದ್ದು. ಸ್ಪಷ್ಟ ಬಹುಮತವಿರುವ ಪಂಚಾಯಿತಿ ಇದು. ಆದರೆ ಕಾಂಗ್ರೆಸಿನ ಸದಸ್ಯರು ... ಕೆ.ಪಿ. ಚಂದ್ರಕಲಾ, ಸರಿತಾ ಪೂಣಚ್ಚ, ಪಂಕಜ, ಕು... ಧರ್ಮಪ್ಪ ಮತ್ತು ಲತೀಫ್‌ರವರು ಜಿಲ್ಲಾ ಪಂಚಾಯಿತಿ ಈ ವಿಚಾರದ ಬಗ್ಗೆ ನಿರ್ಣಯ ತೆಗೆದುಕೊಳ್ಳಬ... ಎಂದು ವಿರೋಧವನ್ನು ವ್ಯಕ್ತಪಡಿಸಿದರು. ಈ ಬಗ್ಗೆ ಸ... ವಾಗ್ವಾದಗಳು ನಡೆದರೂ ಕಾಂಗ್ರೆಸಿಗರು ನಿ... ಕೈಗೊಳ್ಳಲು ಅವಕಾಶವನ್ನು ಮಾಡಿಕೊಡಲಿಲ್ಲ. ಮ... ಬಾರಿಗೆ ಕಾಂಗ್ರೆಸಿಗರು ಬಿಜೆಪಿಯನ್ನು ಸಮರ್ಥವಾಗಿ ವಿಚಾರದಲ್ಲಿ ಎದುರಿಸಿದ್ದರು. ವಿಶೇಷವಾಗಿ ಮಹಿಳೆ... ಬಿಜೆಪಿಯ ವಿಚಾರವನ್ನು ವಿರೋಧಿಸಿದ್ದರು. ಕೊಡ... ಕಾಂಗ್ರೆಸ್ ಪಕ್ಷ ಯಾವುದೇ ನಿಲುವು ತೆಗೆದುಕೊಳ್ಳದಿ... ಕಾಂಗ್ರೆಸಿನ ಜಿಲ್ಲಾ ಪಂಚಾಯತ್ ಸದಸ್ಯರು ಮಾತ್ರ ಬಿಜ... ಕಾರ್ಯತಂತ್ರವನ್ನು ವಿರೋಧಿಸುವ ಮ... ನಿರ್ಣಯವಾಗದಂತೆ ನೋಡಿಕೊಂಡರು.

ಸ್ಪಷ್ಟ ಇಬ್ಭಾಗ

ಕಳೆದ ನವೆಂಬರ್ 10ರಂದು ಟಿಪ್ಪು ಜನ್ಮದಿನಾ... ಯನ್ನು ಆಚರಿಸಬೇಕು ಎಂದು ರಾಜ್ಯ ಸ... ಘೋಷಿಸಿದಾಗ, ಮೊದಲು ವಿರೋಧಿಸಿದವರು ... ಬೋಪಯ್ಯ, ಅಪ್ಪಚ್ಚು ರಂಜನ್ ಮತ್ತು ಸಂಸದ ... ಸಿಂಹ. ಹಾಗಾಗಿ ಕೊಡಗಿನಲ್ಲಿ ಕೊಡವರು ಮತ್ತು ಅ... ಗೌಡ ಜನಾಂಗದವರು ಮುಂಚೂಣಿಯಲ್ಲಿ ನಿಂತುಕ...


ಜಿಲ್ಲಾ ಪಂಚಾಯತ್ ಸಭೆಯಲ್ಲಿ ಎಡಭಾಗದಲ್ಲಿ ಕಾಂಗ್ರೆಸಿನ ಸದಸ್ಯರು. ಬಲಭಾಗದಲ್ಲಿ ಕೇವಲ ನಾಲ್ವರು ಕೊಡವ ಸಮುದಾಯಕ್ಕೆ ಸೇರಿದ ಸದಸ್ಯರು ವಿರೋಧ ವ್ಯಕ್ತಪಡಿಸುತ್ತಿರುವುದು. ಬಿಜೆಪಿಯ ಕವಿತಾ ಪ್ರಭಾಕರ್ ಮೊದಲನೆಯವರಾಗಿದ್ದು, ಅವರು ಈ ಪ್ರಸ್ತಾಪಕ್ಕೆ ವಿರೋಧವಾಗಿ ಕುಳಿತಿರುವ ದೃಶ್ಯ.

ಕಾರ್ಯಕ್ರಮವನ್ನು ವಿರೋಧಿಸಿದ್ದರು. ಅವರ ಜೊತೆಯಲ್ಲಿ ಸಂಘ ಪರಿವಾರದ ಜೊತೆಯಲ್ಲಿ ಗುರುತಿಸಿಕೊಂಡಿರುವ ಮಲೆಯಾಳಿಗಳು ಸೇರಿಕೊಂಡಿದ್ದರು.

ಆದರೆ ಈ ಬಾರಿ ಈ ವಿಚಾರದ ಬಗ್ಗೆ ಕೊಡವ ಸಮಾಜಗಳು ವಿರೋಧವನ್ನು ವ್ಯಕ್ತಪಡಿಸಿ, ಹೇಳಿಕೆಗಳನ್ನು ನೀಡುತ್ತಿವೆ. ಜಿಲ್ಲೆಯಲ್ಲಿರುವ ಅರೆಭಾಷೆ ಗೌಡ ಜನಾಂಗದ ಸಮಾಜಗಳು ತಟಸ್ಥವಾಗಿ ಉಳಿದಿವೆ. ಯಾವುದೇ ಕಾರಣಕ್ಕೂ ನಾವು ಈ ವಿಚಾರದಲ್ಲಿ ಕೊಡವ ಜನಾಂಗದ ಜೊತೆಯಲ್ಲಿ ಗುರುತಿಸಿಕೊಳ್ಳುವುದಿಲ್ಲ ಎಂಬ ನಿರ್ಣಯಕ್ಕೆ ಅವರು ಬಂದಂತೆ ಕಂಡುಬರುತ್ತಿದೆ. ಏಕೆಂದರೆ ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ಈ ವಿಚಾರವನ್ನು ಕೊಡವ ಸಮುದಾಯಕ್ಕೆ ಸೇರಿದ ಸದಸ್ಯರು ನಿರ್ಣಯ ಕೈಗೊಳ್ಳಬೇಕೆಂದು ಹೇಳಿದಾಗ, ಗೌಡ ಜನಾಂಗದ ಸದಸ್ಯರು ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸಲಿಲ್ಲ, ಅವರಿಗೆ ಬೆಂಬಲವಾಗಿ ಚರ್ಚೆಯಲ್ಲಿ ಪಾಲ್ಗೊಳ್ಳಲೂ ಇಲ್ಲ, ಕಾಂಗ್ರೆಸಿನ ಸದಸ್ಯರು ವಿರೋಧ ವ್ಯಕ್ತಪಡಿಸಿದಾಗ ಕೂಡ ತಟಸ್ಥರಾಗಿ ಉಳಿದಿದ್ದರು.

ಕಳೆದ ಬಾರಿ ಶಾಹುಲ್ ಹಮೀದ್‌ನ ಕೊಲೆಯ ಪ್ರಕರಣದಲ್ಲಿ ಆರೋಪಿಗಳಾಗಿ ಬಂಧನಕ್ಕೆ ಒಳಗಾದವರು ಗೌಡ ಸಮುದಾಯಕ್ಕೆ ಸೇರಿದ ವ್ಯಕ್ತಿಗಳು ಎಂಬುದು ಈ ಸಂದರ್ಭದಲ್ಲಿ ಗಮನಿಸಬೇಕಾದ ವಿಚಾರವಾಗಿದೆ. ಈ ವರ್ಷ ಗೌಡ ಸಮುದಾಯದಲ್ಲಿ ಇಷ್ಟೊಂದು ಬದಲಾವಣೆ ಆಗಲು ಕಾರಣಗಳೇನು ಎಂಬುದು ಚರ್ಚಿಸಲಾಗುತ್ತಿದೆ.

ಹೇಗಾದರೂ ಮಾಡಿ ಟಿಪ್ಪು ಜನ್ಮದಿನಾಚರಣೆಯನ್ನು ತಡೆಯಬೇಕು ಮತ್ತು ಇದಕ್ಕೆ ಬೇಕಾದ ಸಹಕಾರವನ್ನು ಅರೆಭಾಷೆ ಗೌಡ ಜನಾಂಗ ಮತ್ತು ಕೊಡವ ಜನಾಂಗದಿಂದ ಪಡೆಯಬೇಕು. ಇಬ್ಭಾಗವಾಗಿರುವ ಎರಡು ಪ್ರಮುಖ ಜನಾಂಗವನ್ನು ಸಂಘ ಪರಿವಾರದ ವ್ಯಾಪ್ತಿಗೆ ತರಬೇಕು ಎನ್ನುವ ಉದ್ದೇಶದಿಂದ, ಮಡಿಕೇರಿಯ ಭಾರತೀಯ ವಿದ್ಯಾಭವನದಲ್ಲಿ ಜಗದೀಶ್ ಕಾರಂತ್ ನೇತೃತ್ವದಲ್ಲಿ ನಕಲಿ ಇತಿಹಾಸಕಾರ ಅಡ್ಡಂಡ ಕಾರ್ಯಪ್ಪ ಮತ್ತು ಇತರರು ಸೇರಿ ಸಭೆಯನ್ನು ನಡೆಸಿದ್ದರು. ದೇವಟ್‌ಪರಂಬು ವಿವಾದಕ್ಕೆ ಕಿಡಿ ಹಚ್ಚಿ, ಗೌಡ ಜನಾಂಗ ಸಿಟ್ಟಿಗೇಳಲು ಕಾರಣನಾಗಿದ್ದ ಅಡ್ಡಂಡ ಕಾರ್ಯಪ್ಪ ದೇವಟ್‌ಪರಂಬು ಕೊಡವರ ಪ್ರತಿಷ್ಠೆಯ ವಿಚಾರ ಎಂದು ಹಿಂದೆ ಹೇಳಿದ್ದು, ಈ ಸಭೆಯಲ್ಲಿ ನಾವು ಬೇಕಿದ್ದರೆ ಆ ವಿವಾದವನ್ನು ಕೈಬಿಡುವ ಆದರೆ ಟಿಪ್ಪು ಜನ್ಮ ದಿನಾಚರಣೆಯನ್ನು ಆಚರಿಸುವುದು ಬೇಡ ಎಂದು ಹೇಳಿ, ಎರಡೂ ಜನಾಂಗದವರು ತಮ್ಮ ಸಮಾಜಗಳ ಮೂಲಕ ಇದಕ್ಕೆ ಹೇಳಿಕೆಯನ್ನು ನೀಡಬೇಕು ಎಂದು ಮನವಿ ಮಾಡಿದ. ಆದರೆ ಸಭೆಗೆ ಫೆಡರೇಷನ್ ಆಫ್ ಗೌಡ ಸಮಾಜಾಸ್ ಅಧ್ಯಕ್ಷರನ್ನು ಕರೆ ತರುತ್ತೇನೆ ಎಂದು ಹೇಳಿದ್ದ ಕೋಡಿ ಪೊನ್ನಪ್ಪ ಎಂಬ ಸಂಘ ಪರಿವಾರದ ಅರೆಭಾಷೆ ಗೌಡ ವ್ಯಕ್ತಿ ಅವರನ್ನು ತಾನು ಮನವೊಲಿಸುತ್ತೇನೆ ಎಂದು ಆ ಸಭೆಯಲ್ಲಿ ಹೇಳಿಕೊಂಡರು.

ಕಾವೇರಿ ತೀರ್ಥೋದ್ಭವಕ್ಕೆ ಸಂಬಂಧಪಟ್ಟಂತೆ ಚಿನ್ನಾಭರಣಗಳನ್ನು ಹೊರತರುವ ಸಂದರ್ಭದಲ್ಲಿ, ಗೌಡ ಸಮಾಜದವರು ಭಾಗವಹಿಸುವ ವಾಡಿಕೆ ಇದೆ. ಹಾಗೆ ಸೇರಿದ ಸಂದರ್ಭದಲ್ಲಿ ಅನೌಪಚಾರಿಕವಾಗಿ ಚರ್ಚೆ ನಡೆಸಿದಾಗ, ಕೋಡಿ ಪೊನ್ನಪ್ಪನವರು ಈ ಪ್ರಸ್ತಾಪವನ್ನು ಮುಂದಿಟ್ಟಿದ್ದರು. ಆದರೆ ಅವರ ಹೇಳಿಕೆಗೆ ತೀವ್ರವಾದ ವಿರೋಧ ಅಲ್ಲಿ ವ್ಯಕ್ತವಾಯಿತು. ಗೌಡ ಸಮಾಜದವರು ಯಾವುದೇ ಹೇಳಿಕೆಯನ್ನು ಟಿಪ್ಪು ಜನ್ಮ ದಿನಾಚರಣೆಗೆ ಸಂಬಂಧಪಟ್ಟಂತೆ ನೀಡಬಾರದು. ಅಲ್ಲಿ ವಿವಿಧ ನಿಲುವಿನ ಮತ್ತು ವಿವಿಧ ಪಕ್ಷಗಳಿಗೆ ಸೇರಿರುವ ಜನರು ಇರುವ ಕಾರಣ, ಆ ಚರ್ಚೆ ಬೇಡ ಎಂಬ ತೀರ್ಮಾನಕ್ಕೆ ಬರಲಾಯಿತು. ಇದು ಸಂಘ ಪರಿವಾರ ಈ ವಿಚಾರದಲ್ಲಿ ಎರಡನೇ ಬಾರಿಗೆ ಎದುರಿಸುತ್ತಿರುವ ಹಿನ್ನಡೆಯಾಗಿದೆ.

ದೇವಟ್‌ಪರಂಬು ವಿವಾದದಲ್ಲಿ ನಾಚಪ್ಪ ಮತ್ತು ಕೆಲವು ಕೊಡವ ಸಮಾಜಗಳು ನಡೆದುಕೊಂಡ ರೀತಿಯಿಂದ, ಅರೆಭಾಷೆ ಗೌಡ ಜನಾಂಗದವರು ಈ ಎಲ್ಲಾ ವಿಚಾರಗಳಿಂದ ಹೊರಗೆ ಇರುವ ನಿರ್ಧಾರವನ್ನು ಕೈಗೊಂಡಂತೆ ಕಂಡುಬರುತ್ತಿದೆ. ಕೆಲವೇ ದಿನಗಳ ಹಿಂದೆ ಫೆಡರೇಷನ್ ಆಫ್ ಗೌಡ ಸಮಾಜಾಸ್‌ರವರ ಸಭೆಯು ನಡೆದಿತ್ತು, ಆ ಸಭೆಯಲ್ಲಿ ಸರಕಾರಿ ಕಾರ್ಯಕ್ರಮಕ್ಕೆ ತಮ್ಮ ಸಮಾಜ ಸತಕ್ಕೆ ವಿರೋಧ ಮಾಡಬೇಕು ಎಂಬ ವಿಚಾರ ಪ್ರಸ್ತಾಪವಾಯಿತು. ಇದರ ಜೊತೆಯಲ್ಲಿ ಮತ್ತೊಂದು ವಿಭಾಗದವರು ತಾವು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಂಬ ವಿಚಾರವನ್ನು ಕೂಡ ಮುಂದಿಟ್ಟಿದ್ದರು. ಮತ್ತೆ ಕೆಲವರು ತಮ್ಮ ಸಮಾಜ ಈ ಕಾರ್ಯಕ್ರಮಕ್ಕೆ ವಿರೋಧ ವ್ಯಕ್ತಪಡಿಸುವುದೂ ಬೇಡ, ಬೆಂಬಲ ನೀಡುವುದೂ ಬೇಡ, ತಟಸ್ಥವಾಗಿ ಉಳಿಯುವ ಎಂಬ ವಿಚಾರವನ್ನು ಮುಂದಿಟ್ಟರು.

ಒಟ್ಟಿನಲ್ಲಿ ಈ ಬಾರಿಯ ಟಿಪ್ಪು ಜನ್ಮದಿನಾಚರಣೆ ಹಲವು ತಿರುವುಗಳನ್ನು ಕಂಡುಕೊಂಡಿದೆ. ಕಳೆದ ಸಾಲಿನಲ್ಲಿ ಇದ್ದಂತಹ ವಾತಾವರಣ ಈಗ ಇಲ್ಲ, ಪ್ರತಿರೋಧಗಳು ಕಳೆದ ಸಾಲಿನಲ್ಲಿ ಇದ್ದಂತೆ ಇರಲಿಕ್ಕೆ ಇಲ್ಲ, ಜಿಲ್ಲೆಗೆ ಆಗಮಿಸಿದ್ದ ಬಿ.ಎಸ್. ಯಡಿಯೂರಪ್ಪ ಮಾತ್ರ ಕೊಡಗಿನಲ್ಲಿ ಟಿಪ್ಪು ಜನ್ಮದಿನಾಚರಣೆಯನ್ನು ಆಚರಿಸಿದರೆ, ಜಿಲ್ಲಾ ಬಿಜೆಪಿ ಉಗ್ರವಾಗಿ ವಿರೋಧಿಸುವುದಾಗಿ ಹೇಳಿಕೆಯನ್ನು ನೀಡಿದ್ದಾರೆ. ಉಗ್ರತೆ ಯಾವ ಪ್ರಮಾಣದಲ್ಲಿ ಇರುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

■ ಬಿ.ಎನ್. ಮನುಶೆಟ್ಟಿ

ಬಿಜೆಪಿಗೋಗಿ ದಲಿತ ಮುಖ್ಯಮಂತ್ರಿ ಬೇಡಿಕೆ ಇಡಿ ಸಾರ್!

ಉಡುಪಿಯಲ್ಲಿ ಮಾನವತಾವಾದಿಗಳು ಮಾಡಿದ ಘರ್ಜನೆ ನಾಡಿನ ದಶ ದಿಕ್ಕಿನಿಂದಲೂ ಮಾರ್ದನಿಗೊಳ್ಳುತ್ತಿದೆಯಂತಲ್ಲಾ. ಇದರಿಂದ ಹೆದರಿದ ಪೇಜಾವರ ಶ್ರೀಗಳು ಉಡುಪಿಯ ಗಡ್ಡದ ಸಾಬರು ಮತ್ತು ಅಜಲು ಪದ್ಧತಿಗೆ ಸಿಕ್ಕಿ ನರಳುತ್ತಿರುವ ದಲಿತರನ್ನ ಕರೆದು, ಅವರತ್ತ ಹಣ್ಣು ಎಸೆದು "ನೋಡಿ, ನೀವೆಲ್ಲಾ ನಿಮ್ಮ ನಿಮ್ಮ ಆವರಣದಲ್ಲಿ ದೃಢವಾಗಿ ನಿಂತು ಸುಖ ಸಂತೋಷದಿಂದ ಬಾಳುತ್ತಿರುವ ಈ ಉಡುಪಿ ಎಂಬ ಪವಿತ್ರ ಭೂಮಿಗೆ ಅನ್ಯರು ಬಂದು ಅಪವಿತ್ರಗೊಳಿಸಿ ಹೋಗಿದ್ದಾರೆ. ಅಲ್ಲದೆ ಮತ್ತೆ ಮುಂದಿನ ವರ್ಷವೂ ಬಂದು ಮುತ್ತಿಗೆ ಹಾಕುತ್ತಾರಂತೆ. ಆಗ ನೀವೇ ನಮ್ಮನ್ನು ರಕ್ಷಿಸಬೇಕು. ಮುಂದೆ ನಾವು ನಿಮ್ಮನ್ನು ರಕ್ಷಿಸುತ್ತೇವೆ" ಎಂದರಂತಲ್ಲಾ. ಆಗ ಗಡ್ಡ ನೀವಿಕೊಂಡ ಉಡುಪಿ ಸಾಬರು "ನೀವು ಯೇಚ್ನೆ ಮಾಡಬೇಡಿ ಸಾರ್. ಅವುರು ಬರ್ಲಿ ಜಾ ನಿಖಾಲ್ ಮಾಡಿ ಕಳುಸ್ತೀವಿ. ಉಡುಪಿದು ಯೇಚ್ನೆ ನಿಮ್ಗೆ ಬೇಡ. ನೀವು ಊಟ ಮಾಡಿ ಮಲಗ್‌ಬಿಡಿ ಸಾರ್" ಎಂದವಂತಲ್ಲಾ ಥೂತ್ತೇರಿ!

* * *

ರಾಜಕಾರಣ ಅಂದರೆ ನಮ್ಮ ಪೇಜಾವರರದ್ದು. ಹಿಂದೆ ಅವರ ರಾಮಮಂದಿರ ಬೀಳಿಸುವುದನ್ನು ತಡೆಯಲು ಹೋಗಿದ್ದರಂತೆ. "ಆದರೆ ಬೀಳಿಸಿದ್ದು ಸರಿಯಾಗಿದೆ. ಏಕೆಂದರೆ ಮಸೀದಿ ಇದ್ದ ಜಾಗದಲ್ಲಿ ರಾಮನ ಗೆಜ್ಜೆ ಗಿಲಕಿ ಮತ್ತು ಉಡಿದಾರ ಸಿಕ್ಕಿದವು" ಎಂದಿದ್ದರು. ಉಡುಪಿ ಗೋಪುರ ಬಿದ್ದಾಗಲೂ ಅಷ್ಟೆ. ಕೂಡಲೆ ತಮ್ಮ ಶಿಷ್ಯ ಈಶ್ವರಪ್ಪನನ್ನು ಸಂಪರ್ಕಿಸಿ "ಈಶ್ವರೂ, ಕನಕಗೋಪುರವೇ ಇರಲಿಲ್ಲ ಅಂತ ನೀನು ನಿಮ್ಮ ಜನಾಂಗಕ್ಕೆ ಹೇಳು" ಎಂದಿದ್ದರು. ಸರಿ ಎಂದಿದ್ದ ಈಶ್ವರಪ್ಪನ ದನಿ ಆಗ ಒಡೆದ ಸೈಲೆನ್ಸರ್ ಪೈಪಾದದ್ದು ಇನ್ನೂ ಸರಿಹೋಗಿಲ್ಲವಂತೆ. ಹೀಗೆ ಮುಳ್ಳನ್ನ ಮುಳ್ಳಿನಿಂದಲೇ ತೆಗೆಯುತ್ತ ಬಂದಿರುವ ನಮ್ಮ ಪೇಜಾವರ ಶ್ರೀಗಳು ಹಿಂದೂಗಳಲ್ಲಿನ ಅಸಮಾನತೆ, ಅಸ್ಪೃಶ್ಯತೆ ಮತ್ತು ಜಾತೀಯತೆಯನ್ನು ತೊಲಗಿಸಲು ಹೋರಾಡುತ್ತಿರುವುದನ್ನು ಮರೆತು ಉಡುಪಿಗೆ ನುಗ್ಗಿದ ಸಹಪಂಕ್ತಿ ಭೋಜನ ಬೇಡಿಕೆ ಜನರ ಬಗ್ಗೆ ಶಾನೇ ಬೇಸರಗೊಂಡಿದ್ದಾರಂತಲ್ಲಾ ಥೂತ್ತೇರಿ!!

* * *

ನಮ್ಮ ಸಭ್ಯ ರಾಜಕಾರಣಿ ಶ್ರೀನಿವಾಸ್ ಪ್ರಸಾದ್ ರಾಜೀನಾಮೆ ಇತ್ತಿದ್ದಾರೆ. ಅದಿನ್ನೂ ಅಂಗೀಕಾರವಾಗಿಲ್ಲ. ಆದ್ದರಿಂದ ಶ್ರೀನಿವಾಸ್ ಅತಂತ್ರಸ್ಥಿತಿಯಲ್ಲಿದ್ದಾರೆ. ಅವರ ಉಗ್ರ ಸಿಟ್ಟಿಗೆ ಕಾರಣ ಕೇಳಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ನಿನಿಗ್ಯಾರಿದ್ದರೇನೂ ಸುಖವಿಲ್ಲ ಪ್ರಭುವೇ, ದಾರಿ ಸುಖವಿಲ್ಲ ಬಾಯಾರಿತು ಎಂದು ಬಾವಿ ನೀರಿಗೆ ಪೋದೆ."

"ಹಲೋ, ಯಾರು?"

"ನಮಸ್ಕಾರ ಸಾರ್, ನಾನು ಯಾಹೂ."

"ಯಾಹೂ ಅಂದ್ರೆ?"

"ಪತ್ರಕರ್ತ ಸಾರ್."

"ಕೇಳಿ, ಏನು ಬೇಕು ಕೇಳಿ ಹೇಳ್ತೀನಿ."

"ರಾಜೀನಾಮೆ ಕೊಡಬಾರದಿತ್ತು ಸಾರ್."

"ಸಿದ್ದರಾಮಯ್ಯನ ಮುಖ ನೋಡಕ್ಕೆ ಬೇಜಾರು."

"ಅವರ ಮುಖ ಯಾಕ್ ನೋಡ್ತಿರಿ ಸಾರ್. ಜನಗಳ ಮುಖ ನೋಡಿ."

"ಜನಗಳ ಮುಖ ನೋಡಿಯೇ ರಾಜೀನಾಮೆ ಕೊಟ್ಟಿರದು."

"ಮಂತ್ರಿಗಿರಿ ಹೋಯ್ತು ಅಂದ ಕೂಡ್ಲೆ ರಾಜೀನಾಮೆ ಕೊಟ್ರೆ ನೀವು ಸಣ್ಣ ಮನುಷ್ಯರಾದ್ರಲ್ಲವ ಸಾರ್?"

"ಇಲ್ಲ ನಾನು ಯಾವತ್ತೂ ದೊಡ್ಡ ಮನುಷ್ಯ. ಅದಕ್ಕಾಗಿನೆ ರಾಜೀವ್ ಗಾಂಧಿ ಗೌರವ ಕೊಡತಿದ್ರು. ವಾಜಪೇಯಿ ತಮ್ಮ ಸಂಪುಟದಲ್ಲಿ ಸೇರಿಸಿಕೊಂಡಿದ್ರು."

"ವಾಜಪೇಯಿ ಸಂಪುಟದಲ್ಲಿ ಮಂತ್ರಿಯಾಗಿದ್ರಾ ಸಾರ್?"

"ಅದು ಗೊತ್ತಿಲ್ಲ ಅಂದ್ರೆ ನೀವ್ಯಾವ ಸೀಮೆ ಪತ್ರಕರ್ತರು?"

"ಸಾರಿ, ನಾನು ಇತ್ತೀಚಿನವುನು ಸಾರ್."

"ಆದ್ರೂ ತಿಳಿಕೋಬೇಕು. ನಾನು ವಾಜಪೇಯಿ ಸರ್ಕಾರದಲ್ಲಿ ಮಂತ್ರಿಯಾಗಿದ್ದೆ."

"ನಿಮ್ಮನ್ನ ತೆಗೀಬೇಕಾದ್ರೆ ಈ ಅಂಶನೂ ಪರಿಗಣಿಸಿದರಂತೆ ಸಾರ್."

"ಯಾರು?"

"ಹೈಕಮಾಂಡ್."

"ಏನು ಪರಿಗಣಿಸಿದ್ರು?"

"ನೀವು ವಾಜಪೇಯಿ ಸರ್ಕಾರದಲ್ಲಿ ಭಾಗಿಯಾಗಿದ್ದೇ ಒಂದು ಕಳಂಕವಾಗಿದೆ ಸಾರ್."

"ಏನು ಮಾತಾಡ್ತಿರಿ ನೀವು? ನನ್ನ ಯೋಗ್ಯತೆ ಪರಿಗಣಿಸಿ ಮಂತ್ರಿ ಮಾಡಿದ್ರು. ಆ ವಿಷಯದಲ್ಲಿ ನನಗೆ ಹೆಮ್ಮೆಯಿದೆ."


"ಸಾರ್, ನಿಮ್ಮ ಯೋಗ್ಯತೆ ಬೆಟ್ಟದಾಕಾರಕ್ಕೆ ಬೆಳೆದದ್ದು ಕಾಂಗ್ರೆಸ್‌ನಿಂದಂತೆ. ಅದು ನಿಮ್ಮನ್ನು ಎಂಪಿ ಮಾಡೀ ಮಾಡಿ ಈ ಮಟ್ಟಕ್ಕೆ ಬೆಳಸ್ತಂತೆ. ಆದ್ರು ನೀವು ದಲಿತ ಜನಾಂಗದ ಲೀಡರಾಗಲಿಲ್ಲವಂತೆ."

"ಯಾರ್ರೀ ಹೇಳಿದೋರು ನಿಮಗೆ?"

"ಕಾಂಗ್ರೆಸ್‌ನೋರು ಸಾರ್. ದಲಿತ್ರಲ್ಲಿ ಬಸವಲಿಂಗಪ್ಪ ಲೀಡ್ರಾಗಿದ್ರು. ರಂಗನಾಥ್ ಲೀಡರಾಗಿದ್ರು. ಖರ್ಗೆ ಆಗ್ಯವ್ರೆ. ಈಗ ಪರಮೇಶ್ವರ್ ಅವ್ರೆ. ನೀವು ಆತರಕ್ಕಾಗದೆ ಮೀಸಲಾತಿ ಆವರಣದಲ್ಲೇ ಉಳಿದರಂತೆ. ಅದ್ಕೆ ಕಾಂಗೈಗಳು ನೀವು ಹೋದರೆಷ್ಟು, ಇದ್ದರೆಷ್ಟು ಅನ್ನಂಗವೆ."

"ನನ್ನ ಸ್ಟ್ರೆಂತ್ ತೋರಸದಕ್ಕೆ ರಾಜೀನಾಮೆ ಕೊಟ್ಟಿರದು."

"ನಿಮ್ಮ ಸ್ಟ್ರೆಂತ್ ಖಾತೇಲಿ ತೋರ ಬೇಕಾಗಿತ್ತಂತೆ ಸಾ. ರೆವಿನ್ಯೂ ಖಾತೆ ಸಿಕ್ಕಿದ ಕೂಡ್ಲೆ ನೆಲ ಹಿಡ ದೊರಂಗೆ ಕೆಮ್ಮಿಕಂಡು



ಮಲಗಿದ್ರಂತೆ. ಆ ಕಡೆ ಬಗರ್ ಹುಕುಂ ಜನ ಬೊಬ್ಬೆ ಹಾಕಕ್ಕೆ ಶುರು ಮಾಡಿದ್ರು. ಅದ ನೋಡಲಾರದೆ ಕಾಗೋಡು ತಿಮ್ಮಪ್ಪ 'ಇದು ನಿದ್ರೆ ಸರ್ಕಾರ. ಕಾಯಿಲೆ ಸರ್ಕಾರ. ಕೆಮ್ಮು ಗೂರ್ಲು ಗುಸುಗ್ಲು ಸರ್ಕಾರ' ಅಂತ ಬೈಯಕ್ಕೆ ಶುರು ಮಾಡಿದ್ರು. ಸಾಮಾನ್ಯವಾಗಿ ಬೈದಾಗ ಮಾತ್ರ ಕೆರಳೊ ಸಿದ್ದರಾಮಯ್ಯ ನಿಮ್ಮ ಖಾತೆ ಕಿತ್ತು ತಿಮ್ಮಪ್ಪನಿಗೆ ಕೊಟ್ರು. ಇದರಲ್ಲಿ ಸಿದ್ದರಾಮಯ್ಯಂದೇನು ತಪ್ಪು ಸಾರ್?"

"ಸಿದ್ದರಾಮಯ್ಯ ನಂಬಿಕೆ ದ್ರೋಹಿ."

"ಅದೇನೊ ಹಂಡ್ರೆಡ್ ಪರಸೆಂಟು ನಿಜ ಸಾರ್. ನೀವು ಚಾಮುಂಡೇಶ್ವರೀಲಿ ಆತನನ್ನ ಗೆಲ್ಸಕ್ಕೆ ದೇವೇಗೌಡರನ್ನ ಬಾಯಿಗೆ ಬಂದಂಗೆ ಟೀಕೆ ಮಾಡಿದ್ರಿ. ಸಿದ್ದರಾಮಯ್ಯನೇ ನಮ್ಮ ನಾಯಕ ಅಂತ ಒಪ್ಪಿಕೊಂಡಿದ್ರಿ. ಅಂಥ ನಿಮಗೆ ದ್ರೋಹ ಮಾಡಬಾರದಿತ್ತು ಸಾರ್."

"ಈಗ್ಲಾದ್ರು ಗೊತ್ತಾಯ್ತಾ ಈ ಸಿದ್ದರಾಮಯ್ಯ ಎಂಥೋನು ಅಂತ್ಹ?"

"ಗೊತ್ತಾಯ್ತು ಸಾರ್. ಆದ್ರೆ ಸಿದ್ದರಾಮಯ್ಯ ನಿಮ್ಮ ಉಪಕಾರ ನೆನಿಸಿಕೊಂಡು ರೆವಿನ್ಯೂ ಖಾತೆ ಕೊಟ್ರು. ಆದ್ರೆ ನೀವು ಮಾತ್ರ ಆ ಖಾತೆಗೆ ನ್ಯಾಯ ಒದಗಿಸಲಿಲ್ಲ. ಅದಕ್ಕೆ ಆತ ಖಾತೆ ಕಿತಗಂಡಿದ್ದು ಕರ್ನಾಟಕದ ಹಿತದೃಷ್ಟಿಯಿಂದಲೇ ವರತು ಇದರಲ್ಲಿ ಆತನ ವೈಯಕ್ತಿಕ ದ್ವೇಷ ಸ್ವಾರ್ಥ ಏನಿದೆ?"

"ಖಾತೆ ಕಿತಗಳದ್ಕು ಮದ್ಲು ಆತ ನನ್ನ ಕೇಳಬೇಕಿತ್ತು, ಕೂಡ್ಲೆ ಬಿಸಾಕ್ತಿದ್ದೆ."

"ನಂಜನಗೂಡು ನಂಜುಂಡೇಶ್ವರನಾಣೆ ಇದು ಸುಳ್ಳು ಸಾ."

"ಸುಳ್ಳಲ್ಲ ಕಂಡ್ರಿ."

"ಸಾರ್, ಖಾತೆ ಕಿತಗಂಡಿದ್ಕೆ ಪಾರ್ಟಿನೆ ಬಿಟ್ಟು ರಾಜೀನಾಮೆ ಕೆರದು ಹೊಂಟರೊ ನೀವು ಇನ್ನ ಕೇಳಿದ್ರೆ ಕೊಡತಿದ್ರ ಸಾರ್? ಆ ಛಲವಾದ ಶಿವರಾಮ, ಮೋಟಮ್ಮ, ವೆಂಕಟಸ್ವಾಮಿ ಇವರನ್ನೆಲ್ಲ ಸೇರಿಸಿ ರಸ್ತೆ ತಡೆ ಮಾಡತಿದ್ರಿ."

"ಅಂತಹ ಕೆಲಸ ಯಾವತ್ತೂ ಮಾಡಿಲ್ಲ, ನಾನು ಖಾತೆ ಸರಿಯಾಗಿ ನಡೆಸಿಲ್ಲ ಅಂದ್ರೆ ಕೇಳಬೇಕಿತ್ತು."

"ಸಾರ್, ಖಾತೆ ಅಂದಕೂಡ್ಲೆ ಮಂತ್ರಿಗಳು ನೆನಪಾಗಬೇಕು ಸಾರ್. ಶಿಕ್ಷಣ ಅದ್ರೆ ಗೋವಿಂದೇಗೌಡ. ಪಿಡಬ್ಲ್ಯೂ ಅಂದ್ರೆ ದೇವೇಗೌಡ್ರು. ಸಹಕಾರ ಅಂದ್ರೆ ಈರಣ್ಣ. ಸಂಸ್ಕೃತಿ ಅಂದ್ರೆ ಎಂ.ಪಿ. ಪ್ರಕಾಶ್. ರೆವಿನ್ಯೂ ಅಂದ್ರೆ ಬಿ. ಬಸವಲಿಂಗಪ್ಪ...! ಹಿಂಗೆ ನೆನಪಾಯ್ತರೆ. ಶ್ರೀನಿವಾಸ್ ಪ್ರಸಾದ್ ಅಂದ್ರೆ ಮಂತ್ರಿ ಅಂತ ನೆನಪಾಯ್ತರೇ ವರತೂ ಖಾತೆನೇ ಕಣ್ಣಿಗೆ ಕಾಣ್ತಿರಲಿಲ್ಲ, ಅದಕ್ಕೆ ಈ ಬದಲಾವಣೆ ನಡೀತಂತೆ ಸಾರ್."

"ನನ್ನಂತ ಹಿರಿಯನಿಗೆ ಅವಮಾನ ಆಗಿದೆ."

ಥೂತ್ತೇರಿ

\- ಯಾಹೂ

"ನಿಮ್ಮ ತರ ಹದಿನಾಲ್ಕು ಜನ ಕೈಬುಟ್ರು. ಅವ್ರುರೆಲ್ಲಾ ಮುಖ್ಯಮಂತ್ರಿ ಶೀರ್ಪಿಗೆ ಗೌರವ ಕೊಟ್ಟವರಲ್ಲವಾ ಸಾರ್."

"ನಾನು ಸಿದ್ದರಾಮಯ್ಯ ಒಂದೇ ಕುಟುಂಬದಂಗಿದ್ವೊ."

"ಒಂದೇ ಕುಟುಂಬದಲ್ಲಿ ಕೂಡ ಅಣ್ಣ ತಮ್ಮಂದಿರು ಮಾತಾಡಲ್ಲ, ಸದ್ದಿಲ್ಲದೆ ಜವಾಬ್ದಾರಿ ಹಸ್ತಾಂತರ ಆಯ್ತವೆ."

"ನನ್ನ ಆರೋಗ್ಯ ವಿಚಾರಿಸಿಲ್ಲ."

"ಸಿದ್ದರಾಮಯ್ಯ ಸ್ವತಃ ಮಗನ ಆರೋಗ್ಯದ ಬಗ್ಗೆ ಕೇರ್ ತಗಳ್ಳಿಲ್ಲ."

"ಒಂದು ಸೌಜನ್ಯದ ನಡವಳಿಕೇನೆ ಇಲ್ಲ."

"ಖಂಡಿತ ಇಲ್ಲ, ಸೌಜನ್ಯ ಅಂದ್ರೇನೂ ಅಂತರೆ."

"ಇವುನಿಂದ ಪಾರ್ಟಿ ಉಳಿಯಲ್ಲ, ಅದ್ಕೆ ನಾನು ಈ ತೀರ್ಮಾನ ತಗೊಂಡೆ."

"ಸಿದ್ದರಾಮಯ್ಯ ದೇವೇಗೌಡರಂಗೆ ಹಗಲೂ ರಾತ್ರಿ ಮಾಡಬಾರ್ದೋರಿಗೆಲ್ಲಾ ಫೋನ್ ಮಾಡಿ ಪಾರ್ಟಿ ಕಟ್ಟಿದ ಉದಾಹರಣೆನೇ ಇಲ್ಲ ಸಾರ್. ಆಕ್ಚುವಲಿ ಮೊಬೈಲ್ ಫೋನೇ ಅವುನನ್ನ ಡಿಸ್ಟರ್ಬ್ ಮಾಡೋ ಸಾಧನ."

"ನೀವೇಳಿದ್ದ ನಾನು ಒಪ್ಕೊತಿನಿ. ಆತ ಎಂದೂ ಫೋನ್ ಮಾಡಿದೊನಲ್ಲ."

"ಮಾಡಿದ್ರೂ ನಂಬರ್ ಗೊತ್ತಿಲ್ಲದೆ ಯಾರ್ಯಾರಿಗೊ ಹೋಯ್ತವಂತೆ ಸಾರ್. ಮೊನ್ನೆ ನೋಡಿ, ನಂಬರ್ ಮಿಸ್ ಹ್ವಡದು ಈಶ್ವರಪ್ಪನಿಗೆ ಹೋಯ್ತಂತೆ. ಅವ್ರುನು 'ಹಲೋ ಬ್ರದರ್. ನಿನ್ನ ಅಹಿಂದದಲ್ಲಿ ಆ ತಗದು ಬರಿ ಹಿಂದ. ಕಟ್ಟತಿನಿ. ಬೇಜಾರಾಗಬೇಡಿ' ಅಂದನಂತೆ. ಅದ್ಕೆ ಸಿದ್ದು 'ನೀನೊಬ್ಬ ಬ್ರೈನ್‌ಲೆಸ್' ಅಂದು ಫೋನ್ನೇ ಎಸ್ದು ಬುಟ್ನಂತೆ."

"ನೋಡಿ, ಫೋನ್ ಕೂಡ ಸರಿಯಾಗಿ ಮಾಡದೋನ ಜೊತೆ ಇರಕ್ಕಾಗದ?"

"ಇನ್ನೊಂದು ವಿಷಯ ಸಾರ್. ಸಿದ್ದರಾಮಯ್ಯನ ಬಗ್ಗೆ ನೀವು ತುಂಬ ಹಗುರವಾದ ಏಕವಚನ ಬಳುಸ್ತಿರಂತೆ. ಅದೇ ಮೇಲುಜಾತಿಯವರಾಗಿದ್ರೆ ಈ ತರ ಮಾತಾಡತಿದ್ರ ಅಂತ ಕೇಳ್ತವೆ ಸಿದ್ದರಾಮಯ್ಯನ ಕಡಿಯೋರು."

"ಈ ಏಕವಚನದಲ್ಲೇ ನೀವು ತಿಳಿಕೋಬೇಕು ನನ್ನ ಅವನ ಸಂಬಂಧ ಹೇಗಿತ್ತು ಅಂತ."

"ಸಾರಿ ಸಾರ್, ರಾಜೀನಾಮೆ ಅಂಗೀಕಾರ ಆಗಿ ಚುನಾವಣೆ ನಡೆದ್ರೆ ಗೆಲ್ತಿರಾ ಸಾರ್?"

"ಗೆದ್ದೇ ಗೆಲ್ತೀನಿ."

"ಆಗೇನಾಯ್ತಿರಿ ಸಾರ್?"

"ಅರೆ, ಇದೊಳ್ಳೆ ಪ್ರಶ್ನೆ. ಶಾಸಕನಾಗ್ತೀನಿ."

"ಅಷ್ಟೇ ಅಲ್ಲವ ಸಾರ್? ಅದರಿಂದ ಏನು ಕಡದೆತ್ತಾಕಿದಂಗಾಯ್ತು?"

"ನನಗೆ ಅವಮಾನ ಮಾಡಿದ ಸಿದ್ದರಾಮಯ್ಯನಿಗೆ ಬುದ್ಧಿ ಕಲಿಸಿದಂಗಾಯ್ತದೆ. ಮತ್ತೆ ವರುಣಾದಲ್ಲಿ ಆತನನ್ನ ಸೋಲುಸ್ತೀನಿ."

"ಆ ಕಾಯಿಲೆ ದೇಹಕ್ಕೆ ಯಾಕ್ ಸಾ ಅಷ್ಟು ಶ್ರಮ ಕೊಡ್ತೀರಿ. ನೀವು ದ್ವೇಷಕ್ಕೆ ಹೊರಟ್ರೆ ಇನ್ನು ಆರೋಗ್ಯ ಹಾಳು ಮಾಡಿಕೊಳ್ತಿರಿ."

"ನನ್ನ ಆರೋಗ್ಯ ತುಂಬ ಚೆನ್ನಾಗಿದೆ."

"ಅದು ನಿಮ್ಮ ಅಭಿಪ್ರಾಯ ಸಾರ್. ಕಳೆದ ಶತಮಾನದಿಂದ ಕಾಂಗ್ರೆಸ್ ನಿಮ್ಮನ್ನ ಚೆನ್ನಾಗಿ ನಡೆಸಿಕೊಂಡಿದೆ. ಈಗ ಯಾಕ್ ಸಾ ಬಿಟ್ಕೊಯ್ತಿರಿ?"

"ಬಿಟ್ಟು ಹೋಗೋದೆಲ್ಲಿ, ಭಾಳ ದಿನಾಗ್ಯದೆ. ಇನ್ನೇನಿದ್ರು ಚುನಾವಣೆ."

"ಯಾವ ಪಾರ್ಟಿಯಿಂದ ನಿಲ್ತಿರಿ ಸಾರ್?"

"ಯೋಚನೆ ಮಾಡಿಲ್ಲ."

"ಬಿಜೆಪಿಗೋಗಿ ಸಾರ್."

"ಯಾಕೆ?"

"ಅಲ್ಲಿ ಛಲವಾದಿ ಶಿವರಾಮ ನಿಮಗಾಗಿ ಕಾಯ್ತಾ ಅವ್ರುನಂತೆ. ಆತ ನೀವು ಹೋದ ಕೂಡ್ಲೆ ದಲಿತ ಮುಖ್ಯಮಂತ್ರಿ ಬೇಡಿಕೆ ಇಡ್ತಾನಂತೆ. ಅಲ್ಲಾದ್ರು ನಿಮಗೊಂದು ಚಾನ್ಸು ಸಿಗಬಹುದು."

"ಅದಕ್ಕಾಗ್ಲೆ ಈಶ್ವರಪ್ಪ ರೆಡಿಯಾಗಿದಾನಂತೆ."

"ಥೂತ್ತೇರಿ!!!" ■

ಸ್ಟೀಲ್ ಬ್ರಿಡ್ಜ್: ತಾಳೆಯಾಗದ ಲೆಕ್ಕಾಚಾರ!

ಈ ವರ್ಷದ ಜನವರಿಯಿಂದ ಸೆಪ್ಟೆಂಬರ್‌ವರೆಗೆ ಬೆಂಗಳೂರಿನಲ್ಲಿ ನಡೆದ ರಸ್ತೆ ಅಪಘಾತಗಳಲ್ಲಿ 612 ಮಂದಿ ಸಾವನ್ನಪ್ಪಿದ್ದಾರೆ. ಅಂದರೆ ಸರಾಸರಿ ಪ್ರತಿ ದಿನ ಇಬ್ಬರು ರಸ್ತೆ ಅಪಘಾತದಲ್ಲಿ ಮೃತ್ಯುಪಾಶಕ್ಕೆ ಬಲಿಯಾಗುತ್ತಲೇ ಬಂದಿದ್ದಾರೆ. ಹೀಗೆ ಸತ್ತವರಲ್ಲಿ ಬಹಳಷ್ಟು ಮಂದಿ ದ್ವಿಚಕ್ರ ವಾಹನ ಸವಾರರು. ನಿರ್ಲಕ್ಷಿತ ಚಾಲನೆ, ಟ್ರಾಫಿಕ್ ನಿಯಮಗಳ ಉಲ್ಲಂಘನೆ, ಅತಿಯಾದ ವೇಗದಂತಹ ಕಾರಣಗಳ ಜೊತೆಗೆ ಅವ್ಯವಸ್ಥೆಯಿಂದ ಕೂಡಿದ ರಸ್ತೆಗಳು ಸಹ ರಸ್ತೆ ಅಪಘಾತ ಸಾವಿನ ಬಹುಮುಖ್ಯ ಕಾರಣಗಳಲ್ಲಿ ಒಂದಾಗಿದೆ....

ಇದು ಸ್ವತಃ ಬೆಂಗಳೂರು ಟ್ರಾಫಿಕ್ ಪೊಲೀಸ್ ವೆಬ್‌ಸೈಟ್‌ನಲ್ಲಿ ದಾಖಲಾಗಿರುವ ಅಂಕಿಅಂಶಗಳ ಮಾಹಿತಿ. ಅಂದರೆ ಸಿಲಿಕಾನ್ ಸಿಟಿ ಖ್ಯಾತಿಯ ಬೆಂಗಳೂರಿನ ರಸ್ತೆಗಳು ಅದೆಷ್ಟು ಅಪಾಯಕಾರಿ ಸ್ಥಿತಿಯಲ್ಲಿವೆ ಎನ್ನುವುದು ಸಾಬೀತಾಗುತ್ತದೆ. ಗುಂಡಿ, ಅವೈಜ್ಞಾನಿಕ ದಿಣ್ಣೆಗಳಿಂದ ಬಲಿಗಾಗಿ ಬಾಯ್ತೆರೆದು ಕೂತಿರುವ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಹೆಚ್ಚೇನು ರಾಜಕೀಯ ಇಚ್ಛಾಶಕ್ತಿ ಆರ್ಥಿಕ ಸಂಪನ್ಮೂಲದ ಅಗತ್ಯವಿಲ್ಲ. ಆಳುವ ಸರ್ಕಾರಗಳಿಗೆ ಜನಜೀವನದ ಮಿಡಿತಕ್ಕೆ ಕಿವಿಯಾನಿಸುವ ಒಂದಷ್ಟು ಕಾಳಜಿ ಇದ್ದರೆ ಸಾಕು, ಆದರೆ ಅದಾಗುತ್ತಿಲ್ಲ.

ಅಟ್ ದಿ ಸೇಮ್ ಟೈಮ್,

ರಾಜ್ಯ ಸರ್ಕಾರ ಪ್ರತಿ ಕಿಲೋಮೀಟರ್‌ಗೆ ಬರೋಬ್ಬರಿ 267 ಕೋಟಿ ರೂಪಾಯಿಯಂತೆ ಖರ್ಚು ಮಾಡಿ 6.7 ಕಿಲೋಮೀಟರ್ ಉದ್ದದ 'ಅದ್ದೂರಿ' ರಸ್ತೆ ನಿರ್ಮಿಸಲು ಜನರ ವಿರೋಧವನ್ನೂ ಲೆಕ್ಕಿಸದೆ ತರಾತುರಿಯಲ್ಲಿದೆ!

ಇದು ರಾಜ್ಯ ಸರ್ಕಾರ 1781 ಕೋಟಿ ರೂಪಾಯಿ ವೆಚ್ಚದಲ್ಲಿ ಬಸವೇಶ್ವರ ಸರ್ಕಲ್‌ನಿಂದ ಮೇಖ್ರಿ ವೃತ್ತವನ್ನು ಹಾದು ಹೆಬ್ಬಾಳ ಫ್ಲೈಓವರ್‌ವರೆಗೆ ನಿರ್ಮಿಸಲು ಹೊರಟಿರುವ ಬೃಹತ್ ಸ್ಟೀಲ್ ಸೇತುವೆಯ ಹತ್ತಾರು ವೈಚಿತ್ರ್ಯಗಳಲ್ಲಿ ಒಂದು. ಸರ್ಕಾರ ಇಂತಹದ್ದೊಂದು ಯೋಜನೆಗೆ ಕೈಹಾಕಿದ ಕ್ಷಣದಿಂದಲೂ ಜನರಿಂದ ವೈಜ್ಞಾನಿಕ ಮತ್ತು ತರ್ಕಬದ್ಧ ವಿರೋಧಗಳು ಕೇಳಿಬರುತ್ತಲೇ ಇವೆ. ಇತ್ತೀಚಿನ ವರ್ಷಗಳಲ್ಲಿ ಇದ್ದುದರಲ್ಲಿ ಜನಪರ ಮತ್ತು ಪಾರದರ್ಶಕ ಸರ್ಕಾರ ಎಂತಲೇ ಗುರುತಿಸಿಕೊಂಡಿರುವ ಸಿದ್ದರಾಮಯ್ಯನವರ ಸರ್ಕಾರ ಈ ಸೇತುವೆಯ ವಿಚಾರದಲ್ಲಿ ಹಠಕ್ಕೆ ಬಿದ್ದವರಂತೆ ವರ್ತಿಸುತ್ತಿರುವುದು ಅನಗತ್ಯವಾಗಿ ಅನುಮಾನ ಹುಟ್ಟುಹಾಕುವಂತೆ ಮಾಡಿರುವುದು ಸುಳ್ಳಲ್ಲ.

ಯಾರಿಗೆ ಲಾಭ?

ನೋ ಡೌಟ್, ಹಿಗ್ಗುತ್ತಿರುವ ಬೆಂಗಳೂರಿನಲ್ಲಿ ಟ್ರಾಫಿಕ್‌ನದ್ದೇ ದೊಡ್ಡ ಸಮಸ್ಯೆ. ಆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದ್ದು ಸರ್ಕಾರದ ಹೊಣೆಯೂ ಹೌದು. ಹಾಗಂತ ಬೆರಳಿಗೆ ಅನುಕೂಲ ಮಾಡಿಕೊಡಲು ಹೋಗಿ ಕೈಯನ್ನೇ ಕತ್ತರಿಸಿಕೊಂಡರೆ ಅದನ್ನು ಜಾಣತನ ಅಂತ ಕರೆಯಲಿಕ್ಕಾಗುತ್ತಾ? ಸರ್ಕಾರ ಮಾಡಹೊರಟಿರುವುದೂ ಅದನ್ನೇ. ಸಿಲಿಕಾನ್ ಸಿಟಿ ಅಂತ ಕರೆಸಿಕೊಂಡರೂ ಬೆಂಗಳೂರು ಇನ್ನೂ ಸಂಪೂರ್ಣವಾಗಿ ಮೂಲಸೌಕರ್ಯಗಳ ಆಗರವಾಗಿಲ್ಲ. ಅಂತದ್ದರಲ್ಲಿ ಇಂಟರ್‌ನ್ಯಾಶನಲ್ ಏರ್‌ಪೋರ್ಟ್‌ಗೆ ಓಡಾಡುವ ಬೆರಳೆಣಿಕೆಯ ಹೈಕ್ಲಾಸ್ ಮಂದಿಯ ಸೌಕರ್ಯಕ್ಕೆಂದು ಸಾವಿರಾರು ಕೋಟಿ ಖರ್ಚು ಮಾಡಿ ಸ್ಟೀಲ್ ಬ್ರಿಡ್ಜ್ ನಿರ್ಮಿಸಲು ಮುಂದಾಗಿರೋದು ನಿಜಕ್ಕೂ ಜನಪರ ಸರ್ಕಾರದ ಲಕ್ಷಣವಲ್ಲ. ಸ್ವತಃ ಮುಖ್ಯಮಂತ್ರಿಗಳೇ ಈ ಸೇತುವೆಯ ನಿರ್ಮಾಣದಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಲುಪುವ ವಾಹನ ದಟ್ಟಣೆ ಕಡಿಮೆಯಾಗುತ್ತದೆ ಎಂದು ಹೇಳುವ ಮೂಲಕ ಸೇತುವೆಯ ಪ್ರಧಾನ ಫಲಾನುಭವಿಗಳ ಯಾರು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಹೋಗಲಿ, ಬೆಂಗಳೂರು ಹೃದಯಭಾಗದಿಂದ ಏರ್‌ಪೋರ್ಟ್‌ಗೆ ಆ ಪರಿ ವಾಹನಗಳು ಹರಿದಾಡುತ್ತವೆಯೇ ಅಂತ ಕೆದಕಲು ಹೋದರೆ ಅಲ್ಲೂ ಸೇತುವೆಯನ್ನು ಅಣಕಿಸುವಂತಹ ಅಂಕಿಅಂಶಗಳೇ ಲಭಿಸುತ್ತವೆ. ಸೇತುವೆ ನಿರ್ಮಾಣದ ಸಂಪೂರ್ಣ ಯೋಜನೆಯ ನೀಲನಕ್ಷೆಯನ್ನು ಒಳಗೊಂಡ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಇತ್ತೀಚೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪ್ರಕಟಿಸಿದೆ. ಆ ವರದಿಯಲ್ಲಿ ಸಮೀಕ್ಷೆಯೊಂದನ್ನು ನಡೆಸಲಾಗಿದೆ. ಸೇತುವೆ ನಿರ್ಮಾಣವಾಗುವ ಉದ್ದೇಶಿತ ಮಾರ್ಗದಲ್ಲಿ ಸದ್ಯ ದಿನಕ್ಕೆ ಎಷ್ಟು ವಾಹನಗಳು ಚಲಿಸುತ್ತಿವೆ ಮತ್ತು ಯಾವ ಗುರಿಯತ್ತ ಚಲಿಸುತ್ತಿವೆ ಅನ್ನೋದನ್ನು ಹೈಗ್ರೌಂಡ್ಸ್ ಸರ್ಕಲ್, ಮೇಖ್ರಿ ವೃತ್ತ ಮತ್ತು ಹೆಬ್ಬಾಳ ಫ್ಲೈಓವರ್ ಈ ಮೂರು ಪಾಯಿಂಟ್‌ಗಳಲ್ಲಿ 24 ಗಂಟೆಗಳ ಕಾಲ ದಾಖಲಿಸಿಕೊಳ್ಳಲಾಗಿತ್ತು. ಆ ಅಂಕಿಅಂಶಗಳ ಪ್ರಕಾರ ಹೈಗ್ರೌಂಡ್ಸ್ ವೃತ್ತದಲ್ಲಿ ಕದಲಾಡುತ್ತಿದ್ದ ವಾಹನಗಳಲ್ಲಿ ಶೇ.46ರಷ್ಟು ವಾಹನಗಳು ಕಚೇರಿ ಕೆಲಸದ ನಿಮಿತ್ತ ಪ್ರಯಾಣ ಬೆಳೆಸಿದ್ದರೆ, ಶೇ.24ರಷ್ಟು ವ್ಯವಹಾರದ ಸಲುವಾಗಿ, ಶೇ.3.72ರಷ್ಟು ಶಿಕ್ಷಣದ ಸಲುವಾಗಿ ಚಲಿಸುತ್ತಿದ್ದ ವಾಹನಗಳಾಗಿದ್ದವು. ಇಂಟರ್‌ನ್ಯಾಶನಲ್ ಏರ್‌ಪೋರ್ಟ್‌ಗೆ ಹೋಗುತ್ತಿದ್ದ ಅಥವಾ ಬರುತ್ತಿದ್ದ ವಾಹನಗಳ ಪ್ರಮಾಣ ಕೇವಲ ಶೇ 3.13 ರಷ್ಟು ಮಾತ್ರ. ಉಳಿದ ಎರಡು ಪಾಯಿಂಟ್‌ಗಳಲ್ಲಿ ನಡೆಸಿದ ಸಮೀಕ್ಷೆಯೂ



ಇದನ್ನೆ ಹೇಳುತ್ತದೆ. ಅಂದರೆ ಈ ಶೇ 3.13ರಷ್ಟು ವಾಹನಗಳ ಸಲುವಾಗಿ ಸಾಮಾನ್ಯ ಜನರ ತೆರಿಗೆ ಹಣದಿಂದ 1781 ಕೋಟಿ ರೂಪಾಯಿ ಖರ್ಚು ಮಾಡುವುದು ಎಷ್ಟು ಸಮಂಜಸ.

ಸೇತುವೆಯನ್ನು ನಿರ್ಮಿಸಿದ ನಂತರ ಕೇವಲ ಏರ್‌ಪೋರ್ಟ್‌ಗೆ ತೆರಳುವ ವಾಹನಗಳಲ್ಲದೆ ಆ ಮಾರ್ಗದ ಎಲ್ಲಾ ವಾಹನಗಳು ಅದನ್ನು ಬಳಸಬಹುದು ಎಂಬ ತರ್ಕವೂ ಇಲ್ಲಿ ತೇಲಿಬರಬಹುದು. ನೆನಪಿರಲಿ, ವಿಧಾನಸೌಧದ ಬೆನ್ನಿಗೆ ಅಂಟಿಕೊಂಡಂತಿರುವ ಬಸವೇಶ್ವರ ವೃತ್ತದಿಂದ ಮೇಲಕ್ಕೇಳುವ ಆ ಸೇತುವೆ ಮತ್ತೆ ನೆಲದತ್ತ ಮುಖ ಮಾಡುವುದೇ ಹೆಬ್ಬಾಳ ಫ್ಲೈಓವರ್ ದಾಟಿದ ನಂತರ. ಅಂದರೆ ಏರ್‌ಪೋರ್ಟ್ ವಾಹನಗಳು, ಹೆಚ್ಚೆಂದರೆ ಸಹಕಾರ ನಗರದಿಂದಾಚೆಗೆ ಚಿಕ್ಕಬಳ್ಳಾಪುರಗಳತ್ತ ಚಲಿಸುವ ವಾಹನಗಳು ಮಾತ್ರ ಅದನ್ನು ಬಳಸಬಹುದು. ಹೆಬ್ಬಾಳಕ್ಕಿಂತ ಮುಂಚಿತವಾಗಿಯೇ ತಿರುವು ತೆಗೆದುಕೊಳ್ಳುವ ವಾಹನಗಳಿಗೆ (ಸಮೀಕ್ಷೆಯಲ್ಲಿ ದಾಖಲಾದ ಬಹುಸಂಖ್ಯೆಯ ವಾಹನಗಳು ಈ ವ್ಯಾಪ್ತಿಯಲ್ಲಿ ಸಂಚರಿಸುವವೇ ಆಗಿವೆ) ಇದರಿಂದ ಉಪಯೋಗವಿಲ್ಲ, ಮತ್ತದೇ ರಸ್ತೆಯನ್ನೇ ಬಳಸಬೇಕಾಗುತ್ತದೆ. ಏರ್‌ಪೋರ್ಟ್‌ಗೆ ಹೋಗುವ ವಾಹನಗಳನ್ನು ಪ್ರತ್ಯೇಕಿಸಿ, ಸಂಚಾರವನ್ನು ಅವುಗಳಿಗೆ ಸರಾಗವಾಗಿಸುವ ಪ್ರಯತ್ನವನ್ನಷ್ಟೇ ಈ ಸೇತುವೆ ಮಾಡಿಕೊಡಲಿದೆ. ಅಂದಹಾಗೆ, 2016ರ ಆಗಸ್ಟ್ ಅಂಕಿಅಂಶದಂತೆ ಏರ್‌ಪೋರ್ಟ್‌ನಿಂದ ಪ್ರತಿದಿನ 61,000 ಜನ ಓಡಾಡುತ್ತಾರೆ. ಇದು ಬೃಹತ್ ಸಂಖ್ಯೆಯೇನೋ ಹೌದು, ಆದರೆ ಹೆಬ್ಬಾಳ ಫ್ಲೈಓವರ್‌ಗೂ ಮುಂಚೆಯೇ ತಮ್ಮ ಕಾರ್ಯನಿಮಿತ್ತ ಪ್ರಯಾಣಿಸುವವರ ಸಂಖ್ಯೆ 40 ಲಕ್ಷ ಮಂದಿ, ಆದೂ ಬಸ್‌ಗಳಲ್ಲಿ. ಈ ಬಸ್ ಗಳ್ಯಾವುವು ಬಸವೇಶ್ವರ ವೃತ್ತದಿಂದ ಹೆಬ್ಬಾಳದವರೆಗಿನ ನಿಲ್ದಾಣ ಗಳನ್ನು ಬೈಪಾಸ್ ಮಾಡಿಕೊಂಡು ಸೇತುವೆ ಮೇಲೆ ಹೋಗಲು ಸಾಧ್ಯವಿಲ್ಲ. ಹಾಗಿರುವಾಗ ಸಂಚರಿಸುವ ಒಟ್ಟು ಪ್ರಯಾಣಿಕರಲ್ಲಿ ಎಷ್ಟು ಮಂದಿಯ ಅನುಕೂಲಕ್ಕಾಗಿ ಈ ವೆಚ್ಚ!

ಮರಗಳ ಮಾರಣಹೋಮ

ಉಕ್ಕಿನ ಸೇತುವೆಯನ್ನು ವಿರೋಧಿಸುವುದಕ್ಕೆ ಇದೊಂದೇ ಕಾರಣವಲ್ಲ, ಇನ್ನೂ ಹತ್ತಾರು ತರ್ಕಬದ್ಧ ಕಾರಣಗಳಿವೆ. ಅವುಗಳಲ್ಲಿ ಪರಿಸರ ಪ್ರೇಮಿಗಳನ್ನು ಅತಿಯಾಗಿ ಕಾಡುತ್ತಿರುವುದು ಈ ಸೇತುವೆಗೋಸ್ಕರ ಬಲಿಯಾಗಲಿರುವ 812 ಮರಗಳ ಮಾರಣಹೋಮ. ಯೋಜನೆಯ ಡಿಪಿಆರ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವಂತೆ 812 ಮರಗಳನ್ನು ಕತ್ತರಿಸಬೇಕಾಗುತ್ತದೆ. ಅಲ್ಲದೇ 56 ಮರಗಳನ್ನು ಬೇರು ಸಮೇತ ಸ್ಥಳಾಂತರಿಸಬೇಕಾಗುತ್ತದೆ. ಒಂದುಕಾಲಕ್ಕೆ ಉದ್ಯಾನನಗರಿ, ಹಸಿರು ಸಿರಿ ಅಂತೆಲ್ಲ ಕರೆಸಿಕೊಂಡಿದ್ದ ಬೆಂಗಳೂರು ಇವತ್ತು ಅಭಿವೃದ್ಧಿಯ ಹೆಗ್ಗುಲಗಳಿಗೆ ಸಿಲುಕಿ ತನ್ನ ಸೌಂದರ್ಯವನ್ನೇ ಕಳೆದುಕೊಂಡಿದೆ. ಅಂತದ್ದರಲ್ಲಿ ವಿಶಾಲವಾದ 812 ಮರಗಳನ್ನು ನೆಲಕ್ಕುರುಳಿಸುವ ಉಕ್ಕಿನ ಸೇತುವೆಯ ಔಚಿತ್ಯವನ್ನು ಪ್ರಶ್ನಿಸುವುದು ಸಹಜವಾಗಿಯೇ ಇದೆ.

ತಾನು ಕತ್ತರಿಸುವ 812 ಮರಗಳ ಬದಲಿಗೆ ಬೇರೆ ಕಡೆ 60,000 ಸಸಿಗಳನ್ನು ನೆಟ್ಟು ಬೆಳೆಸುವುದಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ಪಷ್ಟೀಕರಣ ನೀಡಿದೆ. ಈಗ ಕತ್ತರಿಸಿ ಬಿಸಾಕುತ್ತಿರುವ ಮರಗಳು ಏನಿಲ್ಲವೆಂದರೂ 25-30 ವರ್ಷಗಳಿಂದ ಬೆಳೆದು ನಿಂತಿರುವವು. ಅವುಗಳಿಂದ ಲಭಿಸುತ್ತಿರುವ ಉಪಯೋಗ ಖಂಡಿತವಾಗಿಯೂ ತತ್‌ಕ್ಷಣಕ್ಕೆ ನೆಡುವ ಸಸಿಗಳಿಂದ ಸಿಗಲಾರದು. ಇನ್ನು ಬಿಡಿಎ ನೆಡುವ ಸಸಿಗಳೆಲ್ಲ ಬೆಳೆದು ಮರಗಳಾಗುತ್ತವೆ ಎನ್ನುವ ಯಾವ ಭರವಸೆಯೂ ಇಲ್ಲ.

ಇಲ್ಲಿ ಇನ್ನೂ ಒಂದು ಅಂಶವಿದೆ. ಸರ್ಕಾರದ ಒಂದು ಯೋಜನೆ ಅದರಲ್ಲೂ ಸಿವಿಲ್ ಕಾಮಗಾರಿ ಯೋಜನೆ ಅನುಷ್ಠಾನಕ್ಕೆ ಬರುತ್ತದೆಂದರೆ ಅದು ಕಾಂಟ್ರ್ಯಾಕ್ಟ್ ಕಂಪನಿಗಳ, ಕೆಲ ಬಲಾಢ್ಯ ಕಾಮಗಾರಿ ಮಾಫಿಯಾಗಳ ಅನುಕೂಲಕ್ಕೆ ತಕ್ಕಂತೆ ತನ್ನನ್ನು ರೂಪಿಸಿಕೊಂಡಿರುತ್ತದೆ ಅಂತಲೇ ಅರ್ಥ. ಬೆಂಗಳೂರಿನಲ್ಲಿ ಮರಗಳನ್ನು ಕತ್ತರಿಸುವ ಯಾವುದೇ ಕಾಮಗಾರಿ ಜಾರಿಗೆ ಬಂದರೂ ಅದರ ಹಿಂದೆ ಟಿಂಬರ್ ಮಾಫಿಯಾದ ಪ್ರಭಾವ ಕೆಲಸ ಮಾಡಿಯೇ ಇರುತ್ತದೆ. ಸಾವಿರಾರು ಕೋಟಿಯ, ಅನಾಮತ್ತು 700-800 ಮರಗಳನ್ನು ಧರೆಗುರುಳಿಸುವ ಈ ಕಾಮಗಾರಿಯ ಹಿಂದೆಯೂ ಟಿಂಬರ್ ಮಾಫಿಯಾದ ಕರಿನೆರಳು ಇರಲಿದೆ ಎಂಬುದು ಶತಃಸಿದ್ಧ ಈಗಾಗಲೇ ಅದಕ್ಕೆ ಪುರಾವೆಗಳಿವೆ. ಈ ಮಾಫಿಯಾ ಇದರಲ್ಲಿ ಭಾಗಿಯಾಯಿತೆಂದರೆ ಅಂತಿಮ ವರದಿಯಲ್ಲಿ ಉಲ್ಲೇಖಿಸಲ್ಪಟ್ಟ ಮರಗಳಿಗಿಂತ ಹೆಚ್ಚು ಮರಗಳು ನೆಲಕ್ಕುರುಳುವುದು ಗ್ಯಾರಂಟಿ. ಈಗಾಗಲೇ ಅಂತಹ ಅನುಮಾನ ಮೂಡಿಸುವ ಅಂಶಗಳು ಬೆಳಕಿಗೆ ಬಂದಿವೆ.

ಬಿಡಿಎ ಈ ಮೊದಲು ತನ್ನ ವರದಿಯಲ್ಲಿ 548 ಮರಗಳನ್ನು ಇದಕ್ಕೋಸ್ಕರ ಕತ್ತರಿಸಬೇಕು ಎಂದು ತಿಳಿಸಿತ್ತು. ಆದರೆ ಡಿಪಿಆರ್ ವರದಿಯಲ್ಲಿ ಆ ಸಂಖ್ಯೆ 812ಕ್ಕೆ ಏರಿಕೆಯಾಗಿದೆ. ಅಲ್ಲಿಗೆ ಕಾಮಗಾರಿ ಅನುಷ್ಠಾನಗೊಳ್ಳುವ ವೇಳೆಯಲ್ಲಿ ಈ ಸಂಖ್ಯೆ ಇನ್ನಷ್ಟೂ ಹೆಚ್ಚಾಗುವ ಸಂಭವವನ್ನು ತಳ್ಳಿ ಹಾಕುವಂತಿಲ್ಲ. ಅಲ್ಲದೇ ಬಿಡಿಎ ತಾನು ಕತ್ತರಿಸುತ್ತಿರುವುದು ಕೇವಲ ಹೂವು ಬಿಡುವಂತಹ, ವಾತಾವರಣಕ್ಕೆ ಹೆಚ್ಚೇನೂ ಪ್ರಯೋಜನಕಾರಿಯಲ್ಲದ ಮರಗಳನ್ನು ಅಂತಲೇ ಹೇಳಿಕೊಂಡಿದೆ. ಆದರೆ ಡಿಪಿಆರ್ ವರದಿಯನ್ನು ಕೂಲಂಕಷವಾಗಿ ಗಮನಿಸಿದರೆ ಇವುಗಳಲ್ಲಿ ಮಹಾಗನಿ, 44 ರೈನ್ ಟ್ರೀ, 19 ಸಿಲ್ವರ್ ಓಕ್, 14 ಹೊಂಗೆ ಮರ, 14 ಮಾವಿನ ಮರ, 11 ಚಂಪಕ ಮರಗಳೂ ಸೇರಿವೆ. ಇವುಗಳ ನಾಟಾ ಭಾರೀ ಬೆಲೆಬಾಳುವಂತವು ಎಂಬುದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ. ಇವೆಲ್ಲ ಯೋಜನೆಯನ್ನು ಮತ್ತಷ್ಟು ಅನುಮಾನದಿಂದ ನೋಡುವಂತೆ ಮಾಡುತ್ತವೆ.

ಪಬ್ಲಿಕ್ ಕನ್ಸಲ್ಟೇಷನ್ ಎಂಬ ಡ್ರಾಮಾ

ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ ಪ್ರಕಾರ ಸರ್ಕಾರ ಇಂತಹ ಯಾವುದೇ ಮಹತ್ವದ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಾಗ ಅದನ್ನು ಸ್ಥಳೀಯ ಜನರ ಅವಗಾಹನೆಗೆ ತರಬೇಕಾಗುತ್ತದೆ. ಜನರಿಂದ ಸಲಹೆಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಈ ಸಲಹೆಗ[ಳು] ಮತ್ತು ಆಕ್ಷೇಪಣೆಗಳಿಗೆ ಯೋಜನೆಯನ್ನು ನಿಲ್ಲಿಸುವ ಅಥ[ವಾ] ಬದಲಾಯಿಸಲೇಬೇಕೆನ್ನುವ ಸಾಂವಿಧಾನಿಕ ಹಕ್ಕು ... ವಾದರೂ ಅಂತಹ ಆಕ್ಷೇಪಣೆಗಳಿಗೆ ಸೂಕ್ತ ಸಮಜಾಯಿ[ಷಿ] ನೀಡುವುದು ಆಯಾ ಪ್ರಾಧಿಕಾರದ ಕರ್ತವ್ಯವಾಗಿರುತ್ತ[ದೆ].


ಸದರಿ ಸ್ಟೀಲ್ ಬ್ರಿಡ್ಜ್ ಯೋಜನೆ 2010ರಲ್ಲೇ ಪ್ರಸ್[ತಾಪ]ವಾಗಿದ್ದರೂ ಅದು ಅಧಿಕೃತವಾಗಿ ಘೋಷಣೆಯಾದ[ದ್ದು] 2014ರ ಫೆಬ್ರವರಿ 14ರಂದು ಮಂಡನೆಯಾ[ದ] ಸಿದ್ದರಾಮಯ್ಯನವರ ಬಜೆಟ್‌ನಲ್ಲಿ. ಆದಾದ ಮೇಲೆ ಮಾ[ರ್ಚ್] 2014ರಲ್ಲಿ ಈ ಯೋಜನೆಗೆ ವಿಸ್ತೃತ ಯೋಜನಾ ವ[ರದಿ] (ಡಿಪಿಆರ್) ಸಿದ್ಧವಾಗಿತ್ತಾದರೂ ಅದು ಸಾರ್ವಜನಿಕ[ರಿಗೆ] ಲಭ್ಯವಿರಲಿಲ್ಲ. ಬಳ್ಳಾರಿ ರಸ್ತೆಯ ಅಗಲೀಕರಣಕ್ಕೆ (ಈ ಉಕ್ಕಿನ ಸೇತುವೆ ನಿರ್ಮಿಸಲು ಉದ್ದೇಶಿಸಿರುವ ಮಾರ್ಗ) ಅರಮನೆ ಮೈದಾನದಿಂದ ಜಾಗೆಯನ್ನು ಸ್ವಾಧೀನಪಡಿಸಿ ಕೊಳ್ಳುವ ಕುರಿತಂತೆ ವ್ಯಾಜ್ಯ ಸುಪ್ರೀಂಕೋರ್ಟ್ ಅಂಗಳದ[ಲ್ಲಿ] ಇದ್ದುದರಿಂದ ಈ ಯೋಜನೆ ಮುನ್ನೆಲೆಗೆ ಬರ[ಲು] ಸಾಧ್ಯವಾಗಿರಲಿಲ್ಲ. 2014ರ ನವೆಂಬರ್‌ನಲ್ಲಿ ನ್ಯಾಯಾಲ[ಯ] ತನ್ನ ತೀರ್ಪು ಪ್ರಕಟಿಸಿ ಮೂಲಸೌಕರ್ಯ ಕಾಯ[ಕ್ಕೆ] ಅರಮನೆ ಮೈದಾನದ ಜಮೀನು ಸ್ವಾಧೀನಪಡಿಸಿಕೊಳ್ಳಬ[ಹು]ದೆಂಬ ತೀರ್ಪು ನೀಡಿತ್ತು. ಆಗ ಬಿಡಿಎ ಅಧಿಕೃತವಾ[ಗಿ] ಯೋಜನೆಯನ್ನು ಘೋಷಿಸಿತಾದರೂ 2015ರ[ಲ್ಲಿ] ಎದುರಾಗಲಿದ್ದ ಬಿಬಿಎಂಪಿ ಚುನಾವಣೆಯ ಕಾರಣಕ್ಕೆ ಸಾ[ರ್ವಜನಿಕರಿಗೆ] ಇದನ್ನು ಹಾಗೇ ತಡೆಹಿಡಿದಿತ್ತು. ಇಷ್ಟಾದರು ಯೋಜನೆ[ಯ] ಡಿಪಿಆರ್ ಮಾಹಿತಿಯನ್ನು ಸಾರ್ವಜನಿಕರಿಗೆ ಲಭ್ಯಗೊಳಿಸು[ವ] ಕಾರ್ಯಕ್ಕೆ ಬಿಡಿಎ ಮುಂದಾಗಲೇ ಇಲ್ಲ.

2015 ಸೆಪ್ಟೆಂಬರ್‌ನಲ್ಲಿ ಜಾಗತಿಕ ಟೆಂಡರ್ ಕರೆ[ದು] ಅತಿ ಕಡಿಮೆ ಬಿಡ್ ಮಾಡಿದ ಎಲ್ ಅಂಡ್ ಟಿ ಮ[ತ್ತು] ನವಯುಗ ಇಂಜಿನಿಯರಿಂಗ್ ಕಾರ್ಪೋರೇಷನ್ ಸಂಸ್ಥೆಗಳ[ಿಗೆ] ಉಕ್ಕಿನ ಸೇತುವೆ ನಿರ್ಮಾಣದ ಗುತ್ತಿಗೆ ನೀಡಿದ ನಂತ[ರ] ಯೋಜನೆ ಒಂಚೂರು ಕದಲಾಡಲು ಶುರು ಮಾಡಿತ[ು]. ಆಗಲೂ ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸು[ವ] ಕೆಲಸಕ್ಕೆ, ಸರ್ಕಾರ ಮುಂದಾಗಲೇ ಇಲ್ಲ. ಇದ[ು] ಪರಿಸರವಾದಿಗಳಿಗೆ ತಿಳಿದು ಸಂಘ, ಸಂಸ್ಥೆಗಳ ಮೂಲ[ಕ] ವಿರೋಧ ವ್ಯಕ್ತವಾದಾಗ 2016ರ ಜುಲೈನ[ಲ್ಲಿ] ಯೋಜನೆಯನ್ನು ತಡೆಹಿಡಿದು ಸಾರ್ವಜನಿಕರ ಸಲ[ಹೆ] ಮತ್ತು ಆಕ್ಷೇಪಣೆಗಳಿಗೆ ಬಿಡಿಎ ವೆಬ್‌ಸೈಟ್‌ನಲ್ಲಿ ಅವಕಾ[ಶ] ಮಾಡಿಕೊಟ್ಟಿತು. ಅದೂ ಹೇಗೆ, ಯೋಜನೆಯ ಸಂಪೂರ್ಣ ರೂಪುರೇಷೆಯನ್ನು ಒಳಗೊಂಡ ಡಿಪಿಆರ್ ಅನ್[ನು] ಸಾರ್ವಜನಿಕರಿಗೆ ಮುಕ್ತವಾಗಿಸದೆ ಕ್ವೆಶ್ಚನೈರ್ ಪ್ರೊಫಾರ್ಮದ[ಲ್ಲಿ] ಸಿದ್ಧ ಪ್ರಶ್ನೆಗಳಿಗೆ ಉತ್ತರ ತುಂಬುವ ಒಂದು ಬೇಕಾಬಿ[ಟ್ಟಿ] ವ್ಯವಸ್ಥೆಯಾಗಿತ್ತು.

1961ರ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂ[ಗ್] ಆಕ್ಟ್‌ನ ಸೆಕ್ಷನ್ 29-34ರ ಪ್ರಕಾರ ಸಿವಿಲ್ ಕಾಮಗಾರಿ[ಯ] ಯೋಜನೆಯ ಕುರಿತು ಜನರ ಅಭಿಪ್ರಾಯಗಳನ್[ನು] ಯೋಜನೆಯನ್ನು ರೂಪಿಸುವಾಗ, ಅಭಿವೃದ್ಧಿ ಪಡಿಸುವಾ[ಗ] ಮತ್ತು ಅಂತಿಮ ವರದಿ ಸಿದ್ಧಪಡಿಸುವ ಹಂತದ[ಲ್ಲಿ] ಪಡೆದುಕೊಳ್ಳಬೇಕು. ಆದರೆ ಉಕ್ಕಿನ ಸೇತುವೆ ನಿರ್ಮಾ[ಣದ] ವಿಚಾರದಲ್ಲಿ ಈ ನಿಯಮವನ್ನು ಉಲ್ಲಂಘಿಸಿ ಅಂತಿ[ಮ] ವರದಿ ತಯಾರಿಸಿ, ಅಂಗೀಕರಿಸಿದ ಮೇಲೂ ಜನ[ರ] ಅಭಿಪ್ರಾಯ ಸಂಗ್ರಹಿಸಲು ಸರ್ಕಾರ ಮುಂದಾಗಿಲ್ಲ. ಜನರಿಂ[ದ] ವಿರೋಧ ವ್ಯಕ್ತವಾದ ನಂತರ ನೆಪಕ್ಕೆಂಬಂತೆ ಒಂದ[ು] ಪ್ರೊಫಾರ್ಮ ಅಪ್‌ಲೋಡ್ ಮಾಡಲಾಗಿತ್ತು.

ಜನ ಒಂದು ಯೋಜನೆಗೆ ತಮ್ಮ ಸಲಹೆ ಆಕ್ಷೇಪಣೆಗಳನ್ನು ಯಾವಾಗ ಸಲ್ಲಿಸಬಹುದೆಂದರೆ ಯೋಜನೆಯ ಸಂಪೂರ್ಣ ರೂಪುರೇಷೆಯನ್ನು ಕಡೇಪ[ಕ್ಷ] ಅಂದಾಜು ರೂಪದಲ್ಲಾದರೂ ಬಹಿರಂಗಗೊಳಿಸಿದಾಗ. ... ಜನರಿಂದ ಆಕ್ಷೇಪಣೆ ಕೇಳುವ ಮೊದಲೇ ಡಿಪಿಆ[ರ್] ಸಿದ್ಧವಾಗಿದ್ದರು ಅದನ್ನು ಸಾರ್ವಜನಿಕರಿಗೆ ಮುಕ್ತವಾಗಿಸ[ದೆ] ಜನರ ಅಭಿಪ್ರಾಯಗಳನ್ನು ಅಪೇಕ್ಷಿಸಲಾಗಿತ್ತು. ಯೋಜನೆ[ಯ] ಖರ್ಚು ಎಷ್ಟು, ವಿನ್ಯಾಸ ಹೇಗೆ, ಕಾಸ್ಟ್ ವರ್ಕೌಟ್ ಹೇಗಿ[ದೆ] ಅನಾನುಕೂಲಗಳೇನು, ಅವುಗಳನ್ನು ನಿಭಾಯಿಸುವ ಪರಿಹಾ[ರ] ಕ್ರಮಗಳೇನು ಎಂಬೆಲ್ಲ ಮಾಹಿತಿಯೇ ಇಲ್ಲದೆ ಜನ ತಾನ[ೆ] ಹೇಗೆ ತಮ್ಮ ಸಲಹೆ ಅಥವಾ ಆಕ್ಷೇಪಣೆ ಸಲ್ಲಿಸಿಯಾರು.

'ನಮ್ಮ ಬೆಂಗಳೂರು ಫೌಂಡೇಷನ್' ಎಂಬ ಎನ್‌ಜಿ[ಓ] ಸಂಸ್ಥೆಯೊಂದು ಯೋಜನೆಯ ಮಾಹಿತಿ ನೀಡಿ ಅ[ಂತ] ಆರ್‌ಟಿಐ ಸಲ್ಲಿಸಿದರೂ ಬಿಡಿಎ ಅದನ್ನು ನಿರಾಕರಿಸಿತು. ಆದಾಗ್ಯೂ ಬಿಡಿಎ ತಾವು ಆಹ್ವಾನಿಸಿದ ಆಕ್ಷೇಪಣೆಗೆ 29[9] ಇಮೇಲ್‌ಗಳು ಬಂದಿದ್ದು ಅವುಗಳಲ್ಲಿ 73%ರಷ್ಟು ಇಮೇಲ್‌ಗಳು ಅಂದರೆ ಸುಮಾರು 218 ಇಮೇಲ್‌ಗಳ[ು] ಸೇತುವೆ ನಿರ್ಮಾಣವನ್ನು ಸಮರ್ಥಿಸಿವೆ, ಇನ್ನುಳಿದವ[ು] ಸಹ ಕೆಲವೊಂದು ಸಣ್ಣಪುಟ್ಟ ಬದಲಾವಣೆಗಳನ್ನಷ್ಟೇ ಉಲ್ಲೇಖಿಸಿವೆ, ಹಾಗಾಗಿ ಯೋಜನೆಗೆ ಜನರಿಂದ ಯಾ[ವುದೇ] ಆಕ್ಷೇಪಣೆಯೂ ಇಲ್ಲ ಅನ್ನೋ ಷರಾ ಬರೆದುಕೊಂಡ[ು] ಕ್ಲೀನ್‌ಚಿಟ್ ನೀಡಿಕೊಂಡಿದೆ. ಮೊನ್ನೆ ಮುಖ್ಯಮಂ[ತ್ರಿ] ಸಿದ್ದರಾಮಯ್ಯನವರು ಸಹ ಯೋಜನೆಯನ್[ನು] ಸಮರ್ಥಿಸಿಕೊಳ್ಳುವ ಭರಾಟೆಯಲ್ಲಿ ಬಿಡಿಎ ಅಧಿಕಾರಿಗಳ[ು] ನೀಡಿದ ಇದೇ 299 ಇಮೇಲ್‌ಗಳ ಲೆಕ್ಕವನ್ನ[ೇ]



...ಬಿಸಿದ್ದಾರೆ. ಅಂತಹ ಹೇಳಿಕೆ ನೀಡುವ ಒಂದು ...ಂದಷ್ಟೇ ನಮ್ಮ ಬೆಂಗಳೂರು ಫೌಂಡೇಷನ್, ಆವಾಜ್ ...ೇಷನ್, ಸಿಟಿಜನ್ ಆಕ್ಷನ್ ಫೋರಮ್, ಸಿವಿಕ್ ...ಫಿ, ಸಿಟಿಜನ್ಸ್ ಎಗೇನ್ಸ್ಟ್ ಸ್ಟೀಲ್ ಫ್ಲೈಓವರ್‌ನಂತಹ ... ಸಂಘಟನೆಗಳ ಐದಾರು ಸಾವಿರ ಮಂದಿ ಬಸವೇಶ್ವರ ...ದ ಮೇಖ್ರಿ ವೃತ್ತದವರೆಗೆ ಅಜಮಾಸು 4-5 ...ಮೀಟರ್ ಉದ್ದದ ಮಾನವ ಸರಪಳಿ ನಿರ್ಮಿಸಿ ಸೇತುವೆ ಬೇಡ ಅಂತ ಪ್ರತಿಭಟಿಸಿದ್ದು ಆ 299 ...ಲ್‌ಗಳ ಮುಂದೆ ನಗಣ್ಯ ಅನ್ನಿಸಿದ್ದು ನಿಜಕ್ಕೂ ...ರ್ಯಾಸ!

ಪರ್ಯಾಯ ಮಾರ್ಗಗಳಿವೆ

...ರ್ಕಾರ ಹೇಳುತ್ತಿರುವಂತೆ ಏಳೆಂಟು ನೂರು ಮರ, ... ಸ್ಮಾರಕಗಳ ಸಮೇತ ನಗರದ ಸೌಂದರ್ಯವನ್ನೇ ...ಗೆಡವಲಿರುವ ಉಕ್ಕಿನ ಸೇತುವೆ ನಿಜಕ್ಕೂ ...ರ್ಯವೇ? ಅದಕ್ಕೆ ಪರ್ಯಾಯವಾಗಿ ಬೇರೆ ...ಗಳಿಲ್ಲವೇ? ಅನ್ನೋ ಪ್ರಶ್ನೆಗಳನ್ನು ಸರ್ಕಾರ ...ಂಡಿದ್ದೇ ಆಗಿದ್ದಲ್ಲಿ ಅದಕ್ಕೆ ಹಲವು ಅವಕಾಶಗಳು ...ಕೊಳ್ಳುತ್ತಿದ್ದವು. ದುಬಾರಿ ವೆಚ್ಚದಲ್ಲಿ ಅಷ್ಟು ಸುದೀರ್ಘ ...ದ ಸೇತುವೆಯನ್ನು ನಿರ್ಮಿಸುವ ಬದಲು ಈ ...ದಲ್ಲಿ ಬರುವ ವಿಂಡ್ಸರ್ ಮ್ಯಾನರ್, ಕಾವೇರಿ ಜಂಕ್ಷನ್, ... ಸರ್ಕಲ್, ಸಿಬಿಐ ಜಂಕ್ಷನ್ ಮತ್ತು ಹೆಬ್ಬಾಳ ...ರ್ ಬಳಿ ಐದು ಸಣ್ಣ ಹಾಗೂ ಪರಿಣಾಮಕಾರಿ ...ರ್‌ಗಳನ್ನು ನಿರ್ಮಿಸಿದ್ದರೆ ದಟ್ಟಣೆಯನ್ನು ಆರಾಮವಾಗಿ ...ಮಿಸಬಹುದು. ಅಲ್ಲದೆ ಈ ಪ್ರಮಾಣದಲ್ಲಿ ಮರಗಳನ್ನು ...ವುದೂ ತಪ್ಪುತ್ತದೆ. ಇದಕ್ಕೆ ಹೆಚ್ಚೆಂದರೆ 80 ಕೋಟಿ ... ಆದರೂ ಸಾಕಾಗುತ್ತದೆ. ಜೊತೆಗೆ ಹೆಬ್ಬಾಳಕ್ಕಿಂತ ...ತವಾಗಿ ನಗರದೊಳಕ್ಕೆ ತಿರುವು ತೆಗೆದುಕೊಳ್ಳುವ ...ಗಳೂ ಫ್ಲೈಓವರ್‌ಗಳ ಲಾಭ ಪಡೆಯುತ್ತವೆ.

...ನ್ನು, ಈಗಾಗಲೇ ನಗರದಲ್ಲಿ ಮೆಟ್ರೊ ಸಂಚಾರ ...ರ್ಗತವಿದ್ದು ಅದನ್ನು ದೇವನಹಳ್ಳಿಯವರೆಗೆ ...ಸಿದರೂ ಇಷ್ಟು ತ್ರಾಸಿಲ್ಲದೆ ಸಂಚಾರ ದಟ್ಟಣೆಯನ್ನು ...ಮಿಸಬಹುದು. ಅಚ್ಚರಿಯ ಸಂಗತಿಯೆಂದರೆ ಇದೇ ...ಬರ್‌ನಲ್ಲಿ ಬೆಂಗಳೂರು ಮೆಟ್ರೊ ರೈಲ್ವೆ ...ರ್ಪೊರೇಷನ್ ನಿಗಮವು ನಗರದ ವಿವಿಧೆಡೆಗಳಿಂದ ...ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ...ಪರ್ಯಾಯ ಸಾಧ್ಯತಾ ಮಾರ್ಗಗಳ ಬಗ್ಗೆ ...ಯೊಂದನ್ನು ಸಲ್ಲಿಸಿತ್ತು. ಅವುಗಳಲ್ಲಿ ಮೊದಲನೆಯದ್ದೇ ... ರಸ್ತೆಯಿಂದ ಹೆಬ್ಬಾಳ, ಯಲಹಂಕದ ಮೂಲಕ ...ಪೋರ್ಟ್‌ಗೆ ಸಂಪರ್ಕಿಸುವ ಮಾರ್ಗ. ಅಂದರೆ ಈಗ ...ದವೆಬ್ಬಿಸಿರುವ ಸ್ಟೀಲ್ ಬ್ರಿಡ್ಜ್ ಮಾರ್ಗದಲ್ಲೇ ಸಾಗುವ, ...ಕ್ಕೆ ಮುಂದುವರೆದು ಎಂಜಿ ರಸ್ತೆಯವರೆಗೆ ಸಂಪರ್ಕ ...ವ ಮಾರ್ಗ. ಅದಕ್ಕೆ ಅಸ್ತು ಎಂದಿದ್ದರೆ ಈ ಸ್ಟೀಲ್ ...ದ ಅಗತ್ಯವೇ ಇರುತ್ತಿರಲಿಲ್ಲ. ಖರ್ಚಿನಲ್ಲಿ ಅಜಮಾಸು ...ಷ್ಟೇ ಬಜೆಟ್ ಕೇಳುತ್ತಿದ್ದರು, ಒಂಬತ್ತು ಬೇರೆಬೇರೆ ...ಳಿಂದ ಏರ್‌ಪೋರ್ಟ್‌ಗೆ ಸಂಪರ್ಕ ಸಾಧ್ಯವಾಗುತ್ತಿತ್ತು. ...ದರೆ ಯಾವಾಗ ಸರ್ಕಾರ ಸ್ಟೀಲ್ ಬ್ರಿಡ್ಜ್‌ಗೆ ಹಠ ...ಡಿ ಕೂತಿತೊ, ಆಗ ಮೆಟ್ರೊ ರೈಲ್ವೆ ನಿಗಮದ ...ಶಕ ಪ್ರದೀಪ್ ಸಿಂಗ್ ಖರೋಲರವರು ಉಕ್ಕಿನ ...ನೆಗೆ ಅನುಕೂಲ ಮಾಡಿಕೊಡಲು 'ಎಂಜಿ ರಸ್ತೆಯಿಂದ ...ಗೌಡ ಏರ್‌ಪೋರ್ಟ್‌ವರೆಗೆ ಮೆಟ್ರೊ ಮಾರ್ಗ ...ಸುವ ಯೋಜನೆ ಕಾರ್ಯಸಾಧುವಲ್ಲ, ತಾಂತ್ರಿಕವಾಗಿ ... ತೊಂದರೆಗಳಿವೆ' ಅನ್ನೋ ವರದಿ ಕೊಟ್ಟು ...ಜನೆಯನ್ನೇ ಕೈಬಿಟ್ಟಿದ್ದಾರೆ.

...ಲವೇ ಕೆಲವು ಐಷಾರಾಮಿ ಮಂದಿಗೆ ಅನುಕೂಲ ...ಕೊಡಲು, ಅಷ್ಟೆಲ್ಲ ಖರ್ಚು ಮಾಡಿ, ನೂರಾರು ...ಳ ಮಾರಣಹೋಮ ನಡೆಸಿ, ಜನರ ಒಕ್ಕೊರಲಿನ ...ೇಧವನ್ನೂ ಧಿಕ್ಕರಿಸಿ ಸ್ಟೀಲ್ ಸೇತುವೆ ...ಸಲೇಬೇಕೆನ್ನುವ ಸರ್ಕಾರದ ಹಠದ ಹಿಂದಿನ ಹಕೀಕತ್ತು ...ಬಹುದೆನ್ನುವುದೇ ರಹಸ್ಯ. ಅಂದಹಾಗೆ, 1761 ... ರೂಪಾಯಿ ಖರ್ಚು ಮಾಡಿ ನಿರ್ಮಿಸುವ ಈ ... ಸೇತುವೆ ವಿಮಾನ ಪಯಣಿಗರನ್ನು ಹೆಚ್ಚೆಂದರೆ ...ದ ಹತ್ತು ನಿಮಿಷ ಬೇಗ ಏರ್‌ಪೋರ್ಟ್ ...ಸಬಲ್ಲದು! ಅದರಲ್ಲಿ ಅರ್ಧದಷ್ಟು ಹಣ ಖರ್ಚು ... ಸಮೂಹ ಸಾರಿಗೆಯನ್ನು ಮತ್ತಷ್ಟು ಹೆಚ್ಚಿಸಿ, ರಸ್ತೆಗಳನ್ನು ... ಮಾಡಿಸಿದರೆ ದಟ್ಟಣೆಯೂ ಕಡಿಮೆಯಾಗುತ್ತೆ ...ತಗಳೂ ತಪ್ಪುತ್ತವೆ. ನೆನಪಿರಲಿ, ಸದ್ಯ ಬೆಂಗಳೂರಿನಲ್ಲಿ ... ಬಿಎಂಟಿಸಿ ಬಸ್‌ಗಳು ಸಂಚರಿಸುತ್ತಿವೆ. ಇವಿಷ್ಟೂ ...ಗಳನ್ನು ಏಕಕಾಲಕ್ಕೆ ಬೆಂಗಳೂರಿನ ರಸ್ತೆಗಿಳಿಸಿದರೆ ಇವು ... ಟ್ರಾಫಿಕ್‌ನಲ್ಲಿ ಆಕ್ರಮಿಸುವ ಪಾಲು ಕೇವಲ 3% ... ಇನ್ನುಳಿದಂತೆ ಕಾರುಗಳು, ಬೈಕ್‌ಗಳೇ ಹೆಚ್ಚಿನ ...ದಲ್ಲಿ ರಸ್ತೆ ಆಕ್ರಮಿಸುತ್ತವೆ. ಸಾಕಷ್ಟು ಸಂಖ್ಯೆಯಲ್ಲಿ ...ಗಳು ಇಲ್ಲದಿರುವುದು ಜನ ತಮ್ಮ ಸ್ವಂತ ಸಾರಿಗೆ ...ಸಲು ಕಾರಣವಾಗಿದೆ. ಅಂದಾಜಿನ ಪ್ರಕಾರ ಈಗಿರುವ ...ಗೆ ಇನ್ನೂ 3000 ಬಸ್‌ಗಳನ್ನು ಸೇರ್ಪಡೆ ...ದರೆ ಬೆಂಗಳೂರಿನ ಜನರನ್ನು ಅವರ ಸ್ವಂತ ...ಗಳಿಗಿಂತ ಆರಾಮವಾಗಿ, ಸುಖವಾಗಿ ಸಾಗಿಸಬಹುದು. ... ಸೇತುವೆ ಬಜೆಟ್‌ನಲ್ಲಿ ಅಂತಹ ಮೂರು ಸಾವಿರ ...ಗಳನ್ನು ಆರಾಮವಾಗಿ ಖರೀದಿಸಬಹುದು. ಜೊತೆಗೆ ... ಅಂತೂ ಇದ್ದೇ ಇರುತ್ತೆ.

■ ಗಿರೀಶ್ ತಾಳಿಕಟ್ಟೆ

ರುದ್ರೇಶ್ ಕೊಂದದ್ದು ಯಾರು?

ಹಿಂಡಿದ ಖಡ್ಗ ಕೊನೆಗೆ ಅವನನ್ನೇ ತಿಂದು ಹಾಕಿತೆ? ಸಂಘ ಪರಿವಾರದ ರಕ್ತ ರಾಜಕಾರಣಕ್ಕೆ ಬಲಿಯಾದ ಅದೆಷ್ಟೋ ಅಮಾಯಕರ ಪೈಕಿ ಈತನೂ ಒಬ್ಬನೆ? ಅಥವಾ ಮುಂದೊಮ್ಮೆ ಶಿವಾಜಿನಗರಕ್ಕೆ ತಾನೇ ಅಧಿಪತಿಯಾಗಲು ಹೋಗಿ ಯಡವಟ್ಟು ಮಾಡಿಕೊಂಡನೆ?

ಯಾವುದಕ್ಕೂ ನಿಖರ ಸುಳಿವು ಸಿಗುತ್ತಿಲ್ಲ. ರುದ್ರೇಶ್ ಶಿವಾಜಿನಗರಕ್ಕೆ ಇವತ್ತಲ್ಲ ನಾಳೆ ಎಮ್ಮೆಲ್ಲೆಯಾಗಲೇಬೇಕೆಂಬ ಪಣತೊಟ್ಟ ಶತ ಒರಟ, ಇನ್ನೂ 37ರ ಹರೆಯ. ಬಿಜೆಪಿ ನಾಯಕ ಕಟ್ಟಾ ನಾಯ್ಡುವಿನ ಬಲಗೈ ಬಂಟ. ಬಿಜೆಪಿಯ ಮತ್ತೊಬ್ಬ ಅಧಿಪತಿ ಆರ್. ಅಶೋಕರ ನಂಬಿಕಸ್ತ ಅನುಯಾಯಿ. ಶಿವಾಜಿನಗರ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಕಾರ್ಯದರ್ಶಿ. ಎಲ್ಲಕ್ಕೂ ಮಿಗಿಲಾಗಿ ಹುಟ್ಟಾ ಆರ್‌ಎಸ್‌ಎಸ್ ಕಟ್ಟಾಳು ಮತ್ತು ಅದೇ ಕಾರಣಕ್ಕೆ ಪಕ್ಕಾ ಮುಸ್ಲಿಂ ದ್ವೇಷಿ. ಆತ ಸಂಘ ಪರಿವಾರದ ಪಿತ್ಥ ನೆತ್ತಿಗೇರಿಸಿಕೊಂಡಿದ್ದರ ಅತಿರೇಕ ಮತ್ತು ಕೋಮು ದ್ವೇಷದ ಬೆಂಕಿಯನ್ನೇ ಉಸಿರಾಡುತ್ತಿದ್ದ ಪರಿಗೆ ಇವತ್ತಲ್ಲ ನಾಳೆ ಇಂಥಾದ್ದೊಂದು ಅವಘಡ ಸಂಭವಿಸಬಹುದೆಂಬ ನಿರೀಕ್ಷೆ ಅದೆಷ್ಟು ಮಂದಿಗಿತ್ತೋ ಗೊತ್ತಿಲ್ಲ. ಆದರೆ ಹಿಡಿದ ದಾರಿ ಆತನನ್ನು ಇಂಥಾದ್ದೊಂದು ದುರಂತಕ್ಕಲ್ಲದೆ ಮತ್ತೆಲ್ಲಿಗೂ ಕರೆದೊಯ್ಯಲು ಸಾಧ್ಯವೇ ಇರಲಿಲ್ಲ.

ಆರ್. ರುದ್ರೇಶ್ ಶಿವಾಜಿನಗರದ ಮಿಲ್ಕ್‌ಮನ್ ಸ್ಟ್ರೀಟ್‌ನ ನಿವಾಸಿಯಷ್ಟೇ ಅಲ್ಲ, ಅಲ್ಲೇ ಹುಟ್ಟಿ ಅಲ್ಲೇ ಬೆಳೆದು ಕೋಮುಜ್ವಾಲೆಯನ್ನೇ ತಿಂದುಂಡು ತೇಗಿದ ಘಾಟಿ. ಇಬ್ಬರು ಮಕ್ಕಳು, ನಿಯತ್ತಿನ ಮಡದಿ, ಬೆಂಬಲಿಸುವ ಸಂಬಂಧಿಗಳು ಎಲ್ಲಾ ಇದ್ದೂ ಕೋಮು ರಾಜಕಾರಣವನ್ನು ಮೈಗೂಡಿಸಿಕೊಂಡ. ಮನೆಮನೆಗೆ ಹಾಲು ಹಾಕುವುದರಿಂದ ಶುರುವಾದ ಆತನ ಹೊಟ್ಟೇಪಾಡು ಆರ್‌ಎಸ್‌ಎಸ್ ಬಲದೊಂದಿಗೆ ಕಾರ್ಪೊರೇಷನ್ ಕಾಂಟ್ರಾಕ್ಟು, ಮೀಟರ್ ಬಡ್ಡಿ ದಂಧೆ, ಕೊನೆಕೊನೆಗೆ ಕಂಡೋರ ಸೊತ್ತಿಗೆ ಬೇಲಿ ಸುತ್ತುವ ರಿಯಲ್ ಎಸ್ಟೇಟ್ ದಂಧೆಗೂ ವ್ಯಾಪಿಸಿತು. ಹಿಡಿದ ದಾರಿ, ಓಟದ ವೇಗ ಮತ್ತು ಅಧಿಕಾರದ ದುರಾಸೆ ಏನೆಲ್ಲಾ ದುಷ್ಪರಿಣಾಮಗಳನ್ನು ಹುಟ್ಟಿಹಾಕುತ್ತದೋ ಅದರ ಪರಿವೆಯಿದ್ದಿದ್ದರೆ ರುದ್ರೇಶ್ ಇಂಥಾದ್ದೊಂದು ದುರ್ಮರಣಕ್ಕೆ ತಲೆ ಕೊಡಬೇಕಿರಲಿಲ್ಲ. ಆದರೆ ಹೊಂಚಿ ಕೂತ ಹಂತಕರಿಗೆ ಕಾಯುವಷ್ಟು ತಾಳ್ಮೆಯಾಗಲಿ ಸಹಿಸುವಷ್ಟು ಸಂಯಮವಾಗಲಿ ಇರಬೇಕಲ್ಲ.

ಬಿಜೆಪಿ ಆಕ್ರೋಶದ ಹಿಂದೆ!

ಈಗ ಬಿಜೆಪಿ ಸೇರಿದಂತೆ ಇಡೀ ಸಂಘ ಪರಿವಾರವೇ ಬೀದಿಗಿಳಿದು ಬೊಬ್ಬೆಯಿಡುತ್ತಿದೆ. ರಾಜ್ಯ ಬಿಜೆಪಿ ಅಧ್ಯಕ್ಷ ಯಡಿಯೂರಪ್ಪನವರ ಪ್ರಕಾರ ಕಾಂಗ್ರೆಸ್ ಸರ್ಕಾರವೇ ರುದ್ರೇಶ್ ಹತ್ಯೆಗೆ ಮೂಲ ಕಾರಣವಂತೆ. ವಾರದ ಹಿಂದೆ ಮುತ್ಯಾಲನಗರದಲ್ಲಿ ನಡೆದ ಬಿಜೆಪಿ ಕಾರ್ಯಕರ್ತ ದಿಲೀಪ್ ಮೇಲಿನ ಮಾರಕ ದಾಳಿಗೂ ತಿಂಗಳ ಹಿಂದಷ್ಟೇ ವಿದ್ಯಾರಣ್ಯಪುರದ ಫಣೀಂದ್ರ ಎಂಬ ಆರ್‌ಎಸ್‌ಎಸ್ ನಾಯಕನ ಮೇಲಿನ ಹಲ್ಲೆಗೂ ಮತ್ತು ಈಗ ನಡೆದಿರುವ ರುದ್ರೇಶ್ ಹತ್ಯೆಗೂ ಕಾಂಗ್ರೆಸ್ ಕುಮ್ಮಕ್ಕೇ ಕಾರಣವೆಂಬುದು ಯಡಿಯೂರಪ್ಪನವರ ಆಕ್ರೋಶ. ಅದೇ ರೀತಿ ಮತ್ತೊಬ್ಬ ಬಿಜೆಪಿ ನಾಯಕ ಮತ್ತು ಮಾಜಿ ಉಪಮುಖ್ಯಮಂತ್ರಿ ಆರ್.ಅಶೋಕ್ ಮುಸ್ಲಿಂ ಭಯೋತ್ಪಾದಕರನ್ನು ಬೆಂಬಲಿಸುವ ಸಂಘಟನೆಯೊಂದನ್ನು ಘೋಷೆ ಮಾಡುತ್ತಿದ್ದಾರೆ. ಬಿಜೆಪಿ, ಸಂಘ ಪರಿವಾರಗಳಷ್ಟೇ ಅಲ್ಲ; ಪೊಲೀಸರು ಕೂಡ ಕಳೆದ ಕೆಲ ದಿನಗಳಿಂದ ಕೇರಳ ಮತ್ತು ತಮಿಳುನಾಡುಗಳಲ್ಲಿ ನಡೆದ ಆರ್‌ಎಸ್‌ಎಸ್ ಕಾರ್ಯಕರ್ತರ ಸರಣಿ ಹತ್ಯೆಗೂ ಶಿವಾಜಿನಗರದ ರುದ್ರೇಶ್ ಹತ್ಯೆಗೂ ಇರುವ ಹೋಲಿಕೆಯನ್ನೇ ಎತ್ತೆತ್ತಿ ಆಡುತ್ತಿದ್ದಾರೆ.

ಕೇರಳ ಮತ್ತು ತಮಿಳುನಾಡಿನಲ್ಲಿ ಈತನಕ ಕೊಲೆಯಾದ ಆರ್‌ಎಸ್‌ಎಸ್ ಕಟ್ಟಾಳುಗಳ ಒಟ್ಟು ಸಂಖ್ಯೆ ಹತ್ತು. ಕೇರಳದ ಕಣ್ಣೂರಿನಲ್ಲಿ ನಾಲ್ವರು, ತ್ರಿವೇಂಡ್ರಂ, ಕ್ಯಾಲಿಕಟ್ ಮತ್ತು ಕೊಚ್ಚಿಯಲ್ಲಿ ತಲಾ ಒಬ್ಬರು, ತಮಿಳುನಾಡಿನ ಕೊಯಮತ್ತೂರು, ಕೃಷ್ಣಗಿರಿ ಹಾಗೂ ಹೊಸೂರಿನಲ್ಲಿ ತಲಾ ಒಬ್ಬೊಬ್ಬರಂತೆ ಈತನಕ ಹತ್ತು ಮಂದಿ ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಕೊಚ್ಚಿ ಕೊಲ್ಲಲಾಗಿದೆ. ಇವೆಲ್ಲವೂ ಸ್ಥಳೀಯ ರೌಡಿ ಗುಂಪುಗಳು ಪರಸ್ಪರ ಕೊಚ್ಚಿ ಕೊಂದಂಥದ್ದೇ ಹತ್ಯೆಗಳು. ಇಲ್ಲಿ ಸ್ಫೋಟಕಗಳಾಗಲಿ, ಪಿಸ್ತೂಲು, ಬಂದೂಕಿನಂಥ ಯಾಂತ್ರಿಕ ಹತ್ಯಾರುಗಳಾಗಲಿ ಬಳಕೆಯಾಗಿಲ್ಲ. ಕೊಲೆಗೀಡಾದವರೆಲ್ಲರೂ ಆರ್‌ಎಸ್‌ಎಸ್ ಕಾರ್ಯಕರ್ತರೇ ಆದ್ದರಿಂದ ಈ ರೀತಿ ಮಚ್ಚು, ಲಾಂಗುಗಳಿಂದ ಕೊಚ್ಚಿ ಕೊಂದವರಿಗೂ ತಮಿಳುನಾಡು, ಕೇರಳಗಳಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಕೊಂದವರಿಗೂ ಸಾಮ್ಯವಿದೆಯೆಂಬುದು ಪೊಲೀಸರ ಲೆಕ್ಕಾಚಾರ.

ಹಾಗಂತ ರುದ್ರೇಶ್ ಕೊಲೆಗೆ ಇರಬಹುದಾದ ಇನ್ನಿತರೆ ಸ್ಥಳೀಯ ಕಾರಣಗಳನ್ನೂ ಪೊಲೀಸರು ತಳ್ಳಿಹಾಕುತ್ತಿಲ್ಲ.



ಆದರೆ ಬಿಜೆಪಿ ನಾಯಕರು ಮತ್ತು ಆರ್‌ಎಸ್‌ಎಸ್ ಪದಾಧಿಕಾರಿಗಳು ಆರೋಪಿಸುವಂತೆ ಇದು ಮುಸ್ಲಿಂ ಸಂಘಟನೆಯೊಂದರ ಅಥವಾ ಮುಸ್ಲಿಂ ರೌಡಿ ಗುಂಪೊಂದರ ಕಾರಸ್ಥಾನವೇ ಆಗಿದ್ದರೆ ಪ್ರಶ್ನೆಯೇ ಬೇರೆಯಾಗುತ್ತದೆ. ಆ ಪ್ರಕಾರ ರುದ್ರೇಶ್ ಶಿವಾಜಿನಗರದ ಯಾವ ಮುಸ್ಲಿಂ ಹಿತಾಸಕ್ತಿಗೆ ಆ ಪಾಟಿ ಅಪಾಯಕಾರಿಯೆನಿಸಿದ್ದ ಅಥವಾ ಯಾವ ಮುಸ್ಲಿಂ ರಾಜಕಾರಣಿಗೆ ರುದ್ರೇಶ್ ಸಂಘಟನಾಶಕ್ತಿಯ ಬಗ್ಗೆ ಆತಂಕವಿತ್ತು?

ಶಿವಾಜಿ ಸರ್ಕಲ್?

ಹಾಗೆ ನೋಡಿದರೆ ರುದ್ರೇಶ್ ಸ್ಥಳೀಯ ಬಿಜೆಪಿ ನಾಯಕರಾದ ಕಟ್ಟಾ ನಾಯ್ಡು, ಆತನ ಮಗ ಕಟ್ಟಾ ಜಗ್ಗ, ನಿರ್ಮಲ್‌ಕುಮಾರ್ ಸುರಾನಾ, ಶೆಹರ್ ಸಿಂಗ್ ಅಥವಾ ಇನ್ನಾರೇ ಬಿಜೆಪಿ ಕೌನ್ಸಿಲರ್‌ಗಳ ಮಟ್ಟದ ನಾಯಕನಲ್ಲ. ಆರ್‌ಎಸ್‌ಎಸ್ ಕಟ್ಟಾಳು ನಿಜವಾದರೂ ಈತನಿಗಿಂತಲೂ ಅಪಾಯಕಾರಿ ಮತ್ತು ತಾಕತ್ತುದಾರ ತಮಿಳು ಆರ್‌ಎಸ್‌ಎಸ್ ನಾಯಕರು ಈ ಭಾಗದಲ್ಲಿ ಇನ್ನೂ ಅನೇಕರಿದ್ದಾರೆ. ರುದ್ರೇಶ್ ಓರ್ವ ಸಕ್ರಿಯ ಆರ್‌ಎಸ್‌ಎಸ್ ಕಾರ್ಯಕರ್ತನೇ ಹೊರತು ನಾಯಕನಲ್ಲ. ಮೊನ್ನೆ ನಡೆದ ಗಣೇಶ ಚತುರ್ಥಿಯಲ್ಲಿ ಈ ಭಾಗದ ಅನೇಕ ಗಣೇಶೋತ್ಸವಗಳ ಹಿಂದೆ ರುದ್ರೇಶ್ ಒಬ್ಬನೇ ಇರಲಿಲ್ಲ. ಬದಲಿಗೆ ಇನ್ನೂ ಅನೇಕ ಬಿಜೆಪಿ ನಾಯಕರುಗಳಿದ್ದರು.

ಆದರೆ ಶಿವಾಜಿ ಸರ್ಕಲ್‌ನ ಗಣೇಶೋತ್ಸವಕ್ಕೆ ಕಾರಣನಾದವನು ರುದ್ರೇಶನೇ. ಅತ್ತ ರಸೆಲ್ ಮಾರ್ಕೆಟ್, ಇತ್ತ ನಾಲಾ ರೋಡ್ ಜಂಕ್ಷನ್ ಮತ್ತೊಂದೆಡೆ ಶಿವಾಜಿನಗರ, ಇನ್ನೊಂದೆಡೆ ಕೋಲ್ಸ್‌ಪಾರ್ಕ್ ಮುಂತಾದ ಏರಿಯಾಗಳ ಕೇಂದ್ರ ಸ್ಥಾನದಂತಿರುವ ಶಿವಾಜಿ ಸರ್ಕಲ್‌ನಲ್ಲಿ ಹಿಂದೆ ಯಾವತ್ತೂ ಗಣೇಶನನ್ನು ಕೂರಿಸಿರಲಿಲ್ಲ. ಹಾಗಂತ ಮುಸ್ಲಿಮರು ಅದನ್ನು ವಿರೋಧಿಸಿದ್ದರೆಂದಲ್ಲ. ಆ ಭಾಗದಲ್ಲಿ ಗಣೇಶನನ್ನು ಕೂರಿಸಲು ಯಾರೂ ಮುಂದಾಗಿರಲಿಲ್ಲ ಮತ್ತು ಈ ಬಗ್ಗೆ ಯಾರಿಗೂ ಆಸಕ್ತಿಯಿರಲಿಲ್ಲ. ಸುತ್ತಮುತ್ತ ಬಹುತೇಕ ವಾಣಿಜ್ಯ ಮಳಿಗೆಗಳು ಮತ್ತು ಜನವಸತಿಯಿಲ್ಲದ್ದರಿಂದ ಅಲ್ಲಿ ಗಣೇಶೋತ್ಸವದ ಪ್ರಶ್ನೆಯೂ ಉದ್ಭವಿಸಿರಲಿಲ್ಲ. ಆದರೆ ರುದ್ರೇಶ ಶಿವಾಜಿ ಸರ್ಕಲ್ಲಿನಲ್ಲೇ ಗಣೇಶೋತ್ಸವ ಮಾಡಿಸುತ್ತೇನೆಂಬ ಹಠಕ್ಕೆ ಬಿದ್ದು ಒಂದಷ್ಟು ಮಂದಿ ಮಾರ್ವಾಡಿಗಳಿಂದ ಭರ್ಜರಿ ಚಂದಾ ಕಿತ್ತ, ಯಾವ ಮುಸ್ಲಿಮರಿಗೂ ಈ ಬಗ್ಗೆ ತಕರಾರೂ ಇಲ್ಲ. ಭರ್ಜರಿಯಾಗೇ ಗಣೇಶೋತ್ಸವ ಮಾಡಿಸಿದ್ದ.

ಅದೇರೀತಿ ವಿಜಯದಶಮಿ ಪ್ರಯುಕ್ತ ಆರ್‌ಎಸ್‌ಎಸ್ ನಡೆಸುವ ಪಥಸಂಚಲನಕ್ಕೂ ಶ್ರಮಿಸಿದ್ದ ಆತನೊಬ್ಬನೇ ಅಲ್ಲ. ಆ ಭಾಗದ ಅನೇಕ ತಮಿಳು ಬಿಜೆಪಿ ನಾಯಕರೂ ಆರ್‌ಎಸ್‌ಎಸ್ ಕಾರ್ಯಕರ್ತರೂ ಪಥಸಂಚಲನದಲ್ಲಿ ಅತೀವ ಆಸಕ್ತಿ ವಹಿಸಿ ಭಾಗವಹಿಸಿದ್ದರು. ಈ ಕಾರಣಕ್ಕೂ ರುದ್ರೇಶ್ ಕೊಲೆಯಾಯಿತೆಂದರೆ ರುದ್ರೇಶನಿಗಿಂತಲೂ ದೊಡ್ಡ ಮಟ್ಟದಲ್ಲಿ ಪಥ ಸಂಚಲನವನ್ನು ಸಂಘಟಿಸಿದವರು, ಗಣೇಶೋತ್ಸವ ಸಂಘಟಿಸಿದ ಅಸಂಖ್ಯಾತ ಆರ್‌ಎಸ್‌ಎಸ್ ಬಿಜೆಪಿ ನಾಯಕರಿದ್ದರು. ಹಾಗೊಮ್ಮೆ ರುದ್ರೇಶನ ಸಂಘಟನೆಯೇ ಅತೀ ಅಪಾಯಕಾರಿಯಾಗಿತ್ತೆಂದರೆ ಅದರಿಂದ ಶಿವಾಜಿನಗರದ ಮುಸ್ಲಿಂ ಹಿತಾಸಕ್ತಿಗಳಿಗಾಗಲಿ, ಯಾರೇ ಮುಸ್ಲಿಂ ರಾಜಕಾರಣಿಗಳಿಗಾಗಲಿ ಆಗಬೇಕಾಗಿದ್ದು ಏನೇನೂ ಇರಲಿಲ್ಲ!

ಕಟ್ಟಾ ಮಗನಿಗೆ ದೋಖಾ!

ಏಕೆಂದರೆ ರುದ್ರೇಶನ ಮುಸ್ಲಿಂ ವಿರೋಧಿ ಚಟುವಟಿಕೆಗಳಿಂದ ಶಿವಾಜಿನಗರ ಅಥವಾ ಸುತ್ತಮುತ್ತಲ ಏರಿಯಾಗಳ ಒಂದೇ ಒಂದು ಮುಸ್ಲಿಂ ಮತವೂ ಕಮ್ಮಿಯಾಗುತ್ತಿರಲಿಲ್ಲ ಮತ್ತು ಜನಸಂಖ್ಯೆಯಲ್ಲಿ ಒಬ್ಬೇ ಒಬ್ಬ ಮುಸ್ಲಿಮನೂ ಕಮ್ಮಿಯಾಗುತ್ತಿರಲಿಲ್ಲ. ಮುಂಬರುವ ಚುನಾವಣೆಯಲ್ಲಿ ರೋಷನ್ ಬೇಗ್‌ರನ್ನು ಸೋಲಿಸುವಷ್ಟು ವರ್ಚಸ್ವಿಯಾಗಲಿ, ರೊಕ್ಕಸ್ಥನಾಗಲಿ ಅಲ್ಲದ ರುದ್ರೇಶ ಕನಿಷ್ಠ ಕೌನ್ಸಿಲರ್‌ಗಿರಿಗೂ ಸ್ಪರ್ಧೆಯಂತಿರಲಿಲ್ಲ. ಸ್ವಂತಕ್ಕೊಂದು ಮನೆ, ಬಾಡಿಗೆಗೆ ಬಿಟ್ಟಿದ್ದ ಮತ್ತೊಂದು ಮನೆ, ಹಾಲಿನ ಏಜೆನ್ಸಿ, ಸಿವಿಲ್ ಕಾಂಟ್ರಾಕ್ಟು ಮತ್ತು ರಿಯಲ್ ಎಸ್ಟೇಟ್ ದಂಧೆ.

ಕಟ್ಟಾ ಶಿವಾಜಿನಗರಕ್ಕೆ ಎಮ್ಮೆಲ್ಲೆಯಾಗಿದ್ದಷ್ಟೂ ಕಾಲ ರುದ್ರೇಶನ ಸಿವಿಲ್ ಕಾಂಟ್ರಾಕ್ಟು ಸುಸೂತ್ರವಾಗಿಯೇ ಇತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದು ರೋಷನ್ ಬೇಗ್ ಮಂತ್ರಿಯಾಗಿದ್ದೇ ಕಾಂಟ್ರಾಕ್ಟ್ ಕಮಾಯಿ ಕುಂಠಿತವಾಯಿತು. ತನ್ನ ಬೋಗಸ್ ಬಿಲ್ ದಂಧೆಗೆ ಸಹಕರಿಸಲಿಲ್ಲವೆಂದೇ ಸ್ಥಳೀಯ ಕಾಂಗ್ರೆಸ್ ಕೌನ್ಸಿಲರ್ ಮತ್ತು ರೋಷನ್ ಬೇಗ್‌ರ ನಂಬಿಕಸ್ಥ ಎಂ.ಕೆ. ಗುಣಶೇಖರ್ ವಿರುದ್ಧ ಕ್ಯಾತೆಗೆ ಬಿದ್ದ. ವಿನಾಕಾರಣ ಗುಣಶೇಖರ್ ವಿರಿಯಾದ ಬಿಬಿಎಂಪಿ ಟೆಂಡರುಗಳೆಲ್ಲಕ್ಕೂ ಕಿತಾಪತಿ ಶುರುವಿಟ್ಟ. ರುದ್ರೇಶನ ಅಧಿಕಪ್ರಸಂಗಿತನಗಳು ಇಷ್ಟಕ್ಕೇ ನಿಂತಿದ್ದರೆ ಆ ಮಾತು ಬೇರೆ. ಮಂತ್ರಿ ರೋಷನ್‌ಬೇಗ್ ವಿರುದ್ಧ ಒಂದಲ್ಲ ಒಂದು ಕಿತಾಪತಿ ನಡೆಸಿಕೊಂಡೇ ಬಂದ. ಕೌನ್ಸಿಲರ್ ಗುಣಶೇಖರ್ ಆಗಲಿ ಮಂತ್ರಿ ಬೇಗ್‌ರಾಗಲಿ ಯಾರೂ ರುದ್ರೇಶನನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಹಾಗಂತ ಕೇವಲ ಕಾಂಗ್ರೆಸ್ ಮಟ್ಟಿಗಷ್ಟೇ ರುದ್ರೇಶನ ಹಾವಳಿಗಳು ಸೀಮಿತವಾಗಿರಲಿಲ್ಲ.

ಮೇಲುನೋಟಕ್ಕೆ ಕಟ್ಟಾನಾಯ್ಡು ಜೊತೆ ಆತ್ಮೀಯತೆಯಿಂದಿದ್ದನಾದರೂ ಕಟ್ಟಾನ ಪುತ್ರ ಕಟ್ಟಾ ಜಗ್ಗನ ವಿರುದ್ಧ ಮಸಲತ್ತಿಗೆ ಬಿದ್ದ. ಒಂದು ಮೂಲದ ಪ್ರಕಾರ ರುದ್ರೇಶ್ ರಿಯಲ್‌ಎಸ್ಟೇಟ್ ಡೀಲೊಂದರಲ್ಲಿ ಕಟ್ಟಾ ಜಗ್ಗನಿಗೆ ಮುಂಡಾಯಿಸಿದ್ದ. ಒಂದಲ್ಲ ಎರಡಲ್ಲ ಬರೋಬ್ಬರಿ ಕೋಟಿ ಮೊತ್ತದಲ್ಲಿ ಕಟ್ಟಾ ಜಗ್ಗನಿಗೆ ಕೈ ಎತ್ತಿದ್ದು ಬಿಜೆಪಿ ವಲಯದಲ್ಲೇ ಬಿಸಿಬಿಸಿ ಘರ್ಷಣೆಗೆ ಕಾರಣವಾಗಿತ್ತು. ಬಾಣಸವಾಡಿ ಮತ್ತು ನಾಗವಾರಗಳ ನಡುವಿನ ಹತ್ತು ಕೋಟಿಗೂ ಅಧಿಕ ಮೊತ್ತದ ಆಸ್ತಿಯೊಂದನ್ನು ಕಟ್ಟಾಗಳು ಬೇನಾಮಿಯಾಗಿ ರುದ್ರೇಶನ ಹೆಸರಲ್ಲಿ ಖರೀದಿಸಿದ್ದೇ ಮೋಸವಾಯಿತು. ಕಟ್ಟಾ ಜಗ್ಗನನ್ನು ರಾಜಕೀಯವಾಗಿ ನಿರ್ನಾಮ ಮಾಡಿಯೇ ತೀರುತ್ತೇನೆಂದು ಪಿತೂರಿಗಿಳಿದ ರುದ್ರೇಶ್ ಅದಕ್ಕೆ ನೆಚ್ಚಿಕೊಂಡಿದ್ದು ಶಿವಾಜಿನಗರದ ಡಾನ್ ಇಪ್ತಿಯಾಕ್ ಪೈಲ್ವಾನನನ್ನು!

ಇತ್ತ ಕಟ್ಟರ್ ಆರ್‌ಎಸ್‌ಎಸ್ ಆದರೂ ಶಿವಾಜಿನಗರದ ಮುಸ್ಲಿಂ ಅಂಡರ್‌ವರ್ಲ್ಡ್‌ಗೂ ಕೈಯಿಟ್ಟ. ರುದ್ರೇಶ್ ಇಫ್ತಿಯಾಕ್ ಪೈಲ್ವಾನನ ಕಡು ವಿರೋಧಿ ಪಡೆಯಾದ ಬ್ರಿಗೇಡ್ ಅಜಂನ ಹುಡುಗರ ವಿರುದ್ಧವೂ ಕತ್ತಿ ಮಸೆಯಲಾರಂಭಿಸಿದ್ದ. ಅದಕ್ಕೆ ಇಫ್ತಿಯಾಕ್ ಪೈಲ್ವಾನನ ಜೊತೆ ಕೈಜೋಡಿಸಿ ಬಿಟ್ಟರೆ ತನ್ನನ್ಯಾರು ಮುಟ್ಟಲಾರರೆಂಬ ಹುಂಬ ಭ್ರಮೆಗೆ ಬಿದ್ದ. ಹಾಗೆ ಇಫ್ತಿಯಾಕ್ ಪೈಲ್ವಾನನ ಜೊತೆ ಆತ ಕೈ ಮಿಲಾಯಿಸಿದ್ದಕ್ಕೂ ಮತ್ತೊಂದು ಕಾರಣವಿತ್ತು. ಅದು ಆತನ ಮೀಟರ್‌ಬಡ್ಡಿ ದಂಧೆ ಮತ್ತು ರಿಯಲ್ ಎಸ್ಟೇಟ್ ವ್ಯವಹಾರ. ಒಂದು ಮೂಲದ ಪ್ರಕಾರ ಇಫ್ತಿಯಾಕ್ ಈತನ ಮೂಲಕವೇ ಪರೋಕ್ಷ ಮೀಟರ್ ಬಡ್ಡಿಗೆ ಕೈಹಾಕಿದ್ದ ಅಥವಾ ತನ್ನ ಅನೇಕ ಬೆಂಬಲಿಗರಿಗೆ ಬಡ್ಡಿಗೂ ಫೈನಾನ್ಸ್ ಕೊಡಿಸಿದ್ದ!

ಶಿವಾಜಿನಗರ ವಾರ್ಡಿನಿಂದ ತನ್ನ ಪತ್ನಿ ಫರೀದಾರನ್ನು ಪಕ್ಷೇತರರಾಗಿ ಗೆಲ್ಲಿಸಿದ್ದ ಇಫ್ತಿಯಾಕ್ ಎಷ್ಟೇ ರುದ್ರೇಶನನ್ನು ಬಗಲಲ್ಲಿಟ್ಟುಕೊಂಡರೂ ಆಂತರಿಕವಾಗಿ ಆತ ಕಟ್ಟಾ ನಾಯ್ಡುವಿನ ನಿಯತ್ತಿನ ಬಂಟನೇ. ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಕಾಲ ಕಟ್ಟಾ ನಾಯ್ಡುವಿನ ಕಟ್ಟಾನುಯಾಯಿಯಾಗೇ ಮೆರೆದವನು. ಇಫ್ತಿಯಾಕ್ ಅಂಥಾದ್ದರಲ್ಲಿ ಏನೇ ರುದ್ರೇಶನ ಹಂಗಿದ್ದರೂ ಲಾಭದ ಮತ್ತು ಭವಿಷ್ಯದ ಲೆಕ್ಕಕ್ಕೆ ಬಂದರೆ ಇಫ್ತಿಯಾಕ್ ನಿಲ್ಲುವುದು ಕಟ್ಟಾ ನಾಯ್ಡುಗಳ ಜೊತೆಗೇ ಹೊರತು ಪುಡಿ ರುದ್ರೇಶನ ಪರವಾಗಲ್ಲ.


ಈ ಪೈಕಿ ರುದ್ರೇಶನ ಪ್ರಾಣಕ್ಕೆ ಎರವಾಗಿದ್ದು ಯಾವುದು? ಇಫ್ತಿಯಾಕ್ ಮೂಲಕ ಆತನ ಮುಸ್ಲಿಂ ಬೆಂಬಲಿಗರಿಗೆ ಬಡ್ಡಿಗೆ ಬಿಟ್ಟಿದ್ದೇ ಕುತ್ತಾಯಿತೆ? ಅಥವಾ ಮುಂಬರುವ ಚುನಾವಣೆಗೆ ಇಫ್ತಿಯಾಕ್‌ನನ್ನೇ ಬಿಜೆಪಿಯಿಂದ ನಿಲ್ಲಿಸಿ ಆತನಿಗೆ ಹಿಂದೂ ಓಟು ಹಾಕಿಸುವಲ್ಲಿ ರುದ್ರೇಶ್ ಸಕ್ರಿಯನಾಗಿದ್ದನೆ? ಇದು ಇಫ್ತಿಯಾಕ್ ವಿರೋಧಿ ಗುಂಪಿನ ಕೆಂಗಣ್ಣಿಗೆ ಕಾರಣವಾಯಿತೆ? ಅಥವಾ ಕಟ್ಟಾ ಕುಟುಂಬಕ್ಕೆ ಆತ ಮಾಡಿದ ದ್ರೋಹ ಆತನನ್ನೇ ನುಂಗಿ ಹಾಕಿತೆ? ಇದಲ್ಲದೆ ಬೇರೆ ಯಾರಿಗಾದರೂ ದೊಡ್ಡ ಮಟ್ಟದ ಮೀಟರ್ ಬಡ್ಡಿ ಸಾಲ ಕೊಟ್ಟಿದ್ದನೆ? ಇವೆಲ್ಲವನ್ನೂ ಮೀರಿ ಯಾರದಾದರೂ ಸೊತ್ತಿಗೆ ಕೈಯಿಟ್ಟಿದ್ದನೆ?

ಇದರ ಹೊರತಾಗಿ ಬೇರಾವ ಆಯಾಮವೂ ಆತನ ಹತ್ಯೆಗಿದ್ದಂತೆ ಕಾಣಿಸುತ್ತಿಲ್ಲ. ಪೊಲೀಸರು ಈ ಎಲ್ಲಾ ಅಂಶಗಳ ದಿಕ್ಕು ಹಿಡಿದೇ ಹಂತಕರ ಹೆಜ್ಜೆ ಗುರುತಿನ ಬೆನ್ನು ಹತ್ತಿದ್ದಾರೆ. ಈ ಪೈಕಿ ಯಾವುದೋ ಒಂದಂತೂ ರುದ್ರೇಶನ ಪ್ರಾಣಕ್ಕೆ ಕುತ್ತಾಗಿರಬೇಕು. ಏನೇ ಆದರೂ ಆತನ ಹಂತಕರಿಗಂತೂ ಶಿಕ್ಷೆಯಾಗಲೇ ಬೇಕು. ಮೃತನಿಗೆ ನ್ಯಾಯ ದೊರಕಲೇಬೇಕು.

■ ರಾ. ಸೋಮನಾಥ್

ಹೀಗಿದ್ದರು ನಮ್ಮ ಕೆ.ಎಚ್. ರಂಗನಾಥ್

(ಅಕ್ಟೋಬರ್ 20ರಂದು ಕೆ.ಎಚ್.ರಂಗನಾಥ್ ಅವರ 90ನೇ ಜನ್ಮದಿನೋತ್ಸ



"ಮಡಕೆಯ ಮಾಡುವರೆ ಮಣ್ಣೇ ಮೊದಲು" ಎಂದು ಬಸವಣ್ಣನವರು ಹೇಳಿದ್ದಾರೆ. ಜಾತ್ಯತೀತ ಮನೋಭಾವ, ಸರ್ವಧರ್ಮ ಸಮಭಾವ ಪ್ರಜ್ಞೆ, ಸಮಾಜವಾದ, ಸಮತಾವಾದ ಮುಂತಾದ ಆದರ್ಶಗಳಿಗೆ ಪ್ರಜಾಪ್ರಭುತ್ವವೇ ಮೂಲವಾಗಿರುತ್ತದೆ. ನಾವು ಪ್ರಜಾಪ್ರಭುತ್ವವಾದಿಗಳಾಗದೆ ಯಾವುದೇ ವಿಶ್ವಮಾನ್ಯವಾದ ಆದರ್ಶವನ್ನು ಸಾಧಿಸಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವವು ಮಾನವನ ವಿಕಾಸಕ್ಕೆ ಸಹಾಯಕವಾಗುವ ವೈರುಧ್ಯಗಳನ್ನು ಸ್ವಾಗತಿಸಿದರೆ, ಅನ್ಯಾಯಕ್ಕೆ ಕಾರಣವಾಗುವ ವೈರುಧ್ಯಗಳನ್ನು ವಿರೋಧಿಸುತ್ತದೆ. ಭಿನ್ನಾಭಿಪ್ರಾಯಗಳನ್ನು ಎದುರಿಸುವಲ್ಲಿ ಸಹನೆಯ ಮನಸ್ಸನ್ನು ಸೃಷ್ಟಿಸುತ್ತದೆ. ಅದು ವೈವಿಧ್ಯವನ್ನು ಉಳಿಸಿಕೊಳ್ಳುತ್ತದೆ ಮತ್ತು ಏಕತೆಯನ್ನು ಬಯಸುತ್ತದೆ. ಮಾನವ ಘನತೆಯನ್ನು ಎತ್ತಿ ಹಿಡಿಯುವುದು ಮತ್ತು ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು ಪ್ರಜಾಪ್ರಭುತ್ವದ ಗುಣಧರ್ಮವಾಗಿದೆ.

ಈ ಹಿನ್ನೆಲೆಯಲ್ಲಿ ಭಾರತೀಯ ಸಮಾಜ ಮತ್ತು ಪ್ರಭುತ್ವ ಬೆಳೆದುಬಂದ ಬಗೆಯನ್ನು ನೋಡಿದರೆ ಮನದೊಳಗೆ ವಿಷಾದದ ಛಾಯೆ ಮೂಡದೆ ಇರದು. ನಮ್ಮ ಜಡರೂಢಿಯ ಸಂಪ್ರದಾಯಗಳು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿವೆ. ಜಾತಿಗಳು ಪ್ರಜಾಪ್ರಭುತ್ವದ ಆಶಯಗಳಿಗೆ ಸವಾಲು ಎಸೆಯುತ್ತವೆ. ನಮ್ಮ ಜಾತಿಗಳು ನಮ್ಮ ಹುಟ್ಟಿನಿಂದ ನಿರ್ಧಾರವಾಗುತ್ತವೆ. ಹಿಂದೂ ಧರ್ಮದ ಪರಿಧಿಯೊಳಗೆ ಜನರು ತಮ್ಮನ್ನು ಈ ಜಾತಿ ಉಪಜಾತಿಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ. ನಮ್ಮ ಸಾಮಾಜಿಕ ಸ್ಥಾನಮಾನ ಮತ್ತು ಭವಿಷ್ಯವನ್ನು ನಿರ್ಧರಿಸುವಲ್ಲಿ ಈ ಜಾತಿಗಳು ಇಂದಿಗೂ ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿವೆ. ಅಸ್ಪೃಶ್ಯತಾ ಪ್ರಜ್ಞೆಯಂತೂ ಇನ್ನೂ ವಿಕಾರವಾಗಿದೆ. ಜಾತಿವ್ಯವಸ್ಥೆಯಲ್ಲಿ ಮಾತ್ರ ಈ ಅಸ್ಪೃಶ್ಯತೆ ಕಂಡುಬರುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕರಿಯರಿಗೆ ಶಾಪವಾಗಿರುವ ವರ್ಣಭೇದ ನೀತಿಯಲ್ಲಿ ಕೂಡ ಅಸ್ಪೃಶ್ಯತೆ ಇಲ್ಲ! ಜಾತಿ ಮತ್ತು ಅಸ್ಪೃಶ್ಯತೆ ಭಾರತೀಯರ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಬೆಳವಣಿಗೆಯನ್ನೇ ಕುಂಠಿತಗೊಳಿಸಿವೆ.

ಇಂಥ ಸಮಾಜದಲ್ಲಿ ತಮ್ಮ ನೈತಿಕ ಶಕ್ತಿ ಶಿಸ್ತು ಸಂಯಮ, ಪ್ರಾಮಾಣಿಕತೆ, ಆತ್ಮವಿಶ್ವಾಸ ಮತ್ತು ಒಳ್ಳೆಯದನ್ನು ಮಾಡಬೇಕೆಂಬ ಬಯಕೆಯೊಂದಿಗೆ ಕಷ್ಟದ ದಾರಿಗಳನ್ನು ಸವೆಸಿ ಆದರ್ಶಪ್ರಾಯರಾಗಿ ನಿಂತವರು ಕೆ.ಎಚ್.ರಂಗನಾಥ್ ಅವರು. ಅವರಿಗೆ ಎಲ್ಲರೂ ಪ್ರೀತಿಗೌರವಗಳೊಂದಿಗೆ 'ರಂಗನಾಥ ಸಾಹೇಬರು' ಎಂದೇ ಕರೆಯುತ್ತಿದ್ದರು.

ಸಚಿವರಾಗಿದ್ದ ರಂಗನಾಥರನ್ನು ನಾನು ಮೊದಲು ಕಂಡಿದ್ದು 1975ರಲ್ಲಿ, ಹೊಸಪೇಟೆಯ ತುಂಗಭದ್ರಾ ಅಣೆಕಟ್ಟಿನ ವೈಕುಂಠ ಅತಿಥಿಗೃಹದಲ್ಲಿ. ಹೊಸಪೇಟೆಯಲ್ಲಿ ನಡೆದ ಕೆ.ಪಿ.ಸಿ.ಸಿ ಸಮಾವೇಶವೊಂದರಲ್ಲಿ ಭಾಗವಹಿಸಲು ಅವರು ಬಂದಿದ್ದರು. ಆಗ ಧಾರವಾಡದಲ್ಲಿ ಎಂ.ಎ. ವಿದ್ಯಾರ್ಥಿಯಾಗಿದ್ದ ನನ್ನನ್ನು ಮಹಾದೇವ ಹೊರಟ್ಟಿಯವರು ತಮ್ಮ ಇತರ ಗೆಳೆಯರ ಜೊತೆ ಹೊಸಪೇಟೆಗೆ ಕರೆದುಕೊಂಡು ಹೋಗಿದ್ದರು.

ಸಂಘಟನೆಯಲ್ಲಿ ನಿರತರಾಗಿರುತ್ತಿದ್ದ ಮಹಾದೇವ ಹೊರಟ್ಟಿ, ಜುಲ್ಫಿಕರ್ ಅಲಿ ಭುಟ್ಟೋ ಹಾಗೆ ಕಾಣುತ್ತಿದ್ದ ಬಿ.ಎ. ಮೊಹಿದೀನ್, ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದು ಜನಪ್ರಿಯರಾಗಿದ್ದ ರಮೇಶ್ ಕುಮಾರ್, ವೀರಣ್ಣ ಮತ್ತಿಕಟ್ಟಿ (ಕಟಗಿ), ಸುಳ್ಳದಮಠ, ಅಶೋಕ ಪಟ್ಟಣ, ಪ್ರಭಾಕರ, ಸೂರಿ ಮುಂತಾದವರಿಂದ ಕೂಡಿದ ಯುವವೃಂದ ಭಾರಿ ಸಂಖ್ಯೆಯಲ್ಲಿ ಅವರನ್ನು ಸುತ್ತುವರಿದಿರುತ್ತಿತ್ತು. ಇದಕ್ಕೂ ಹಿಂದೆ ಅವರು ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿದ್ದಾಗ 1973ರ ವೇಳೆಗೆ ತಮ್ಮ ಆದರ್ಶಗಳಿಂದಾಗಿ ರಾಜ್ಯಾದ್ಯಂತ ಕಾಂಗ್ರೆಸ್ ಯುವಕರು ಮತ್ತು ಜನಸಮುದಾಯದ ಮಧ್ಯೆ ಎಷ್ಟೊಂದು ಜನಪ್ರಿಯರಾಗಿದ್ದರೆಂದರೆ 'ಮುಂದಿನ ಮುಖ್ಯಮಂತ್ರಿ ಅವರೇ' ಎಂದು ಜನ ಮಾತನಾಡುತ್ತಿದ್ದರು.

ತುರ್ತು ಪರಿಸ್ಥಿತಿಯ ದಿನಗಳಲ್ಲಿ ಅವರು ಸಹಕಾರ ಸಚಿವರಾಗಿದ್ದರು. ಸಹಕಾರ ಕ್ಷೇತ್ರವನ್ನು ಬಡವರ ಕ್ಷೇತ್ರವಾಗಿಸುವುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ಸಮಾಜವಾದದ ಕನಸುಗಳನ್ನು ಇಂಥ ಪ್ರಯತ್ನಗಳ ಮೂಲಕ ನನಸಾಗಿಸಬೇಕೆಂಬುದು ಅವರ ಆಶಯವಾಗಿತ್ತು.

ಚಿಲಿಯ ಅಧ್ಯಕ್ಷ ಅಲೆಂಡೆ ಅವರನ್ನು ಅಮೆರಿಕದ ಸಿಐಎ ಸಹಾಯದೊಂದಿಗೆ ಚಿಲಿಯ ಪ್ರತಿಗಾಮಿ ಶಕ್ತಿಗಳು ಕೊಲೆ ಮಾಡಿದ್ದವು. ಈ ಹಿನ್ನೆಲೆಯಲ್ಲಿ 40 ವರ್ಷಗಳ ಹಿಂದೆ. ಹುಬ್ಬಳ್ಳಿಯ ಎ.ಕೆ. ಇಂಡಸ್ಟ್ರೀಜ್‌ನಲ್ಲಿ ಫ್ಯಾಸಿಸ್ಟ್ ವಿರೋಧಿ ಸಮ್ಮೇಳನವನ್ನು ಕಾಂಗ್ರೆಸ್ ನಾಯಕತ್ವದಲ್ಲಿ ಏರ್ಪಡಿಸಲಾಗಿತ್ತು. ರಂಗನಾಥ ಸಾಹೇಬರು ಮತ್ತು ಬಿ. ಸುಬ್ಬಯ್ಯಶೆಟ್ಟಿ ಅವರು ಈ ಸಂದರ್ಭದಲ್ಲಿ ಹೆಚ್ಚು ಪರಿಚಿತರಾದರು.

ಎಂ.ಎ. ಅಂತಿಮ ವರ್ಷದಲ್ಲಿದ್ದಾಗ ಪ್ರಜಾವಾಣಿ ಪತ್ರಿಕೆಯ ಉಪ ಸಂಪಾದಕ ಹುದ್ದೆಗೆ ಹಾಗೆ ಸುಮ್ಮನೆ ಅರ್ಜಿ ಹಾಕಿದ್ದೆ. ಸಂದರ್ಶನಕ್ಕೆ ಕರೆ ಬಂದಿದ್ದು ಆಶ್ಚರ್ಯವೆನಿಸಿತು. ನನಗೆ ಎಂ.ಎ. ಪರೀಕ್ಷೆ ಮುಗಿಸಬೇಕಿತ್ತು. ಮನಸ್ಸಿಲ್ಲದ ಮನಸ್ಸಿನಿಂದ ಧಾರವಾಡದಿಂದ ಬೆಂಗಳೂರಿಗೆ ಹೋದೆ. ಏಳು ಪ್ರಕಾರದ ಪ್ರಶ್ನೆಗಳಿಗೆ ಉತ್ತರಿಸಿದೆ. ಎಲ್ಲ ಪರೀಕ್ಷೆಯಲ್ಲಿ ಪಾಸಾಗಿದ್ದು ತಿಳಿಯಿತು. ಅಂತೂ ಓದು ಮುಗಿಯಿತು ಎಂದು ನೌಕರಿ ಸೇರಲು ಪ್ರಜಾವಾಣಿ ಕಚೇರಿಗೆ ಹೋದೆ. ಸಾಪ್ತಾಹಿಕ ಪುರವಣಿ ನೋಡಿಕೊಳ್ಳುತ್ತಿದ್ದ ವೈಕುಂಠರಾಜು ಅವರು ಖುಷಿ ಪಟ್ಟರು. ವೈಕುಂಠರಾಜು ಅವರ ಪರಿಚಯ ನನಗೆ ಧಾರವಾಡದಲ್ಲಿ ಆಗಿತ್ತು. 'ನಾಳಿನ ಕನ್ನಡ ಸಾಹಿತ್ಯ' ಕುರಿತ ದೊಡ್ಡ ಸಮ್ಮೇಳನವೊಂದನ್ನು ಧಾರವಾಡದಲ್ಲಿ ಏರ್ಪಡಿಸಲಾಗಿತ್ತು. ಜಿ.ಎಸ್. ಶಿವರುದ್ರಪ್ಪ ಚೆನ್ನವೀರ ಕಣವಿ; ವೈಕುಂಠರಾಜು ಮುಂತಾದ ಡಜನ್‌ಗಟ್ಟಲೆ ಸಾಹಿತಿಗಳು ಆ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಬಂಡಾಯ, ದಲಿತ ಮುಂತಾದ ಚಳವಳಿಗಳು ಇಲ್ಲದ ಆ



ಸಂದರ್ಭದಲ್ಲಿ-ಕಮ್ಯೂನಿಸ್ಟ್ ಹಿನ್ನೆಲೆಯ ನನಗಂತೂ ಈ ಸಮ್ಮೇಳನ ಬಹಳವೇ ಖುಷಿ ಕೊಟ್ಟಿತ್ತು. ತುಂಬ ಉತ್ಸಾಹದಿಂದ ಚರ್ಚೆಗಳಲ್ಲಿ ಪಾಲ್ಗೊಂಡಿದ್ದೆ. ಆ ಸಂದರ್ಭದಲ್ಲಿ ವೈಕುಂಠರಾಜು ನನ್ನ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದರು.

ಸಂಪಾದಕ ಟಿಎಸ್‌ಆರ್ ಅವರ ಕೋಣೆಯ ಮುಂಬಾಗಿಲಿನ ಪಕ್ಕದಲ್ಲಿ ಕುಳಿತಿದ್ದ ಸುದ್ದಿ ಸಂಪಾದಕ ವೈಎನ್‌ಕೆ ಅವರ ಕೂಡ ಮಾತನಾಡುತ್ತಿದ್ದ ಸಂದರ್ಭದಲ್ಲಿ ವೈಕುಂಠರಾಜು ಅವರು ಕರೆದು 'ಸಂಪಾದಕರು ಬಂದರು. ಹೋಗಿ ಭೇಟಿಯಾಗಿ' ಎಂದರು. ಅವರು ತಮ್ಮ ಕೋಣೆಯ ಹಿಂದಿನ ಬಾಗಿಲಿನಿಂದ ಒಳಗೆ ಬಂದಿದ್ದರು. ನಾನು ಅವರಿಗೆ ಥ್ಯಾಂಕ್ಸ್ ಹೇಳಿ ಒಳಗೆ ಹೋಗಿ ಟಿಎಸ್‌ಆರ್ ಅವರಿಗೆ 'ನಮಸ್ಕಾರ ಸರ್' ಎಂದೆ. ಅವರು ಸಿಟ್ಟಿನಲ್ಲಿದ್ದರು. 'ಏನಯ್ಯಾ ಇನ್ನೂ ಆಫೀಸಿನ ಒಳಗಡೆ ಬಂದಿಲ್ಲ, ಈಗಲೆ ಪಾಲಿಟಿಕ್ಸ್ ಶುರು ಮಾಡಿಬಿಟ್ಟೆ' ಎಂದು ಸಿಡಿಮಿಡಿಗೊಂಡರು. ಇದಾವ ಧೂಬಾಣ ಎಂದು ಮನಸ್ಸಿಗೆ ಕಿರಿಕಿರಿಯಾಯಿತು. 'ತಾವು ಏನು ಹೇಳುತ್ತಿರುವಿರೋ ನನಗೆ ಅರ್ಥ ಆಗುತ್ತಿಲ್ಲ ಸರ್' ಎಂದೆ. 'ಮಿನಿಸ್ಟರ್ ಕಡೆಯಿಂದ ಹೇಳಿಸ್ತಿ ಏನಯ್ಯಾ' ಎಂದರು. 'ರಂಗನಾಥ್ ಅವರು ಫೋನ್ ಮಾಡಿ ನೀನು ಸೆಲೆಕ್ಟ್ ಆದ ಬಗ್ಗೆ ವಿಚಾರಿಸಿದರು. ಅವರದೇನು ಇಲ್ಲಿ' ಎಂದು ಮುಂತಾಗಿ ಅವರು ಹೇಳುವವರಿದ್ದರು. ಆಗ ನನಗೆ ಎಲ್ಲಿಲ್ಲದ ಕೋಪ ಬಂದಿತು. ಈ ಕೋಪ ಬರಲು ಎರಡು ಕಾರಣಗಳಿದ್ದವು. ಮೊದಲನೆಯದಾಗಿ ರಂಗನಾಥ್ ಅವರ ಬಗ್ಗೆ ಟಿಎಸ್‌ಆರ್ ಹಗುರಾಗಿ ಮಾತನಾಡಿದ್ದು. ಎರಡನೆಯದಾಗಿ ಕಮ್ಯೂನಿಸ್ಟ್ ಸ್ವಾಭಿಮಾನದಿಂದ ತುಂಬಿದ್ದ ನನ್ನ ಬಿಸಿರಕ್ತ, ನಾನು ಅವರ ಮಾತನ್ನು ಅರ್ಧಕ್ಕೇ ನಿಲ್ಲಿಸಿ ಜೋರಾಗಿ 'ಸ್ಟಾಪ್' ಎಂದು, ಅವರ ಬಾಯಿಗೆ ಕೈ ಒಯ್ಯುವವರ ಹಾಗೆ ಕೈ ಮುಂದೆ ಮಾಡಿ ಕೂಗಿದೆ. ಟಿಎಸ್‌ಆರ್ ಗರ ಬಡಿದವರಂತೆ ಒಮ್ಮೆಗೆ ಕುರ್ಚಿಯಿಂದ ಎದ್ದು ನಿಂತರು. ಆಗ ನಾನು ಅವರ ಕೋಣೆಯ ಬಾಗಿಲನ್ನು ಜೋರಾಗಿ ತೆರೆದು ಹೊರಬಂದೆ. ಈ ಗದ್ದಲದಿಂದಾಗಿ ಕಚೇರಿಯ ವಾತಾವರಣ ಗಂಭೀರವಾಗಿತ್ತು. 'ಇದೇನು ಮಾಡಿದಿರಿ ನೀವು' ಎಂದು ವೈಕುಂಠರಾಜು ಕಾಳಜಿ ಮತ್ತು ಬೇಸರದಿಂದ ಕೇಳಿದರು. 'ರಂಗನಾಥ ಅವರ ಬಗ್ಗೆ ಹಗುರಾಗಿ ಮಾತನಾಡಿದ ಇವರ ಬಗ್ಗೆ ನನಗೆ ಗೌರವವಿಲ್ಲ, ನನಗೆ ಈ ನೌಕರಿ ಬೇಡ' ಎಂದೆ. 'ಸಂಪಾದಕರು ಒಳ್ಳೆಯ ಮನುಷ್ಯ. ನೀವು ತಪ್ಪು ತಿಳಿದುಕೊಂಡಿದ್ದೀರಿ' ಎಂದರು. 'ಇರಬಹುದು' ಎಂದು ನಮಸ್ಕರಿಸಿ ಹೊರಗೆ ಬಂದೆ.

ಈ ಘಟನೆ ಕುರಿತು ರಂಗನಾಥ ಅವರಿಗೆ ವಿವರಿಸಿದೆ. ಅವರು ಗಂಭೀರವಾದರು. 'ನೀವು ಎಂ.ಎ. ಪರೀಕ್ಷೆ ಮುಗಿದ ಮೇಲೆ ನನಗೆ ಫೋನ್ ಮಾಡಿರಿ' ಎಂದರು. ಆದರೆ ನಾನು ಎಂ.ಎ. ಮುಗಿದ ಮೇಲೆ ಲೈಬ್ರರಿ ಸೈನ್ಸ್ ಪದವಿಗಾಗಿ ಅಭ್ಯಾಸ ಮುಂದುವರಿಸಿದೆ. ಆದರೆ ಅವರು ಮಹಾದೇವ ಹೊರಟ್ಟಿ ಅವರ ಮೂಲಕ ಕರೆಸಿಕೊಂಡರು. ನೌಕರಿ ಕೊಟ್ಟರು. 1976ನೇ ಆಗಸ್ಟ್ 16ರಂದು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಕೃಷಿಪೇಟೆ ಮಾಸಪತ್ರಿಕೆಯ ಉಪ ಸಂಪಾದಕನಾಗಿ ಸೇರಿದೆ. ಹೀಗಿದ್ದರು ನಮ್ಮ ಕೆ.ಎಚ್. ರಂಗನಾಥ ಸಾಹೇಬರು! (ಆರು ವರ್ಷಗಳ ಸೇವೆಯ ನಂತರ ಹೆಚ್ಚಿನ ಸಂಬಳದ ಈ ನೌಕರಿ ಬಿಟ್ಟು ಪ್ರಜಾವಾಣಿ ಸೇರಿದೆ! ನನ್ನ ಲೇಖನಿಯಿಂದ ಸಮಾಜಕ್ಕೆ ಹೆಚ್ಚಿನ ಸೇವೆ ಮಾಡಬಹುದು ಎಂಬ ಒಂದೇ ಭ್ರಮೆ ಈ ನಿರ್ಧಾರದ ಹಿಂದೆ ಇತ್ತು)

ನನಗೆ ಬೆಂಗಳೂರು ಹೊಸದಾಗಿತ್ತು. ಬೀದರ ಗೆಳೆಯ ಬಸವರಾಜ ಬುಳ್ಳಾ ಜೊತೆ ನಾನು ಕೆಲಸ ಮಾಡಬೇಕಿದ್ದ ಕೃಷಿಪೇಟೆ ಕಚೇರಿಗೆ ಹೋಗಿ ಹಾಜರಾದೆ. ಸಾಹೇಬರ ನಿವಾಸವಾಗಿದ್ದ ಕ್ರೆಸೆಂಟ್ ಹೌಸ್‌ನ ಔಟ್‌ಹೌಸ್‌ನಲ್ಲಿ ಉಳಿಯುವ ವ್ಯವಸ್ಥೆಯಾಗಿತ್ತು. ಸಾಹೇಬರು ಖರ್ಚಿಗೆ ನೂರು ರೂಪಾಯಿ ಕೊಟ್ಟರು. ಹೊಸ ಜೀವನ ಪ್ರಾರಂಭವಾಯಿತು. ಔಟ್‌ಹೌಸ್ ತುಂಬ ಚೆನ್ನಾಗಿತ್ತು. ಮುಂದೆ ವಿಜಾಪುರ ಮತ್ತು ಧಾರವಾಡದ ಗೆಳೆಯರಿಗೆ ಆಶ್ರಯತಾಣವಾಯಿತು. ನಾನಂತೂ ಕ್ರೆಸೆಂಟ್ ಹೌಸ್‌ನ ಭಾಗವಾಗಿಬಿಟ್ಟೆ.

ಆ ದಿನಗಳಲ್ಲಿ ಅನೇಕ ಯುವಕರು ಮತ್ತು ನಾಯಕರ ಪರಿಚಯವಾಯಿತು. ಆಗ ಎಡಪಂಥೀಯ ವಿಚಾರಧಾರೆಯವರನ್ನು ಕಂಡರೆ ಕಾಂಗ್ರೆಸ್‌ನವರು ಅಭಿಮಾನ ಪಡುತ್ತಿದ್ದರು. ಕಾಂಗ್ರೆಸ್‌ನಲ್ಲಿ ಆಗ ನಾಯಕ ಸ್ಥಾನಕ್ಕೆ ಏರುತ್ತಿದ್ದ ಸಂಜಯ ಗಾಂಧಿಗೆ ಎಡಪಂಥೀಯ ವಿಚಾರಧಾರೆಯ ಬಗ್ಗೆ ಗೌರವವಿದ್ದಿದ್ದರೆ ಭಾರತದ ಇತಿಹಾಸದ ಗತಿಯೇ ಬೇರೆಯಾಗುತ್ತಿತ್ತು.

ರಂಗನಾಥರು ಗಾಂಧಿಬಜಾರ್‌ನಲ್ಲಿ ಸೆಂಟರ್ ಫಾರ್ ಸೋಷಲಿಸ್ಟ್ ಸ್ಟಡೀಸ್ (ಸಿ.ಎಸ್.ಎಸ್) ಎಂಬ ಸಮಾಜವಾದಿ ಕೇಂದ್ರವನ್ನು ಸ್ಥಾಪಿಸಿ ಯುವಜನರಿಗೆ ಸಮಾಜವಾದದ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಯತ್ನಿಸಿದರು. ಅವರು ಸಿ.ಎಸ್.ಎಸ್. ಅಧ್ಯಕ್ಷರಾಗಿದ್ದರು. ಸಚಿವರಾಗಿದ್ದ ಬಿ. ಸುಬ್ಬಯ್ಯಶೆಟ್ಟಿ ಅವರು ಉಪಾಧ್ಯಕ್ಷರಾಗಿದ್ದರು. ಸೀತಾರಾಮರೆಡ್ಡಿ ಪ್ರಧಾನ ಕಾರ್ಯದರ್ಶಿಯಾಗಿದ್ದರು. ನನ್ನನ್ನು ಕಾರ್ಯದರ್ಶಿಯನ್ನಾಗಿ ಮಾಡಲಾಯಿತು.

ಪ್ರಜಾಪ್ರಭುತ್ವ, ಸಮಾಜವಾದ, ಸಮತಾವಾದ, ಫ್ಯಾಸಿಸಂ, ಭೂಸುಧಾರಣೆ, ಮತೀಯವಾದ ಮತ್ತು ಸಂವಿಧಾನ ಕುರಿತು ವಿಚಾರ ಸಂಕಿರಣಗಳಾಗುತ್ತಿದ್ದವು. ಸ್ವರ್ಣಸಿಂಗ್‌ರಂಥ ರಾಷ್ಟ್ರೀಯ ನಾಯಕರೂ ವಿಚಾರಸಂಕಿರ[illegible] ಭಾಗವಹಿಸಿದ್ದುಂಟು.

ಪ್ರತಿಯೊಂದು ವಸ್ತುಗಳ ಸದುಪಯೋಗವಾಗ[illegible] ಯಾವುದೂ ಸರಳತೆಯನ್ನು ಮೀರಬಾ[illegible] ಮಿತವ್ಯಯಿಯಾಗಿರಬೇಕು. ಇದ್ದುದರಲ್ಲೇ ಸ್ವಾಭಿಮಾ[illegible] ಬದುಕುವ ಛಲ ಇರಬೇಕು. ಪ್ರತಿಯೊಂದರ[illegible] ತಿಳಿದುಕೊಳ್ಳುವ ಮನಸ್ಸಿರಬೇಕು. ಓದುವು[illegible] ಆನಂದಪಡಬೇಕು. ಆಳವಾದ ಚಿಂತನೆಗಳೊಂದಿಗೆ ಸ್ಪ[illegible] ವಿಚಾರಗಳನ್ನು ವ್ಯಕ್ತಪಡಿಸಬೇಕು. ಬಡವರಿಗೆ ಕೈಲ[illegible] ಸಹಾಯ ಮಾಡಬೇಕು. ಸಹಾಯ ಮಾಡಿ[illegible] ಪ್ರದರ್ಶಿಸಬಾರದು. ಉಪಕಾರ ಸ್ಮರಣೆಯ ಮನಸ್ಸಿ[illegible] ಮನುಷ್ಯರನ್ನು ಗುಣದಿಂದ ಅಳೆಯಬೇಕು. ಮಾತನಾಡಿ ಹೆಚ್ಚು ಕೆಲಸ ಮಾಡಬೇಕು. ಹ[illegible] ಮಾಡಬಾರದು. ಕಟ್ಟುನಿಟ್ಟಿನ ಬದುಕಿನಲ್ಲಿ ತೃಪ್ತಿ ಕಾ[illegible] ಮುಂತಾದವು ಅವರ ಚಿಂತನೆಯ ಮೌಲ್ಯಗಳಾಗಿವೆ. [illegible] ಸಾರು ಅವರ ಪ್ರಿಯವಾದ ಆಹಾರವಾಗಿತ್ತು. ಬಡ[illegible] ಅವರ ಜೊತೆ ಊಟ ಮಾಡಿದ್ದುಂಟು.

ಅವರಿಗೆ ಸ್ವಂತ ಕಾರು ಇರಲಿಲ್ಲ. ಅವರ [illegible] ಸರ್ಕಾರಿ ಕಾರಿನಲ್ಲಿ ಎಂದೂ ಶಾಲೆಗೆ ಹೋಗಲಿಲ್ಲ. [illegible] ದಶಕಗಳಷ್ಟು ಹಿಂದೆ ಅವರು ಒಂದು ಸೆಕೆಂಡ್ [illegible] ಅಂಬಾಸಿಡರ್ ಕಾರು ಕೊಂಡರು. ಆಗ [illegible] ಮನೆಮಂದಿಯೆಲ್ಲ ಸಂಭ್ರಮಪಟ್ಟಿದ್ದು ಇಂದಿಗೂ ನ[illegible] ಅನೇಕ ವರ್ಷಗಳಿಂದ ಕ್ಯಾಬಿನೆಟ್ ದರ್ಜೆಯ ಸಚಿ[illegible] ಅವರು ಮೊದಲ ಬಾರಿಗೆ ಕೊಂಡದ್ದು ಒಂದು [illegible] ಕಾರನ್ನು! ಮುಂದೆ ಪ್ರಕಾಶನಗರದಲ್ಲಿ ಮನೆ [illegible] ಸಂದರ್ಭದಲ್ಲಿ ಬ್ಯಾಂಕೊಂದರಲ್ಲಿ 80 ಸಾವಿರ ರೂ[illegible] ಸಾಲ ಮಾಡಿದ್ದು ಮತ್ತು ಈ ಹಳೆ ಕಾರನ್ನು [illegible] ಮನೆಗೆ ಹಾಕಿದ್ದು ನೆನಪಾಗುತ್ತಿದೆ.

ಅಧಿಕಾರ ಶಾಶ್ವತ ಎಂದು ಅವರು [illegible] ಭಾವಿಸಿರಲಿಲ್ಲ. ಒಮ್ಮೆ ಬೆಂಗಳೂರಿನಿಂದ ಮೈ[illegible] ಕಾರಿನಲ್ಲಿ ಹೋಗುವಾಗ 'ಅಧಿಕಾರವೆಂಬುದು [illegible] ತಲೆಯ ಮೇಲಿನ ಬುತ್ತಿ ಇದ್ದಂತೆ. ತಲೆ ಜಾ[illegible] ಬುತ್ತಿ ಕೆಳಗೆ' ಎಂದಿದ್ದರು. ಕಾರು ಮಂಡ್ಯ ದಾ[illegible] ಒಂದು ಘಟನೆ ನಡೆಯಿತು. ಮಂಡ್ಯದ ಜನ ಸ[illegible] ವಿರುದ್ಧ ಘೋಷಣೆ ಕೂಗುತ್ತ ಯಾವುದೋ [illegible] ಇಟ್ಟು ಚಳವಳಿ ನಡೆಸಿದ್ದರು. ಸರ್ಕಾರಿ ಕಾರು ಎಂದ[illegible] ಅವರು ಇನ್ನೂ ಉದ್ವೇಗಕ್ಕೊಳಗಾಗಿ ಘೋಷಣೆ [illegible] ಕಾರಿನ ಬಳಿ ಮುತ್ತಿಗೆ ಹಾಕುವವರ ಹಾಗೆ ಬ[illegible] ಇದು ನನಗೆ ಹೊಸ ಅನುಭವವಾಗಿತ್ತು. ಚಾಲಕ[illegible] ಗಂಭೀರವಾಗಿ ಕುಳಿತಿದ್ದರು. ಸಾಹೇಬರು ಕಾರಿನ [illegible] ಇಳಿಸಿದರು. ಜನ ಕೈ ಮುಗಿದರು. ಸಾಹೇ[illegible] ಕೈಮುಗಿದರು. ಕಾರು ಹೊರಟಿತು. 'ಸ್ವಾಮಿ ರಂಗನ[illegible] ಜಯವಾಗಲಿ' ಎಂದು ಗುಂಪು ಜಯಕಾರ [illegible] ಒಬ್ಬ ವ್ಯಕ್ತಿ ಅಂತಃಶಕ್ತಿಯಿಂದ ಯಾವ ಎತ್ತರಕ್ಕೆ [illegible] ಎಂಬುದು ನನ್ನ ಅರಿವಿಗೆ ಬಂದಿತು.

ಮೈಸೂರಿನ ವೈದ್ಯಕೀಯ ಕಾಲೇ[illegible] ಸಮಾರಂಭವಿತ್ತು. 'ಜಲದರ್ಶಿನಿ'ಯಲ್ಲಿ ಉಳಿದುಕ[illegible] ವ್ಯವಸ್ಥೆಯಾಗಿತ್ತು. ನಾನು ಮೊದಲ ಸಲ ಮೈ[illegible] ಬಂದಿದ್ದೆ. ಸಮಾರಂಭ, ಊಟ ಮುಗಿದರೂ ಜನ[illegible] ಭೇಟಿಗೆ ಬರುತ್ತಲೇ ಇದ್ದರು. ಹೀಗಾಗಿ ಅ[illegible] ಭೇಟಿಯಾಗಲಿಕ್ಕಾಗಲಿಲ್ಲ. ರಾತ್ರಿ 11 ಗಂಟೆ[illegible] ಕೋಣೆಯಲ್ಲಿ ಮಲಗುವ ಸಿದ್ಧತೆಯಲ್ಲಿದ್ದೆ. ಸಾ[illegible] ಕರೆ ಕಳುಹಿಸಿದರು. ಅಷ್ಟುಹೊತ್ತಿಗೆ ಅವರ [illegible] ಶಾಂತವಾಗಿತ್ತು. ಅವರ ಜೊತೆಗೆ ಬಾಯಿಗೆ ಬಂ[illegible] ಮಾತನಾಡುವ ಹಾಗಿಲ್ಲವಾದ್ದರಿಂದ ಕೇಳಿದ್ದಕ್ಕೆ ಉ[illegible] ನಿಂತಿದ್ದೆ. ಸಾಹಿತ್ಯದ ವಿಷಯ ಬಂದಿತು. ಪಂಪನ '[illegible] ಜಾತಿ ತಾನೊಂದೆ ವಲಂ', 'ಕುಲಂ ಕುಲಮಲ್ತ[illegible] ಕುಲಂ, ಬಲಂ ಕುಲಂ, ಅಭಿಮಾನವೊಂದೆ ಕು[illegible] ಹೀಗೆ ಏನೇನೋ ಗಳಹಿದೆ. ಖುಷಿಯಾಗಿ ನಕ್ಕ[illegible]

ಅವರಿಗೆ ಸಾಹಿತ್ಯದ ಬಗ್ಗೆ ವಿಶೇಷ ಆಸಕ್ತಿ. ಓ[illegible] ಅವರಿಗೆ ಬಹಳ ಪ್ರಿಯವಾದ ಅಭ್ಯಾಸವಾಗಿತ್ತು[illegible] ಹಸುರಾದ ಪ್ರಶಾಂತ ಸ್ಥಳವೊಂದರ ಹೆಬ್ಬಂಡೆ [illegible] ಪುಟ್ಟ ಮನೆಯಲ್ಲಿ ಪುಸ್ತಕಗಳ ಜೊತೆ ಇರುವುದು[illegible] ಮಹದಾಸೆಯಾಗಿತ್ತು. ಕೆ.ವಿ. ಅಯ್ಯರ್ ಅವರ 'ಶಾ[illegible] ಮತ್ತು ನಿರಂಜನರ 'ಚಿರಸ್ಮರಣೆ' ಅವರ ಪ್ರೀ[illegible] ಪುಸ್ತಕಗಳ ಸಾಲಿಗೆ ಸೇರಿದ್ದವು. (ಅವರ ಕೊನೆಯ ದ[illegible] ಒಂದು ದಿನ 'ಉಚಲ್ಯಾ' ಒಯ್ದು ಕೊಟ್ಟಿದ್ದೆ. ಮ[illegible] ಭೇಟಿಯಾದಾಗ ಆ ಜನಾಂಗದ ಹೃದಯಸ್ಪರ್ಶಿ [illegible] ಬಗ್ಗೆ ಬಹಳ ನೊಂದುಕೊಂಡಿದ್ದರು.)

ಕ್ರೆಸೆಂಟ್ ಹೌಸ್‌ನಲ್ಲಿದ್ದಾಗ ನನ್ನ 'ಸಾಹಿತ್ಯ[illegible]

ಾಜ' ಕೃತಿಯನ್ನು ಅವರಿಗೆ ಕೊಟ್ಟಿದ್ದೆ. ಒಂದು ದಿನ, ರಾತ್ರಿ ಗನ್‌ಮ್ಯಾನ್ ಬಂದು ಹೇಬರು ಕರೆಯುತ್ತಿದ್ದಾರೆ' ಎಂದು ಹೇಳಿದ. ಇಷ್ಟೊತ್ತಿಗೆ ಏಕೆ ಕರೆಯುತ್ತಿದ್ದಾರೆ ು ನಾನು ಅಳುಕುತ್ತಲೇ ಹೋದೆ. ಅವರು 'ಸಾಹಿತ್ಯ ಮತ್ತು ಸಮಾಜ' ಓದುತ್ತಿದ್ದರು. ಹಿಳೆಯಿಂದಾಗಿ ಕೃಷಿ ಪ್ರಾರಂಭವಾಯಿತು. ಅದೇ ನಾಗರಿಕತೆಗೆ ಮೂಲವಾಯಿತು' ು ಬರೆದದ್ದರ ಬಗ್ಗೆ ಪ್ರಶ್ನಿಸಿದರು. ಅದು ಅವರಿಗೆ ಸಂತಸವನ್ನುಂಟುಮಾಡಿತ್ತು.

ಭೂ ಸುಧಾರಣೆ ಮೂಲಕ ಬಡವರಿಗೆ ಭೂಮಿ ಸಿಗುವಂತೆ ಮಾಡುವುದು, ವರಿಗೆ ನಿವೇಶನ ಹಂಚುವುದು, ಸಹಕಾರಿ ಕ್ಷೇತ್ರದಲ್ಲಿ ಸುಧಾರಣೆ ತರುವುದು, ಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾಲಯದವರೆಗೆ ಶಿಕ್ಷಣದಲ್ಲಿ ಸುಧಾರಣೆ ವುದು ಮುಂತಾದವು ಅವರ ಯೋಜನೆಗಳಾಗಿದ್ದವು. ಭೂಸುಧಾರಣೆ ಎಂದಕೂಡಲೆ ರಾಜ ಅರಸು, ರಂಗನಾಥ ಮತ್ತು ಬಿ. ಸುಬ್ಬಯ್ಯಶೆಟ್ಟಿ ಅವರ ಹೆಸರುಗಳು ಾಗುತ್ತವೆ. ಆದರೆ ಒಂದು ಭಾಷಣದಲ್ಲಿ ರಂಗನಾಥರು 'ಬಸವಣ್ಣನವರ ಪ್ರಭಾವದಿಂದಾಗಿ ಸುಧಾರಣೆಗೆ ಪ್ರಯತ್ನಿಸಿದವರಲಿ ಬಿ.ಡಿ. ಜತ್ತಿ ಅವರು ಮೊದಲಿಗರು' ಎಂದು ಿದ್ದು ನನಗಿನ್ನೂ ನೆನಪಿದೆ.

ಮಕ್ಕಳ ಬಗ್ಗೆ ಅವರಿಗೆ ವಿಶೇಷ ಪ್ರೀತಿ. ಮಕ್ಕಳ ಜೊತೆ ಹೆಚ್ಚಿನ ಸಮಯ ಯಲಿಕ್ಕಾಗುತ್ತಿಲ್ಲ ಎಂಬ ಬೇಸರ ಅವರಿಗಿತ್ತು. ಎಡೆಬಿಡದ ಕೆಲಸ ಕಾರ್ಯಗಳ ಧ್ಯೆಯೂ ಅವರು ಮಕ್ಕಳ ಭೇಟಿಗಾಗಿ ಸಮಯ ಹೊಂದಿಸಿಕೊಳ್ಳಲು ಯತ್ನಿಸುತ್ತಿದ್ದರು. ಂದು ಸಿಕ್ಕಾಗಲೆಲ್ಲ ಮಕ್ಕಳನ್ನು ಕರೆಸಿ ಮಾತನಾಡಿಸುತ್ತಿದ್ದರು. ಮಕ್ಕಳು ಪ್ರತಿಯೊಂದು ವಿನ ಬಗ್ಗೆ ಕಾಳಜಿ ವಹಿಸಬೇಕು ಎಂದು ಅವರು ಬಯಸುತ್ತಿದ್ದರು. ಯಾವುದೇ ಣೆಯಲ್ಲಿ ನಿರುಪಯುಕ್ತವಾಗಿ ದೀಪ ಉರಿಯಬಾರದು ಎಂದು ಮಕ್ಕಳಿಗೆ ಹೇಳುತ್ತಿದ್ದರು. ಕ್ಷೆಗಳು ಮುಗಿದಬಳಿಕ ಒಂದು ದಿನ ಎಲ್ಲ ಮಕ್ಕಳನ್ನು ಕರೆದು ಅವರು ಬಳಸಿದ ಟ್‌ಬುಕ್‌ಗಳನ್ನು ತರಲು ಹೇಳುತ್ತಿದ್ದರು. ನೆಲದ ಮೇಲೆ ಕುಳಿತು, ಪ್ರತಿ ಮಗುವಿನ ಬಳಸಿದ ನೋಟ್‌ಬುಕ್‌ಗಳಲ್ಲಿ ಬಳಸದೆ ಉಳಿದ ಹಾಳೆಗಳನ್ನು ತೆಗೆದು ಜೋಡಿಸಿ ಹೊಲಿದು ಕಚ್ಚಾ ನೋಟ್‌ಬುಕ್‌ಗಳನ್ನು ತಯಾರಿಸಿಕೊಡುತ್ತಿದ್ದರು. ಮಕ್ಕಳು ಾಜಿಯ ಕಾಣಿಕೆಯನ್ನು ಸಂತಸದಿಂದ ಸ್ವೀಕರಿಸುತ್ತಿದ್ದರು.

ಮನೆಗೆ ಎಲ್ಲ ಪತ್ರಿಕೆಗಳು ಬರುತ್ತಿದ್ದವು. ಹಳೆ ಪತ್ರಿಕೆಗಳನ್ನು ಒಂದು ಮೂಲೆಯಲ್ಲಿ ಹಾಕಬೇಕಿತ್ತು, ಒಂದು ತಿಂಗಳ ನಂತರ ಆ ರದ್ದಿ ಪೇಪರ್ ರಾಶಿಯನ್ನು ಲು ಯಾರಾದರೊಬ್ಬರು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಬೇಕಿತ್ತು. ಇಂಥವು ಅವರಿಗೆ ಸಣ್ಣ ಸಂಗತಿಗಳಲ್ಲ. ಅವರ ಕಾನೂನು ಪಾಲನೆಗೆ ಒಂದು ಸೂಕ್ಷ್ಮ ರ್ಶನವಿದು.

ಒಂದು ದಿನ ರಾತ್ರಿ 7.30ರ ಸಮಯ ಸಾಹೇಬರ ಜೊತೆ ಯಾರೋ ಮಾತನಾಡುತ್ತ ತಿದ್ದರು. ಅಡುಗೆ ಮನೆಯಲ್ಲಿ ಅಡುಗೆ ಭಟ್ಟ ಮಾಧವ ಮತ್ತು ಅಮ್ಮನವರ ತೆ ಅದು ಇದು ಮಾತನಾಡುತ್ತ ನಿಂತಿದ್ದೆ. ಗನ್‌ಮ್ಯಾನ್ ಬಂದು 'ಸಾಹೇಬರು ು ಕಪ್ ಚಹಾ ಕಳಿಸಲು ಹೇಳಿದ್ದಾರೆ' ಎಂದ. ಮಾಧವ ಗಾಬರಿಯಾದ. ಸಕ್ಕರೆ ಗಿದಿದ್ದರ ಬಗ್ಗೆ ಆತ ಮೊದಲೇ ಹೇಳುವುದನ್ನು ಮರೆತಿದ್ದ. ಆ ಸಂದರ್ಭದಲ್ಲಿ ಮ್ಮನ ಬಳಿ ಹಣ ಇರಲಿಲ್ಲ. ನನ್ನ ಬಳಿಯೂ ಇರಲಿಲ್ಲ. ಆದರೆ ನಾನು ಹಾಗೆ ಳಲಿಲ್ಲ. ಮಾಧವ ಚಹಾಕ್ಕೆ ಇಡು ಎಂದು ಹೇಳಿದವನೇ ಓಡಿದೆ. ಹತ್ತೇ ನಿಮಿಷದಲ್ಲಿ ರ್ಧ ಕೆ.ಜಿ. ಸಕ್ಕರೆ ತಂದೆ. ರದ್ದಿ ಪೇಪರ್ ರಾಶಿಯಲ್ಲಿನ ಒಂದಿಷ್ಟು ಪೇಪರ್ ದುಕೊಂಡು ಹಿಂದಿನ ಕಾಂಪೌಂಡ್ ಹಾರಿ, ದಿನಸಿ ಅಂಗಡಿಗೆ ಹೋಗಿ, ಅದನ್ನು ರಿ ಸಕ್ಕರೆ ತಂದಿದ್ದೆ. ರಾತ್ರಿ ಬಹಳ ಹೊತ್ತಿನವರೆಗೆ ನಿದ್ರೆ ಬರಲಿಲ್ಲ.


ಅವರು ಕ್ಷಣಕ್ಷಣಕ್ಕೆ ರೇಗಿದರೂ ಅವರ ಅಂತಃಕರಣವನ್ನು ಬಲ್ಲ ಅಭಿಮಾನಿಗಳು ರನ್ನು ಎಂದೂ ತಪ್ಪಾಗಿ ತಿಳಿದುಕೊಳ್ಳಲಿಲ್ಲ.

ನನ್ನ ಮಾತು, ಮೌನ ಮತ್ತು ಕಮ್ಯೂನಿಸ್ಟ್ ಧೋರಣೆ ಅವರಿಗೆ ಕೆಲವೊಂದು ಸಲ ಚಿತ್ರ ಎನಿಸುತ್ತಿದ್ದವು. ಒಂದು ದಿನ ಸಾಗರದ ಕಡೆಯವರೊಬ್ಬರು ಗಣಪತಿಯ ಂದದ ಮೂರ್ತಿಯನ್ನು ತಂದುಕೊಟ್ಟರು. ನಾನು ಆ ಕಾಷ್ಠಶಿಲ್ಪವನ್ನು ಮೆಚ್ಚಿದೆ. ಮ್ಯೂನಿಸ್ಟರಿಗೆ ದೇವರ ಮೂರ್ತಿ ಇಷ್ಟವಾಗುವುದೇ? ಎಂದು ಕೇಳಿದರು. ನಾನು ಚ್ಚಿದ್ದು ಶಿಲ್ಪಿಯ ಪ್ರತಿಭೆಯನ್ನು ಹಾಗೂ ಮಾನವಲೋಕ ಮತ್ತು ಪ್ರಾಣಿ ಜಗತ್ತನ್ನು ಂದಾಗಿ ಕಾಣುವ ಅದ್ಭುತ ಕಲ್ಪನೆಯನ್ನು ಎಂದೆ.

ತುರ್ತು ಪರಿಸ್ಥಿತಿಯ ನಂತರ ಚುನಾವಣೆ ಘೋಷಣೆಯಾದ ಮೇಲೆ, ಅವರಿಗೆ ೀಮಂತ ಅನುಯಾಯಿಯೊಬ್ಬರು ಬರಿ ಸಹಿ ಮಾಡಿದ್ದ ಚೆಕ್ ಕಳುಹಿಸಿದ್ದರು. ್ಮ ಚುನಾವಣೆಗೆ ಎಷ್ಟು ಹಣ ಬೇಕೋ ಅಷ್ಟು ಬರೆದುಕೊಳ್ಳಿ ಎಂದು ಚೆಕ್ ತೆ ಕಳುಹಿಸಿದ ಪತ್ರದಲ್ಲಿ ಮನವಿ ಮಾಡಿದ್ದರು. ಸಾಹೇಬರು ಆ ಚೆಕ್ ನೋಡಿ ದರು. ಎಂದೂ ಅದರ ಬಳಕೆಯಾಗಲಿಲ್ಲ.

ಪ್ರಾಥಮಿಕ ಶಾಲೆಯ ಪಠ್ಯಪುಸ್ತಕಗಳಿಗೆ ಸಂಬಂಧಿಸಿದ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ವಿದ್ಯಾಗುರು ಪ್ರೊ. ಎ.ಎಸ್. ಹಿಪ್ಪರಗಿ ಅವರು ವಿಜಾಪುರದಿಂದ ಬೆಂಗಳೂರಿಗೆ ದಿದ್ದರು. ಅವರಿಗೆ ರಂಗನಾಥರ ಬಗ್ಗೆ ಬಹಳ ಗೌರವ. ಅವರನ್ನು ವಿಧಾನಸೌಧದಲ್ಲಿನ ಹೇಬರ ಚೇಂಬರ್‌ಗೆ ಕರೆದುಕೊಂಡು ಹೋದೆ. ಸಾಹೇಬರು ಹೋಗುವ ಬಡಿಯಲ್ಲಿದ್ದರು. ಪರಿಚಯ ಮಾಡಿಸಿದೆ. ಚೆನ್ನಾಗಿ ಮಾತನಾಡಿಸಿದ ಅವರು ನನ್ನಿಂದ ಾಗಬೇಕು ಎಂದು ಕೇಳಿದರು. ಏನೂ ಆಗಬೇಕಿಲ್ಲ, ನಿಮ್ಮನ್ನು ನೋಡಬೇಕಿತ್ತು ್ತೆ ಎಂದು ಹಿಪ್ಪರಗಿ ಸರ್ ಹೇಳಿದರು. ನಾನು ಸರ್ ವಿದ್ವತ್ತಿನ ಬಗ್ಗೆ ಸಾಹೇಬರಿಗೆ ಚ್ಚವಾಗಿ ಹೇಳಿದೆ. ಅವರು ಬಹಳ ಸಂತಸ ಪಟ್ಟರು. ಸ್ವಲ್ಪ ಹೊತ್ತು ಕನ್ನಡ ಕರಣ, ಶಬ್ದ ಪ್ರಯೋಗ ಮತ್ತು ವಾಕ್ಯ ರಚನೆ ಕುರಿತು ಚರ್ಚಿಸಿದರು. ಮಕ್ಕಳ ೋಮಿತಿಗೆ ತಕ್ಕಂತೆ ಯಾವ ರೀತಿ ಪಾಠಗಳು ಇರಬೇಕು. ಅವುಗಳ ಭಾಷಾ ಕಟ್ಟು ಮತ್ತು ವಿಷಯ ಹೇಗಿರಬೇಕು ಎಂಬುದರ ಕುರಿತು ಮಾತನಾಡಿದರು. ಈ ೇಟಿಯ ಸಂದರ್ಭದಲ್ಲಿ ಅವರು ತುಂಬ ಸಂತಸದಿಂದಿದ್ದರು.

ಅವರು ತತ್ವಗಳನ್ನು ನಂಬಿ ರಾಜಕೀಯದಲ್ಲಿ ಇದ್ದವರು ಹೊರತಾಗಿ ಭವಿಷ್ಯಕಾರರನ್ನು ಂಬಿ ಇದ್ದವರಲ್ಲ. ಅವರು ಎಂದೂ ಮಾಟಮಂತ್ರಗಳಿಗೆ ಶರಣಾದವರಲ್ಲ. ಭವಿಷ್ಯ ಳಿದವರಲ್ಲ. ದೇಶದಲ್ಲಿ ಗಾಂಧೀಜಿ, ಅಂಬೇಡ್ಕರ್ ಮತ್ತು ನೆಹರೂ ಅಂಥವರು




ಮಾತ್ರ ಇಂಥ ದೃಢವಾದ ಮನಸ್ಥಿತಿಯನ್ನು ಹೊಂದಿದವರಾಗಿದ್ದರು.

ಎಷ್ಟೋ ಸಲ ನನಗೆ ಅನಿಸುತ್ತದೆ ಇಂಥವರೂ ರಾಜಕೀಯದಲ್ಲಿ ಇರಲು ಸಾಧ್ಯವೆ ಎಂದು. ಅದೂ ಇಷ್ಟೊಂದು ದಶಕಗಳವರೆಗೆ! ಜಗತ್ತು ಒಳ್ಳೆಯದಕ್ಕೆ ಒಂದುಕ್ಷಣವಾದರೂ ತಲೆಬಾಗುವವರಿಗೆ ಇಂಥವರು ಇದ್ದೇ ಇರುತ್ತಾರೆ. ಬದುಕಿನಲ್ಲಿ ಆಶಾಕಿರಣಗಳು ಸೃಷ್ಟಿಯಾಗುತ್ತಲೇ ಇರುತ್ತವೆ.

■ ರಂಜಾನ್ ದರ್ಗಾ

ಅಂಕಿಅಂಶಗಳಲ್ಲಿ ಆಟ




ನರೇಂದ್ರ ಮೋದಿ ಅಂದು ತನ್ನ ಹಲವಾರು ಚುನಾವಣಾ ಭಾಷಣಗಳಲ್ಲಿ ಕೊಟ್ಟಂಥ ಹತ್ತುಹಲವು ಭರವಸೆಗಳು ಜನಸಾಮಾನ್ಯರ ಪಾಲಿಗೆ ಗಗನಕುಸುಮವಾಗಿಯೆ ಉಳಿದಿರುವುದು ಇವತ್ತಿನ ಸತ್ಯ. ಆದರೂ ಅಂಕಿಅಂಶಗಳಲ್ಲಿ ಆಟವಾಡಿ ಜನಸಾಮಾನ್ಯರಿಗೆ ಮಂಕುಬೂದಿ ಎರಚುವ ಕಲೆಯಲ್ಲಿ ಮೋದಿ ಸರ್ಕಾರವನ್ನು ಮೀರಿಸಿದವರು ಯಾರೂ ಇಲ್ಲವೆಂದೇ ಹೇಳಬಹುದು. ಮೋದಿ ಸರ್ಕಾರದ ಆಡಳಿತದಡಿ ದೇಶದ ಆರ್ಥಿಕ ಪರಿಸ್ಥಿತಿ ಹದಗೆಟ್ಟು ಅಧೋಮುಖಿಯಾಗಿದ್ದರೂ ಅದರ 24x7 ಪ್ರಚಾರಯಂತ್ರ ಮಾತ್ರ ಆರ್ಥಿಕತೆ ಊರ್ಧ್ವಮುಖಿಯಾಗಿದೆ ಎಂಬ ಮಿಥ್ಯೆಯನ್ನು ಹಬ್ಬಿಸುವುದರಲ್ಲಿ ನಿರತವಾಗಿದೆ. ಆರ್ಥಿಕತೆಯ ನೈಜಸ್ಥಿತಿಯನ್ನು ಅರಿಯಬೇಕಾದರೆ ಅದರ ಮೂರು ಮುಖ್ಯ ಕ್ಷೇತ್ರಗಳಾದ ಸರಕುಸಾಮಗ್ರಿಗಳ ಉತ್ಪಾದನೆ; ಯಂತ್ರ, ಸಲಕರಣೆಗಳಂತಹ ಮೂಲವಸ್ತುಗಳು ಮತ್ತು ವಿದ್ಯುತ್ ಉತ್ಪಾದನೆಯ ಜೊತೆಗೆ ರಫ್ತು, ಬ್ಯಾಂಕ್ ಸಾಲಗಳು ಮತ್ತು ನಿರುದ್ಯೋಗದ ಪರಿಮಾಣಗಳನ್ನು ನೋಡಬೇಕು. ಆಗಷ್ಟೆ ಭಾರತದ ಆರ್ಥಿಕತೆ ರೋಗಗ್ರಸ್ತವಾಗಿರುವುದು ಸ್ಪಷ್ಟವಾಗಿ ತಿಳಿಯುತ್ತದೆ.

ಮೊದಲನೆಯದಾಗಿ, ಮೋದಿ ಸರ್ಕಾರ ಭಾರಿ ಪ್ರಚಾರದೊಂದಿಗೆ ಘೋಷಿಸಿದಂಥ 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮದ ಉದ್ದೇಶವೇನಾಗಿತ್ತು? ಸರಕುಸಾಮಗ್ರಿಗಳ ಉತ್ಪಾದನೆಯನ್ನು ಮತ್ತು ಉದ್ಯೋಗಗಳನ್ನು ಹೆಚ್ಚಿಸುವುದು ಅಲ್ಲವೆ. ಆದರೆ ಸರಕುಸಾಮಗ್ರಿಗಳ ಉತ್ಪಾದನೆ ಶೇಕಡ 0.3ರಷ್ಟು ಕಡಿಮೆಯಾಗಿದ್ದರೆ ಮೂಲವಸ್ತುಗಳು ಶೇಕಡ 22ರಷ್ಟು ಕಡಿಮೆಯಾಗಿರುವುದನ್ನು ಕಾಣಬಹುದು; ವಿದ್ಯುತ್ ಉತ್ಪಾದನೆಯಲ್ಲಿ ಕೇವಲ 0.1 ಪ್ರತಿಶತ ಹೆಚ್ಚಳ ಆಗಿದೆ ಅಷ್ಟೆ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ (ಐಐಪಿ) ಜುಲೈ ಮತ್ತು ಆಗಸ್ಟ್ ಎರಡೂ ತಿಂಗಳಲ್ಲಿ ಕುಸಿದಿರುವುದನ್ನು ಗಮನಿಸಬಹುದು. ಜುಲೈನಲ್ಲಿ ಶೇಕಡಾ 2.5ರಷ್ಟು ಕಡಿಮೆಯಾಗಿದ್ದ ಸೂಚ್ಯಂಕ ಆಗಸ್ಟ್‌ನಲ್ಲಿ ಮತ್ತೆ 0.7 ಪ್ರತಿಶತ ಇಳಿಕೆ ಕಂಡಿದೆ. ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಆಗಸ್ಟ್ ವರೆಗಿನ ಐದು ತಿಂಗಳ ಅವಧಿಯನ್ನು ತೆಗೆದುಕೊಂಡರೆ ಕಳೆದ ವರ್ಷ 4.1% ಇದ್ದ ಐಐಪಿ ಈ ವರ್ಷ 0.3%ಕ್ಕೆ ಇಳಿದಿರುವುದು ಹೊಸ ಹೂಡಿಕೆಗಳು ಆಗುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ. ಕಳೆದ 20 ತಿಂಗಳ ಅವಧಿಯಲ್ಲಿ ಬೇಡಿಕೆ ಕುಸಿತದ ಪರಿಣಾಮವಾಗಿ ರಫ್ತು ಪ್ರಮಾಣವೂ ಕಡಿಮೆಯಾಗಿದೆ. ಬ್ಯಾಂಕುಗಳ ಅನುತ್ಪಾದಕ ಆಸ್ತಿ ಅರ್ಥಾತ್ ಕೆಟ್ಟ ಸಾಲಗಳ ಪ್ರಮಾಣ 2015ರ ಡಿಸೆಂಬರ್‌ನಲ್ಲಿ 121 ಬಿಲಿಯ ಡಾಲರು ಇದ್ದದ್ದು 2016ರ ಜೂನ್‌ಗಾಗುವಾಗ 138 ಬಿಲಿಯ ಡಾಲರುಗಳಿಗೆ ಏರಿದೆ. ನಿರುದ್ಯೋಗದ ವಿಷಯಕ್ಕೆ ಬಂದರೆ ಇಂದು ಇರುವಷ್ಟು ನಿರುದ್ಯೋಗ ಕಳೆದ 5 ವರ್ಷಗಳಲ್ಲಿ ಎಂದೂ ಇರಲಿಲ್ಲ ಎಂದು ಸರ್ಕಾರದ ಕಾರ್ಮಿಕ ಇಲಾಖೆಯೆ ಹೇಳುತ್ತಿದೆ.

NUMBERS THAT CONFLICT AND CONFUSE


Both GVA Manufacturing and IIP Manufacturing pertain to the manufacturing sector. But that's where the similarity ends



Gross Value Added Manufacturing
Index of Industrial Production Manufacturing

GVA Manufacturing measures the total contribution of labour and capital in the manufacturing process. IIP Manufacturing measures the absolute amount produced by the manufacturing sector.

Comparing CPI with WPI, little can be gleaned by the layperson about how prices in the local market are going to move



Consumer Price Index
Wholesale Price Index

WPI looks at the movement of prices across various categories at the wholesale level. CPI looks at the movement of the prices that the consumer finally pays.

ಕಾರ್ಮಿಕ ಇಲಾಖೆ ನಡೆಸಿದ ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಕುಟುಂಬಗಳ ಪೈಕಿ ಶೇಕಡಾ 77ರಲ್ಲಿ ನಿಯಮಿತವಾಗಿ ವೇತನ ಪಡೆಯುವವರು ಯಾರೂ ಇಲ್ಲವೆಂದು ತಿಳಿದುಬಂದಿದೆ. ಇನ್ನು ತೆರಿಗೆ ಸಂಗ್ರಹ ಕುರಿತು ಸರ್ಕಾರ ಬಿಡುಗಡೆಗೊಳಿಸುವ ಅಂಕಿಅಂಶಗಳಿಂದಲೂ ದೇಶದ 'ಅಭಿವೃದ್ಧಿ' ಹೇಗಿದೆಯೆಂದು ತಿಳಿಯಲು ಸಾಧ್ಯವಾಗದು. ಕಾರ್ಪೊರೇಟುಗಳು ಮತ್ತು ವ್ಯಕ್ತಿಗಳಿಂದ ಸಂಗ್ರಹಿಸಿದಂಥ ಆದಾಯ ತೆರಿಗೆಯ ಪ್ರಮಾಣಗಳು ಸರಿಯಾದ ಚಿತ್ರಣ ನೀಡುವುದಿಲ್ಲ ಏಕೆಂದರೆ ಒಂದು, ಭಾರತದಲ್ಲಿ ಆದಾಯವುಳ್ಳವರ ಪೈಕಿ ತೆರಿಗೆ ಕಟ್ಟುವವರ ಸಂಖ್ಯೆ ಶೇಕಡಾ 5.5ನ್ನು ಮೀರುವುದಿಲ್ಲ. ಎರಡು, ಹೆಚ್ಚಿನ ಕಾರ್ಪೊರೇಟುಗಳು ತೆರಿಗೆವನ್ನಾ ಭಾಗ್ಯದ ಫಲಾನುಭವಿಗಳಾಗಿವೆ.

ತಜ್ಞರ ಅಭಿಪ್ರಾಯಗಳು ಹೀಗಿರುವಾಗ ಮೋದಿ ಸರ್ಕಾರ ಕೆಲವೊಂದು ಅಂಕಿಅಂಶಗಳಲ್ಲಿ ಆಟವಾಡುತ್ತ ಜನರನ್ನು ಮೂರ್ಖರನ್ನಾಗಿಸುವುದರಲ್ಲಿ ತೊಡಗಿದೆ. ಉದಾಹರಣೆಗೆ 2015-16ರ ಅವಧಿಯಲ್ಲಿ ಭಾರತದ ಜಿಡಿಪಿ (ನಿವ್ವಳ ದೇಶೀಯ ಉತ್ಪನ್ನ: ಒಂದು ವರ್ಷದಲ್ಲಿ ಉತ್ಪತ್ತಿಯಾದ ಪದಾರ್ಥಗಳು ಹಾಗೂ ಸೇವೆಗಳ ಒಟ್ಟು ಮೌಲ್ಯ) ಶೇಕಡಾ 7.6ಕ್ಕೆ ಏರಿದೆ. ಜಿವಿಎ (ನಿವ್ವಳ ಮೌಲ್ಯ ವೃದ್ಧಿ: ಒಂದು ವರ್ಷದಲ್ಲಿ ಶ್ರಮ ಮತ್ತು ಬಂಡವಾಳಗಳಿಂದಾದ ಹೆಚ್ಚಳ) ಕೂಡಾ ಶೇಕಡಾ 7ಕ್ಕಿಂತ ಜಾಸ್ತಿ ಇದೆ ಎಂಬಿತ್ಯಾದಿ ಅಂಕಿಅಂಶಗಳನ್ನು ತೋರಿಸಿ ಭಾರತದ ಆರ್ಥಿಕ ಪರಿಸ್ಥಿತಿ ಗಟ್ಟಿಮುಟ್ಟಾಗಿದ್ದು ಉತ್ತಮವಾಗಿ ಬೆಳೆಯುತ್ತಿದೆ ಎಂದು ಬಡಾಯಿ ಬಿಡಲಾಗುತ್ತಿದೆ. ಆದರೆ ತಳಮಟ್ಟದಲ್ಲಿ ವಿನಾಗುತ್ತಿದೆ ಎಂಬುದನ್ನೆಲ್ಲ ಗಮನಿಸುತ್ತಿರುವವರಿಗೆ ಇವು ಬರೀ ಬೂಸಿ ಅಂಕಿಅಂಶಗಳೆಂದು ಕೂಡಲೆ ಗೊತ್ತಾಗುತ್ತದೆ. ವಾಸ್ತವ ಏನೆಂದರೆ ದೇಶದಲ್ಲಿ ಸ್ಥಿರ ಬಂಡವಾಳ ಮತ್ತು ಉದ್ಯೋಗಗಳ ಸೃಷ್ಟಿ, ಸರ್ಕಾರದ ಖರ್ಚುವೆಚ್ಚಗಳು, ಉದ್ದಿಮೆಗಳ ಬೆಳವಣಿಗೆ, ಕೈಗಾರಿಕಾ ಉತ್ಪಾದನೆ ಎಲ್ಲವೂ ಇಳಿಮುಖವಾಗಿರುವುದರ ಜೊತೆಗೆ ಆಹಾರಧಾನ್ಯಗಳ ಉತ್ಪಾದನೆಯೂ ಹೆಚ್ಚುಕಡಿಮೆ ಸ್ಥಗಿತಗೊಂಡಿರುವುದರಿಂದ ಜಿಡಿಪಿ ಮತ್ತು ಜಿಡಿಐ (ನಿವ್ವಳ ದೇಶೀಯ ಆದಾಯ) ನಡುವಿನ ವ್ಯತ್ಯಾಸ ಶೇಕಡಾ 2.4ಕ್ಕೇರಿದೆ. ಹೀಗಾಗಿ ನಿಜವಾದ ಜಿಡಿಪಿ ದರ = 7.6% - 2.4% ಅಂದರೆ ಬರೀ 5.2% ಅಷ್ಟೆ!

ಮುಂದೆ ಕೈಗಾರಿಕಾ ಕ್ಷೇತ್ರದಲ್ಲಿ ಸರಕುಸಾಮಗ್ರಿಗಳ ಉತ್ಪಾದನೆಗೆ (manufacture) ಸಂಬಂಧಿಸಿದಂತೆ ಮೋದಿ ಸರ್ಕಾರ ಪ್ರಕಟಿಸಿರುವ ಅಂಕಿಅಂಶಗಳನ್ನು ನೋಡೋಣ. ಪ್ರಸಕ್ತ ಆರ್ಥಿಕ ವರ್ಷದ ಮೊದಲ ಮೂರು ತಿಂಗಳುಗಳ ಅವಧಿಯಲ್ಲಿ ಸರಕುಸಾಮಗ್ರಿಗಳ ಉತ್ಪಾದನಾ ವಲಯದ ಜಿವಿಎ (ನಿವ್ವಳ ಮೌಲ್ಯ ವೃದ್ಧಿ) ಶೇಕಡಾ 9.1 ಎಂದು ಹೇಳಲಾಗಿದೆ. ಜನಸಾಮಾನ್ಯರು ಇದನ್ನು ನೋಡಿ "ಆಹಾ! ಆರ್ಥಿಕತೆ ಎಷ್ಟೊಂದು ಬಲಿಷ್ಠವಾಗಿದೆ" ಎಂಬ ತಕ್ಷಣದ ತೀರ್ಮಾನಕ್ಕೆ ಬರುವ ಸಾಧ್ಯತೆಗಳೇ ಹೆಚ್ಚು. ಆದರೆ ಇದೇ ಅವಧಿಯಲ್ಲಿ ಇದೇ ವಲಯದ ಐಐಪಿ (ಸರಕುಸಾಮಗ್ರಿಗಳ ಐಐಪಿ) ಎಷ್ಟಿದೆಯೆಂದು ನೋಡಿದರೆ ಅದು 0.8 ಪ್ರತಿಶತ ಕಡಿಮೆಯಾಗಿದೆ! ಒಂದೆಡೆ ಒಟ್ಟು ಉತ್ಪಾದನೆ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಇನ್ನೊಂದೆಡೆ ಉತ್ಪಾದನೆಯ ಮೌಲ್ಯ ಹೆಚ್ಚುತ್ತಿರುವ ವಿಪರ್ಯಾಸ ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ! ವಿಷಯ ಏನೆಂದರೆ ಸದರಿ ಜಿವಿಎ ಮತ್ತು ಐಐಪಿ ಇವೆರಡೂ ಮೇಲುನೋಟಕ್ಕೆ ಸರಕುಸಾಮಗ್ರಿಗಳ ಉತ್ಪಾದನೆಯ (manufacture) ವಲಯಕ್ಕೆ ಸಂಬಂಧಪಟ್ಟಿರುವಂತೆ ತೋರಬಹುದಾದರೂ ವಾಸ್ತವ ಮಾತ್ರ ಭಿನ್ನವಾಗಿದೆ. ಐಐಪಿ ನಿವ್ವಳ ಉತ್ಪನ್ನವನ್ನು ಅಥವಾ ಸರಕುಸಾಮಗ್ರಿಗಳ ಒಟ್ಟಾರೆ ಉತ್ಪಾದನೆಯ ಪ್ರಮಾಣವನ್ನು ಲೆಕ್ಕಹಾಕುತ್ತದೆ. ಅತ್ತ ಜಿವಿಎ ಲೆಕ್ಕಹಾಕುವುದು ಏನನ್ನು ಗೊತ್ತೆ? ಉತ್ಪಾದನಾ ಪ್ರಕ್ರಿಯೆಯಲ್ಲಿ ಕಾರ್ಮಿಕರ ಮತ್ತು ಬಂಡವಾಳಿಗರ ಒಟ್ಟು ಕೊಡುಗೆ ಎಷ್ಟೆಂದು!! ಮತ್ತೊಂದು ವಿಚಿತ್ರ ಏನೆಂದರೆ ಜಿಡಿಪಿ, ಜಿವಿಎ ಮುಂತಾದುವೆಲ್ಲ 2011-12ರ ಅಂಕಿಅಂಶಗಳನ್ನು ಆಧಾರವಾಗಿಟ್ಟುಕೊಂಡಿವೆ. ಆದರೆ ಐಐಪಿ ಬಳಸುತ್ತಿರುವುದು 2004-05ರ ಅಂಕಿಅಂಶಗಳನ್ನು!

ಈಗ ಸಾಮಾನ್ಯ ಜನರಿಗೆಲ್ಲ ಭಾರಿ ಮಹತ್ವದ್ದಾಗಿರುವ ಬೆಲೆ ಏರಿಕೆಯ ಅಂಕಿಅಂಶಗಳನ್ನು ತೆಗೆದುಕೊಳ್ಳೋಣ. ಸರ್ಕಾರ ಇದಕ್ಕೆ ಸಂಬಂಧಪಟ್ಟಂತೆ ಪ್ರತಿ ತಿಂಗಳು ಎರಡು ಬಗೆಯ ಅಂಕಿಅಂಶಗಳನ್ನು ಬಿಡುಗಡೆಗೊಳಿಸುತ್ತಿದೆ. ಒಂದು ವಿವಿಧ ಸಾಮಗ್ರಿಗಳ ಸಗಟು ಬೆಲೆಗಳ ಏರಿಳಿತ ತೋರಿಸುವ ಸಗಟು ಬೆಲೆ ಸೂಚ್ಯಂಕ (Wholesale Price Index), ಇನ್ನೊಂದು ಗ್ರಾಹಕ ತೆರುವ ಬೆಲೆಗಳ ಏರಿಳಿತ ಸೂಚಿಸುವ ಗ್ರಾಹಕ ಬೆಲೆ ಸೂಚ್ಯಂಕ (Consumer Price Index). ಆದರೆ ಇವೆರಡೂ ಬೇರೆ ಬೇರೆ ಸಾಮಗ್ರಿ ಗುಂಪುಗಳನ್ನು ಪರಿಗಣಿಸುತ್ತವೆ ಮತ್ತು ಒಂದೊಂದು ಗುಂಪಿಗೂ ಒಂದೊಂದು ಮೌಲ್ಯ ಎಂಬ ವಿಷಯ ನಿಮಗೆ ಗೊತ್ತೆ? 2014ರ ಅಂತ್ಯದವರೆಗೆ ಸಗಟು ಮತ್ತು ಗ್ರಾಹಕ ಸೂಚ್ಯಂಕಗಳು ಹೆಚ್ಚುಕಡಿಮೆ ಜತೆಜತೆಯಾಗಿ ಚಲಿಸುತ್ತ ಇದ್ದವು. ಆದರೆ 2015ರಿಂದ ಅವೆರಡೂ ಒಂದಕ್ಕೊಂದು ವಿರುದ್ಧ ದಿಕ್ಕಿನಲ್ಲಿ ಚಲಿಸತೊಡಗಿವೆ. ಉದಾಹರಣೆಗೆ 2015ರ ಸೆಪ್ಟಂಬರ್‌ನಲ್ಲಿ ಗ್ರಾಹಕ ಬೆಲೆ ಸೂಚ್ಯಂಕ -4.4% ಇದ್ದರೆ ಸಗಟು ಬೆಲೆ ಸೂಚ್ಯಂಕ -4.4% ಇತ್ತು! ಈಗ ಅವೆರಡು ಮತ್ತೆ ಸಮೀಪ ಬರಲಾರಂಭಿಸಿವೆ!! ಎಲ್ಲಾ ಒಟ್ಟು ಗೊಂದಲಮಯವಾಗಿದೆ.

ಅಧಿಕಾರಕ್ಕೆ ಬಂದು ಸುಮಾರು ಎರಡೂವರೆ ವರ್ಷಗಳು ಕಳೆದರೂ ಚುನಾವಣಾಪೂರ್ವದ ಭರವಸೆಗಳನ್ನು ಈಡೇರಿಸಲು ಅಸಮರ್ಥವಾದ ಮೋದಿ ಸರ್ಕಾರ ಇಂಥಾ ಅಂಕಿಅಂಶಗಳನ್ನು ಬಿಡುಗಡೆಗೊಳಿಸುವ ಮೂಲಕ ಜನಸಾಮಾನ್ಯರನ್ನು ಗೊಂದಲದಲ್ಲಿ ಮುಳುಗಿಸುತ್ತಾ ಇದೆ. ಇನ್ನೊಂದು ಕಡೆ ಯುದ್ಧೋನ್ಮಾದ ಮತ್ತು ಭಯೋತ್ಪಾದನೆಯ ಭೀತಿಗಳನ್ನು ಸೃಷ್ಟಿಸಿ, ಜನರ ಗಮನವನ್ನು ಆಚೆ ಸೆಳೆದು ಅವರು ಆರ್ಥಿಕತೆಯ ಅನಾರೋಗ್ಯದ ಕುರಿತು ಹೆಚ್ಚು ಯೋಚಿಸದಂತೆ ಮಾಡಲು ಯತ್ನಿಸುತ್ತಿದೆ. ಈ ಸತ್ಯವನ್ನು ಜನ ಎಷ್ಟು ಬೇಗ ಅರಿಯುವರೂ ಅಷ್ಟೂ ಒಳ್ಳೆಯದು.

■ ಸುರೇಶ್ ಭಟ್ ಬಾಕ್ರಬೈಲ್


(ಆಧಾರ: 12.10.2016ರ ದ ಹಿಂದೂ ನಲ್ಲಿ ... ಮತ್ತು qz.com ನಲ್ಲಿ ...)

ಪುಸ್ತಕ ವಿಮರ್ಶೆ

ದಲಿತ ಮಾನವ ಅಭಿವೃದ್ಧಿ ಸೂಚ್ಯಂಕ
ದೇಶದಲ್ಲಿಯೇ ಮೊದಲ ಪ್ರಯ

ದಲಿತ ಮಾನವ ಅಭಿವೃದ್ಧಿ ಸೂಚ್ಯಂಕ ಎಂಬುದು ನಮಗೆಲ್ಲರಿಗೂ ಹೊಸತೆನಿಸಬಹುದು. 2014 ರಲ್ಲಿ ಕರ್ನಾಟಕ ಸರ್ಕಾರ ಹೊರತಂದ ಮಾನವ ಅಭಿವೃದ್ಧಿ ವರದಿಯಲ್ಲಿ ದಲಿತ ಮಾನವ ಅಭಿವೃದ್ಧಿ ಸೂಚ್ಯಂಕ ಇದೆ. ಮಾನವ ಅಭಿವೃದ್ಧಿ ಸೂಚ್ಯಂಕ ದಲಿತ ಅಭಿವೃದ್ಧಿಯನ್ನು ಸಮಗ್ರವಾಗಿ ಕಟ್ಟಿಕೊಡಲು ವಿಫಲವಾದ ಕಾರಣ ಈ ಸೂಚ್ಯಂಕವನ್ನು ಅಭಿವೃದ್ಧಿಪಡಿಸುವಲ್ಲಿ ಎಂ.ಚಂದ್ರಪೂಜಾರಿಯವರು ಶ್ರಮವಹಿಸಿದ್ದಾರೆ.

ಹಲವು ದಶಕಗಳಿಂದ ದೇಶದ ಒಟ್ಟು ಆದಾಯವನ್ನು ತಲಾ ಆದಾಯ ಅಭಿವೃದ್ಧಿಯನ್ನು ಮಾಪನ ಮಾಡುವ ಮೂಲಕ ಕಂಡುಹಿಡಿಯಲಾಗಿತ್ತು. ಆದರೆ ಇದು ಒಂದು ಪ್ರದೇಶದ ಅಭಿವೃದ್ಧಿಯನ್ನು ತಿಳಿಸುತ್ತಿತ್ತೇ ಹೊರತು ಆ ಪ್ರದೇಶದ ಸಮುದಾಯಗಳ ಅಭಿವೃದ್ಧಿಯನ್ನಲ್ಲ. ಉದಾಹರಣೆಗೆ ನಮ್ಮ ದೇಶದಲ್ಲಿ ಪಂಜಾಬ್, ಹರ್‍ಯಾಣ, ಗುಜರಾತ್ ಇವೆಲ್ಲ ತಲಾ ಆದಾಯ ಅಭಿವೃದ್ಧಿ ಹೆಚ್ಚಿರುವ ರಾಜ್ಯಗಳು. ಆದರೆ ಅಲ್ಲಿನ ಎಲ್ಲರೂ ಶಿಕ್ಷಣ, ಆರೋಗ್ಯ ಅಭಿವೃದ್ಧಿ ಹೊಂದಿಲ್ಲ. ಕರ್ನಾಟಕದಲ್ಲಿನ ಬಳ್ಳಾರಿ ಜಿಲ್ಲೆ ಉತ್ತಮ ಆರ್ಥಿಕ ಪ್ರಗತಿ ಹೊಂದಿದೆ ನಿಜ. ಆದರೆ ಅಲ್ಲಿ ಶಿಕ್ಷಣ, ಆರೋಗ್ಯ ಸ್ಥಿತಿ ಚಿಂತಾಜನಕ. ಕೇರಳದಲ್ಲಿನ ತಲಾದಾಯ ಕಡಿಮೆ ಆದರೆ ಅಲ್ಲಿನ ಶಿಕ್ಷಣ, ಆರೋಗ್ಯ ಸ್ಥಿತಿ ತುಂಬಾ ಸುಧಾರಿಸಿದೆ. ಅಷ್ಟೇ ಅಲ್ಲ, ವಿವಿಧ ಸಮುದಾಯಗಳ ನಡುವಿನ ಅಭಿವೃದ್ಧಿ ಅಂತರ ಕಡಿಮೆ ಇದೆ.



ಹಾಗಾಗಿ ತಲಾ ಆದಾಯದ ಕೊರತೆಗಳನ್ನು ನೀಗಿಸಲು ಪಾಕಿಸ್ತಾನದ ಅರ್ಥಶಾಸ್ತ್ರಜ್ಞರಾದ ಮೆಹಬೂಬ್ ಉಲ್ ಹಕ್ ಅಭಿವೃದ್ಧಿಪಡಿಸಿದ ಹೊಸ ಮಾನದಂಡವೇ ಮಾನವ ಅಭಿವೃದ್ಧಿ ಸೂಚ್ಯಂಕ. ಇದು ಆರ್ಥಿಕ ಪ್ರಗತಿಯೊಂದಿಗೆ ಸಾಮಾಜಿಕ ಪ್ರಗತಿಯನ್ನೂ ಮಾಪನ ಮಾಡುತ್ತದೆ. ಅಂದರೆ ಅಲ್ಲಿನ ಶಿಕ್ಷಣ, ಆರೋಗ್ಯ, ವಸತಿ, ಕುಡಿಯುವ ನೀರು, ಸಾರಿಗೆ, ಸಂಪರ್ಕ, ಬ್ಯಾಂಕಿಂಗ್ ಇತ್ಯಾದಿ ಮೂಲಸೌಕರ್ಯಗಳ ಅಭಿವೃದ್ಧಿಯನ್ನೂ ಪರಿಗಣಿಸುತ್ತದೆ. ಆದರೆ ತಲಾ ಆದಾಯದಂತೆ ಮಾನವ ಅಭಿವೃದ್ಧಿ ಸೂಚ್ಯಂಕ ಕೂಡ ಮಿತಿಗಳನ್ನು ಹೊಂದಿದೆ. ಇದು ಜಾತಿ, ಧರ್ಮ, ಲಿಂಗ ಮತ್ತು ಅಸ್ಪೃಶ್ಯತೆಗಳನ್ನು ಪರಿಗಣಿಸುವುದೇ ಇಲ್ಲ.

ಆದ್ದರಿಂದ ದಲಿತ ಅಭಿವೃದ್ಧಿ ಸೂಚ್ಯಂಕವನ್ನು ಸಿದ್ಧಪಡಿಸಿರುವ ಎಂ.ಚಂದ್ರಪೂಜಾರಿಯವರು ಈ ಮೇಲಿನ ಅಂಶಗಳು ಪರಿಗಣಿಸಲೇಬೇಕಾದವು ಎಂಬುದನ್ನು ತಿಳಿಸಲು ಪುಸ್ತಕದ ಉದ್ದಕ್ಕೂ ಸಾಕ್ಷಿಸಮೇತ ನೀಡಿರುವ ಅಂಕಿ ಅಂಶಗಳು ನಮ್ಮನ್ನು ದಂಗುಬಡಿಸುತ್ತವೆ.

ಉದಾಹರಣೆಗೆ, 2013ರ ಫೋರ್ಬ್ಸ್ ಪತ್ರಿಕೆ ಪ್ರಕಟಿಸಿರುವ ಪ್ರಪಂಚದ 500 ಶ್ರೀಮಂತರಲ್ಲಿ ಭಾರತದ 55 ಮಂದಿ ಶ್ರೀಮಂತರ ಸಾಮಾಜಿಕ ಗುಂಪನ್ನು ನೀಡುವ ಲೇಖಕರು ಅಭಿವೃದ್ಧಿಗೂ, ಜಾತಿಗೂ ನಡುವೆ ಇರುವ ಅಂತಃಸಂಬಂಧವನ್ನು ಬಯಲುಗೊಳಿಸಿದ್ದಾರೆ. ಈ ಮೇಲಿನ 55 ಮಂದಿ ಶ್ರೀಮಂತರಲ್ಲಿ 10 ಮಂದಿ ಶ್ರೀಮಂತರ ಆದಾಯ ಇನ್ನುಳಿದ 45 ಮಂದಿಯ ಒಟ್ಟು ಆದಾಯವನ್ನು ಮೀರಿಸುವಷ್ಟಿದೆ. ಈ 10 ಅತ್ಯಂತ ಶ್ರೀಮಂತರಲ್ಲಿ 7 ಮಂದಿ ಒಂದೇ ಜಾತಿಯಿಂದ-ಬನಿಯಾ ಸಮುದಾಯದಿಂದ ಬಂದಿದ್ದಾರೆ. ಉಳಿದ 45 ಮಂದಿ ಶ್ರೀಮಂತರಲ್ಲಿ 19 ಮಂದಿ ಇದೇ ಬನಿಯಾ ಸಮುದಾಯಕ್ಕೆ ಸೇರಿದ್ದಾರೆ. ಉಳಿದ ಶ್ರೀಮಂತರು ಪಾರ್ಸಿ, ಬೋಹ್ರಾ, ಖತ್ರೀಸ್ ಮುಂತಾದ ವ್ಯಾಪಾರಿ ಸಮುದಾಯಕ್ಕೆ ಸೇರಿದ್ದಾರೆ. ಬ್ರಾಹ್ಮಣರಿಂದ ಕೆಲವರು ಹಾಗೂ ಹಿಂದುಳಿದ ಜಾತಿಯಿಂದ ಒಬ್ಬರು ಪಟ್ಟಿಯಲ್ಲಿದ್ದಾರೆ. ದಲಿತ, ಬುಡಕಟ್ಟು ಸಮುದಾಯಗಳಿಂದ ಒಬ್ಬರೂ ಇಲ್ಲ. ಇದನ್ನೇ ಲೇಖಕರು ಪಿರಮಿಡ್‌ನ ಮೇಲಿರುವ ಜಾತಿಗಳ ಒಂದು ಸಣ್ಣ ಚಿತ್ರಣ ಎನ್ನುತ್ತಾರೆ.

ನಮ್ಮ ದೇಶದಲ್ಲಿ ಬಡವರ ಅಂಕಿಅಂಶಗಳನ್ನು ನೀಡುತ್ತಾರೆ. ಕೆ.ಪಿ.ಕಣ್ಣನ್ ಅವರ ವರದಿಯಂತೆ ದೇಶದ ಅತ್ಯಂತ ಬಡವರ ಸಂಖ್ಯೆ 24 ಕೋಟಿ. ಅತ್ಯಂತ ಬಡವರೆಂದರೆ ಮೂರು ಹೊತ್ತು ಅನ್ನಕ್ಕಾಗಿ, ವಸತಿಗಾಗಿ ಪರದಾಡುವವರು. ಇವರಲ್ಲಿ ಶೇ. 41 ರಷ್ಟು ದಲಿತಬುಡಕಟ್ಟು ಜನರಿದ್ದಾರೆ. ಮೂರನೇ ಒಂದು ಭಾಗದಷ್ಟು ಹಿಂದುಳಿದ ಜಾತಿ ಜನರಿದ್ದಾರೆ. ಶೇ. 16 ರಷ್ಟು ಮುಸ್ಲಿಮರಿದ್ದಾರೆ. ಮೇಲ್ಜಾತಿಗಳಲ್ಲಿ ಶೇ. 9 ರಷ್ಟು ಅತ್ಯಂತ ಬಡವರಿದ್ದಾರೆ.

ಹಾಗೆಯೇ ನಮ್ಮ ದೇಶದಲ್ಲಿ ಸುಮಾರು 4 ಕೋಟಿ ಶ್ರೀಮಂತರಿದ್ದಾರೆ. ಇವರಲ್ಲಿ ಶೇ. 65 ಮೇಲ್ಜಾತಿ ಜನರು, ಶೇ. 21 ಹಿಂದುಳಿದ ಜಾತಿಯವರು, ಶೇ. 7 ರಷ್ಟು ದಲಿತ ಮತ್ತು ಬುಡಕಟ್ಟಿನ ಜನರಿದ್ದಾರೆ.

ಆದ್ದರಿಂದ ಜಾತಿ ಮತ್ತು ಅಭಿವೃದ್ಧಿಗೆ ನೇರವಾದ ಸಂಬಂಧವಿದೆ ಎಂಬುದನ್ನು ಲೇಖಕರು ದೃಢಪಡಿಸುತ್ತಾರೆ. ಹಾಗೆಯೇ ಅಸ್ಪೃಶ್ಯತೆ ಎಂಬುದು ಜಾತಿ ತಾರತಮ್ಯವನ್ನೂ ಮೀರಿ ಸಾಮಾಜಿಕ ಅಂಗವೈಕಲ್ಯವನ್ನು ಉಂಟು ಮಾಡಿರುವುದನ್ನು ಗುರುತಿಸುತ್ತಾರೆ. ದೇವಸ್ಥಾನ ಪ್ರವೇಶ ನಿರಾಕರಣೆ, ಗ್ರಾಮ ಪಂಚಾಯತ್, ಹಣಕಾಸಿನ ಸೊಸೈಟಿ, ಆರೋಗ್ಯ ಸಮಿತಿ ಇತ್ಯಾದಿ ಸರಕಾರ ಸೃಷ್ಟಿಸಿರುವ ಸಂಸ್ಥೆಗಳಲ್ಲಿ ದಲಿತರನ್ನು ನಾಮಕಾವಸ್ಥೆಗೆ ಪಾಲ್ಗೊಳ್ಳುವಂತೆ ಅಸ್ಪೃಶ್ಯತೆ ಮಾಡಿದೆ. ಅಂಗನವಾಡಿ ಕಾರ್ಯಕರ್ತೆ, ಬಿಸಿಯೂಟ ಕಾರ್ಯಕರ್ತೆ ಕೆಲಸಗಳೂ ದಲಿತರಿಗೆ ಅಸ್ಪೃಶ್ಯತೆ ಕಾರಣಕ್ಕಾಗಿ ದಕ್ಕುತಿಲ್ಲ. ಅದೆಷ್ಟೋ ಸವಲತ್ತುಗಳು ಅದೇ ಕಾರಣಕ್ಕೆ ದಲಿತರ ಕೇರಿಗಳಿಗೆ ಹೋಗುವುದಿಲ್ಲ. ಇದೆಲ್ಲಾ ಕಾರಣಕ್ಕೆ ಸಿದ್ಧಗೊಂಡಿರುವ ದಲಿತ ಮಾನವ ಅಭಿವೃದ್ಧಿ ಸೂಚ್ಯಂಕ ನಿಜಕ್ಕೂ ನಮ್ಮೆಲ್ಲರ ಗಮನ ಸೆಳೆಯುತ್ತದೆ.

ದಲಿತ ಮಾನವ ಅಭಿವೃದ್ಧಿ ಸೂಚ್ಯಂಕ ಒಟ್ಟು 10 ಸೂಚ್ಯಂಕಗಳನ್ನು ಹೊಂದಿದೆ. ಇವುಗಳೆಲ್ಲವನ್ನೂ ದಲಿತೇತರರ ಅಭಿವೃದ್ಧಿಗೆ ಹೋಲಿಸಿ ದಲಿತ ಅಭಿವೃದ್ಧಿ ಸ್ಥಿತಿಯನ್ನು ಪತ್ತೆ ಹಚ್ಚಲಾಗಿದೆ. ಪ್ರತಿ ಸೂಚಕದಲ್ಲೂ ಮೂರರಿಂದ ಐದು ಸೂಚಿಗಳಿವೆ. ಒಟ್ಟಾರೆ ದಲಿತರ ಸ್ಥಿತಿ ದಲಿತೇತರರಿಗಿಂತ ಕಡಿಮೆಯಿದ್ದರೆ ಅಂಕ 1 ಕ್ಕಿಂತ ಕಡಿಮೆ ನೀಡಲಾಗಿದೆ. ದಲಿತರ ಸ್ಥಿತಿ ದಲಿತೇತರರ ಸಮಾನಕ್ಕಿದ್ದರೆ ಅಂಕ 1 ನ್ನು ನೀಡಲಾಗಿದೆ ಮತ್ತು ದಲಿತೇತರರಿಗಿಂತ ದಲಿತರ ಸ್ಥಿತಿ ಉತ್ತಮವಾಗಿದ್ದರೆ ಅಂಕ 2 ನ್ನು ನೀಡಲಾಗಿದೆ. ಆ ಅಂಕಗಳನ್ನು ವೈಟೇಜ್ ಎಂದೂ ಸಹ ಲೇಖಕರು ಕರೆಯುತ್ತಾರೆ. ಈ ರೀತಿಯ ವೈಟೇಜ್ ಪಟ್ಟಿಯನ್ನು ಜಿಲ್ಲಾವಾರು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.



ಮೂಲ - ಕರ್ನಾಟಕ ಸರಕಾರ, ಕರ್ನಾಟ
ಮಾನವ ಅಭಿವೃದ್ಧಿ ವರದಿ - 2014

ಸೂಚನೆ: 1= ಇನ್‌ಸ್ಟಿಟ್ಯುಶನಲ್
ಇಂಡೆಕ್ಸ್, 2= ಸೋಶಿಯಲ್ ಇನ್‌ಕ್ಲುಶನ
3 = ಪರ್ಸ್ಪನ್ ಆಫ್ ಡಿಸ್ಕ್ರಿಮಿನೇಶನ್ ಇಂ
ಪ್ರೊಟೆಸ್ಟ್ ಎಗೈನ್‌ಸ್ಟ್ ಡಿಸ್ಕ್ರಿಮಿನೇಶನ್ ಇಂ
ಕಾನ್‌ಫ್ಲಿಕ್ಟ್ ರೆಸೊಲ್ಯೂಶನ್ ಇಂಡೆಕ್ಸ್, 6 =
ಆಫ್ ಫ್ರೀಡಂ ಇಂಡೆಕ್ಸ್, 7 = ಸ್ಟ್ಯಾಂಡ
ಲಿವಿಂಗ್ ಇಂಡೆಕ್ಸ್, 8 = ಜಂಡರ್ ಡೈ
ದಲಿತ್ ಡೆವಲಪ್‌ಮೆಂಟ್ ಇಂಡೆಕ್ಸ್, 9 =
ಟು ಬೇಸಿಕ್ ಫೆಸಿಲಿಟೀಸ್ ಇಂಡೆಕ್ಸ್, 10
ಟು ಎಜುಕೇಶನಲ್ ಸರ್ವೀಸಸ್ ಇಂಡೆಕ್ಸ್
= ದಲಿತ ಮಾನವ ಅಭಿವೃದ್ಧಿ ಇಂಡೆಕ್ಸ್.

ಮೇಲಿನ ಕೋಷ್ಟಕವನ್ನು ಗ
ಪ್ರತಿಯೊಬ್ಬರಿಗೂ ತಿಳಿಯುವ ಅಂಶವೆಂದರೆ
ಜಿಲ್ಲೆಗಳನ್ನು ಬಿಟ್ಟರೆ ರಾಜ್ಯದ ಯಾವ
ದಲಿತೇತರರಿಗೆ ಹೋಲಿಸಿ ದಲಿತ ಅಭಿವೃ
ಅಥವಾ ಅತ್ಯುತ್ತಮ ಎನ್ನುವ ಸ್ಥಿತಿಯಲ್ಲಿಲ್ಲ.
ಈ ಸೂಚ್ಯಂಕವನ್ನು ಇನ್ನು ಮುಂದೆ
ಗಮನಿಸಬೇಕಿದೆ.

ಈ ಪುಸ್ತಕದ ಪ್ರಾಮುಖ್ಯತೆ ಹೆಚ್ಚಾಗ
ಒಂದು ಕಾರಣವಿದೆ. ಅದೇನೆಂದರೆ ದಲಿ
ವಿಸ್ತರಣೆಯ ಪ್ರಯತ್ನ. ಈ ಹಿಂದೆ ದಲಿತ ಚ
ಜಾತಿಯ ಬಡವರೆಲ್ಲ ದಲಿತರು ಎಂದಿತ್ತು.
ಅದು ಕೇವಲ ಪರಿಶಿಷ್ಟ ಜಾತಿಗೆ ಸೀಮಿತವಾ
ಈ ಪುಸ್ತಕದಲ್ಲಿ ಚಂದ್ರ ಪೂಜಾರಿಯವರು ಅ
ಸಮೇತ ಎಲ್ಲಾ ಜಾತಿಯ ಬಡವರು ದ
ಹೊಂದಲು ಪ್ರೇರೇಪಿಸುತ್ತಾರೆ. ಅಸ್ಪೃಶ್ಯತೆ ಎಂಬು
ಜಾತಿಗಳಿಗೆ ಮಾತ್ರ ನಿಲುಕುವ ಅನುಭವ ನಿಜ
ಏಣಿಯ ಅತಿ ತಳದಲ್ಲಿರುವವರು ದಲಿತರೇ
ಅಸ್ಪೃಶ್ಯತೆಯನ್ನು ಹೊರತುಪಡಿಸಿ ನೋಡಿದರೆ ಇ
ಬಡವರು ಹೇಗೆ ಇಂದು ಏಣಿಯ ಬುಡಕ
ನಿಂತಿದ್ದಾರೆ ಎಂಬುದನ್ನು ಮನ ಮುಟ್ಟುವಂತೆ ನಿರ
ಲೇಖಕರು ಎರಡನೇ ಅಧ್ಯಾಯವನ್ನು ಹಲವು
ಹೊಡೆಯುವುದಕ್ಕಾಗಿಯೇ ರೂಪಿಸಿದ್ದಾರೆ. ಅದರ
ಅಂಶಗಳು ಹೀಗಿವೆ.

- 2014 ರ ವೇಳೆಗೆ ಕರ್ನಾಟಕದಲ್ಲಿ ಒಟ್ಟು
ಸರಕಾರಿ ನೌಕರರಿದ್ದಾರೆ. ಇದರಲ್ಲಿ 94,01
ಶೇ. 17 ರಷ್ಟು ಪರಿಶಿಷ್ಟ ಜಾತಿ ನ
ದಲಿತ ಸರಕಾರಿ ನೌಕರರ ಸಂಖ್ಯೆ ಕರ್ನಾಟ
ಜನಸಂಖ್ಯೆಯಲ್ಲಿರುವ ದಲಿತ ಜನಸಂ
ಇದೆ. ಆದರೆ ದಲಿತರ ಒಟ್ಟು ಜ
ಹೋಲಿಸಿದರೆ ಅದು ಶೇ. 1 ರಷ್ಟೂ ಅ
ಶೇ. 40 ರಷ್ಟು ಸಿ ಮತ್ತು ಡಿ ಹುದ್ದೆ
- ಕರ್ನಾಟಕದಲ್ಲಿ ಭೂ ಸುಧಾರಣೆ ನೀ
ಘೋಷಣೆಯಾದ ಒಟ್ಟು ಭೂಮಿ
ಎಕರೆಗಳು. ಇಷ್ಟರಲ್ಲಿ ಕೇವಲ 1,54,293
ಮಾತ್ರ ಸ್ವಾಧೀನಪಡಿಸಿಕೊಂಡಿತು. ಈ ಭೂ
1,04,437 ಎಕರೆಗಳಷ್ಟು ಭೂಮಿ
ಭೂರಹಿತರಿಗೆ ಹಂಚಿಕೆ ಮಾಡಲಾಯಿತು
ದಲಿತರು ಮತ್ತು ಬುಡಕಟ್ಟುಗಳಿಗೆ 62,8
ಭೂಮಿ ನೀಡಲಾಗಿದೆ ಅಷ್ಟೆ. ಆ ಭೂಮಿ

ದಲಿತ ಮಾನವ ಅಭಿವೃದ್ಧಿ ಇಂಡೆಕ್ಸ್ - 2014 (ಕೋಷ್ಟಕ)

ಜಿಲ್ಲೆಗಳು	1	2	3	4	5	6	7	8	9	10	AVG
ಬಳ್ಳಾರಿ	0.50	0.30	0.50	0.10	0.30	0.20	0.20	0.50	0.30	1.0	0.39
ಬೀದರ್	0.30	0.50	0.30	0.40	0.10	0.30	0.40	0.40	0.50	0.40	0.36
ಕಲ್ಬುರ್ಗಿ	0.40	0.40	0.50	0.40	0.40	0.40	0.60	0.40	0.50	0.50	0.45
ಕೊಪ್ಪಳ	0.57	0.20	0.40	0.00	0.00	0.50	0.70	0.70	0.33	0.30	0.37
ರಾಯಚೂರು	0.25	0.70	1.00	0.00	0.00	0.60	0.20	0.40	0.16	0.33	0.36
ಯಾದಗಿರಿ	0.50	0.00	0.50	0.00	0.00	0.80	0.20	0.70	0.83	0.50	0.40
ಬಾಗಲಕೋಟೆ	0.40	0.10	0.50	0.00	0.70	0.30	0.30	0.20	0.50	0.30	0.33
ಬೆಳಗಾವಿ	0.33	0.40	0.40	0.40	0.40	0.10	0.80	0.60	0.33	0.66	0.44
ವಿಜಾಪುರ	0.40	0.20	0.50	0.00	0.50	0.30	0.30	0.20	0.30	0.30	0.30
ಗದಗ	0.58	0.60	0.50	0.20	0.30	0.20	0.50	0.30	0.33	0.67	0.42
ಧಾರವಾಡ	0.38	0.50	1.00	0.50	0.70	0.60	0.40	0.30	0.33	0.67	0.53
ಹಾವೇರಿ	0.50	0.70	0.40	0.20	0.30	0.60	0.20	0.30	0.83	0.50	0.45
ಉತ್ತರ ಕನ್ನಡ	0.17	1.00	1.00	0.00	0.00	0.40	1.00	0.60	0.83	0.50	0.55
ಬೆಂಗಳೂರು ನಗರ	0.50	0.50	0.60	0.10	0.80	1.00	0.50	0.70	0.16	0.50	0.53
ಬೆಂಗಳೂರು ಗ್ರಾ.	0.80	0.50	0.90	0.00	1.00	0.80	0.60	0.50	0.75	1.00	0.68
ತುಮಕೂರು	0.67	0.50	1.00	0.00	0.00	1.00	0.40	0.60	0.00	0.83	0.50
ಕೋಲಾರ	0.67	0.60	0.70	0.10	0.40	0.10	0.80	0.40	0.17	0.50	0.44
ರಾಮನಗರ	0.33	0.20	0.20	0.00	0.20	0.20	0.00	0.40	0.33	0.33	0.22
ಚಿಕ್ಕಬಳ್ಳಾಪುರ	0.21	0.10	0.15	0.00	0.15	0.10	0.00	0.30	0.25	0.33	0.16
ಚಿತ್ರದುರ್ಗ	0.29	0.28	0.49	0.36	0.39	0.28	0.23	0.37	0.47	0.44	0.36
ದಾವಣಗೆರೆ	0.83	0.20	0.80	0.60	0.10	0.33	0.60	0.70	0.17	0.50	0.48
ಶಿವಮೊಗ್ಗ	0.00	0.90	1.00	0.00	0.00	1.00	0.20	0.60	0.67	0.33	0.47
ಮೈಸೂರು	0.50	0.60	0.60	0.70	0.30	0.30	0.60	0.80	0.67	1.00	0.61
ಮಂಡ್ಯ	0.33	0.70	0.80	1.00	1.00	1.00	0.30	0.40	0.10	0.10	0.57
ಚಾಮರಾಜನಗರ	0.58	0.10	0.80	1.00	1.00	1.00	0.10	0.40	0.10	0.10	0.51
ಹಾಸನ	0.20	0.10	0.50	0.50	0.50	0.40	0.70	0.90	0.16	0.83	0.44
ಚಿಕ್ಕಮಗಳೂರು	0.40	0.50	0.90	0.30	0.40	0.20	0.50	0.80	0.30	1.00	0.53
ಉಡುಪಿ	0.58	0.80	1.00	0.90	0.90	0.60	0.80	0.60	0.83	0.83	0.78
ದಕ್ಷಿಣ ಕನ್ನಡ	0.50	0.90	1.00	1.00	1.00	0.70	1.00	0.60	0.50	0.66	0.78
ಕೊಡಗು	0.42	1.00	1.00	0.40	0.40	0.20	1.00	0.60	0.50	0.50	0.60

...3 ರಷ್ಟು ಕೃಷಿಗೆ ಯೋಗ್ಯವಲ್ಲ. ಅಲ್ಲಿಲ್ಲಿ ಭೂಮಿ ಇದ್ದರೂ ದಲಿತರು ಭೂರಹಿತ ಕಾರ್ಮಿಕರಂತೆ ...ದುಕುತ್ತಿದ್ದಾರೆ.

...ಮ್ಮಲ್ಲಿ ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆಗಳಿವೆ. ನೇರ ತೆರಿಗೆಯನ್ನು ಅನುಕೂಲಸ್ಥರ ತೆರಿಗೆ ಎನ್ನಬಹುದು. ಪರೋಕ್ಷ ತೆರಿಗೆಯನ್ನು ಎಲ್ಲರೂ ಕಟ್ಟಬೇಕಾಗಿದ್ದು ನಮ್ಮಲ್ಲಿ ಅನಾನುಕೂಲಸ್ಥರೇ ಹೆಚ್ಚರುವುದರಿಂದ ಇದನ್ನು ಅನಾನುಕೂಲಸ್ಥರ ತೆರಿಗೆ ಎನ್ನಬಹುದು. ತೊಂಬತ್ತರ ...ದೆ ನೇರ ತೆರಿಗೆ ದರ ಶೇ. 50 ಕ್ಕಿಂತಲೂ ಹೆಚ್ಚಿತ್ತು. ಆದರೆ ಇಂದು ಇದು ಶೇ. 30 ಕ್ಕೆ ಇಳಿದಿದೆ. ಅಷ್ಟೇ ಅಲ್ಲ ಉದ್ಯಮಿಗಳ ಒತ್ತಡಕ್ಕೆ ಮಣಿದು ಸರ್ಕಾರ ಇದನ್ನು ಶೇ. 25 ಕ್ಕೆ ಇಳಿಸಿದೆ. ಆದ್ದರಿಂದ ಎಲ್ಲಾ ವರ್ಷಗಳಲ್ಲೂ ಪರೋಕ್ಷ ತೆರಿಗೆ ಸಂಗ್ರಹ ಹೆಚ್ಚಾಗುತ್ತಲೇ ಇದೆ.

...ಾಲದ ವಿಚಾರದಲ್ಲೂ ಸರ್ಕಾರಗಳ ನಡೆ ಇಂತದ್ದೆ. ಅವುಗಳನ್ನು ಸ್ಥೂಲವಾಗಿ ಸಂಘಟಿತ ಮತ್ತು ಅಸಂಘಟಿತ ಸಾಲಗಳೆನ್ನಬಹುದು. ಸಂಘಟಿತ ಮೂಲದ ಸಾಲವನ್ನು ಸರಕಾರಿ ಸಾಲವೆನ್ನಬಹುದು. ಇದರ ಬಡ್ಡಿದರ ಕಡಿಮೆ ಇರುತ್ತದೆ. ಸರ್ಕಾರದ ನೀತಿಯ ಪ್ರಕಾರ, ಸಂಘಟಿತ ಸಾಲದ ಶೇ. 40 ನ್ನು ಆದ್ಯತಾ ವಲಯಕ್ಕೆ ಮತ್ತು ಶೇ 60 ನ್ನು ಸಾಮಾನ್ಯ ವಲಯಕ್ಕೆ ನೀಡಬೇಕು. ಆದ್ಯತಾ ವಲಯದ ಶೇ. 40 ರಲ್ಲಿ ಶೇ. 18ನ್ನು ಕೃಷಿಗೆ, ಶೇ. 12ನ್ನು ಸಣ್ಣಪುಟ್ಟ ವ್ಯಾಪಾರಗಳಿಗೆ, ಶೇ. 10 ನ್ನು ಬಡತನ ನಿವಾರಣ ಚಟುವಟಿಕೆಗಳಿಗೆ ನೀಡಬೇಕಾಗಿದೆ. ಅಂದರೆ ಹೆಚ್ಚು ಕಡಿಮೆ ಶೇ. 90 ರಷ್ಟು ಕುಟುಂಬಗಳು ಶೇ. 40 ರಷ್ಟು ಸಂಘಟಿತ ಸಾಲ ಪಡೆದರೆ ಶೇ 10 ರಷ್ಟಿರುವ ದೊಡ್ಡ ಉದ್ದಿಮೆ, ವ್ಯಾಪಾರ, ಕೃಷಿಗಳು ಶೇ. 60 ರಷ್ಟು ಸಂಘಟಿತ ಸಾಲ ಪಡೆಯುತ್ತಿವೆ.

ಉನ್ನತ ಶಿಕ್ಷಣದಲ್ಲಿ ಯೋಗ್ಯ ವಯಸ್ಸಿನ (18-23 ವಯಸ್ಸಿನ) ಪ್ರತಿ ನೂರು ವಿದ್ಯಾರ್ಥಿಗಳಲ್ಲಿ ಕೇವಲ 20 ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದಿದ್ದಾರೆ. ಅದರಲ್ಲಿ ದಲಿತರು ಶೇ. 12, ಬುಡಕಟ್ಟುಗಳು ಶೇ. 5, ಮುಸ್ಲಿಮರು ಶೇ. 7, ಇತರ ಅಲ್ಪಸಂಖ್ಯಾತರು ಶೇ. 3, ಹಿಂದುಳಿದ ಜಾತಿಗಳ ಶೇ.30 ಮತ್ತು ಮೇಲ್ಜಾತಿಗಳ ಶೇ. 43 ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದಾರೆ.

ಭಾರತದಲ್ಲಿ ಕನಿಷ್ಠ ಒಂದು ಮಿಲಿಯ ಜನರು ವೈದ್ಯಕೀಯ ನೆರವಿಲ್ಲದೆ ಪ್ರತಿ ವರ್ಷ ಅಸುನೀಗುತ್ತಿದ್ದಾರೆ. ಹುಟ್ಟುವ ಪ್ರತಿ ಸಾವಿರ ಮಕ್ಕಳಲ್ಲಿ ಐದು ವರ್ಷದೊಳಗೆ ಸಾಯುವ ಮಕ್ಕಳ ಪ್ರಮಾಣ ನೇಪಾಳದಲ್ಲಿ 50, ಭೂತಾನ್‌ನಲ್ಲಿ 54, ಬಾಂಗ್ಲಾದೇಶದಲ್ಲಿ 46, ಚೈನಾದಲ್ಲಿ 15, ಶ್ರೀಲಂಕಾದಲ್ಲಿ 12 ಇದ್ದರೆ ನಮ್ಮ ದೇಶದಲ್ಲಿ 61 ಇದೆ. ಅನಾರೋಗ್ಯ ಹಾಗು ಅದಕ್ಕೆ ಮಾಡುವ ದುಬಾರಿ ಆಸ್ಪತ್ರೆ ವೆಚ್ಚದಿಂದ ಪ್ರತಿ ವರ್ಷ 63 ಮಿಲಿಯ ಜನರು ಬಡವರಾಗುತ್ತಿದ್ದಾರೆ.

ಹೀಗೆ ಲೇಖಕರು ಅಂಕಿಅಂಶಗಳ ಸಮೇತ ...ೇತರರೂ ಸಹ ಸೌಲಭ್ಯಗಳ ತಾರತಮ್ಯದಿಂದ ...ುತ್ತಿರುವುದನ್ನು ವಿಸ್ತೃತವಾಗಿ ನಮ್ಮ ಮುಂದಿಡುತ್ತಾರೆ. ...ರ ದಶಕದ ನಂತರ ಜಾಗತೀಕರಣ, ಖಾಸಗೀಕರಣ, ...ಾರೀಕರಣಗಳು ನಮ್ಮ ದೇಶಕ್ಕೆ ಲಗ್ಗೆ ಇಟ್ಟು ಅದು ...ಿ ಭಾರತೀಯರನ್ನು ಸುಲಿಯುತ್ತಿವೆ ಎಂಬುದನ್ನು ...ಕದ ಉದ್ದಕ್ಕೂ ಚರ್ಚಿಸಿದ್ದಾರೆ. ಬ್ಯಾಂಕುಗಳಲ್ಲಿ ...ಸಮುದಾಯಗಳ ಉಳಿತಾಯದ ಪಾಲು ಶೇ. 70 ...ದೆ. ಉದ್ದಿಮೆಗಳ ಉಳಿತಾಯದ ಪಾಲು ಶೇ. 23 ...ದೆ. ಆದರೆ ಈ ಉಳಿತಾಯದಲ್ಲಿ ಬ್ಯಾಂಕ್ ಮತ್ತು ...ಕಾಸು ಸಂಸ್ಥೆಗಳು ಸಾಲ ನೀಡುತ್ತಿರುವುದು ಮಾತ್ರ ...ಪತಿಗಳಿಗೆ ಎಂಬುದು ಇಂದು ದಿಟವಾಗಿ ಹೋಗಿದೆ. ...ಮಾರುಕಟ್ಟೆಯಲ್ಲಿ ಜಾತಿ, ಧರ್ಮಗಳಿಗಿಂತ ಖರೀದಿಸುವ ...ಅಥವಾ ಮಾರುವ ಸರಕು ಸೇವೆಗಳು ಮುಖ್ಯ ಎನ್ನುವ ...ಕರ ಮಾತು ಅಕ್ಷರಶಃ ಸತ್ಯ. ಜಾತಿ ಸಂಘಟನೆಗಳು ...ಸುವ ಎಂಜಿನಿಯರಿಂಗ್ ಮೆಡಿಕಲ್ ಕಾಲೇಜುಗಳಲ್ಲಿ ...ಜು ಕಾರಣಕ್ಕೆ ಉಚಿತ ಶಿಕ್ಷಣ ನೀಡುವರೇ? ...ಸುವವರು ನಡೆಸುವ ಹೋಟೆಲ್‌ಗಳಲ್ಲಿ, ಬಟ್ಟೆ ...ಡಿಗಳಲ್ಲಿ ಜಾತಿಯ ಕಾರಣಕ್ಕಾಗಿ ವಿಶೇಷ ರಿಯಾಯಿತಿ ...ವುದೇ? ಇಂತಹ ಪ್ರಶ್ನೆಗಳು ಕೇವಲ ಜಾತಿಯಾಧಾರಿತ ...ರಾಟಗಳನ್ನು ಚಿಂತನೆಗೆ ದೂಡುತ್ತವೆ. ಆದರೆ ಅದೇ ...ರುಕಟ್ಟೆ ಸಂಸ್ಕೃತಿಯೂ ಜಾತಿಯನ್ನು ಸಲಹುತ್ತಿದೆ. ...-ವರರ ಶೋಧನೆಗೆ ಪತ್ರಿಕೆಗಳಲ್ಲಿ ಪ್ರಕಟವಾಗುವ ...ರಾತುಗಳು, ದೊಡ್ಡ ಕಂಪನಿಗಳ ಸಿ.ಇ.ಒ ಪೋಸ್ಟ್‌ಗಳು ...ಕ್ಕೆ ಸಾಕ್ಷಿ ಒದಗಿಸುತ್ತವೆ. ಲೇಖಕರು ಇದರ ಬಗ್ಗೆಯೂ ...ದ್ದ ದೆ... ಎತ್ತಬಹುದಿತ್ತು. ಒಟ್ಟಿನಲ್ಲಿ ಎಲ್ಲಾ ಜಾತಿಯ ...ವರೂ ಒಂದೆಡೆ ಸೇರಲು ಇರುವ ಕಾರಣಗಳನ್ನು ಈ ...ಕ ಸಮ್ಮ ಮುಂದೆ ಇಡುವಲ್ಲಿ ಯಶಸ್ವಿಯಾಗಿದೆ. ...ವಾದ ಅಭಿವೃದ್ಧಿಗಾಗಿ ಇಂತಹ ಕಾರ್ಯಕ್ರಮಗಳು ...ರದ ಬೊಕ್ಕಸವನ್ನು ಖಾಲಿಗೊಳಿಸಬೇಕಿದೆ.

...ಒಟ್ಟಾರೆ ಈ ಪುಸ್ತಕದಲ್ಲಿ ಲೇಖಕರು ದೇಶದ ದಲಿತರ ...ತ್ತು ಹಿಂದುಳಿದವರ ಅಭಿವೃದ್ಧಿಗೆ ಪ್ರಾಮಾಣಿಕ ...ತ್ನವನ್ನು ಮಾಡಿದ್ದಾರೆ. ಈ ಪ್ರಯತ್ನ ಸಾಕಾರವಾಗುವಂತೆ ...ದ ಮೇಲೆ ಒತ್ತಡ ಹೇರುವುದು ದಲಿತರ, ದಮನಿತರ ...ವಾಗಬೇಕಿದೆ.

■ ವಿಕಾಸ ಆರ್ ಮೌರ್ಯ

ಕಾಗೆ ಎಂಜಲಿಗೆ ದೋಷ ಇಲ್ಲ



ಅಣಕ

• ಎಚ್.ಎಲ್.ಕೇಶವಮೂರ್ತಿ

ದಸರಾ ಹಬ್ಬ ಪ್ರಾರಂಭ ಆಗಿತ್ತು, ಬಣ್ಣಬಣ್ಣದ ವಿದ್ಯುದ್ದೀಪಗಳಿಂದ ಅಲಂಕಾರಗೊಂಡ ಮೈಸೂರು ಝಗ ಮಗಿಸುತ್ತಿತ್ತು. ಆ ದೃಶ್ಯ ವೈಭವವನ್ನು ಕಣ್ತುಂಬಿಸಿಕೊಳ್ಳಲು ಮೈಸೂರಿಗೆ ಹೋಗಿದ್ದೆ. ನನ್ನ ತಂಗಿಯರು ಚಾಮುಂಡಿಬೆಟ್ಟಕ್ಕೆ ಹೋಗಿಬರೋಣ ಎಂದರು. ಮಧ್ಯಾಹ್ನ ಮೂರು ಗಂಟೆಯ ಸಮಯಕ್ಕೆ ಅಲ್ಲಿಗೆ ಹೋದೆವು. ನೂರು ರೂಪಾಯಿ ಟಿಕೆಟು ಕೊಂಡರೆ ನೇರವಾಗಿ ಅಮ್ಮನವರ ದರ್ಶನಕ್ಕೆ ಹೋಗಬಹುದಂತೆ. ಇಲ್ಲವಾದರೆ ಹನುಮಂತ ಬಾಲದಂತಹ ಸಾಲಿನಲ್ಲಿ ಹೋಗಬೇಕಂತೆ. ಕಾವೇರಿ ತಾಯಿಯ ದಯೆ. ಅವಶ್ಯ ನೀರಿಗಾಗಿ ನಡೆಯುತ್ತಿದ್ದ ಗಲಭೆಯಿಂದಾಗಿ ಜನದಟ್ಟಣೆ ಹೆಚ್ಚು ಇರಲಿಲ್ಲ. ಹಣ ಕೊಟ್ಟು ದರ್ಶನ ಮಾಡುವ ಪ್ರಮೇಯ ಇರಲಿಲ್ಲ. ಧರ್ಮದರ್ಶನವನ್ನೇ ಸಲೀಸಾಗಿ ಮಾಡಬಹುದಾಗಿತ್ತು. ತಂಗಿಯರಿಬ್ಬರು ಚಾಮುಂಡಿ ತಾಯಿಯ ದರ್ಶನಕ್ಕೆ ಹೋದರು. ದೇವಸ್ಥಾನದ ಗೋಪುರದ ಎದುರು ಒಂದು ಮಂಟಪ ಇತ್ತು. ಅಲ್ಲಿಗೆ ಹೋಗಿ ಕುಳಿತೆ. ಬಿಸಿಲು ಪ್ರಖರವಾಗಿದ್ದರೂ ಮಂಟಪದ ನೆಲಕ್ಕೆ ಹಾಸಿದ್ದ ಅಮೃತಶಿಲೆಯ ಹಾಸು ಹಿತಕರ ಅನುಭವ ಉಂಟುಮಾಡುತ್ತಿತ್ತು.

ನಾನು ಕುಳಿತಿದ್ದ ಸ್ಥಳ ಆಯಕಟ್ಟಿನದಾಗಿತ್ತು. ಅದರ ಪಕ್ಕ ವಿಶಾಲವಾದ ಅಂಗಳ ಇತ್ತು. ಅಂಗಳಕ್ಕೂ ದೇವಸ್ಥಾನಕ್ಕೂ ಇದ್ದ ನಡುವಿನ ಜಾಗದಲ್ಲಿಯೇ ಚಾಮುಂಡಿದೇವಿಯ ದರ್ಶನ ಮಾಡಬಯಸುವವರು ಹೋಗಬೇಕಾಗಿತ್ತು. ದೇವಾಲಯದ ಮುಂಭಾಗದಲ್ಲಿ ಕೆಲವು ಫೋಟೋಗ್ರಾಫರುಗಳು ಠಳಾಯಿಸುತ್ತಿದ್ದರು. ಗೋಪುರದ ಹಿನ್ನೆಲೆಯಲ್ಲಿ ಪ್ರವಾಸಿಗರು ತೆಗೆಸಿಕೊಂಡ ಫೋಟೋಗಳನ್ನು ಜನರಿಗೆ ತೋರಿಸುತ್ತಾ ಅವರೂ ಹಾಗೆ ತೆಗೆಸಿಕೊಳ್ಳಬೇಕೆಂದು ಪ್ರಚೋದಿಸುತ್ತಿದ್ದರು. ಹಲವರು ಫೋಟೋಗ್ರಾಫರುಗಳ ವಾಕ್‌ಚಾತುರ್ಯಕ್ಕೆ ಮರುಳಾಗಿಯೋ, ಫೋಟೋಗಳ ನೋಡಿ ಮಾರುಹೋಗಿಯೋ ಪ್ರವಾಸದ ನೆನಪಿಗೆ ಇರಲಿ ಎಂದೋ ಏನೋ ಒಂದು ಸುಡಗಾಡು ಕಾರಣಕ್ಕೆ ಫೋಟೋಗಳನ್ನು ತೆಗೆಸಿಕೊಳ್ಳಲು ಮಂಟಪದ ಪಕ್ಕದ ಅಂಗಳಕ್ಕೆ ಬರುತ್ತಿದ್ದರು. ಕೆಲವರು ತಾವೇ ಮೊಬೈಲು ಕ್ಯಾಮೆರಾದಲ್ಲಿ ಸೆಲ್ಫಿಗಳನ್ನು ಕ್ಲಿಕ್ಕಿಸಿಕೊಳ್ಳುತ್ತಿದ್ದರು. ಫೋಟೋಗ್ರಾಫರುಗಳ ಮನವೊಲಿಕೆಯ ತಂತ್ರವನ್ನೂ, ಅವರ ಚಾಕಚಕ್ಯತೆಯನ್ನೂ, ಫೋಟೋಗೆ ನಿಂತವರ ಹಾವಭಾವಗಳನ್ನೂ ನೋಡುತ್ತಾ ಮಜ ತೆಗೆದುಕೊಳ್ಳುತ್ತಿದ್ದೆ.



ಇಬ್ಬರು ಬೌದ್ಧ ಭಿಕ್ಕುಗಳು ಬಂದರು. ಅವರೂ ದೇವಸ್ಥಾನದ ಗೋಪುರದ ಹಿನ್ನೆಲೆಯಲ್ಲಿ ತಮ್ಮ ಫೋಟೋ ತೆಗೆದುಕೊಳ್ಳಲು ಬಯಸಿದ್ದರು. ಒಬ್ಬ ಭಿಕ್ಕು ಫೋಟೋ ತೆಗೆಯಲು ಸಿದ್ಧನಾದ. ಇನ್ನೊಬ್ಬ ಭಿಕ್ಕು ಪೋಸ್ ಕೊಡಬೇಕಿತ್ತು. ಸಾಮಾನ್ಯವಾಗಿ ಈ ಫೋಟೋ ತೆಗೆಸಿಕೊಳ್ಳುವವರಿಗೆ ಒಂದು ಆಸೆ ಇರುತ್ತೆ. ತಾವು ಇರುವುದಕ್ಕಿಂತ ಚೆನ್ನಾಗಿ ಫೋಟೋದಲ್ಲಿ ಕಾಣಿಸಿಕೊಳ್ಳಬೇಕು ಅಂತ. ಭಿಕ್ಕುವಿಗೂ ಹಾಗೆ ಅನ್ನಿಸಿರಬೇಕು. ಬಿಸಿಲಿನಲ್ಲಿ ಬಂದದ್ದರಿಂದ ಮುಖದಲ್ಲಿ ಬೆವರ ಹನಿಗಳ ಮೂಡಿದ್ದವು. ಅವನು ಒಂದು ಪೇಪರು ನ್ಯಾಪಕಿನ್ ತೆಗೆದ. ಮುಖವನ್ನೆಲ್ಲ ಹಗುರವಾಗಿ ಒರೆಸಿಕೊಂಡ. ನಂತರ ನ್ಯಾಪ್‌ಕಿನ್ ಅನ್ನು ಅಚ್ಚುಕಟ್ಟಾಗಿ ಮಡಚಿದ. ನಂತರ ಅದಕ್ಕೆ ಉಗಿದ. ಉಗುಳಿನಿಂದ ತೇವವಾದ ಅದರಿಂದ ಹಣೆಯನ್ನು ಉಜ್ಜಿಕೊಂಡ. ಮತ್ತೆ ತೆಗೆದ. ನ್ಯಾಪ್‌ಕಿನ್ ಮಡಿಕೆಗಳನ್ನು ಬದಲಾಯಿಸಿದ. ಮತ್ತೆ ಅದಕ್ಕೆ ಉಗುಳುಸೇವೆ ಮಾಡಿದ. ಹಣೆಯನ್ನು ಬಲವಾಗಿ ಅದರಿಂದ ತಿಕ್ಕಿಕೊಂಡ. ಹೀಗೆ ಮೂರು ನಾಲ್ಕು ಸಲ ಸ್ವಚ್ಛ(!)ಗೊಳಿಸಿಕೊಂಡ ನಂತರ ಫೋಟೋಗೆ ಪೋಸ್ ಕೊಡಲು ನಿಂತ! ನಾನು ಅದುವರೆವಿಗೆ ಉಗುಳಿದ ಹಲವಾರು ಉಪಯೋಗಗಳನ್ನು ಕಂಡಿದ್ದೆ. ಕನ್ನಡಕಗಳ ಗಾಜಿನ ಮೇಲೆ ಧೂಳು ಕುಳಿತಿದ್ದಾಗ ಅವುಗಳ ಮೇಲೆ ಉಗುಳು ಪ್ರೋಕ್ಷಣೆ ಮಾಡಿ ಬಟ್ಟೆಯಿಂದ ಒರೆಸಿ ಸ್ವಚ್ಛಗೊಳಿಸುವುದನ್ನು ನೋಡಿದ್ದೆ. ಹಾಗೆ ಮಾಡಿಯೂ ಇದ್ದೆ. ಆದರೆ ಉಗುಳನ್ನು ಸೌಂದರ್ಯವರ್ಧಕವಾಗಿ **spit therapy** (ಉಗುಳು ಚಿಕಿತ್ಸೆ) ಆಗಿ ಬಳಸಿದ್ದನ್ನು ಕಂಡದ್ದು ಇದೇ ಮೊದಲ ಸಲ ಆಗಿತ್ತು.

ನಾನು ಬಾಲ್ಯದಲ್ಲಿದ್ದಾಗ ಒಬ್ಬ ಸಾಬರ ಹುಡುಗ ಸಹಪಾಠಿಯಾಗಿದ್ದ. ನೋಡುವುದಕ್ಕೆ ಸೊಣಕಲನಂತಿದ್ದ. ಉರುಬಿದರೆ ಉರುಳಿಹೋಗುವಂತಿದ್ದ. ಆದರೆ ಆ ಸುವ್ವರ್ ನನ್‌ಮಗ ಹೋರಿಗಳ ವೃಷಣವನ್ನೇ ತಿನ್ನುತ್ತಿದ್ದನೋ ಏನೋ. ಎಲ್ಲಾ ಆಟಗಳಲ್ಲಿಯೂ ಮುಂಚೂಣಿಯಲ್ಲಿರೋನು. ನಾಲ್ಕು ಜನರನ್ನು ತದುಕುವ ತಾಖತ್ತು ಅವನಿಗಿತ್ತು. ಅದನ್ನು ಕಂಡು ನಮಗೆಲ್ಲ ಅಸೂಯೆಯಾಗೋದು. ನಮ್ಮ ಸಂಖ್ಯೆ ಜಾಸ್ತಿ ಇತ್ತಲ್ಲ, ಅದರ ಬಲದ ಮೇಲೆ ಕಾಲು ಕೆರೆದುಕೊಂಡು ಜಗಳಕ್ಕೆ ಹೋಗುತ್ತಿದ್ದೆವು. ಅವನು ಅದನ್ನೆಲ್ಲ ಸಹಿಸಿಕೊಂಡು ಇರುತ್ತಿದ್ದ. ಅವನು ಹೀಗಿರುವುದನ್ನೇ ಅವನ ದೌರ್ಬಲ್ಯ ಎಂದುಕೊಂಡು ಕೀಟಲೆ ಹೆಚ್ಚು ಹೆಚ್ಚು ಮಾಡುತ್ತಿದ್ದೆವು. ಇದರಿಂದ ಸಿಟ್ಟಿಗೇರಿದ ಆತ 'ತೇರೀ ಮಾಕೀ' ಎನ್ನುತ್ತ ತನ್ನ ಕೈಗಳಿಗೆ ಉಗುಳಿಕೊಂಡು ಎಂಜಲಿನ ಕೈಲಿ ನಮ್ಮನ್ನು ಮುಟ್ಟಲು ಬರುತ್ತಿದ್ದ. ಸಾಬರ ಎಂಜಲು ಮೈಗೆ ತಗುಲಿದರೆ ಜಾತಿ ಕೆಡುತ್ತೇವೆ ಎಂಬ ಭಯ ಇತ್ತಲ್ಲ. ಅವನು ಬಿರುಗಾಳಿಯಂತೆ ಬರುವುದನ್ನು ಕಂಡು ಎದ್ದೆವೋ ಬಿದ್ದೆವೋ ಎಂಬುದನ್ನು ಕಾಣದಂತೆ ಪಲಾಯನ ಸೂತ್ರಕ್ಕೆ ಒಳಗೊಳ್ಳುವುದು ಅನಿವಾರ್ಯವಾಗುತ್ತಿತ್ತು. ಆ ಸಾಬಿ ಬಡ್ಡೀಮಗ **spit bomb** (ಎಂಜಲು ಬಾಂಬು) ಭಯ ತೋರಿ ನಮ್ಮನ್ನು ಹದ್ದುಬಸ್ತಿನಲ್ಲಿಡುತ್ತಿದ್ದ.

ಒಂದು ಸಲ ಯಾವುದೋ ಕ್ಷುಲ್ಲಕ ಕಾರಣಕ್ಕೆ ಇಬ್ಬರಿಗೆ ಜಗಳ ಆಯಿತು. ಅದು ಅಂತಿಂತಹ ಜಗಳ ಅಲ್ಲ, ಭಾರೀ ಭಾರೀ ಜಗಳ. ಜಗಳವಾಡಿಕೊಂಡವರು ಆಸ್ಪತ್ರೆ ಸೇರಬೇಕಾಯಿತು. ಅವರಲ್ಲಿ ಒಬ್ಬ ನನಗೆ ಬೇಕಾದವನು. ಅವನನ್ನು ನೋಡಲು ಹೋದೆ. ಅವನು ಪ್ರವರ ಒಪ್ಪಿಸಿದ. 'ಕ್ಯಾಕರಿಸಿ ಮಕ್ಕೆ ಉಗೀಬೇಕಿತ್ತು' ಎಂದೆ. ಎದುರಾಳಿಯ ಮುಖಕ್ಕೆ ಸಾರ್ವಜನಿಕವಾಗಿ ಉಗುಳು ಪ್ರೋಕ್ಷಣೆ ಮಾಡುವುದು ಅತ್ಯಂತ ಸಮರ್ಥವಾಗಿ ಅವಮಾನಗೊಳಿಸುವ ವಿಧಾನ ಎಂಬುದು ನನಗೆ ಗೊತ್ತಿದ್ದರಿಂದ ಹಾಗೆಂದೆ. 'ನಾನು ಹಂಗಂದುಕೊಂಡೆ. ಮಕ್ಕೆ ಉಗಿದುಬುಡಾನ ಅಂತಾನೆ ಇದ್ದೆ' ಅಂದ. 'ಮತ್ಯಾಕೆ ಉಗೀಲಿಲ್ಲ' ಅಂದೆ. 'ಪಬ್ಲಿಕ್ಕಾಗಿ ಉಗೀಬಾರದು. ಅದು ಆರೋಗ್ಯಕ್ಕೆ ಹಾನಿಕರ ಅಂತ ಸುಮ್ಮನಾದೆ' ಅಂದ! ಆಮೇಲೆ ತಿಳಿದು ಬಂದದ್ದೇನು ಅಂದರೆ ದೈತ್ಯದೇಹದ ವಿರೋಧಿ ಮೇಲೆ ಉಗುಳು ಪ್ರಯೋಗ ನಡೆಸಿದ್ದರೆ ನನಗೆ ಬೇಕಾದವನು ಶಾಶ್ವತವಾಗಿ ಆಸ್ಪತ್ರೆಯ ಪಾಲಾಗಬೇಕಾಗುತ್ತಿತ್ತಂತೆ. ಇದನ್ನು ಯಾರೋ ತಿಳಿಸಿದಾಗ 'ಅರೆ ಅದೆಂಗ್ರಿ ಸಾಧ್ಯ. ಈಗಲೇ ಅವನೂ ಆಸ್ಪತ್ರೆ ಸೇರವ್ನಂತಲ್ಲಾ' ಎಂದು ಮರುಪ್ರಶ್ನಿಸಿದೆ. ಅದಕ್ಕೆ ಅವರು 'ಅಷ್ಟೂ ತಿಳಿಯಲ್ಲವೇನ್ರಿ. ಅವನು ಆಸ್ಪತ್ರೆ ಸೇರಿರೋದು ಕೌಂಟರ್ ಕೇಸ್ ಹಾಕೋಕೆ' ಅಂದರು!

ಈಗಿನ ಮಕ್ಕಳೇ ಪುಣ್ಯವಂತರು. ಪಾಕೆಟ್ ಮನಿ ಅಂತ ಅವರಿಗೆ ಅಷ್ಟೋ ಇಷ್ಟೋ ಸಿಗುತ್ತೆ. ತಮಗೆ ಬೇಕಾದ ತಿನಿಸುಗಳನ್ನು ಅಪರೂಪಕ್ಕಾದರೂ ಸ್ವಾದಿಸುತ್ತಾ ಆನಂದಮಯ ಗಳಿಗೆಗಳನ್ನು ಕಳೆಯಬಹುದು. ನಮಗೆ ಬಾಲ್ಯದಲ್ಲಿ ಪಾಕೆಟ್ ಏನೋ ಇತ್ತು. ಆದರೆ ಮನಿ ಎಂಬ ಅನರ್ಘ್ಯ ವಸ್ತು ಆ ಪಾಕೆಟನ್ನು ಸ್ಪರ್ಶಿಸುವ ಪಾಪಕಾರ್ಯವನ್ನು ಮಾಡಿದ್ದೇ ಇಲ್ಲ. ಮನೆಯಲ್ಲೇ ಅಚ್ಚುಕಟ್ಟಾಗಿ ಊಟ ತಿಂಡಿ ಆಗುವುದರಿಂದ ದುಡ್ಡು ಯಾಕೆ ಬೇಕು ಎಂಬುದು ಅಂದಿನ ಹಿರಿಯರ ಅಭಿಪ್ರಾಯವಾಗಿರುತ್ತಿತ್ತು. ಅಂತಹ 'ಧನಬರ' ಕಾಲದಲ್ಲೂ ಕೆಲವರು ಮನೆಯ ಹೊರಗೆ, ಎಲ್ಲರಿಗೂ ಅಸೂಯೆ ಆಗುವಂತೆ ತಿಂಡಿಯನ್ನು ತಿನ್ನುತ್ತಿದ್ದರು. ಆಗೆಲ್ಲ ಸಕ್ಕರೆ ಕಾಯಿಲೆ ಅಂತಾನೂ ಒಂದು ಕಾಯಿಲೆ ಇದೆ, ಅದು ಸಿಹಿತಿಂಡಿಗಳನ್ನು ಆಸ್ವಾದಿಸಲು ಅಡ್ಡಿ ಬರುತ್ತೆ ಅನ್ನೋದು ಗೊತ್ತೇ ಇರಲಿಲ್ಲ. ಯಾರಾದರೂ ತಿಂಡಿ ಅದರಲ್ಲೂ ಸಿಹಿಪದಾರ್ಥಗಳನ್ನು ತಿನ್ನುವಾಗ ನಮ್ಮ ಬಾಯಲ್ಲೂ ಜೊಲ್ಲು ಸುರಿಯೋದು. ಅವನನ್ನೇ ಅಸೂಯೆ ಕಣ್ಣುಗಳಿಂದ ನೋಡುತ್ತಾ 'ನಂಗೂ ಕೊಡೋ' ಅಂದರೆ 'ಎಂಜಲು ಮಾಡೀದಿನಲ್ಲೋ' ಅನ್ನೋನು. ಸಾಬರ ಎಂಜಲಿಗೆ ಬಾಂಬಿನ ಗುಣ ಇದ್ದರೂ, ಬೇರೆಯವರ ಎಂಜಲಿಗೆ ಆ ವಿಶೇಷ ಗುಣ ಏನೂ ಇರುತ್ತಿರಲಿಲ್ಲವಾದುದರಿಂದ 'ಪರ್ವಾಗಿಲ್ಲ ಕೊಡೊ' ಅಂತಿದ್ದೆ. ಅವನಿಗೋ ತಿನಿಸನ್ನು ಒಟ್ಟಾರೆಯಾಗಿ ಸವಿಯದೆ ಹಂಚಿಕೊಳ್ಳಬೇಕಲ್ಲ ಅನ್ನುವ ಸಂಕಟ. ಅದಕ್ಕೆ 'ಎಂಜಲು ತಿಂದ್ರೆ ರೋಗ ಬರುತ್ತಂತೆ. ನಿನಗೆ ಎಂಜಲು ತಿನ್ನಿಸಿ ನಿಮ್ಮಮ್ಮನ ಕೈಲಿ ಉಗಿಸಿಕೊಳ್ಳಲಾ ಬ್ಯಾಡಪ್ಪ' ಅಂತ ನೆಪ ತೆಗೆಯೋನು. ನಾನೂ ಛಲಬಿಡದ ತ್ರಿವಿಕ್ರಮನಂತೆ ಅವನ ಹೆಗಲೇರಿ 'ಒಂದು ಕಡೆ ಎಂಜಲಾಗಿದೆ. ಇನ್ನೊಂದು ಕಡೆ ಎಂಜಲಾಗಿಲ್ವಲ್ಲ ಅದ ಕೊಡೊ' ಅನ್ನಿವೆ. 'ಆ ಕಡೇನೂ ಎಂಜಲಾಗದೆ' ಎನ್ನುತ್ತಾ ನನ್ನ ಕಣ್ಣೆದುರೇ ಆ ಕಡೆಯೂ ಎಂಜಲು ಮಾಡೋನು. ಏನಾದರೂ ಮಾಡಿ ಅದರಲ್ಲಿ ಪಾಲು ಪಡೆದು ಅದರ ಸವಿಯನ್ನು ಅನುಭವಿಸಲೇಬೇಕು ಅಂತ ಅವನು ಒಂದು ಪಟ್ಟು ಹಾಕಿದರೆ ಅದಕ್ಕೆ ತಿರುವು ಪಟ್ಟನ್ನು ಹಾಕುತ್ತಿದ್ದೆ. 'ಆ ಕಡೇದೂ ಬ್ಯಾಡ ಈ ಕಡೇದೂ ಬ್ಯಾಡ ಮಧ್ಯದ್ದು ಕೊಡೊ' ಅಂತಿದ್ದೆ. ಅದ್ಕೆ ಅವನು 'ಮುರಿಯೋಕೆ ಆಗೋಲ್ಲ' ಅಂತಿದ್ದ. ನಾನು ಪರಾಜಯ ಹೊಂದಬಾರದು ಎಂಬ ದೃಢ ನಿಶ್ಚಯ ಮಾಡಿದ್ದರಿಂದ 'ಕಾಗೆ ಎಂಜಲು ಮಾಡಿ ತುಂಡು ಮಾಡೊ' ಅನ್ನಿವೆ. ಕಾಗೆ ಎಂಜಲು ಎಂದರೆ ಗೊತ್ತಲ್ಲ ತಿಂಡಿಯ ಮೇಲೆ ಅಂಗಿಯನ್ನೋ, ತೊಟ್ಟಿರುವ ಲಂಗವನ್ನೋ ಹಾಕಿ ಮುಚ್ಚಿ ಮೇಲಿನಿಂದ ಹಲ್ಲಿನಲ್ಲಿ ತುಂಡು ಮಾಡುವುದು.

ಹಾಗೆ ಮಾಡಿದಾಗಲೂ ಎಂಜಲು ಆಗುವುದಾದರೂ 'ಕಾಗೆ ಎಂಜಲಿಗೆ ದೋಷ ಇಲ್ಲ' ಎಂಬ ಅನುಕೂಲ ಸಿದ್ಧಾಂತವು ಆಗ ಪ್ರಚಲಿತದಲ್ಲಿತ್ತು. ಪಾಪ ಆ ತಿನಿಸು ಭಾಗ್ಯವಂತ ಅನ್ಯಮಾರ್ಗ ಕಾಣದೆ ಅದರ ಒಂದು ಭಾಗವನ್ನು ಅನಿವಾರ್ಯವಾಗಿ ತ್ಯಾಗ ಮಾಡಬೇಕಾಗುತ್ತಿತ್ತು.

ಕಾಗೆ ಎಂಜಲಿಗೆ ದೋಷವಿಲ್ಲ ಎಂದು ಅಂದು ಪ್ರಚಲಿತವಾಗಿದ್ದ ಸಿದ್ಧಾಂತ ಬೇರೆ ಬೇರೆ ಕ್ಷೇತ್ರಗಳಿಗೆ ತನ್ನ ಪ್ರಭಾವ ಬೀರುತ್ತಿದ್ದೆ ಎಂಬುದು ಇತ್ತೀಚೆಗೆ ಮಂಡ್ಯ ಜಿಲ್ಲೆಯಲ್ಲಿ ಪ್ರಕಟವಾಗಿದೆ. ಅದು ಆಗಿರುವುದು ಹೀಗೆ:


ಊರು ಅಂತ ಇದ್ದ ಮೇಲೆ ದೇವಸ್ಥಾನ ಅನ್ನೋದು ಇರಲೇಬೇಕು. ಜಾಗತೀಕರಣ ಬಂದಮೇಲೆ ಈ ದೇವರುಗಳೂ ಶೋಕಿಲಾಲರಾಗಿರುವಂತಿದೆ. ಹಿಂದೆಲ್ಲ ಬಿಳಿ ಪಂಚೆ ಸುತ್ತಿಕೊಂಡು ಹೆಂಗೋ ಮೈಮುಚ್ಚಿಕೊಂಡು ಇರುತ್ತಿದ್ದ ದೇವಾನುದೇವತೆಗಳು ಈಗ ಪೀತಾಂಬರನೇ ಬೇಕು ಅಂತಾವಂತೆ. ಇಂತಹ ಒಡವೇನೆ ಬೇಕು ಅಂತ ಡಿಮ್ಯಾಂಡ್ ಮಾಡ್ತಾವಂತೆ. ಇಂತಿಂತಹ ಪೂಜೆಗೆ ಇಷ್ಟಿಷ್ಟು ಹಣ ಕೊಡಬೇಕು ಅಂತ ಕಾದು ಕುಂತಿರ್ತವಂತೆ. ಮಂಗಳಾರತಿ ತಟ್ಟೆಗೆ, ಹುಂಡೀಗೆ ಗರಿಗರಿ ನೋಟುಗಳನ್ನೇ ಹಾಕಬೇಕಂತೆ. ಹಿಂಗಾಗಿ ತಿರುಪತಿ ತಿಮ್ಮಪ್ಪ, ಧರ್ಮಸ್ಥಳದ ಮಂಜುನಾಥ, ನಂಜನಗೂಡಿನ ನಂಜುಂಡರ ಮಟ್ಟಕ್ಕೆ ಏರದಿದ್ದರೂ ದೇವಸ್ಥಾನ ನಂಬಿರೋರು ಗೆಲುವಾಗಿರುವಂತೆ ಮಾಡುವಷ್ಟಾದರೂ ಫಲವತ್ತಾಗಿವೆ.

ಕಳ್ಳರಿಲ್ಲದ ಊರು ಇಲ್ಲ ಅನ್ನೋ ಮಾತಿಗೆ ಅವಮಾನ ಮಾಡಬಾರದು ಅಂತಾನೋ ಏನೋ ನಮ್ಮ ಹಳ್ಳಿಗಳಲ್ಲೂ ಅವರು ಅವ್ರೆ. ಅವರಲ್ಲೂ ಕೆಲವರು ಮಾಡುವುದು ಕಳ್ಳತನವೇ ಇರಬಹುದು. ಆದರೂ ದೈವಭಕ್ತರು ಕಳ್ಳತನಕ್ಕೆ ಕೈಹಾಕಿದಾಗಲೂ ದೇವರ ಪೂಜೆ ಮಾಡಿಯೇ ಕೈಹಾಕುವುದು. ಆ ತಾಯಿಯ, ಸ್ವಾಮಿಯ ಆಶೀರ್ವಾದವೇ ತಮ್ಮ ಕಸುಬಿಗೆ ಶ್ರೀರಕ್ಷೆ ಅಂತ ನಂಬಿರೋರು. ಅಂತ ನಿಯತ್ತಿನ ಕಳ್ಳರು ರಾತ್ರಿ ತಮ್ಮ ಕಸುಬಿಗೆ ಹೊರಟವ್ರೆ. ಮನೆಗೆ ನುಗ್ಗಾನ ಅಂದ್ರೆ ಕಾಯಿಲೆ ಕಸಾಲೆಯೋರು ನರಳ್ತಾ ಅವ್ರೆ. ಮುದುಕ್ರು ಮೋಟ್ರು 'ಕೊಹ್ ಕೊಹ್' ಅಂತ ಕೆಮ್ತಾ ಅವ್ರೆ. ಅಂಗಡಿಗಳಿಗೆ ಕನ್ನ ಹಾಕಾನ ಅಂದ್ರೆ ಪೊಲೀಸ್ನೋರು ಗಸ್ತು ಹೊಡೀತಾ ಅವ್ರೆ. ಕಳ್ಳ ಮಾಲಿನ ಸಹಿತ ಸಿಗಾಕಿಕೊಂಡ್ರೆ ಅದು ಅವರ ಪಾಲಾಯ್ತದೆ. ಅಷ್ಟೋ ಇಷ್ಟೋ ಕೊಟ್ಟರೂ ತೃಪ್ತಿ ಇರಾಕಿಲ್ಲ. ಈ ತರಲೆ ತಾಪತ್ರಯ ಇಲ್ಲದ ಪ್ರಶಸ್ತವಾದ ಸ್ಥಳ ಅಂದ್ರೆ ಗುಡಿ. ಊರ ಆಚೆ ಅದೆ. ಯಾರ ಕಾಟವ್ರೂ ಇಲ್ಲ. ನಿರಾಳವಾಗಿ ಕಳ್ಳತನ ಮಾಡಬಹುದು ಅಂತ ಅಲ್ಲಿಗೆ ಹೋಗವ್ರೆ. ಹುಂಡಿ ತೂಕ, ದೇವರ ಮೇಲಿನ ಒಡವೆ ನೋಡವ್ರೆ. ಬೋ ಸಂತೋಷ ಆಗದೆ. ದೇವರಿಗೆ ಕರ್ಪೂರ ಹಚ್ಚವ್ರೆ, ಗಂಧದ ಕಡ್ಡಿ ಬೆಳಗವ್ರೆ. ಇನ್ನೇನು ಕಸುಬು ಶುರು ಮಾಡಬೇಕು. ಆಗ ದೇವರ ಕಡೆ ದೃಷ್ಟಿ ನೆಟ್ಟವ್ರೆ. ಎದೆ ಧಸಕ್ ಅಂದದೆ. ಯಾಕಂದ್ರೆ ದೇವರು ಕಣ್ಣು ಬಿಟ್ಟುಕೊಂಡು ಎಲ್ಲಾನೂವೆ ನೋಡ್ತಾ ಅವ್ನೆ. ಎಲಾಎಲಾ ಈ ಸ್ವಾಮಿ ಹಿಂಗೆ ನೋಡ್ತಾ ಕುಂತವ್ನಲ್ಲ. ಅವನು ನೋಡ್ತಿದ್ದಂಗೆ ಕಳ್ಳತನ ಮಾಡಿದ್ರೆ ಅವನ ಮಾನಕೆ ಇನಾಯ ಅಲ್ವಾ. ಅವನ ಗೌರವಕ್ಕೆ ಕುಂದುಬರದಂಗೆ ನಡ್ಕೋಬೇಕಾದ್ದು ನಮ್ಮ ಧರ್ಮ ಅಲ್ವಾ ಅಂತೆಲ್ಲ ಯೋಚಿಸವ್ರೆ.... ಅವರೇನು ಕಸುಬಿಗೆ ಹೊಸಬರಲ್ಲ. ಬೋ ಅನುಭವಸ್ತರೇಯ. ಕೋರ್ಟಲಿ ನ್ಯಾಯದೇವತೆ, ಕಣ್ಣಿಗೆ ಬಟ್ಟೆ ಕಟ್ಟಿರೋದು ನೆನಪಾಗದೆ. ಅದೇ ಸರಿ ಅಂದುಕಂಡವ್ರೆ. ಒಂದು ಬಟ್ಟೆ ತಗಂಡವ್ರೆ. ದೇವರ ವಿಗ್ರಹದ ಕಣ್ಣಿಗೆ ಕಟ್ಟವ್ರೆ. ಮನಸ್ಸಿಗೆ ಸಮಾಧಾನ ಆಗದೆ. ಆಮೇಲೆ ಇದ್ದಿದ್ದೇಯ. ಕೈಚಳಕ ತೋರಿಸವ್ರೆ ಅಷ್ಟೇಯ.

'ಕಾಗೆ ಎಂಜಲಿಗೆ ದೋಷ ಇಲ್ಲ' ಅಂದ ಹಾಗೇನೆ 'ದೇವರ ಕಣ್ಣಿಗೆ ಬಟ್ಟೆ ಕಟ್ಟಿ ಕಸುಬು ಮಾಡಿದರೆ ದೋಷ ಇಲ್ಲ' ಅನ್ನೋದೂ ಇದೇ ಅಲ್ವಾ...

ಇಂತಹವಕ್ಕೆ ಏನೋ ಟೆಕ್ನು ಕಣ್ಣುಮುಚ್ಚಿಕೊಂಡು ಹಾಲು ಕುಡಿಯೋದು ಅನ್ನೋದು! ■

ಪೇಜಾವರ ಶ್ರೀಗಳ ಪ್ರಸ್ತಾಪಿತ ಉಪವಾಸ



ಅಕ್ಟೋಬರ್ 9 ಭಾನುವಾರದಂದು, ಉಡುಪಿಯಲ್ಲಿ ನಡೆದ 'ಚಲೋ ಉಡುಪಿ' ಜಾಥಾದ ಸಮಾರೋಪ ಸಭೆಯಲ್ಲಿ ಭಾಗವಹಿಸಿದ್ದ ಗುಜರಾತ್‌ನ ಯುವ ದಲಿತ ನಾಯಕ, ಕವಿ ಹಾಗೂ ಪತ್ರಕರ್ತ ಜಿಗ್ನೇಶ್ ಮೇವಾನಿ ತನ್ನ ಭಾಷಣದಲ್ಲಿ "ಉಡುಪಿಯ ಕೃಷ್ಣ ಮಠದಲ್ಲಿ ಆಚರಿಸಲಾಗುತ್ತಿರುವ ಪಂಕ್ತಿಭೇದದ ವಿರುದ್ಧ ಮಠಕ್ಕೆ ಮುತ್ತಿಗೆ ಹಾಕಿ, ನಾನು ಜೈಲು ಸೇರಲು ಸಿದ್ಧನಾಗಿಯೇ ಬಂದು ಅದರಲ್ಲಿ ಭಾಗವಹಿಸುವೆ" ಎಂದು ಘೋಷಿಸಿದರು. ಜಿಗ್ನೇಶ್, ತನ್ನ ಮಾತಿನ ಆಶಯವಾಗಿ ಪ್ರಸ್ತಾಪಿಸಿದ ಈ ಪ್ರತಿಭಟನೆಯನ್ನು ನಡೆಸುವುದೇ ಆದರೆ ಅದರ ದಿನಾಂಕ, ಕಾರ್ಯಕ್ರಮ ಇತ್ಯಾದಿ ವಿವರಗಳನ್ನು ಚಲೋ ಉಡುಪಿ ಜಾಥಾವನ್ನು ಸಂಘಟಿಸಿದ 'ದಲಿತ-ದಮನಿತರ ಸ್ವಾಭಿಮಾನ ಹೋರಾಟ ಸಮಿತಿ' ಇನ್ನೂ ತೀರ್ಮಾನಿಸಿಲ್ಲ. ಆದರೆ ಈಗಾಗಲೇ ಉಡುಪಿಯ ಕೃಷ್ಣ ಮಠಕ್ಕೆ ಮುತ್ತಿಗೆ ಹಾಕಲಾಗಿದೆ ಎಂಬಂತೆ ಮಾಧ್ಯಮಗಳಲ್ಲಿ ಬಿಸಿಬಿಸಿ ಚರ್ಚೆ ನಡೆಯುತ್ತಿದೆ.

ಕೃಷ್ಣ ಮಠಕ್ಕೆ ಮುತ್ತಿಗೆ ಹಾಕಿದರೆ ತಾನು ಉಪವಾಸ ಕೂರುವುದಾಗಿ ಪೇಜಾವರ ಶ್ರೀಗಳು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಮುತ್ತಿಗೆಯ ಸಂದರ್ಭದಲ್ಲಿ ಮಠಕ್ಕೆ ಸೂಕ್ತ ರಕ್ಷಣೆ ಒದಗಿಸುವುದು ಸರಕಾರದ ಕರ್ತವ್ಯ ಎಂದು ಸಹ ಅವರು ತಿಳಿಸಿದ್ದಾರೆ. 'ಕೃಷ್ಣ ಮಠಕ್ಕೆ ಮುತ್ತಿಗೆ' ಎಂದು ಜಿಗ್ನೇಶ್ ಹೇಳಿದ್ದನ್ನು, ಮಧ್ಯಯುಗದ ಯುದ್ಧಗಳಲ್ಲಿ ಶಸ್ತ್ರಾಸ್ತ್ರ ಹಿಡಿದ ಸೈನಿಕರು, ಶತ್ರುಗಳ ಕೋಟೆಗೆ ಮುತ್ತಿಗೆ ಹಾಕುವಂತೆ, ಕೃಷ್ಣಮಠವನ್ನು ಪ್ರತಿಭಟನಾಕಾರರು ಸುತ್ತುವರಿದು ದಿಗ್ಬಂಧನ ಹಾಕಲಿದ್ದಾರೆ ಎಂದು ಪೇಜಾವರ ಶ್ರೀಗಳು ಅರ್ಥಮಾಡಿಕೊಂಡ ಹಾಗಿದೆ. ಖಂಡಿತವಾಗಿಯೂ ಜಿಗ್ನೇಶ್ 'ಮುತ್ತಿಗೆ' ಎಂಬ ಶಬ್ದವನ್ನು ಆ ಅರ್ಥದಲ್ಲಿ ಬಳಸಲೂ ಇಲ್ಲ; ಹಾಗೆ ಮಾಡುವ ಉದ್ದೇಶ ಅವರ ಮನಸ್ಸಿನಲ್ಲೂ ಇಲ್ಲ.

ಗುಜರಾತ್‌ನ ಉನಾ ಎಂಬ ಊರಿನಲ್ಲಿ ಸತ್ತ ದನದ ಚರ್ಮ ಹದ ಮಾಡುತ್ತಿದ್ದ ದಲಿತರ ಮೇಲೆ ಸವರ್ಣೀಯ ಹಿಂದೂಗಳು ನಡೆಸಿದ ಹಿಂಸಾಚಾರವನ್ನು ಪ್ರತಿಭಟಿಸಿ, ಆ ರಾಜ್ಯದಲ್ಲಿ ಇತ್ತೀಚೆಗೆ ನಡೆದ ಬೃಹತ್ ಪ್ರತಿಭಟನೆಯೊಂದು ಜಿಗ್ನೇಶ್ ಅವರ ನಾಯಕತ್ವದಲ್ಲಿ ರೂಪುಗೊಂಡಿತ್ತು, ರಾಜ್ಯದ ರಾಜಧಾನಿ ಅಹ್ಮದಾಬಾದ್‌ನಿಂದ ಹೊರಟು, ಆಗಸ್ಟ್ 15ರಂದು ಉನಾದಲ್ಲಿ ಸಮಾರೋಪಗೊಂಡ ಈ ಪ್ರತಿಭಟನೆಯ ಜಾಥಾದಲ್ಲಿ ಸಾವಿರಾರು ಜನ ದಲಿತರು,





ಮುಸ್ಲಿಮರು ಹಾಗೂ ದೇಶದ ಎಲ್ಲೆಡೆಯಿಂದ ಬಂದ ಪ್ರಗತಿಪರ ಚಿಂತಕರು ಭಾಗವಹಿಸಿದ್ದರು. ಚಲೋ ಉಡುಪಿ ಜಾಥಾಕ್ಕೆ ಸ್ಫೂರ್ತಿ ಮತ್ತು ಮಾದರಿಯಾಗಿದ್ದ ಚಲೋ ಉನಾ ಜಾಥಾದ ಉದ್ದಕ್ಕೂ ಎಲ್ಲಿಯೂ, ಯಾವ ಕ್ಷಣದಲ್ಲೂ ಹಿಂಸಾಚಾರ ನಡೆಯಲಿಲ್ಲ. ಕೃಷ್ಣ ಮಠಕ್ಕೆ ಮುತ್ತಿಗೆ ಎಂದರೆ ಪಂಕ್ತಿಭೇದ ಮತ್ತು ಜಾತಿ ತಾರತಮ್ಯಗಳ ವಿರುದ್ಧ ಕೃಷ್ಣ ಮಠದ ಸಮ್ಮುಖದಲ್ಲಿ ನಡೆಸಲಾಗುವ ಪ್ರಜಾಸತ್ತಾತ್ಮಕ ಪ್ರತಿಭಟನೆ ಮತ್ತು ಧರಣಿ ಕಾರ್ಯಕ್ರಮವೇ ಹೊರತು ಖಂಡಿತ ಅದೊಂದು ಸೈನಿಕ ಕಾರ್ಯಾಚರಣೆಯಲ್ಲ. ಮೊನ್ನೆ ಜಿಗ್ನೇಶ್ ಅವರ ಮಾತನ್ನು ಸಭಿಕರು ಗ್ರಹಿಸಿದ್ದಾದರೂ ಅದೇ ಅರ್ಥದಲ್ಲಿ. ಆ ಬಗೆಯ ಪ್ರತಿಭಟನೆ ಉಡುಪಿಗೆ ಹೊಸದೇನೂ ಅಲ್ಲ.

ಕೃಷ್ಣ ಮಠದಲ್ಲಿ ಆಚರಿಸಲಾಗುತ್ತಿರುವ ಪಂಕ್ತಿಭೇದದ ವಿರುದ್ಧ ಈಗಾಗಲೇ ಮೇಲೆ ಹೇಳಿದ ಅರ್ಥದ ಮುತ್ತಿಗೆಯ ಕಾರ್ಯಕ್ರಮಗಳು ನಡೆದಿವೆ. ಅವುಗಳ ಪೈಕಿ ಅತಿದೊಡ್ಡ ಪ್ರಯತ್ನವೆಂದರೆ 2012 ಡಿಸೆಂಬರ್ 27ರಂದು ಸಿಪಿಎಂ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಕಾರ್ಯಕ್ರಮ. ಕರ್ನಾಟಕದ ಎಲ್ಲೆಡೆಯಿಂದ ದೊಡ್ಡ ಸಂಖ್ಯೆಯಲ್ಲಿ ಬಂದಿದ್ದ ಗಂಡಸರು, ಹೆಂಗಸರು ಅಂದು ಮಧ್ಯಾಹ್ನದ ಉರಿಬಿಸಿಲಿನಲ್ಲೇ ಉಡುಪಿಯ ಅಜ್ಜರಕಾಡಿನಿಂದ ಕೃಷ್ಣ ಮಠದೆಡೆಗೆ ಮೆರವಣಿಗೆಯಲ್ಲಿ ಸಾಗಿ ಬಂದರು. ಮೆರವಣಿಗೆಯ ದಾರಿಯಲ್ಲಿ ಕೃಷ್ಣ ಮಠಕ್ಕೆ ಸಮೀಪದ ಸಂಸ್ಕೃತ ಕಾಲೇಜಿನ ಎದುರು ರಸ್ತೆಗೆ ಅಡ್ಡವಾಗಿ ಪೊಲೀಸರು ಬ್ಯಾರಿಕೇಡುಗಳನ್ನು ಹಾಕಿದ್ದರು. ಮೆರವಣಿಗೆಯಲ್ಲಿ ಬಂದವರು ಈ ಬ್ಯಾರಿಕೇಡುಗಳನ್ನು ತಳ್ಳಿ ಮುಂದೆ ಹೋಗಲು ಯತ್ನಿಸಿದಾಗ ಪೊಲೀಸರು ಪ್ರತಿಭಟನಾಕಾರರ ಮುಖ ಮೋರೆ ನೋಡದೆ ಸಮಾ ಚಚ್ಚಿದರು. ಸಿಕ್ಕಸಿಕ್ಕವರನ್ನೆಲ್ಲ ಹೊಡೆದು ಬಡಿದು ಬಂಧಿಸಿ ಪೊಲೀಸು ವ್ಯಾನುಗಳ ಒಳಕ್ಕೆ ನೂಕಿದರು. ಆ ನಂತರ ಅವರನ್ನೆಲ್ಲ ಉಡುಪಿ ನಗರ ಪೊಲೀಸು ಠಾಣೆಯ ಸಮೀಪದ ಒಂದು ಖಾಲಿ ಜಾಗದಲ್ಲಿ ತಡರಾತ್ರಿಯವರೆಗೆ ಕೂಡಿ ಹಾಕಲಾಗಿತ್ತು. ಹೀಗೆ ಬಂಧಿತರಾದ ನೂರಾರು ಸಂಗಾತಿಗಳಿಗೆ ಸಿಪಿಎಂ ನಾಯಕ ಶ್ರೀರಾಮ್ ರೆಡ್ಡಿ ಹಾಗೂ ಜಿ.ಎನ್. ನಾಗರಾಜ್ ಅವರೂ ಸೇರಿದಂತೆ ಅಂದು ಬಯಲು ಆಲಯವಾಗುವ ಬದಲು ಬಂದೀಖಾನೆಯಾಯಿತು! ಇವರು ಯಾರೂ ಶಸ್ತ್ರಾಸ್ತ್ರ ಹಿಡಿದಿರಲಿಲ್ಲ, ಅಷ್ಟೇ ಯಾಕೆ ಈ ಸಂಗಾತಿಗಳ ಕೈಯಲ್ಲಿ ಒಂದು ಬಡಿಗೆ ಕೂಡ ಇರಲಿಲ್ಲ.

ಉಡುಪಿ ಕೃಷ್ಣ ಮಠಕ್ಕೆ 'ಮುತ್ತಿಗೆ' ಹಾಕಲು ಬಂದ ಈ ಜನರಲ್ಲಿ ಯಾರೂ ಪ್ರತಿಕ್ರಿಯೆಯ ರೂಪದಲ್ಲಿ ಸಹ ಹಿಂಸೆ ನಡೆಸಲಿಲ್ಲ. ಆದರೆ ಪೊಲೀಸರು ಮಾತ್ರ ಆಗ ಅಧಿಕಾರದಲ್ಲಿದ್ದ ಬಿಜೆಪಿ ಸರಕಾರದ ಕಾಲಾಳುಗಳಂತೆ ವರ್ತಿಸಿ, ಪ್ರತಿಭಟನಾಕಾರರನ್ನು ಥಳಿಸಿದರು. 'ಉಡುಪಿಯ ಕೃಷ್ಣ ಮಠಕ್ಕೆ ಮುತ್ತಿಗೆ' ಎಂದು ಜಿಗ್ನೇಶ್ ಮೇವಾನಿ ಹೇಳಿದಾಗಲೂ ಅವರ ಉದ್ದೇಶವಿದ್ದುದು ಇಂತಹದ್ದೇ ಒಂದು ಪ್ರಜಾಸತ್ತಾತ್ಮಕವೂ ಶಾಂತಿಯುತವೂ ಆದ ಪ್ರತಿಭಟನೆಯೇ ಹೊರತು ಕೃಷ್ಣ ಮಠದ ವಿರುದ್ಧ ಯುದ್ಧ ಅಲ್ಲ.

ಪೇಜಾವರ ಶ್ರೀಗಳು, ಜಿಗ್ನೇಶ್ ತಮ್ಮ ಭಾಷಣದಲ್ಲಿ ಹೇಳಿದ ಉಳಿದ ಎಲ್ಲಾ ವಿಷಯಗಳನ್ನೂ ಬದಿಗೆ ಸರಿಸಿ, ಈ 'ಮುತ್ತಿಗೆ' ಎಂಬ ಶಬ್ದದ ಬಗ್ಗೆ ಯಾಕೆ ಇಷ್ಟು ಭಾವೋದ್ವೇಗಕ್ಕೆ ಒಳಗಾಗಿದ್ದಾರೆ? ಚಲೋ ಉಡುಪಿ ಜಾಥಾ ಸಂಘಟಿಸಿದ ಹೋರಾಟ ಸಮಿತಿ, ತನ್ನ ಮುಂದಿನ ಕಾರ್ಯಕ್ರಮದ ವಿವರಗಳನ್ನೇ ಇನ್ನೂ ತೀರ್ಮಾನಿಸಿಲ್ಲ, ಯಾಕೆ ಈಗಲೇ ಅದರ ವಿರುದ್ಧ ಪೇಜಾವರ ಶ್ರೀಗಳ ಉಪವಾಸದ ಮುನ್ಸೂಚನೆ?

ಮುತ್ತಿಗೆ ಎಂಬ ಶಬ್ದದ ಹಾಗೆ ಪಂಕ್ತಿಭೇದದ ವಿರುದ್ಧ ಪ್ರತಿಭಟನೆಯನ್ನೂ ಸಹ ಪೇಜಾವರ ಶ್ರೀಗಳು ಅದರ ಸೀಮಿತಾರ್ಥದಲ್ಲಿ ಮಾತ್ರ ಗ್ರಹಿಸಿದ್ದಾರೆ. ಸವರ್ಣೀಯ ಹಿಂದೂ ಸಮಾಜದ ಜಾತಿತಾರತಮ್ಯದ ಮಡಿಮೈಲಿಗೆ, ಶುಚಿಅಶುಚಿ, ಮೇಲುಕೀಳು, ನಮ್ಮವರು, ಹೊರಗಿನವರು, ನಮ್ಮ ದೇಹದಲ್ಲೇ ಉತ್ತಮಾಂಗ, ಮಲಮೂತ್ರ ವಿಸರ್ಜನೆಯ ಅಶುಚಿಯ ಅಧಮ ಅಂಗಗಳು, ವೃತ್ತಿಯಲ್ಲಿ ವಂಶಪಾರಂಪರ್ಯ ಮತ್ತೆ ಅದರಲ್ಲೂ ಮೇಲು, ಕೀಳು ಹಾಗೂ ಅಸ್ಪೃಶ್ಯರಿಗೆ ಮಾತ್ರ 100% ಮೀಸಲಾತಿ ಇರುವ ನಿರ್ಮಲೀಕರಣ ಮತ್ತು ಮಲ ಹೊರುವ ವೃತ್ತಿಗಳು ಹೀಗೆ ನಾನಾ ವಿಧದ ಆಚರಣೆ ಮತ್ತು ತಾರತಮ್ಯಗಳಲ್ಲಿ ಪಂಕ್ತಿ ಭೇದ ಎನ್ನುವುದು ಅಷ್ಟೇನೂ ಮುಖ್ಯವಲ್ಲದ ಒಂದು ತಾರತಮ್ಯ. ಶಿಕ್ಷಣ, ಉದ್ಯೋಗ, ಸಾಮಾಜಿಕ ಅವಕಾಶ ಸ್ಥಾನಮಾನ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಸಮಾನತೆಗಾಗಿ ದಲಿತರು, ದಮನಿತರು ಮತ್ತು ಶೋಷಿತರು ನಡೆಸುವ ಬೃಹತ್ ಹೋರಾಟದ ಒಂದು ಭಾಗವಾಗಿ ಮಾತ್ರ ಪಂಕ್ತಿ ಭೇದದ ವಿರುದ್ಧ ಪ್ರತಿಭಟನೆಯನ್ನೂ ಗುರುತಿಸಬೇಕೆ ವಿನಃ ಅದೇ ಈ ಸಮಾನತೆಯ ಹೋರಾಟದ ಸರ್ವಸ್ವವಲ್ಲ.

ಊಟದ ಪಂಕ್ತಿಯಲ್ಲಿ ದಲಿತರು ಹಾಗೂ ಕೆಳಜಾತಿಗಳವರ ಜೊತೆಗೆ ಕೂತು ಉಣ್ಣಲು ಸಹ ತಯಾರಿಲ್ಲದ ಮಡಿ ಬ್ರಾಹ್ಮಣರು ವಿದ್ಯೆ, ಆರೋಗ್ಯ ಉದ್ಯೋಗ, ಸಾಮಾಜಿಕ ಸ್ಥಾನಮಾನಗಳಲ್ಲಿ ಸಮಾನತೆ ಮತ್ತು ರಾಜಕೀಯದಲ್ಲಿ ಸಮಾನ ಪ್ರಾತಿನಿಧ್ಯಗಳನ್ನು ಒಪ್ಪಿಕೊಂಡಾರೆಯೇ? ದಲಿತರು ಕೆಳಜಾತಿಗಳವರು ಮತ್ತು ಶೋಷಿತ ಜನವರ್ಗ, ಈಗ ಪಡೆದುಕೊಂಡಿರುವ ಅಲ್ಪಸ್ವಲ್ಪ ಅವಕಾಶಗಳು ಕೂಡ ಸತತ ಹೋರಾಟದಿಂದ ಅವರು ಪಡೆದುಕೊಂಡದ್ದೇ ಹೊರತು ಮೇಲು ಜಾತಿ ವರ್ಗದವರು ಔದಾರ್ಯದಿಂದ ಅವನ್ನು ನೀಡಿದ್ದಲ್ಲ. ಆದಾಗ್ಯೂ ಪಂಕ್ತಿ ಭೇದದ ವಿರುದ್ಧ ಈ ನಾಡಿನ ಬಹುಜನ ನಡೆಸುತ್ತಿರುವ ಹೋರಾಟ ಪೇಜಾವರ ಶ್ರೀಗಳಿಗೆ ಜನರ ನಡುವೆ, ಸಮುದಾಯಗಳ ನಡುವೆ ಒಡಕು ಹುಟ್ಟುಹಾಕುವ ಪ್ರಯತ್ನವಾಗಿ ಕಂಡಿದೆ. ಚಲೋ ಉಡುಪಿ ಜಾಥಾವನ್ನು ಸಂಘಟಿಸಿದ ರಾಜ್ಯದ ದಲಿತ ಸಂಘರ್ಷ ಸಮಿತಿಯ ಹಲವು ಬಣಗಳು, ಕೋಮುಸೌಹಾರ್ದ ವೇದಿಕೆ, ಎಡರಾಜಕೀಯ ಪಕ್ಷಗಳು ಹಾಗೂ ಪ್ರಗತಿಪರ ಚಿಂತಕರಿಗೆ ಸಮಾನತೆ ಎಂಬುದು ಮಹದಾಸೆಯೂ ಗುರಿಯೂ ಆಗಿದ್ದರೆ, ಪೇಜಾವರ ಶ್ರೀಗಳು ತಮ್ಮ ಬದುಕಿನ ಉದ್ದಕ್ಕೂ ಪ್ರತಿಪಾದಿಸುತ್ತ ಬಂದಿರುವ ಹಿಂದೂತ್ವದ ಸಿದ್ಧಾಂತಕ್ಕೆ ಹಿಂದೂಗಳೆಲ್ಲರ ಒಗ್ಗಟ್ಟು ಸಾಧಿಸುವುದೇ ಪರಮಗುರಿಯಾಗಿದೆ. ಹಿಂದೂತ್ವವನ್ನೇ ತನ್ನ ಮೂಲಾಧಾರ ತತ್ವವಾಗಿರಿಸಿಕೊಂಡ ಆರ್‌ಎಸ್‌ಎಸ್‌ನ ಸಂಘ ಪರಿವಾರದ ಸಂಘಟನೆಗಳಲ್ಲಿ ವಿಶ್ವ ಹಿಂದೂ ಪರಿಷತ್ತು ಪ್ರಮುಖವಾದದ್ದು. ಇದನ್ನು ಹುಟ್ಟು ಹಾಕಿದ ಪ್ರತಿಷ್ಠಿತರಲ್ಲಿ ಪೇಜಾವರ ಶ್ರೀಗಳೂ ಒಬ್ಬರು. ಶ್ರೀಗಳಿಗೂ ಸಹ ಹಿಂದೂಗಳ ನಡುವೆ ಒಗ್ಗಟ್ಟು ಮೂಡಿಸುವುದೇ ಮೊದಲ ಆದ್ಯತೆ. ದೇಶದ ಸಕಲ ಮತಧರ್ಮಗಳವರು ಹೋಗಲಿ, ಹಿಂದೂಗಳ ನಡುವೆಯೇ ಜಾತಿ ಹಾಗೂ ಲಿಂಗ ಸಮಾನತೆ, ವಿಶ್ವ ಹಿಂದೂ ಪರಿಷತ್ತಿನ ಹಿಂದೂತ್ವ ರಾಜಕೀಯಕ್ಕೆ ಯಾವತ್ತೂ ಮುಖ್ಯವಾಗಿರಲಿಲ್ಲ. ಬಹುಶಃ ಆ ಕಾರಣಕ್ಕೇನೆ, ಪಂಕ್ತಿ ಭೇದದಂತಹ ಆಚರಣೆಗಳ ವಿರುದ್ಧ ನಡೆಯುವ ಪ್ರತಿಭಟನೆ ಹಿಂದೂಗಳಲ್ಲಿ ಒಡಕು ಮೂಡಿಸುವ ಯತ್ನದಂತೆ ಪೇಜಾವರ ಶ್ರೀಗಳಿಗೆ ಭಾಸವಾಗುತ್ತದೆ.

ಉಡುಪಿಯ ಕೃಷ್ಣ ಮಠದಲ್ಲಿ ಪಂಕ್ತಿ ಭೇದ ಮತ್ತು ಜಾತಿತಾರತಮ್ಯ ಕೆಲವು ದಶಕಗಳ ಹಿಂದೆ ಇದ್ದಷ್ಟು ತೀವ್ರವಾಗಿ ಈಗ ಇಲ್ಲ ನಿಜ. ಆದರೂ ಹಿಂದಿನಿಂದ ನಡೆದುಕೊಂಡು ಬಂದ ರೂಢಿ ಜಡ ಪದ್ಧತಿ ಮತ್ತು ಜಾತಿ ತಾರತಮ್ಯದ ಅವಶೇಷ ರೂಪದ ಆಚರಣೆಗಳು ಈಗಲೂ ಮಠದಲ್ಲಿ ಉಳಿದುಕೊಂಡಿವೆ. ಚಲೋ ಉಡುಪಿ ಜಾಥಾ ಸಂಘಟಿಸಿದವರ ಆಶಯ ಕೃಷ್ಣ ಮಠದಲ್ಲಿ ಸಮಾನತೆ ತರುವುದಕ್ಕೆ ಮಾತ್ರ ಸೀಮಿತವಾಗಿಲ್ಲ, ದೇಶದಲ್ಲಿ ಯಾಕೆ, ಉಡುಪಿ ಜಿಲ್ಲೆಯಲ್ಲೇ ಹೆಚ್ಚಿನ ಊರುಗಳ ದೇವಾಲಯಗಳಲ್ಲಿ ಪಂಕ್ತಿ ಭೇದ, ಲಿಂಗ ಭೇದ ಹಾಗೂ ಜಾತಿ ತಾರತಮ್ಯಗಳನ್ನು ಈಗಲೂ ಕಟ್ಟು ನಿಟ್ಟಾಗಿ ಆಚರಿಸಲಾಗುತ್ತಿದೆ. ಚಲೋ ಉಡುಪಿ ಸಮಾನತೆಯ ಕಡೆಗೆ ಈ ಸಮಾಜದ ದಮನಿತರು ಕೈಗೊಂಡ ಸುದೀರ್ಘ ಪಯಣದಲ್ಲಿ ಒಂದು ಹೆಜ್ಜೆ ಮಾತ್ರ. ಈ ಪಯಣ ಉಡುಪಿಯಲ್ಲಿ ಶುರುವಾದದ್ದೂ ಚಲೋ ಉಡುಪಿ ಕಾರ್ಯಕ್ರಮದೊಡನೆ ಮುಗಿಯುವುದೂ ಇಲ್ಲ.

ಗೋಸಾಗಾಟದ ಸಂಬಂಧದಲ್ಲಿ ಬ್ರಹ್ಮಾವರ ಸ[...] ಕೆಂಜೂರಿನ ಪ್ರವೀಣ್ ಪೂಜಾರಿ ಮತ್ತು ಮೂಡುಬಿ[...] ಪ್ರಶಾಂತ್ ಪೂಜಾರಿ ಅವರ ಹತ್ಯೆಗಳನ್ನು [...] ಖಂಡಿಸಿರುವುದಾಗಿ ಪೇಜಾವರ ಶ್ರೀ[...] ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ; ಅವರು ಖಂಡಿಸಿರ[...] ಹೌದು. ಆದರೆ ಈ ಹತ್ಯೆಗಳನ್ನು ಖಂಡಿಸಿದ ಶ್ರೀ[...] ಅವಕ್ಕೆ ಕಾರಣವಾದ ಗೋಸಂರಕ್ಷಣೆಯ ಹಿಂ[...] ಸಿದ್ಧಾಂತದ ಕುರಿತು ಏನೂ ಹೇಳಲಿಲ್ಲ, ವಾಸ್ತ[...] ಅವರು ಆ ಸಿದ್ಧಾಂತದಲ್ಲಿ ಅಚಲವಾದ ನಂಬಿಕೆ ಉ[...] ಕೆಂಜೂರಿನ ಪ್ರವೀಣ್ ಪೂಜಾರಿ, ಮುಡುಬಿ[...] ಪ್ರಶಾಂತ್ ಪೂಜಾರಿ ಮತ್ತು ದೇಶಾದ್ಯಂತ ಸಂಘಪರ[...] ಗೋಸಂರಕ್ಷಣೆಯ ಕಾರ್ಯಾಚರಣೆಗೆ ಬಲಿಯಾದ ನ[...] ಜನರ ಕೊಲೆಗಳು ಮಾಮೂಲಿ ಕ್ರಿಮಿನಲ್ ಅಪರಾಧ[...] ಅವು ರಾಜಕೀಯ ಕೊಲೆಗಳು. ಈ ಕೊಲೆಗಳ [...] ಗುಜರಾತ್‌ನ ಉನಾದಲ್ಲಿ ಸತ್ತ ದನದ ಚರ್ಮ[...] ಮಾಡುತ್ತಿದ್ದ ದಲಿತರಿಗೆ ಕಬ್ಬಿಣದ ರಾಡುಗಳಲ್ಲಿ ಹೊಡ[...] ಚಿಕ್ಕಮಗಳೂರು ಜಿಲ್ಲೆಯ ಶಾಂತಿಪುರ ಕುಂದೂ[...] ಗೋಮಾಂಸದ ಅಡುಗೆ ಮಾಡುತ್ತಿದ್ದ ದಲಿತರ [...] ಹಲ್ಲೆ ನಡೆಸಿದ್ದು ಮತ್ತು ದೇಶದಲ್ಲಿ ಎಲ್ಲೆಡೆ [...] ನಡೆಯುತ್ತಿರುವ ಇಂತಹ ಘಟನೆಗಳೆಲ್ಲವೂ ಹಿಂದ[...] ಸಿದ್ಧಾಂತಕ್ಕೆ ನಿಷ್ಠೆ ಹೊಂದಿರುವ ಗೋ ಸಂ[...] ಕಾರ್ಯಾಚರಣೆಗಳು. ಪೇಜಾವರ ಶ್ರೀಗಳು ಹಿಂದ[...] ಬೆಂಬಲಿಗರಾಗಿದ್ದುಕೊಂಡೇ ಈ ಹಿಂಸೆಯ[...] ಖಂಡಿಸುವುದರಲ್ಲಿ ಅರ್ಥವಿಲ್ಲ.

ಗೋಸಂರಕ್ಷಣೆ ಮತ್ತು ಗೋಮಾಂಸ ನಿಷೇಧ[...] ಒತ್ತಾಯ ಸಂಘ ಪರಿವಾರದ ಅಜೆಂಡಾದಲ್ಲಿ ಒಂದ[...] ಕಾರ್ಯಕ್ರಮ ಮಾತ್ರ. ಮತಾಂತರದ [...] ಮುಂದಿಟ್ಟುಕೊಂಡು ಕ್ರೈಸ್ತ ಸಮುದಾಯದ [...] ಅಪಪ್ರಚಾರ ಮತ್ತು ಹಿಂಸೆಯ ಕಾರ್ಯಕ್ರಮ[...] ಪರಿವಾರದ ಸಂಘಟನೆಗಳು ನಡೆಸುತ್ತಲೇ ಬ[...] ಮುಸ್ಲಿಮ್ ಸಮುದಾಯದ ವಿರುದ್ಧವಂತೂ ಸಂಘ ಪ[...] ತನ್ನ ಜನಾಂಗ ದ್ವೇಷ ಮತ್ತು ನರಹತ್ಯೆಯ ಅಜೆಂಡ[...] ಸದಾ ಚಾಲೂ ಸ್ಥಿತಿಯಲ್ಲಿ ಇಟ್ಟಿದೆ. ಚಾಕುಚೂರಿ [...] ಈ ಅಜೆಂಡಾವನ್ನು ಕಾರ್ಯಗತಗೊಳಿಸುತ್ತಿರುವವರು [...] ಸಂಘ ಪರಿವಾರದಿಂದ ತಲೆತೊಳೆಸಿಕೊಂಡ ಕೆ[...] ವರ್ಗಗಳವರು. ಕರಾವಳಿಯ ದಕ್ಷಿಣ ಕನ್ನಡ ಮತ್ತು ಉ[...] ಜಿಲ್ಲೆಗಳಲ್ಲಿ ನಡೆದಿರುವ ಹಿಂದೂತ್ವವಾದಿಗಳ [...] ಹಲ್ಲೆಗಳಲ್ಲಿ ಹಿಂಸೆಗೆ ಒಳಗಾಗುವವರು ಮುಸ್ಲಿಮರು [...] ಒಮ್ಮೊಮ್ಮೆ ಕ್ರೈಸ್ತರಾದರೆ, ಹಲ್ಲೆ ನಡೆಸಿ, ಆರೋಪಿ[...] ಜೈಲು ಸೇರುವವರಲ್ಲಿ ಹೆಚ್ಚಿನವರು ಕೆಳಜಾ[...] ಹಿಂದೂಗಳು.

ಕೆಂಜೂರಿನ ಪ್ರವೀಣ್ ಪೂಜಾರಿಯವರು [...] ಕೆಳಜಾತಿಯವರಾಗಿದ್ದುದೇ ಅಲ್ಲದೆ ಬಿಜೆ[...] ಕಾರ್ಯಕರ್ತರೂ ಆಗಿದ್ದರು. ಆದರೂ [...] ಗೋಸಂರಕ್ಷಕರ ದಾಳಿಗೆ ಬಲಿಯಾದರು ಎಂ[...] ಹಿಂದೂತ್ವ ರಾಜಕೀಯದ ವಿಕಟ ವ್ಯಂಗ್ಯಗಳಲ್ಲಿ [...] ಅವರ ಮೇಲೆ ದಾಳಿ ನಡೆಸಿ ಈಗ ಜೈಲು ಸೇರಿರು[...] ಸಹ ಬಹುತೇಕ ಎಲ್ಲರೂ ಕೆಳಜಾತಿಯ ಹಿಂದ[...] ಸಂಸ್ಕೃತ ಸಾಹಿತ್ಯ ಮತ್ತು ವೈದಿಕ, ಬ್ರಾಹ್ಮಣ ಸಂಸ್ಥ[...] ಅಧಿಕೃತ ಭಾರತೀಯ ಸಂಸ್ಕೃತಿ ಎಂಬುದು ಹಿಂ[...] ಸಿದ್ಧಾಂತದ ಹಿಂದಿರುವ ತಿಳಿವಳಿಕೆಯಾಗಿದ್ದು, ಅ[...] ದೇಶದ ಶೂದ್ರ, ಅವೈದಿಕ ಪರಂಪರೆಗಳನ್ನೆಲ್ಲ [...] ಸರಿಸಿದೆ. ಈ ಹಿನ್ನೆಲೆಯಲ್ಲಿ ಹಿಂದೂತ್ವದ ಕಾರ್ಯಾ[...] ಯಲ್ಲಿ ಕಂಡುಬರುವ ಬ್ರಾಹ್ಮಣ ನಾಯಕತ್ವ ಮತ್ತು [...] ಶ್ರಮ ಎಂಬ ವಿಭಜನೆಯಲ್ಲಿ ಆಶ್ಚರ್ಯಪಡುವಂ[...] ಏನೂ ಇಲ್ಲ. ಆದಾಗ್ಯೂ ಚಲೋ ಉಡುಪಿ ಕಾರ್ಯ[...] ಬಗ್ಗೆ ಹೇಳುತ್ತ ಪೇಜಾವರ ಶ್ರೀಗಳು "ಇಂದು [...] ಸಮಾನತೆ ಬೆಳೆದಿದೆ; ಎಲ್ಲಾ ಜಾತಿಗಳವರು [...] ಸೌಹಾರ್ದಗಳಿಂದ ಬದುಕುತ್ತಿದ್ದಾರೆ. ಆದರೆ [...] ಬುದ್ಧಿಜೀವಿಗಳು ಕೋಮು ಸೌಹಾರ್ದದ ಹೆಸರಿನಲ್ಲಿ [...] ಜಗಳ ಹುಟ್ಟಿಸಲು ಯತ್ನಿಸುತ್ತಿದ್ದಾರೆ" ಎಂದಿದ್ದಾರೆ. ಶ್ರೀ[...] ಏನೇ ಹೇಳಲಿ ಉನಾದ ಘಟನೆಯ ನಂತರ ಗುಜ[...] ತಳ ಸಮುದಾಯಗಳಿಗೆ ಹಿಂದೂತ್ವ ರಾಜಕೀಯದ[...] ವಿಭಜನೆಯ ಕುತಂತ್ರ ಅರಿವಾಗಿದೆ; ಕರ್ನಾಟಕ[...] ದಲಿತರು ಮತ್ತು ಕೆಳಜಾತಿ ವರ್ಗಗಳು ನಿಧಾ[...] ಹಿಂದೂತ್ವದ ಹುನ್ನಾರಗಳನ್ನು ಅರ್ಥಮಾಡಿ ಕೊಳ್ಳ[...] ದ್ದಾರೆ. ಸಂಘ ಪರಿವಾರ ಬಯಸುವ ಹಿಂದೂಗಳ [...] ತಮ್ಮನ್ನು ಎಲ್ಲಿಗೆ ಒಯ್ಯುತ್ತದೆ ಎಂಬುದ[...] ಕೆಳಜಾತಿಗಳವರಿಗೆ ಈಗ ಮನವರಿಕೆಯಾಗಿದೆ.

ಕೃಷ್ಣ ಮಠಕ್ಕೆ ಮುತ್ತಿಗೆ - ಅದು ನಡೆದದ್ದೇ [...]


⏭

ಅರೇಬಿಕ್-ಪರ್ಶಿಯನ್ ಕಲಿಕೆಗೆ ಸಂಘಿಗಳ ವಿರೋಧವೇಕೆ?

ಕಳೆದ ತಿಂಗಳು ಮಂಗಳೂರಿನ ಹೊರವಲಯದಲ್ಲಿ ...ದು ಕ್ರೈಸ್ತ ಶಾಲೆಯಲ್ಲಿ ಆಸಕ್ತಿಯಿದ್ದ ಮುಸ್ಲಿಮೇತರ ...ರ್ಥಿಗಳಿಗೆ ಅರೇಬಿಕ್ ಭಾಷೆ ಕಲಿಸುತ್ತಿದ್ದಾಗ ಹಿಂದೂತ್ವ ...ಘಟನೆಯವರು ಶಾಲೆಗೆ ನುಗ್ಗಿ ಕೋಮುಗಲಾಟೆ ಶುರು ...ದಿ ಶಾಲೆಯ ಸಾಮಾನು ಪುಡಿಗೈದ ಸುದ್ದಿ ಪತ್ರಿಕೆಗಳಲ್ಲಿ ...ಟವಾಗಿತ್ತು. ಆಗ ಜನರಲ್ಲಿ ನಡೆದ ಚರ್ಚೆಯೆಂದರೆ ...ಬಿಕ್ ಇದು ಮುಸ್ಲಿಮರ ಭಾಷೆ, ಆದುದರಿಂದ ...ದೂತ್ವವಾದಿಗಳಿಗೆ ಅರೇಬಿಕ್ ವರ್ಜ್ಯ. ...ರ್ಯಾಸವೆಂದರೆ ಆ ಸುದ್ದಿಯಲ್ಲೇ "ಕೋಮು, ಗಲಾಟೆ, ...ಮು, ಸಾಮಾನು" ಎಂಬ ನಾಲ್ಕು ಅರೇಬಿಕ್ ಶಬ್ದಗಳ ...ತೆ ಇನ್ನೂ ಅನೇಕ ಪರ್ಶಿಯನ್-ಅರೇಬಿಕ್ ಶಬ್ದಗಳಿವೆ!

...ಕಲ್ಲಡ್ಕದ ನೇತಾರ ಸಹಿತ ಮುಸ್ಲಿಮರ ವಿರುದ್ಧ ವಿಷ ...ವ ಸಂಘಿ ನೇತಾರರು ಮಾಡುವ ಭಾಷಣಗಳಲ್ಲಿ ...ರಾರು ಅರೇಬಿಕ್-ಪರ್ಶಿಯನ್ ಶಬ್ದಗಳು ನುಸುಳಿರುತ್ತವೆ. ...ಕೆಂದರೆ ಅರೇಬಿಕ್-ಪರ್ಶಿಯನ್ ಶಬ್ದಗಳು ...ಳು-ಕನ್ನಡದಲ್ಲಿ ಹಾಸುಹೊಕ್ಕಾಗಿವೆ. ನಾವು ಪ್ರತಿಯೊಂದು ...ಖಲೆ ಪತ್ರಗಳ ಮೇಲೆ ಬರೆಯುವ ತಾರೀಖ್ ಹಾಗೂ ...ಡುವ ದಸ್ಕತ್ ಮಾತ್ರವಲ್ಲ, 'ದಾಖಲೆ' ಎನ್ನುವುದೇ ...ಬಿಕ್-ಪರ್ಶಿಯನ್‌ಶಬ್ದ ತಾನೇ!

...ನಮ್ಮ ದೇಶಪ್ರೇಮಿ ಸೇನಾಪಡೆಯ ಹುದ್ದೆಗಳಾದ



ರಜಕ-ಧೋಬಿ, ಸಾಬೂನ್, ಜಮೀನು-ಜಮೀನ್ದಾರ್, ದವಾಖಾನೆ, ದುಕಾನು, ಸಾಮಾನು, ಸುರು-ಶುರು, ಆಖೇರಿ, ಮುಂತಾದ ನೂರಾರು ಅರೇಬಿಕ್-ಪರ್ಶಿಯನ್ ಶಬ್ದಗಳನ್ನು ತುಳು-ಕನ್ನಡ ಭಾಷೆಯಲ್ಲಿ ನಾವು ದಿನ ನಿತ್ಯದ ಜೀವನದಲ್ಲಿ ಅಥವಾ ಸರಕಾರಿ ಆಫೀಸಿನಲ್ಲಿ ಬಳಸುತ್ತೇವೆ.

ಅರೇಬಿಕ್-ಪರ್ಶಿಯನ್‌ಶಬ್ದಗಳಿಲ್ಲದೇ ಭಾರತೀಯರಿಗೆ ದಿನ ಬೆಳಗಾಗುವುದೇ ಇಲ್ಲ.

ಮಾರ್ವಾಡಿ ಜೈನರು ಗೋಮಾಂಸ ರಫ್ತು ಮಾಡುವುದು ಅಲ್-ಕಬೀರ್ ಎಂಬ ಅರೇಬಿಕ್ ಹೆಸರಲ್ಲಿ. ಈ ಲೇಖನ ಬರೆಯಲು ನನ್ನ ಪೆನ್ನಿನಲ್ಲಿ ಹಾಕಿದ ಶಾಯಿ/ಶಾಹಿ ಇದು





...ಲ್ದಾರ್, ಜಮಾದಾರ್, ಸುಭೇದಾರ್, ಸಿಪಾಯಿ ಮತ್ತು ...ಯ ಸಾಮಗ್ರಿಗಳಾದ ಜಹಜ್, ಹವಾಯಿ ಜಹಜ್, ...ಫ್, ಫಿರಂಗಿ, ಬಂದೂಕು, ತಲವಾರು, ಭಲ್ಲಾ ಢಾಲ್, ...ಂಡಾ ಮತ್ತೂ ನಾಗರಿಕ ಅಧಿಕಾರಿ ಹುದ್ದೆಗಳಾದ ...ಸೀಲ್ದಾರ್, ಮಾಮಲೆದಾರ್, ಕೋರ್ಟ್-ಅಮಿನ್, ...ಲ, ಫೌಜ್ದಾರ್, ಠಾಣೆ, ಇನಾಂದಾರ್, ಕೊತ್ವಾಲ್, ...ನ, ಕಾನೂನು, ದಾಖಲೆ, ಹಕ್ಕು, ಕಲಾಂ, ಹವಾಲಾತ್, ...ಮಾನತ್ತು, ಹರಾಜು, ಹಾಜರು, ಜಾಮೀನ್, ಶರ್ತು, ...ರೀತ್, ಸಬೂಬ್, ಖಾಸ್-ಖಾಸಗಿ, ಅಂದಾಜು, ಜಿಲ್ಲೆ, ...ಮೂಕು, ಕಚೇರಿ, ಸರಹದ್ದು, ಜಹಗೀರು, ಇನಾಂ, ...ಲ್ಲಾ ಅರೇಬಿಕ್-ಪರ್ಶಿಯನ್‌ಶಬ್ದಗಳು. ದಿನಕ್ಕೆ ನಾವು ...ರು ಬಾರಿ ಬಳಸುವ 'ಸಾಮಾನು' ಎಂಬ ಶಬ್ದ ...ಮಲ್ಲಿರುವ ಅಕಲ್, ಕಟ್ಕೋಣದ ಕಮಾನು, ಹಡಗಿನ ...ರ್, ಲಂಗರ್, ಮರಗಿಡಗಳ ಕಲಂ, ಗುಲಾಬಿ, ಜಾಸ್ಮಿನ್, ...ರಿ, ಅತ್ತರ್, ದರ್ಖಾಸ್, ದಸ್ಕತ್, ಖರೀದಿ, ಬಿಕಾವಲಿ, ...ರ್, ರಸ್ತೆ ಗಾಡಿ, ರೇಷ್ಮೆ, ಶರ್ಬತ್, ಮಟನ್, ಮಸಾಲ, ...ರ್ಜಿರ, ಅಂದಾಜು, ತಾಕತ್, ದಮ್, ಮಹಲು, ...ಜಿಲ್, ಸಲ್ವಾರ್-ಕಮೀಜ್, ಲೆಹೆಂಗಾ (ಲಂಗ), ಚಪ್ಪಲ್, ...ಡಿ, ಸವಾಲು-ಜವಾಬು, ಜವಾಬ್ದಾರಿ, ತಯಾರು, ...ಡು, ಜೇಬು, ಬೇಜಾರು, ಹವಾಲಾ, ಮಾಮೂಲು, ...ಜಾ-ಬಜಂತ್ರಿ, ಹಕೀಕತ್ತು, ಹಿಕ್ಮತ್, ಹಜಾಮತ್,

ನ್ಯಾಯಾಲಯದ ಭಾಷೆಯಲ್ಲಂತೂ ಇಂದಿಗೂ ಪರ್ಶಿಯನ್ ಶಬ್ದಗಳೇ ಅತಿಹೆಚ್ಚು. ಈ ಶಬ್ದಗಳನ್ನು ನಾವು ಕನ್ನಡದಿಂದ ಕೈಬಿಟ್ಟರೆ ಅದಕ್ಕೆ ಸಮನಾದ ಮೂಲ ಕನ್ನಡ ಶಬ್ದಗಳು ಚಾಲ್ತಿಯಲ್ಲಿ ಇಲ್ಲದಿರುವುದರಿಂದ ಯಾವುದೇ ವಿಷಯವನ್ನು ಇನ್ನೊಬ್ಬರಿಗೆ ನಾವು ವಿವರಿಸುವಾಗ ಶಬ್ದಗಳ ಕೊರತೆಯಿಂದ ನಮ್ಮ ಬಾಯಿ ಕಟ್ಟುವುದು ಖಚಿತ. ದೇಶವನ್ನು ನಡೆಸುವ ಸರಕಾರ/ಸರಕಾರಿ/ಕಚೇರಿ ಎಂಬ ಶಬ್ದಗಳೇ ಪರ್ಶಿಯನ್-ಅರೇಬಿಕ್ ಮೂಲದ್ದು!

ಸಂಘಿಗಳ ಕಾಲಾಳುಗಳಿಗೆ ತುಳುವಿನಲ್ಲಿ ಜವನೇರ್ ಎಂದು ಕರೆಯುತ್ತಾರೆ.. ಈ ಜವನೇರ್ ಶಬ್ದ ಹಾಗೂ ಸಂಘಿಗಳ ಹಾಫ್ -ಪ್ಯಾಂಟಿಗೆ ಚಡ್ಡಿ ಅಥವಾ ಇಜಾರ್ ಎಂಬ ಹೆಸರು ಸಹ ಪರ್ಶಿಯನ್. ಬಜರಂಗ ದಲ್(ದಳ) ಇದರಲ್ಲಿ ದಲ್ ಎನ್ನುವುದು ಪರ್ಶಿಯನ್. ಹಾಗೂ ಅವರ ಜಿಂದಾಬಾದ್-ಮುರ್ದಾಬಾದ್-ಆಜಾದಿ ಮುಂತಾದ ಘೋಷಣೆಗಳೂ ಪರ್ಶಿಯನ್. ನಾವೆಲ್ಲಾ ಮನೆಯಲ್ಲಿ ದಿನಾಲೂ ಕೂತು ಬರೆಯುವ ಖುರ್ಚಿ ಮೇಜು ಇವುಗಳ ಹೆಸರು ಕನ್ನಡವಲ್ಲ, ಅದು ಖುರ್ಸಿ-ಮೇಜ್ ಎಂಬ ಪರ್ಶಿಯನ್ ಹೆಸರುಗಳು. ದಿನಾಲೂ ಕುಡಿಯುವ ಕಾಫಿ-ಚಾಯ್ ಶುದ್ಧ ಅರೇಬಿಕ್ ಹೆಸರು. ನರೇಂದ್ರ ಮೋದಿಯವರು ರೈಲಿನಲ್ಲಿ ಚಾಯ್ ಕಾಫಿ ಚಾಯ್ ಕಾಫಿ ಎಂದು ಕೂಗಿದ್ದು ಅರೇಬಿಕ್‌ನಲ್ಲಿ. ಒಟ್ಟಿನಲ್ಲಿ ಪರ್ಶಿಯನ್ ಹೆಸರು. ನಮ್ಮ ಜೇಬಿನಲ್ಲಿ ಸದಾ ಇರುವ ರೂಪಾಯಿ ಶಬ್ದ ಪ್ರಾಕೃತ ಭಾಷೆಯ ರೌಪ್ಯದಿಂದ ಬಂದಿದ್ದಾದರೂ ರೌಪ್ಯ ನಂತರ ರೂಪಾಯಿ ಆಗಿದ್ದು ಮೊಘಲರ ಪರ್ಶಿಯನ್ ನಾಲಿಗೆಯಲ್ಲಿ ಹಾಗೂ ಈ ರೂಪಾಯಿ ಇಡುವ ಜೇಬು, ಪೈಜಾಮ್, ಪೈರಾನ್, ಜುಬ್ಬಾ, ಶೇರ್ವಾನಿ ಇವೆಲ್ಲಾ ಪರ್ಶಿಯನ್-ಅರೇಬಿಕ್.

ಭಾರತೀಯ ಸಂಸ್ಕೃತಿಯ ನಾರಿಗೆ ಸೀರೆಯೇ ಸರಿ ಎಂದು ನಾವು ಮೆಚ್ಚಿದರೂ ಈ ಸೀರೆ ಮತ್ತು ರವಕೆ ನಮ್ಮಲ್ಲಿಗೆ ಬಂದಿದ್ದು ಗ್ರೀಕ್ ದೇಶದಿಂದ. (ಆದುದರಿಂದ ನಮ್ಮ ಹಳೆಯ ದೇವಳಗಳ ಶಿಲ್ಪಾ ಕಲೆಗಳಲ್ಲಿ ಶಿಲಾಬಾಲಿಕೆಯರು ಸೀರೆ ಉಟ್ಟ ಶಿಲ್ಪ ಒಂದೂ ಇಲ್ಲ) ಆದರೆ ಸೀರೆ ರವಿಕೆ ಗ್ರೀಸ್ ಮೂಲದ್ದಾದರೂ ಅದಕ್ಕೆ ಸಾಡಿ-ಚೋಲಿ ಎಂಬ ಹೆಸರು ಕೊಟ್ಟಿದ್ದು ಪರ್ಶಿಯನ್ನರು. ಸಾಡಿಯೇ ಸಾರಿ/ಸೀರೆ ಆಗಿದ್ದು.

ಮೂಡಬಿದ್ರಿಯಲ್ಲಿ ಸಮಾಜಸೇವಕರಾಗಿರುವ ಭಾಸ್ಕರ್ ಬಂಗೇರಾ ಎಂಬ ಪ್ರಕೃತಿಯ ಆರಾಧಕ ಮತ್ತು ಸಂಶೋಧಕರು ಅನೇಕ ಅರೇಬಿಕ್-ಪರ್ಶಿಯನ್ ಮೂಲದ ತುಳು ಶಬ್ದಗಳನ್ನು ಹುಡುಕಿದ್ದು ಮಾತ್ರವಲ್ಲ ಕೊಂಕಣಿ ಭಾಷೆಯಲ್ಲೂ ಅನೇಕ ಅರೇಬಿಕ್-ಪರ್ಶಿಯನ್ ಶಬ್ದಗಳು ದೈನಂದಿನ ಬದುಕಿನಲ್ಲಿ ನಿತ್ಯ ಬಳಕೆಯಾಗುತ್ತವೆ ಎನ್ನುತ್ತಾರೆ. ಮಂಗಳೂರಿನ ಹತ್ತಿರ ಒಂದೆಡೆ ಬ್ರಿಟಿಷ್ ಮಿಲಿಟರಿ ಅಧಿಕಾರಿಗಳ ಕುಟುಂಬಗಳ ವಸತಿ ಇದ್ದ ಪ್ರದೇಶಕ್ಕೆ ಫರಂಗಿಪೇಟ್ ಎಂಬ ಹೆಸರು ಬಂತು. ಕನ್ನಡದಲ್ಲಿ ಆಗ ಬ್ರಿಟಿಷರಿಗೆ ಫರಂಗಿ-ಫಿರಂಗಿಗಳು ಎಂದು ಕರೆಯುತ್ತಿದ್ದರು. ಅನಾನಸ್ ಹಣ್ಣಿಗೆ ತುಳುವಿನ ಫರಂಗಿ ಪೆಲಕಾಯಿ ಎಂದೂ, ಪಪ್ಪಾಯಿಗೆ ಫರಂಗಿ ಹಣ್ಣು ಎಂದೂ ಕನ್ನಡ ಹೆಸರು ಬೀಳಲು ಕಾರಣ ಪರ್ಶಿಯನ್ ಭಾಷೆಯಲ್ಲಿ ಬ್ರಿಟಿಷ್/ಪೋರ್ಚುಗೀಜರಿಗೆ ಫರಂಗಿ/ಫಿರಂಗಿಗಳು ಎಂದು ಹೇಳುತ್ತಿದ್ದುದರಿಂದ ಹಾಗೂ ಈ ಹಣ್ಣುಗಳನ್ನು ಆ ಬಿಳಿಯರೇ ಭಾರತಕ್ಕೆ ತಂದಿದ್ದರಿಂದಾಗಿ.

ಅರೇಬಿಕ್ ಹಾಗೂ ಪರ್ಶಿಯನ್ ಎರಡೂ ಸಹೋದರ ಭಾಷೆಗಳಾಗಿದ್ದು ಅವೆರಡರಲ್ಲಿ ಬಹಳಷ್ಟು ಶಬ್ದಗಳು ಒಂದೇ ರೀತಿಯಿವೆ ಎನ್ನುತ್ತಾರೆ ತುಳು-ಕನ್ನಡ ಭಾಷಾ ಸಂಶೋಧಕ ಹಾಗೂ ಸಾಹಿತಿ ಪೆರೂರು ಜಾರು ಇವರು. ತುಳು-ಕನ್ನಡದಲ್ಲಿರುವ 300 ಕ್ಕೂ ಹೆಚ್ಚು ಅರೇಬಿಕ್-ಪರ್ಶಿಯನ್ ಮೂಲದ ದಿನಬಳಕೆಯ ಶಬ್ದಗಳನ್ನು ಅವರು ಹುಡುಕಿದ್ದಾರೆ. ಕೆಲವು ಶಬ್ದಗಳು ತಮ್ಮ ಮೂಲ ಸ್ವರೂಪ ಕಳೆದುಕೊಂಡು ಅಪಭ್ರಂಶವಾಗಿ ತುಳುವಿನಲ್ಲಿ ಸೇರಿವೆಯಂತೆ. ಇವೆಲ್ಲಾ ಅರಬಿ ವರ್ತಕರು ಕರಿಮೆಣಸಿನ ವ್ಯಾಪಾರಕ್ಕೆ ಭಾರತದ ಪಶ್ಚಿಮ ಕಡಲ ತೀರಕ್ಕೆ ಬರುತ್ತಿದ್ದಾಗ ತುಳುವಿನಲ್ಲಿ ಸೇರಿ ಹೋದ ಅರಬಿ ಶಬ್ದಗಳು. ಶೂನ್ಯ ಹಾಗೂ ದಶಮಾಂಶ ಗಣಿತ ಪದ್ಧತಿ ಭಾರತೀಯ ಮೂಲದ್ದು ಎಂಬುವುದರಲ್ಲಿ ಸಂಶಯವಿಲ್ಲ, ಗಣಿತಜ್ಞ ಆರ್ಯಭಟ ಮತ್ತು ಎರಡನೇ ಭಾಸ್ಕರಾಚಾರ್ಯರೇ ಶೂನ್ಯ ಮತ್ತು ದಶಮಾಂಶ ಪದ್ಧತಿಯ ಜನಕರು. ಆದರೆ ಈ ಸಂಖ್ಯಾ ಪದ್ಧತಿ ಯುರೋಪ್ ಮತ್ತು ಮಧ್ಯ ಏಷಿಯಾಕ್ಕೆ ಹೋಗಿದ್ದು ಅರಬಿ ವ್ಯಾಪಾರಿಗಳ ಮೂಲಕ. ಅದಕ್ಕಾಗಿ ಯುರೋಪಿನಲ್ಲಿ ಈಗಲೂ ಈ ದಶಮಾಂಶ ಪದ್ಧತಿಗೆ ಅರೇಬಿಕ್ ನ್ಯೂಮರಲ್ಸ್ ಎಂದೇ ಕರೆಯುತ್ತಾರೆ.

ರಾಷ್ಟ್ರಭಾಷೆ ಹಿಂದಿಯಲ್ಲಿರುವ ಅರ್ಧಕ್ಕರ್ಧ ಶಬ್ದಗಳು ಪರ್ಶಿಯನ್-ಅರೇಬಿಕ್ ಮೂಲದವು. ಹಾಗಿರುವಾಗ ಪರ್ಶಿಯನ್-ಅರೇಬಿಕ್ ಭಾಷೆಯನ್ನು ಇಸ್ಲಾಂ ಧರ್ಮದೊಂದಿಗೆ ಸಮೀಕರಿಸುವುದೇ ತಪ್ಪು, ಆದರೂ ಅರೇಬಿಕ್-ಪರ್ಶಿಯನ್ ಬೇಡವೇ ಬೇಡ ಎಂದಾದರೆ ಹಿಂದಿ ಭಾಷೆಯನ್ನು ಮೊಟ್ಟ ಮೊದಲು ಭಾರತ ದೇಶದಿಂದಲೇ ಹೊರಗಟ್ಟಬೇಕಾಗುತ್ತದೆ. ಹಿಂದೂತ್ವವಾದಿಗಳ ಅತೀ ಪ್ರಿಯವಾದ "ಹಿಂದೂ" ಶಬ್ದವೇ ಶುದ್ಧ ಪರ್ಶಿಯನ್ ಹೆಸರು. ಹಾಗಾದರೆ ಹಿಂದೂ ಶಬ್ದವನ್ನೂ ತ್ಯಜಿಸಬೇಕೆ? ಇಷ್ಟೆಲ್ಲಾ ಅರೇಬಿಕ್-ಪರ್ಶಿಯನ್ ಶಬ್ದಗಳು ನಮ್ಮ ಭಾರತೀಯ ಭಾಷೆಗಳಲ್ಲಿ ಹಾಸುಹೊಕ್ಕಾಗಿರುವಾಗ ಅದನ್ನು ಶಾಲೆಗಳಲ್ಲಿ ಅರೇಬಿಕ್ ಲಿಪಿಯಲ್ಲಿಯೇ ಕಲಿಸುವುದು ವರ್ಜ್ಯ ಎಂದು ಹಿಂದೂತ್ವ ಸಂಘಟನೆಗಳು ಗಲಾಟೆ ಮಾಡಿದ್ದಕ್ಕೆ ತಾರ್ಕಿಕ ಸಮರ್ಥನೆ ಎಲ್ಲಿದೆ?

ಇದೇ ಹಿಂದೂತ್ವ ಸಂಘಟನೆಯವರ ಸಂಬಂಧಿಕರಲ್ಲಿ ಬಹಳ ಜನ ಕೊಲ್ಲಿ ರಾಷ್ಟ್ರಗಳಲ್ಲಿ ಕೆಲಸ-ವ್ಯಾಪಾರ ಮಾಡಿ ಬದುಕು ಕಟ್ಟಿಕೊಂಡಿರುವಾಗ ಅದೇ ಭಾಷೆಯ ದ್ವೇಷ ಕೇವಲ ರಾಜಕೀಯ ನಾಟಕ ತಾನೇ? ಈಗೀಗ ಫ್ರೆಂಚ್, ರಶಿಯನ್ ಮತ್ತು ಚೀನಾದ ಮ್ಯಾಂಡ್ರಿನ್ ಮುಂತಾದ ವಿದೇಶಿ ಭಾಷೆಗಳನ್ನು ಕಲಿಯುವವರ ಸಂಖ್ಯೆ ಭಾರತದಲ್ಲಿ ವೇಗವಾಗಿ ಹೆಚ್ಚುತ್ತಿರುವಾಗ ಕೇವಲ ಅರೇಬಿಕ್-ಪರ್ಶಿಯನ್ ಕಲಿಕೆಗೆ ಸಂಘಿಗಳ ವಿರೋಧವೇಕೆ? ಇದಕ್ಕೆ ಧಾರ್ಮಿಕ ಪೂರ್ವಾಗ್ರಹ ಹಾಗೂ ರಾಜಕೀಯ ಉದ್ದೇಶವಲ್ಲದೆ ಬೇರೇನೂ ಕಾರಣ ಇದ್ದಂತಿಲ್ಲ.

■ ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

...ಉನಾದ ದಲಿತರನ್ನೇ ದಾಳವಾಗಿಸಿಕೊಂಡಿರುವ ಚೆಡ್ಡಿಗಳು

...ನಮ್ಮ ದೇಶದ ಗಡಿ ಕಾಯುವ ಸೈನಿಕರ ಶೌರ್ಯ ...ಗಳ ವಿಷಯದಲ್ಲಿ ರಾಜಕೀಯ ಬೆರೆಸಲೇಬಾರದು ...ದು ಅನಕ್ಷರಸ್ಥರಿಗೂ ಗೊತ್ತಿದೆ. ಆದರೂ ಸರ್ಜಿಕಲ್ ...ಕ್ ವಿಷಯವನ್ನು ಬಿಜೆಪಿ ರಾಜಕೀಯ ಲಾಭಕ್ಕೆ ...ಸಿಕೊಳ್ಳಲು ಯತ್ನಿಸುತ್ತಿರುವುದನ್ನು ಸ್ವಾರ್ಥಸಾಧನೆಯ ...ರಾಷ್ಟ್ರೆ ಎನ್ನಲೇಬೇಕು. ಈಗಿನ ಕೀಳು ಸಮಯಸಾಧಕ ...ಸಂಘಟನೆಗಳು ತಮ್ಮ ರಾಜಕೀಯ ಗುರಿ ಸಾಧನೆಗಾಗಿ, ...ನ್ನ ವೀರ ಸೈನಿಕರನ್ನು ಟಿಷ್ಯೂ ಪೇಪರ್‌ನಂತೆ ಬಳಸಿ ...ಡುತ್ತಾರೆ ಎಂದು ಸುಪ್ರೀಂಕೋರ್ಟ್‌ನ ನಿವೃತ್ತ ...ನ್ಯಾಯಮೂರ್ತಿ ಮಾರ್ಕಂಡೇಯ ಕಾಟ್ಜೂ ಟ್ವೀಟ್ ...ಮಾಡಿರುವುದು ಸೂಕ್ತವಾಗಿದೆ.

...ರಕ್ಷಣಾ ಮಂತ್ರಿ ಪರಿಕ್ಕರ್ ಮೊನ್ನೆ ಗುಜರಾತಿನ ...ಂದು ಸಭೆಯಲ್ಲಿ "ಹಿಂದೆಂದೂ ಪಾಕಿಸ್ತಾನದ ವಿರುದ್ಧ ...ರ್ಜಿಕಲ್ ಸ್ಟ್ರೈಕ್ ನಡೆದೇ ಇರಲಿಲ್ಲ, ರಾಮಾಯಣದ ...ಹನುಮಂತ ಲಂಕೆಯಲ್ಲಿ ಮಾಡಿದ ಸರ್ಜಿಕಲ್ ಸ್ಟ್ರೈಕ್ ...ನಂತರ ತಮ್ಮ ಮೋದಿಯದ್ದೇ ಭಾರತದ ಮೊದಲನೇ ...ರ್ಜಿಕಲ್ ಸ್ಟ್ರೈಕ್" ಎಂದು ಹೇಳಿದರು. ಜತೆಗೆ ಈ ಸರ್ಜಿಕಲ್ ಸ್ಟ್ರೈಕಿನ ಯಶಸ್ಸಿಗೆ ಆರ್‌ಎಸ್‌ಎಸ್‌ಗೂ ಧನ್ಯವಾದ ಅರ್ಪಿಸಿದ್ದಾರೆ! ಪರಿಕ್ಕರರ ಈ ಹೇಳಿಕೆ ನಮ್ಮ ಯೋಧರಿಗೆ ನೇರ ಅವಮಾನ ಆಗಿದೆ. ಯಾಕೆಂದರೆ ಹಿಂದಿನ 20 ವರ್ಷದಲ್ಲಿ ಹತ್ತಕ್ಕೂ ಹೆಚ್ಚು ಸರ್ಜಿಕಲ್ ಸ್ಟ್ರೈಕ್ ನಡೆದಿವೆ ಹಾಗೂ ತಾವೇ ಇಂತಹ ದಾಳಿಯನ್ನು ಮುನ್ನಡೆಸಿ ನೂರಾರು ಪಾಕ್ ಉಗ್ರವಾದಿಗಳನ್ನು ಕೊಂದಿದ್ದೇವೆ ಎಂದು ಇಬ್ಬರು




ನಿವೃತ್ತ ಸೇನಾಧಿಕಾರಿಗಳೇ ಪ್ರತ್ಯೇಕ ಪತ್ರಿಕಾಹೇಳಿಕೆ ಕೊಟ್ಟಿದ್ದರೂ ಈಗ ಪರಿಕ್ಕರ್ ಆ ಸೇನಾಧಿಕಾರಿಗಳನ್ನು ಸುಳ್ಳರು ಎಂದು ಪರೋಕ್ಷ ಆಪಾದಿಸಿದಂತಾಗಿದೆ. ಜತೆಗೆ ಆ ಹತ್ತು ಸರ್ಜಿಕಲ್ ಸ್ಟ್ರೈಕ್‌ಗಳಲ್ಲಿ ತಮ್ಮ ಜೀವದ ಹಂಗು ತೊರೆದು ಭಾಗವಹಿಸಿ ತಮ್ಮ ಶೌರ್ಯ ಹಾಗೂ ದೇಶಪ್ರೇಮ ಮೆರೆದ ಸಾವಿರಾರು ಯೋಧರ ಶೌರ್ಯ ಬಲಿದಾನಗಳನ್ನು ಈ ಪರಿಕ್ಕರ್ ಅವಗಣನೆ ಮಾಡಿ ಅವರನ್ನೆಲ್ಲ ಘೋರವಾಗಿ ಅವಮಾನಿಸಿದಂತೆ ಆಗಿದೆ. ಆರ್‌ಎಸ್‌ಎಸ್ ಹಾಗೂ ಮೋದಿಯ ಭಕ್ತಿಯ ಭರದಲ್ಲಿ ಈ ಪರಿಕ್ಕರ್ ರಕ್ಷಣಾ ಮಂತ್ರಿ ಆಗಿದ್ದರೂ, ತನ್ನ ಹುದ್ದೆಯ ಘನತೆ ಹಾಗೂ ಜವಾಬ್ದಾರಿ ಮರೆತು, ಹಿಂದಿನ ಹತ್ತು ಸರ್ಜಿಕಲ್ ಸ್ಟ್ರೈಕ್‌ಗಳಲ್ಲಿ ಭಾಗವಹಿಸಿದ ನಮ್ಮ ವೀರಯೋಧರನ್ನು ಈ ರೀತಿ ಅವಮಾನಿಸಿದ್ದು ನಿಜಕ್ಕೂ ಖಂಡನೀಯ. ದೇಶಭಕ್ತಿಯ ಬಗ್ಗೆ ಯಾವಾಗಲೂ ಇತರರಿಗೆ ಉಪದೇಶ ಜಡಿಯುವ ಬಿಜೆಪಿಯವರೇ ಈಗ ನಮ್ಮ ದೇಶದ ವೀರಯೋಧರಿಗೆ ಹೀಗೆ ಅವಮಾನ ಮಾಡಿ ಉತ್ತರ ಪ್ರದೇಶ ಮತ್ತು ಪಂಜಾಬ್ ಚುನಾವಣೆಗೆ ಬಂಡವಾಳ ಮಾಡಿಕೊಳ್ಳುತ್ತಿರುವುದು ನೀಚತನದ ಪರಮಾವಧಿ. ಇಂತಹ ಬಿಜೆಪಿಯವರನ್ನು ಯೋಧರ ರಕ್ತದ ದಲ್ಲಾಳಿಗಳು ಎಂದು ರಾಹುಲ್ ಗಾಂಧಿ ಕರೆದಿದ್ದರಲ್ಲಿ ತಪ್ಪೇನಿದೆ?

ಅಷ್ಟೇ ಅಲ್ಲ, ಉನಾದಲ್ಲಿ ಸತ್ತ ದನದ ಚರ್ಮ ಸುಲಿಯುತ್ತಿದ್ದ ನಾಲ್ವರು ದಲಿತರನ್ನು ಸಂಘಿಗಳು ಭೀಕರವಾಗಿ ಹೊಡೆದ ಮೇಲೂ ಸಂಘಿಗಳು ಆ ದಲಿತರ ಬ್ರೇನ್ವಾಶ್ ಮಾಡಿ ಅವರಿಗೆ ಭಾರಿ ಹಣ ಕೊಟ್ಟು ಅವರನ್ನು ಈಗ ಉತ್ತರ ಪ್ರದೇಶದಲ್ಲಿ ತಮ್ಮ ಬಿಜೆಪಿ ಪಕ್ಷದ ಪರ ಪ್ರಚಾರ ಮಾಡಲು ಬಳಸಿಕೊಳ್ಳುತ್ತಿದ್ದಾರೆ. ತಮಗೆ ಹೊಡೆದವ್ರು ಸಂಘ ಪರಿವಾರದ ಗೂಂಡಾಗಳಲ್ಲ, ಅವರು ಬೇರೆ ಪಾರ್ಟಿಯ ಗೂಂಡಾಗಳಾಗಿದ್ದರು ಎಂದು ಪೆಟ್ಟು ತಿಂದಿದ್ದ ಈ ಉನಾದ ದಲಿತರ ಬಾಯಿಂದ ಉತ್ತರ ಪ್ರದೇಶದಲ್ಲೆಲ್ಲಾ ಹೇಳಿಸಲಾಗುತ್ತಿದೆ. ಹೀಗೆ ಸಮಯಸಾಧಕ ಮನುವಾದಿಗಳು ಯುಗಯುಗಗಳಿಂದ ದಲಿತರ ಮತ್ತು ಶೂದ್ರರ ಬಡತನ ಹಾಗೂ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡು ಹಣ ಹಾಗೂ ಅಧಿಕಾರದ ಆಸೆ ತೋರಿಸಿ ಹೇಗೆ ಕೈಗೊಂಬೆಯಂತೆ ಬಳಸುತ್ತಿದ್ದಾರೆ ಎಂಬುದಕ್ಕೆ ಉನಾ ದಲಿತರೇ ಸಾಕ್ಷಿ.

■ ಕ್ಷಿತಿಜ್ ಕೆ ಹೆಗಡೆ, ಮಂಗಳೂರು

‘ಚಲೋ’ ಉಡುಪಿಯ ಮೇಲೆ ಒಡೆದಾಳುವ ನೀತಿಯ ಜನಕರ ಕುಟಿಲ





ಒಡೆದಾಳುವ ನೀತಿ ಎಂದಾಕ್ಷಣ ತಟ್ಟನೆ ನಮ್ಮ ಮನಸ್ಸಿಗೆದುರಾಗುವುದು ಬ್ರಿಟಿಷರು. ಆದರೆ ವಾಸ್ತವವಾಗಿ ಅದು ಅರ್ಧ ಸತ್ಯದ ಮಾತು. ಅಂದರೆ ಬ್ರಿಟಿಷರು ಆ ತಂತ್ರವನ್ನು ತಮ್ಮ ರಾಜ್ಯ ವಿಸ್ತರಣೆಯಲ್ಲಿ ಬಳಸಿಕೊಂಡಿರುವುದು ಹೌದಾದರೂ ಆ ತಂತ್ರದ ಕಾಪಿರೈಟ್ ಇರುವುದು ಇಲ್ಲಿನ ಚಾಣಕ್ಯ ವಂಶಜರ ಕೈಯಲ್ಲಿ, ಅಷ್ಟೇ ಏಕೆ ಭಾರತದ ಅತ್ಯಂತ ಪ್ರಸಿದ್ಧವಾದ ವಿಷ್ಣು ಶರ್ಮನ ಪಂಚ ತಂತ್ರಗಳಲ್ಲೂ ಈ ಒಡೆದಾಳುವ ತಂತ್ರವನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆಯಲ್ಲದೇ ಅನೇಕ ಭಾರತೀಯ ರಾಜಧರ್ಮ ನೀತಿ ಶಾಸ್ತ್ರಗಳಲ್ಲಿ ಈ ನೀತಿಯ ಛಾಯೆ ಇರುವುದನ್ನು ಖಂಡಿತ ಗುರುತಿಸಬಹುದು.

ಚಲೋ ಉಡುಪಿಯೆಂಬ ದಲಿತ ದಮನಿತರ ಒಗ್ಗೂಡುವಿಕೆಯನ್ನು ಆರಂಭದಲ್ಲೇ ಮುರಿಯಲು ಹಲವಾರು ರೀತಿಯ ಸಂಚುಗಳು ನಡೆದಿತ್ತು, ನೀಲಿ ಹಾಗು ಕೆಂಪು ಬಣ್ಣ ಸೇರುವುದರ ಕುರಿತಾಗಿ ಹಾಗು ದಲಿತರು ಮುಸ್ಲಿಮರೊಂದಿಗೆ ಸೇರಿ ಜಾಥಾ ನಡೆಸುವುದರ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ವಿಷದ ಹೊನಲೇ ಹರಿದಿತ್ತು, ಓರ್ವನಂತೂ ಗಾಂಧೀಜಿ ಹಾಗು ಕನಕದಾಸರನ್ನು ಮುಂದಿಟ್ಟುಕೊಂಡು ದಲಿತರು ಕಾಲಿಟ್ಟು ಕೊಳಕು ಮಾಡಿದ ಉಡುಪಿಯನ್ನು ಸ್ವಚ್ಛ ಮಾಡುತ್ತೇನೆಂದೂ ಹೊರಟು ತನ್ನ ಮಲಿನ ಮನಸ್ಸನ್ನೂ ಆ ಮೂಲಕ ಜಾಹೀರು ಮಾಡಿದ್ದ. ತಮಾಷೆಯೆಂದರೆ ಈತ ಗಾಂಧಿಯನ್ನು ಕೊಂದ ಹಾಗು ಕನಕನನ್ನು ಹೊರಗಿಟ್ಟ ಪುರೋಹಿತಶಾಹಿಯ ಪ್ರಖರ ಪ್ರಚಾರಕ ಬೇರೆ. ಸಾಮಾಜಿಕ ಜಾಲತಾಣಗಳಲ್ಲಿ ನೇರಾನೇರವಾಗಿ ಇದು ಚಲೋ ಉಡುಪಿಯ ಕುರಿತಾಗಿಯೇ ಎಂದು ಆರಂಭದಲ್ಲಿ ಬಡಾಯಿ ಕೊಚ್ಚಿಕೊಂಡಿದ್ದ ಈತ ಒಂಭತ್ತರಂದು ಉಡುಪಿಯಲ್ಲಿ ಘಟಿಸಿದ ನೀಲಿ ಕಂಪನವನ್ನು ಕಂಡು ತಾನು ಹಾಗೇ ಹೇಳಿಲ್ಲ ಎಂದು ಉಲ್ಟಾ ಹೊಡೆದು ಈ ನರಿ ನಗೆಪಾಟಲಿಗೀಡಾಯಿತು.

ಮಂಗಳೂರಿನ ಅಭೂತಪೂರ್ವ ಸೌಹಾರ್ದ ಸಮ್ಮೇಳನದಲ್ಲಿ ಮಾಡಿದಂತೆ ಕೇಸರಿಪೀಡಿತ ಮಾಧ್ಯಮಗಳು ಉಡುಪಿ ಚಲೋ ಕಾರ್ಯಕ್ರಮಕ್ಕೆ ಯಾವ ಪ್ರಚಾರವನ್ನೂ ಕೊಡದೇ ಬೇಕೆಂತಲೇ ಕಡೆಗಣಿಸಿದವು. ಯಾವನೋ ಸ್ವಾಮಿ ಗ್ಯಾಸ್ ಬಿಟ್ಟರೂ ಮುಖಪುಟದಲ್ಲಿ ದೊಡ್ಡದಾಗಿ ಬರೆದುಕೊಳ್ಳುವ ಮಾಧ್ಯಮಗಳು ಸೌಹಾರ್ದ ಸಮ್ಮೇಳನ ದೊಡ್ಡಮಟ್ಟದಲ್ಲಿ ಗಮನ ಸೆಳೆಯುವಂತೆ ನಡೆದ ಬಳಿಕವೂ ಎಲ್ಲೋ ಮೂಲೆಯಲ್ಲಿ ಸಣ್ಣದಾಗಿ ಮರುದಿವಸ ಸುದ್ದಿ ಪ್ರಕಟಿಸಿ ಕೈತೊಳೆದುಕೊಂಡಿದ್ದವು. ಈ ಬಾರಿ ಕೆಲವರು ಎಲ್ಲೋ ಮೂಲೆಯಲ್ಲಿದ್ದ ಮೂರ್ನಾಲ್ಕು ಜನರನ್ನಷ್ಟೇ ತೋರಿಸಿ ಇದೇ ಚಲೋ ಉಡುಪಿಯ ಫ್ಲಾಪ್ ಷೋ ಎಂದರೆ ಮತ್ತೊಬ್ಬ ಪತ್ರಕರ್ತನಂತೂ ಟೀಕಿಸಲು ಏನೂ ಸಿಗಲಿಲ್ಲವೆಂದು ಚಡಪಡಿಸಿ ಕೊನೆಗೆ ಪೊಲೀಸರಿಗೆ ಮೂರು ಗಂಟೆಯತನಕ ಊಟ ಕೊಡಲಿಲ್ಲ ಎಂದು ಬರೆದು ತನ್ನ ದರಿದ್ರ ಬುದ್ಧಿಯನ್ನು ತೋರಿಸಿದ. ಇದೀಗಲಂತೂ ಯಾವುದೋ ಬ್ರಹ್ಮ ಕಲಶದ ಸಮಾರಂಭದಲ್ಲಿ ಹಾಕಿದ ಕುರ್ಚಿಮೇಜುಗಳ ಊಟದ ಸಾಲಿನ ಫೋಟೋವನ್ನು ಜಾಲತಾಣಗಳಲ್ಲಿ ಪೋಸ್ಟ್ ಮಾಡಿ “ಸವಾಲು ಸ್ವೀಕರಿಸಿ ಬಹುಮಾನ ಗೆಲ್ಲಿ” ಎಂಬ ಟೈಟಲ್ ಕೊಟ್ಟು ಉಡುಪಿ ಚಲೋದಲ್ಲಿ ದಲಿತರಿಗೆ ಪಂಕ್ತಿಭೇದ ನಡೆದಿದೆ ಎಂದು ಸುಳ್ಳು ಸುಳ್ಳೆ ಬಿಂಬಿಸುತ್ತಿದ್ದಾರೆ. ಅಂತೂ ದಮನಿತರು ಮೈಕೊಡವಿ ಮೇಲೆದ್ದದ್ದು ಅನೇಕರಿಗೆ ಅಪಥ್ಯ ಎನಿಸಿದ್ದು ಈ ಮೂಲಕ ಸಾಬೀತಾದಂತಾಯಿತು. ಹಾಗಾಗಿ ಇಲ್ಲೂ ಕೂಡ ಭೇದ ಹುಟ್ಟಿಸುವ ಅಥವ ಜನರನ್ನು ದಿಕ್ಕು ತಪ್ಪಿಸುವ ಆಲೋಚನೆ ಇವರಿಗೆ. ಇವೆಲ್ಲಕ್ಕೂ ಮುಖ್ಯವಾಗಿ ಕಾರ್ಯಕ್ರಮದಲ್ಲಿ ಸಾಂದರ್ಭಿಕವಾಗಿ ಪ್ರಸ್ತಾಪಗೊಂಡ ವಿಚಾರವೊಂದು ಉಡುಪಿ ಚಲೋದಲ್ಲಿ ಅವರ ಕುತಂತ್ರಿ ಕಣ್ಣುಗಳಿಗೆ ಕಾಣಿಸಿದ್ದರಿಂದ ಪ್ರಿಂಟ್ ಹಾಗು ವಿದ್ಯುನ್ಮಾನ ಮೀಡಿಯಾಗಳು ಇಡೀ ಉಡುಪಿ ಚಲೋ ಚಳವಳಿಯ ಮುಖ್ಯ ಆಶಯವನ್ನೇ ಮುರಿಯಲು ಉಪಾಯದಿಂದ ಬೇರೇ ರೀತಿಯಲ್ಲಿ ಅದನ್ನು ಬಿಂಬಿಸಿ ಸುದ್ದಿ ಮಾಡಿದವು. ಅದೇ ಉಡುಪಿ ಕೃಷ್ಣ ಮಠದ ಮುತ್ತಿಗೆ.

ಗುಜರಾತಿನಲ್ಲಿ ಪಾರಂಪರಿಕವಾಗಿ ದನದ ಚರ್ಮ ಸುಲಿಯುವ ಕೆಲಸ ಮಾಡುತ್ತಿದ್ದ ದಲಿತರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ನಡೆದ ಉನಾ ಚಳವಳಿಯ ಜಿಗ್ನೇಶ್ ಮೇವಾನಿಯವರು ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಮಾತನಾಡುತ್ತ ಸಭೆ ನಡೆಯುತ್ತಿರುವ ಉಡುಪಿ ಪರಿಸರದ ಪಂಕ್ತಿ ಭೇದ ತಾರತಮ್ಯವನ್ನು ಉಲ್ಲೇಖಿಸಿ ಸಾಂದರ್ಭಿಕವಾಗಿ ಉಡುಪಿ ಮುತ್ತಿಗೆಯ ಬಗ್ಗೆ ಮಾತನಾಡಿದ್ದನ್ನೇ ಗಟ್ಟಿಯಾಗಿ ಹಿಡಿದುಕೊಂಡ ಮನುವಾದಿಗಳು ಇಡೀ ಉಡುಪಿ ಚಲೋ ಚಳವಳಿಯ ಆಶಯವನ್ನೇ ಬುಡಮೇಲು ಮಾಡಲು ನೀಲಿ ನಕಾಶೆ ಸಿದ್ಧಪಡಿಸಿದರು. ಉಡುಪಿ ಚಳವಳಿಯ ಮೂಲ ಆಶಯದ ಮೇಲೆ ಚರ್ಚೆಯಾಗುವ ಬದಲು ವಿಚಾರಗಳೆಲ್ಲ ಪಂಕ್ತಿಭೇದದ ಕಡೆಗೇ ಗಿರಕಿ ಹೊಡೆಯುವಂತೆ ಮಾಡಲಾಯಿತು. ವಾಸ್ತವವಾಗಿ ಉಡುಪಿ ಚಲೋ ಜಾಥಾಕ್ಕೂ ಮಠದ ಮುತ್ತಿಗೆಗೂ ಸಂಬಂಧವೇ ಇದ್ದಿರಲಿಲ್ಲ. ಒಂದುವೇಳೆ ಉಡುಪಿ ಚಲೋ ಬದಲು ಕುಕ್ಕೆ ಸುಬ್ರಹ್ಮಣ್ಯ ಚಲೋ ಇದ್ದಿದ್ದರೆ ಜಿಗ್ನೇಶ್ ಮಡೆಸ್ನಾನದ ಬಗ್ಗೆ ಮಾತನ್ನಾಡುತ್ತಿದ್ದರು. ಇದೊಂದು ಸಾಂದರ್ಭಿಕ ಮಾತೇ ವಿನಃ ಮುಖ್ಯ ವಿಚಾರ ಆಗಿದ್ದಿರಲೇ ಇಲ್ಲ, ಇನ್ನೂ ಮುಖ್ಯವೆಂದರೆ, ಆವತ್ತಿನ ಜಾಥಾದ ನಾಯಕರು ಮನಸ್ಸು ಮಾಡಿದ್ದಿದ್ದರೆ ಅಂದಿನ ಜನಸಾಗರದ ಮುತ್ತಿಗೆ ನಿರ್ಧಾರವನ್ನು ತಡೆಯುವ ತಾಕತ್ತು ಯಾರಿಗೂ ಇದ್ದಿರಲಿಲ್ಲ. ಅಜ್ಜರಕಾಡಿನಿಂದ ಹೊರಟ ಜಾಥಾದಲ್ಲಿ ಯಾವ ಉದ್ರೇಕಕಾರಿ ಸ್ಲೋಗನ್ನಿಗೂ ಅವಕಾಶ ಇಲ್ಲವೆಂದು ಮೊದಲೇ ಸೂಚಿಸಲಾಗಿತ್ತಲ್ಲದೇ ಸಭೆ ನಡೆಯುವ ಬೀಡಿನಗುಡ್ಡೆಗೆ ಹೋಗುವ ದಾರಿ ಮಧ್ಯದಲ್ಲಿ ಕೃಷ್ಣ ಮಠಕ್ಕೆ ಹೋಗುವ ಸಂಸ್ಕೃತ ಕಾಲೇಜಿನ ತಿರುವಿನಲ್ಲಿ ಯಾರೂ ತಿರುಗದಂತೆ ಚಳವಳಿಯ ಕಾರ್ಯಕರ್ತರೇ ಇನ್ನಿಲ್ಲದಂತೆ ಒದ್ದಾಡುತ್ತಿದ್ದರೇ ವಿನಃ ಪೊಲೀಸ್ ಬಂದೋಬಸ್ತ್ ಹಂಚಿ ಹೋಗಿತ್ತೇ ಹೊರತು ಅಲ್ಲಿಗೆಂದೇ ಇದ್ದಿರಲಿಲ್ಲ.

ಇನ್ನೂ ವಿಶೇಷವೆಂದರೆ, ಕೇವಲ ಭೂಮಿ ಹಾಗು ಆಹಾರದ ಹಕ್ಕಿನ ಉದ್ದೇಶದಿಂದ ಹೊರಟ ಈ ಚಳವಳಿಯ ಕುರಿತಾಗಿ ಪೊಲೀಸ್ ಹಾಗು ಕೇಸರಿ ಪಡೆಗೆ ಹಿಂದಿನ ದಿವಸ ಯಾವುದೋ ಗಾಳಿಸುದ್ದಿಯೊಂದು ತಲೆಕೆಡಿಸಿತ್ತು, ಅದೆಂದರೆ ಸಭೆಯಲ್ಲಿ ಗೋಮಾಂಸ ಸೇವಿಸುವ ಕಾರ್ಯಕ್ರಮವಿದೆಯೆಂಬ ವದಂತಿ. ಕೇಸರಿಪಡೆಗೆ ಸೆಡ್ಡು ಹೊಡೆಯಲು ಸಂಘಟನೆಗೊಂಡ ದಲಿತ ದಮನಿತರ ಯುವಪಡೆಗೆ ಇದನ್ನು ಕಾರ್ಯರೂಕ್ಕಿಳಿಸುವುದು ಕಷ್ಟವಿದ್ದಿರಲಿಲ್ಲವಾದರೂ ಅದು ಯಾರೋ ಹಬ್ಬಿಸಿದ ಸುಳ್ಳುಸುದ್ದಿಯಷ್ಟೇ ಆಗಿತ್ತು, ಯಾಕೆಂದರೆ ಈ ಚಳವಳಿ ಬುದ್ಧ ಗಾಂಧಿ, ವಿವೇಕಾನಂದರ ಸಂದೇಶಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಅಹಿಂಸಾತ್ಮಕ ಪ್ರತಿಭಟನೆಯೇ ಹೊರತು ಉಗ್ರತನದ ಹಾರಾಟ (ಸಾಧ್ಯತೆ ಇದ್ದರೂ) ಆಗಿದ್ದಿರಲಿಲ್ಲ. ಇದಕ್ಕೆ ಪ್ರತಿಯಾಗಿ ದಿನೇಶ ಅಮೀನ್ ಮಟ್ಟುರವರು ಆ ಸಂದರ್ಭದಲ್ಲಿ ನಮಗೆ ಬುದ್ಧ, ಬಸವಣ್ಣ, ವಿವೇಕಾನಂದ, ನಾರಾಯಣಗುರುಗಳು ಸಾರಿದ ಧರ್ಮದಲ್ಲಿ ನಂಬಿಕೆಯಿದೆಯೇ ಹೊರತು ಇನ್ಯಾರೋ ಹೇಳುವ ಅಸಮಾನತೆ, ದೌರ್ಜನ್ಯ, ಕುತಂತ್ರ ಸಾರುವ ಧರ್ಮಗಳಲ್ಲಲ್ಲ ಎಂದಿದ್ದರು.

ಇವರ ತಂತ್ರಗಳು ಹೇಗಿರುತ್ತವೆ ನೋಡಿ, ಉನಾದಲ್ಲಿ ಹಲ್ಲೆಗೀಡಾದ ದಲಿತರನ್ನೇ ಇವರು ಪ್ರಚಾರಕ್ಕಾಗಿ ಬಳಸಿಕೊಳ್ಳುತ್ತಿದ್ದಾರಂತೆ. ರೋಹಿತ್ ವೇಮುಲಾನ ನೆಪದಲ್ಲಿ ದೇಶದ ದಲಿತರೆಲ್ಲರೂ ಸಿಡಿದೇಳುವ ಹಂತಕ್ಕೆ ಬಂದಾಗ ಎಲ್ಲೋ ಓಡಿ ಮರೆಯಾಗಿದ್ದ ಆತನ ತಂದೆಯನ್ನು ಹಿಡಿದು ಆತ ದಲಿತನೇ ಅಲ್ಲ ಎಂದು ಹೇಳಿಸಿಬಿಟ್ಟರು. ಈಗ ಅಧಿಕೃತವಾಗಿ ಆತ ದಲಿತನಲ್ಲ ಎಂಬ ತೀರ್ಪು ಕೊಟ್ಟು ವೇಮುಲಾ ಹೆಸರಲ್ಲಿ ದಲಿತರು ಯಾವತ್ತಿಗೂ ಮಾತನಾಡುವ ಹಕ್ಕಿಲ್ಲ ಎನ್ನುವಂತೆ ಮಾಡಿದರು. ಇದು ಚಾಣಕ್ಯ ವಂಶಜರ ಕುತಂತ್ರ ಕಲೆ.

ಪರ್ಯಾಯದ ಬಗ್ಗೆ ಟೀಕೆ ಟಿಪ್ಪಣಿಗಳು ಬರುತ್ತಿದ್ದಾಗ ಕೆಲ ಸಾಬರು ಮತ್ತು ಕ್ರಿಶ್ಚಿಯನ್ನರನ್ನು ದುಡ್ಡು ಕೊಟ್ಟು ಹಿಡಿದು ಅವರಿಂದ ಪಾನಕ ಕೊಡುವ ವ್ಯವಸ್ಥೆ ಮಾಡಿಸಿ ಪರ್ಯಾಯಕ್ಕೆ ಅವರದ್ದೇ ಬೆಂಬಲವಿದೆ ನಿಮ್ಮದೇನು ಬೊಬ್ಬೆ ಎಂದು ಟೀಕಾಕಾರರ ಬಾಯಿ ಮುಚ್ಚಿಸಿದರು. ಅದೇರೀತಿ ಉಡುಪಿ ಚಲೋವನ್ನು ಉಡುಪಿ ಮುತ್ತಿಗೆ ಎಂದು ಯಶಸ್ವಿಯಾಗಿ ಬಿಂಬಿಸಿದ ಮೇಲೆ ಇಂತಾದ್ದೇ ಅನ್ಯ ಧರ್ಮೀಯರನ್ನು ಹಿಡಿದು ಅವರಿಂದ ಸಭೆ ನಡೆಸಿ ಸಾಂದರ್ಭಿಕವಾಗಿ ಜಿಗ್ನೇಶ್ ಹಾಗು ಮಟ್ಟುರವರು ಉಡುಪಿ ಮಠದ ಬಗ್ಗೆ ಆಡಿದ ಮಾತುಗಳನ್ನು ಅವರ ಮೂಲಕ ವಿರೋಧಿಸಿದರು. ಇದರ ಹಿಂದೆ ಇಡೀ ಕ್ರಿಶ್ಚಿಯನ್ ಹಾಗು ಮುಸಲ್ಮಾನ ಸಮುದಾಯವೇ ನಮ್ಮ ಬೆಂಬಲಕ್ಕಿದ್ದಾರೆ ಎಂದು ಬಿಂಬಿಸುವ ಮಸಲತ್ತಲ್ಲದೇ ಬೇರೇನಲ್ಲ. ಉಡುಪಿಯಲ್ಲಿ ಹಾಜಬ್ಬನಂತವರ ಬೆತ್ತಲೆ ಪ್ರಕರಣದ ಬಗ್ಗೆ ಮಾತನಾಡದ (ಬೆತ್ತಲೆಗೊಳಿಸಿದಾತನಿಗೆ ಭಕ್ಷೀಸಾಗಿ ನಗರಸಭೆಯಲ್ಲಿ ಭರ್ಜರಿ ಹುದ್ದೆಗಳನ್ನು ನೀಡಲಾಗಿದೆ), ಸಮೀಪದ ಕುಂದಾಪುರದ ತ್ರಾಸಿ ಅಪಘಾತದಲ್ಲಿ ಏಳೆಂಟು ಮುಗ್ಧ ಕಂದಮ್ಮಗಳು ಸಾವನ್ನಪ್ಪಿದಾಗ ಹೇಗೂ ಸತ್ತವರು ಕ್ರಿಶ್ಚಿಯನ್ನರಲ್ಲವೇ ಹೋಗಲಿ ಸತ್ತು ಕೊಳ್ಳಲಿ ಎಂದು ಸಂಭ್ರಮಿಸಿದವರ ಬಗ್ಗೆ ಮಾತನಾಡದ ಮಂದಿ ಮುಖ ಉಳಿಸಿಕೊಳ್ಳಲು ಮಾತ್ರ ಈಗ ಈ ಧರ್ಮದವರ ಮೊರೆ ಹೋಗಿದ್ದು ನೋಡಿದರೆ ಕಾರ್ಯ ಸಾಧನೆಗಾಗಿ ಇವರು ಏನು ಮಾಡಲೂ ಹೇಸರೆಂಬುದು ತಿಳಿಯಬಹುದು.



ಅದ್ಯಾವನೋ ವಿಷವಾಣಿಯ ಪತ್ರಕರ್ತ ದಲಿತರ ಕೈಗೆ ಪೆನ್ನು ಕಂಪ್ಯೂಟರ್ ಕೊಡುವ ಬದಲು ನೀಲಿ ಬಾವುಟ ಕೊಟ್ಟು ಅವರನ್ನೆಲ್ಲ ಹಾದಿ ತಪ್ಪಿಸಲಾಗಿದೆ ಎಂದಿದ್ದಾನೆ. ತಮಾಷೆಯೆಂದರೆ ಇಡೀ ಉಡುಪಿ ಚಲೋ ಎನ್ನುವ ಕಾರ್ಯಕ್ರಮ ಹುಟ್ಟಿದ್ದೇ ಇದೇ ಉದ್ದೇಶದ ಹಿನ್ನೆಲೆಯಲ್ಲಿ, ದಲಿತ ದಮನಿತರನ್ನು ವಿದ್ಯೆ ಉದ್ಯೋಗಗಳಿಂದ ತಪ್ಪಿಸಿ ಅವರ ತಲೆಯಲ್ಲಿ ವಿಷ ತುಂಬಿ ಕೈಗೆ ತ್ರಿಶೂಲ ಕೇಸರಿ ಧ್ವಜ ಕೊಟ್ಟು ದಾರಿ ತಪ್ಪಿಸುವವರ ವಿರುದ್ಧವೇ ಹುಟ್ಟಿದಂತಹ ಚಳವಳಿಯಿದು. ತ್ರಿಶೂಲ ಕೇಸರಿ ಧ್ವಜ ಕೈಗೆತ್ತಿಕೊಂಡ ಪ್ರವೀಣ್ ಪೂಜಾರಿ ಮೊದಲಾದವರು ನಮಗೆ ಪಾಠವಾಗಬೇಕೆನ್ನುವುದನ್ನು ತೋರಿಸುವ ಸಲುವಾಗಿ ಹುಟ್ಟಿದಂತಹ ದಮನಿತರ ಜಾಥಾವಿದೆಂಬುದು ಇವರುಗಳ ಗಮನದಲ್ಲಿರಲಿ. ಅಂತೂ ಉಡುಪಿ ಚಲೋ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಕೇಸರಿ ಪಡೆಗೆ ಸರಿಯಾಗಿ ತಾಗಿದೆ ಎನ್ನುವುದು ಇವರುಗಳ ಇಂತಹ ಹಾರಾಟ ಮೈಪರಚಾಟಗಳಿಂದಲೇ ತಿಳಿಯಬಹುದು. ಒಟ್ಟಾರೆ ಚಳವಳಿ ನಿಲ್ಲಬಾರದು, ಇನ್ನೂ ಮುಂದುವರೆಯಲಿ ಎನ್ನುವುದು ಕರಾವಳಿ ಜನರ ಆಶಯವಾಗಿದೆ.

-ಪ್ರಸಾದ್, ಮಂಗಳೂರು

ಚೆಡ್ಡಿಗಳಿಗೆ ತಲ್ಲಣ ಹುಟ್ಟಿಸಿದ ಕೆಂಪುಮಿಶ್ರಿತ ನೀಲಿ

ಈ ಸಲದ ಜನವರಿ ತಿಂಗಳಿನ ಗಾಂಧಿ ಪುಣ್ಯತಿಥಿಯ ದಿನದಂದು ಮಂಗಳೂರಿನಲ್ಲಿ ನಡೆದ ಸೌಹಾರ್ದ ಸಮಾವೇಶ ಭರ್ಜರಿ ಯಶಸ್ಸನ್ನು ಕಂಡಿತ್ತು, ಮೂಲತಃ ಕಾಂಗ್ರೆಸಿಗರ ಭದ್ರಕೋಟೆಯಾಗಿ ಹಲವಾರು ಕಾಂಗ್ರೆಸ್ ನಾಯಕರನ್ನು ದೇಶಕ್ಕೆ ನೀಡಿದ ಕರಾವಳಿ ಜಿಲ್ಲೆ ಅಡ್ವಾಣಿಯ ಕೋಮು ಪ್ರಚೋದಕ ರಥಯಾತ್ರೆ ಮತ್ತು ಬಾಬ್ರಿ ಮಸೀದಿ ಧ್ವಂಸ ದೊಂಬಿಗಳ ನಂತರ ಕೋಮುವಾದಿಗಳ ಮುಖ್ಯ ಪ್ರಯೋಗಶಾಲೆಯಾಗಿ ಬದಲಾದದ್ದು ಇತಿಹಾಸ. ಕಳೆದ ಬಾರಿಯ ಅಭೂತಪೂರ್ವ ಯಶಸ್ಸಿನ ಸೌಹಾರ್ದ ಸಹಬಾಳ್ವೆ ಸಾಗರದಂತಹ ಜನಜಾಗೃತಿ ಸಮಾವೇಶದ ಅಗತ್ಯತೆ ನಿಜಕ್ಕೂ ಇತ್ತು, ಅದಾದಬಳಿಕ ಸ್ವಲ್ಪವೇ ಸಮಯದ ಅಂತರದಲ್ಲಿ ಎಡಪಂಥೀಯ ವಿಚಾರಧಾರೆಯ ಎಲ್ಲರನ್ನೂ ಒಗ್ಗೂಡಿಸಿಕೊಂಡು ಉಡುಪಿಯಲ್ಲೊಂದು ಬೃಹತ್ ಜಾಥಾ ಮಾಡುವ ಪ್ರಗತಿಪರರ ‘ಉಡುಪಿ ಚಲೋ’ ಸಮಾವೇಶದ ಸುದ್ದಿ ಕೋಮುವಾದಿಗಳೆಲ್ಲರ ನಿದ್ದೆಗೆಡಿಸಿದ್ದವು.

ಕೇಂದ್ರದಲ್ಲಿ ನರೇಂದ್ರ ಮೋದಿಯೆಂಬ ಉಗ್ರ ಹಿಂದೂತ್ವದ ಪ್ರತಿರೂಪವೊಂದು ಗದ್ದುಗೆಗೇರುವುದನ್ನೇ ಕಾಯುತ್ತಿದ್ದಂತಹ ಫ್ಯಾಸಿಸ್ಟ್ ಶಕ್ತಿಗಳು ಆತನ ಗೆಲುವಿನ ಬಳಿಕ ಸೀಮೆಗೊಬ್ಬರ ಕೊಟ್ಟಿ ಗಿಡಗಳಂತೆ ಬ... ಚಿಗಿತುಕೊಂಡವು. ದನದ ಹೆಸರಿನಲ್ಲಿ, ಜಾತಿಯ ಹೆ... ಧರ್ಮದ ಹೆಸರಿನಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಇ... ವಿಜೃಂಭಿಸತೊಡಗಿದವು. ಫ್ರಿಡ್ಜಿನಲ್ಲಿಟ್ಟ ಮಾಂಸ, ... ಪ್ರವೇಶ, ಚರ್ಮೋದ್ಯಮಗಳಿಗೆ ಒದಗಿಸಲು ಪಾರಂಪ... ನಡೆಸುತ್ತಿದ್ದ ಸತ್ತ ದನದ ಚರ್ಮಸುಲಿಯುವಿ... ನೆಪವನ್ನಾಗಿಸಿಕೊಂಡು ಅನೇಕ ಕೊಲೆಗಳು ದ... ದೇಶಾದ್ಯಂತ ನಡೆದವು. ಕರಾವಳಿ ... ಭಜರಂಗಿಯೊಬ್ಬನನ್ನು ದನ ಸಾಗಾಣಿಕೆಯ ... ಭಜರಂಗಿಗಳೇ ಕೊಂದು ಗೋಸಾಗಾಣಿಕೆದಾರರು ... ಆಗಿದ್ದರೂ ಇದೇ ಶಿಕ್ಷೆ ಕಾದಿದೆ ಎಂದು ಕೆಟ್ಟ ಸಮ... ಇಳಿದರು. ಇಂತವನ್ನೆಲ್ಲ ಮೌನವಾಗಿ ನೋಡಿ ... ಸಹಿಸಿಕೊಂಡಿದ್ದ ಕನ್ನಡನಾಡಿನ ಪ್ರಗತಿಪರರು ಇದೇ... ಹೆಸರಲ್ಲಿ ನಡೆದ ಹಿಂಸಾಚಾರಕ್ಕೆ ಪ್ರತಿಯಾಗಿ ಯುವ ... ಜಿಗ್ನೇಶ್ ಮೇವಾನಿ ನೇತೃತ್ವದಲ್ಲಿ ಹುಟ್ಟಿಕೊಂಡ ಗು... ಉನಾ ಚಲೋ ಚಳವಳಿಯನ್ನು ಉಡುಪಿಯಲ್ಲೂ ... ಯೋಜಿಸಿ ಸಮಾವೇಶವನ್ನು ಅತ್ಯಂತ ಯಶ... ನಡೆಸಿದರು. ಇದರ ನಿರೀಕ್ಷೆಗೂ ಮೀರಿದ ಯಶಸ್ಸು ಕೇಸರಿಗಳ ಚೆಡ್ಡಿ ಜಾರುವಂತೆ ಮಾಡಿದೆ.

ಅಂತಾ ಮಳೆಯೇನು ಇರದ ಅಕ್ಟೋಬರ್ 9ರ ಬೆಳಗ್ಗೆ ಚೆಡ್ಡಿಗಳ ಮುಖದಲ್ಲಿ ಆ ತನಕವಿ... ಆತಂಕ ಮಾಯವಾಗಿ ಒಂದು ಬಗೆಯ ವಿಕೃತ ಸ... ಕಳೆ ಮೂಡಿತ್ತು. ಯಾಕೆಂದರೆ ಬೆಳ್ಳಂಬೆಳಗ್ಗೆಯೇ ಅ... ಮಳೆ ಸುರುವಿಟ್ಟುಕೊಂಡಿತ್ತು. ಎಲ್ಲೆಲ್ಲಿಂದಲೋ ... ಹೊರಡುವವರಿಗಿದು ನಿರಾಸಕ್ತಿ ತರುವುದರ ... ಮೂರು ಮೂರುವರೆ ಕಿ.ಮೀ. ಹೆಂ... ವೃದ್ಧರನ್ನೊಡಗೂಡಿ ಹೋಗಲಿರುವ ಈ ಜಾಥಾಕ್ಕಿದು... ಪೆಟ್ಟೆಂದೇ ಅವರು ಭಾವಿಸಿದ್ದರು. ಆದರೆ ಬ... ಮಳೆಯೂ ಕ್ರಮೇಣ ಮಾಯವಾಗಿ ಜಾಥಾ ಆರಂಭ... ಅಜ್ಜರಕಾಡಿನಲ್ಲಿ ನೀಲಿ ಸಾಗರವೇ ಜಮೆಯಾಗಿ ... ಮೈಯಲ್ಲಿ ಬೆವರೂರತೊಡಗಿತು. ಅದೆಲ್ಲಿತ್ತೋ ಎ... ಉಡುಪಿಯ ಬೀದಿಯೆಲ್ಲಾ ಕ್ಷಣಮಾ... ನೀಲಿಮಯವಾಗಿ ಹೋಯಿತು. ಉಡುಪಿ ಚಳ... ಬಗ್ಗೆ “ತಾಕತ್ತಿದ್ದರೆ ಉಡುಪಿಗೆ ಬನ್ನಿ ನೋಡುವಾ?” ಆ ತನಕ ವಿಷ ಕಾರುತ್ತಿದ್ದ ಚೆಡ್ಡಿಗಳೆಲ್ಲಾ ಈ ನೀಲಿ ಸಾಗ... ಕಂಡು ಬಿಲ ಸೇರಿಕೊಂಡವು. ನೇರವಾಗಿ ಎದುರ... ಹಿಂದೆ ಅಡಗಿ ಅವರು ಮಾಡಿದಂತಹ ಮು... ತಡೆಗಳಿಗೆಲ್ಲ ಈ ನೀಲಿ ಜಾಥ ಸರಿಯಾದ ಉತ್ತ... ಕೊಟ್ಟಿತ್ತು.

ಜೈ ಭೀಮ್ ಮತ್ತು ಲಾಲ್ ಸಲಾಮ್ ಒಂ... ತಮ್ಮ ಬುಡಕ್ಕೆ ಬೆಂಕಿ ಎಂಬುವುದನ್ನು ಸ್ಪಷ್ಟವಾಗಿ ... ಚೆಡ್ಡಿ ಪಡೆ ಇದನ್ನು ಒಡೆಯಲು ಇನ್ನಿಲ್ಲದ ಮಸ... ಮಾಡಿತ್ತು. ಆದರೆ ಇಡೀ ಅಹಿಂದ ವರ್ಗವೇ ಉ... ಚಲೋ ಮೂಲಕ ಒಂದಾಗಿ ಕೋಮುವಾದಿಗಳಿಗೆ ತಕ್ಕ ಉತ್ತರವನ್ನೇ ಕೊಟ್ಟವು.

-ಓದುಗ, ಬೆಂಗ...

‘ಚಲೋ ಉಡುಪಿ ಮನುವಾದಿ... ಮಠಕ್ಕೆ ಹೊರಟಿದ್ದು ಏಕೆ ಗೊತ್ತಾ...


ಸಂವಿಧಾನದಾಣೆಗೂ ದಲಿತರಷ್ಟೇ ಅಲ್ಲ, ಈ ... ಶೋಷಿತ ಸಮುದಾಯಗಳ ಉದ್ಧಾರ ಆಗಲೇಬೇಕು... ‘ಭಾರತ್ ಮಾತಾಕೀ ಜೈ’, ‘ಜೈ ಶ್ರೀರಾಮ್’ ಹುಸಿಭಕ್ತಿಯ ಘೋಷಣೆಗಳನ್ನು ಕೂಗುತ್ತಾ ಭಾಗವ... ಹಿಡಿದು ಮನುಷ್ಯರ ರಕ್ತ-ಮಾಂಸಗಳೇ ಬೇಕು ... ಘೋಷಣೆ ಕೂಗಿಯೇ ಅಲ್ಲವೇ ಅಲ್ಲ, ವಾಲ್ಮೀಕಿ, ...





...ತ್ಯವನ್ನು ದೈವೀಕರಣಗೊಳಿಸಿ ಕೂಡಿಟ್ಟುಕೊಂಡು ಹೊಟ್ಟೆ ...ೂರೆದುಕೊಳ್ಳುವುದು, ಅದೇ ಸಮುದಾಯದ ...ವಾರಸುದಾರರನ್ನು ಹೊರ ನಿಲ್ಲಿಸುವುದು ಗೆದ್ದಲು ಹಿಡಿದ ...ಜ್ಞಾನದ ಸಂಕೇತವೆಂಬುದು ಸ್ಪಷ್ಟ. ಪುರಾಣಕಾಲದಿಂದ ...ದು ಸಾಬೀತಾಗಿದೆ. ಆಧುನಿಕತೆಯ ಈ ಕಾಲದಲ್ಲೂ ...ಪುನರಾವರ್ತನೆ ಆಗುತ್ತಿದೆ.

ಡಾ.ಭೀಮರಾವ್ ಅಂಬೇಡ್ಕರ್‌ರಿಗೆ ಬೋಧಿಸಿದ ಗುರು ...ಂಬೇಡ್ಕರ್ ಸವರ್ಣೀಯರು ನಿಜ. ಅದೇ ಸವರ್ಣೀಯರು ...ಡಿಯಲು ನೀರು ಕೊಡದೆ ದೂಡಿದ್ದರು, ಕೆರೆಕಟ್ಟೆಗಳನ್ನು ...ುಟ್ಟಿಸದೆ ಹೊರಗಿಟ್ಟಿದ್ದರು. ಕರಾವಳಿಯಲ್ಲಿ ದಲಿತರಿಗೆ ...ುತ್ತು ಮಹಿಳೆಯರಿಗೆ ಶಿಕ್ಷಣ ನೀಡುವ ಕ್ರಾಂತಿ ನಡೆಸಿದವರು ...ಾರಸ್ವತ ಬ್ರಾಹ್ಮಣ ಕುದ್ಮಲ್ ರಂಗರಾಯರು. ...ವರಿಗೆ ನೆರವು ನೀಡಿದವರು ಕಾರ್ನಾಡು ...ದಾಶಿವರಾಯರು. ಶಿಕ್ಷಣ, ...ಸ್ವಾವಲಂಬನೆಯಿಂದಲೇ ದಲಿತೋದ್ಧಾರ ...ಂಬುದನ್ನು ಹಿರಿಯರು ಜಾತಿಭೇದ ಮರೆತು ...ೋರಿಸಿಕೊಟ್ಟಿದ್ದಾರೆ. ಆದರೆ ಅದೇ ...ವರ್ಣೀಯರಾದ ಗೋಡ್ಸೆ, ಗೋಳ್ವಾಲ್ಕರ್ ...ಂತತಿಗಳು ಇಂದಿಗೂ ದಲಿತರ-ದಮನಿತರನ್ನು ...ೋಷಿಸುತ್ತಲೆ ಬಂದಿದ್ದಾರೆ. ಮಠಗಳು ಇಂತಹ ...ಂತತಿ ಪ್ರೇತಗಳ ಪೀಡಿತ ಗೋರಿಗಳಂತೆ ಇರುವುದರಿಂದಲೇ ...ಜ್ಞಾಪೂರ್ವಕವಾಗಿ ಪ್ರಶ್ನಿಸಲಾಗುತ್ತಿದೆ.



ಉಡುಪಿ ಮಠದಲ್ಲಿ ಪಂಕ್ತಿ ಭೇದ ಇದೆ ಎಂಬುದು ...ಗಷ್ಟೆ ಅಲ್ಲ, ವಾಸ್ತವ! ಪೇಜಾವರರು ಮನುವ್ಯಾಧಿಪೀಡಿತ ...ಶ್ವಹಿಂದೂ ಪರಿಷತ್ತಿನ ರಾಜಗುರು. ದೇಶವನ್ನು ಧರ್ಮ, ...ಾತಿ ಹೆಸರಿನಲ್ಲಿ ಒಡೆಯುವ, ಮನುಷ್ಯರನ್ನು ಕೊಲ್ಲುವ ...ಾತಕ ಕಾರ್ಯಗಳ ಶ್ರೇಯದಲ್ಲೂ ಸಹಜವಾಗಿ ಶ್ರೀಗಳಿಗೆ ...ಲಿದೆ. ಹಿಂದುಳಿದ ವರ್ಗದ ವೀರರಾದ ಮೊಗವೀರರಿಗೆ ...ಬ್ರಹ್ಮಣ ದೀಕ್ಷೆ ಕೊಟ್ಟು ಅಲ್ಪಸಂಖ್ಯಾತರ ವಿರುದ್ಧ ...ೂಡೆದಾಟಕ್ಕಿಳಿಸಿದ ಸಂಸ್ಥಾನ ಉಡುಪಿ ಎಂಬುದು ...ನುಮಾನವೇ ಇಲ್ಲ!! ಉಡುಪಿ ಕೃಷ್ಣ ಮಠದಲ್ಲಿ ಪಂಕ್ತಿ ...ೇದ ಇಲ್ಲ, ಆದರೆ ಪ್ರತ್ಯೇಕ ಭೋಜನ ವ್ಯವಸ್ಥೆಯಿರುವುದು ...ಳ್ಳಲ್ಲ (ಎರಡೂ ಬೇರೆ ಬೇರೆ ಅಂತ ಯಾರಿಗಾದರೂ ...ನಿಸುತ್ತದೆಯೇ?). ಬ್ರಾಹ್ಮಣರಲ್ಲೇ ಪಂಕ್ತಿ ...ೇದವಿಟ್ಟುಕೊಂಡಿರುವಾಗ ಇತರೆ ವರ್ಗಗಳಿಗೆಲ್ಲಿ ...ಪಂಕ್ತಿಯಲ್ಲಿ ಕೂರಿಸಲಾಗುತ್ತದೆ. ಅಸ್ತೋದಕ ಸ್ವೀಕಾರದಲ್ಲಿ ...ಾತಿ ಗುರುತಿಸಿ ಹೊರಗಟ್ಟಲಾಗುತ್ತದೆ. ಹಾಗೊಮ್ಮೆ ಪಂಕ್ತಿ ...ೇದದ ಮಾತು ಬಂದಿದ್ದರೆ ಅದು ಭೋಜನಶಾಲೆಯ ...ೇಟ್ ಕೀಪರ್‌ಗಳದ್ದು, ಮಠದ್ದಲ್ಲ!! ಕೊನೆಗೂ ಗೇಟ್ ...ೀಪರ್ ಆಗಿರುವ ಹಿಂದುಳಿದ ವರ್ಗದವನನ್ನು ...ಲಿಯಾಗಿಸುವ ಅಸಮಾನತೆಯ ಮಠದ ಸಂಚಿಗೆ ...ದೊಂದು ನಿದರ್ಶನ.

ಬ್ರಾಹ್ಮಣ್ಯದ ವೈರುಧ್ಯಗಳನ್ನು ನೋಡಿ. ಗೊಲ್ಲ ಶ್ರೀ ...ಷ್ಣನನ್ನು ಇವರು ದೇವರೆಂದು ನಂಬುತ್ತಾರೆ. ಅದೇ ಕುರುಬ ...ನಕದಾಸರನ್ನು ಹೊರಗೆ ನಿಲ್ಲಿಸಿ ಕಿಂಡಿ ಕಟ್ಟುತ್ತಾರೆ. ಕನಕನನ್ನು ...ಷ್ಣನ ಗರ್ಭಗುಡಿಯಲ್ಲಿಟ್ಟು ಪೂಜಿಸಲಾರರು. ಅದೇ ಕನಕ, ...ಷ್ಣನ ಜಾತಸ್ಥರನ್ನು ಒಳಗೆ ಬಿಟ್ಟುಕೊಳ್ಳಲಾರರು. ಕನಕನ ...ದಾಸಶ್ರೇಷ್ಠತೆಯನ್ನು, ಶೂದ್ರ ಕೃಷ್ಣನ ರಾಜನೀತಿ, ...ಧರ್ಮಬೋಧನೆಯನ್ನು ಬಂಡವಾಳವಾಗಿಸಿಕೊಳ್ಳುತ್ತಾರೆ. ...ಭೇದ ಪ್ರಶ್ನೆ ಅಲ್ಲಿರುವಾಗ ಐತಿಹ್ಯ ಕನಕ, ಕೃಷ್ಣ ಯಾರೂ ...ಬ್ರಾಹ್ಮಣ್ಯಕ್ಕೆ ವರ್ಜ್ಯರಲ್ಲ.

ಉಡುಪಿಯ ರಾಜಮಾರ್ಗಗಳಲ್ಲಿ ಅಬ್ಬರಿಸಿದ ನೀಲಿ ...ಧ್ವಜಗಳಿಗೆ ಬೇಕಿರುವುದು ಮಠದ ಅಧಿಕಾರವಲ್ಲ, ಮಠದ ...ಅಹಂಕಾರಕ್ಕೆ ಬೆಂಕಿ ಬೀಳಲಿ. ಅವರಿಗೆ ಬೇಕಿರುವುದು ಶ್ರೇಷ್ಠ ...ಭಾರತದ ಸಂವಿಧಾನದ ಹಕ್ಕುಗಳು, ಸಮತೆ-ಪ್ರೀತಿ ...ಭ್ರಾತೃತ್ವದ ನಿಜ ನೆಲೆಗಳು.

ಮುಸ್ಲಿಂರು ಅಂಬೇಡ್ಕರ್ ಅವರನ್ನು ಹೊತ್ತು ...ಮೆರೆಸಿದ್ದು, ಜೈ ಭೀಮ್ ಎಂದು ಘೋಷಿಸಿದ್ದು ...ಸಣ್ಣದಲ್ಲ, ಇದು ಕೇಸರಿಗಳ ಎದೆಯಲ್ಲಿ ಒನಕೆ ಕುಟ್ಟಿದಂತಾಗಿದೆ. ಗೋಡ್ಸೆ ಸಂತತಿಗಳಿಗೆ ಸಮಾನ ಶತ್ರುಗಳಾಗಿರುವ ದಲಿತರು-ಮುಸಲ್ಮಾನರು ಒಂದಾಗಿ ಹೆಜ್ಜೆ ಹಾಕಿದ್ದು ಸರ್ವಜನ ಭಾರತದ ಸಂದೇಶ ರವಾನೆಯಾಗಿದೆ. ಇದನ್ನು ಅರಗಿಸಿಕೊಳ್ಳದೆ ಕೇಸರಿ ಪಡೆ ಮುಲುಕುತ್ತಿರುವುದು ಸುಸ್ಪಷ್ಟ. ಗೋಮಾಂಸದ ದೊಡ್ಡ ದೊಡ್ಡ ವ್ಯಾಪಾರಿಗಳೇ ಇಂದು ಯಾರೆಂಬುದು ಜಗತ್ತಿಗೆ ಗೊತ್ತಾಗಿದೆ. ಅವರ ಚಂದಾಹಣದಲ್ಲಿ ರಾಜಕಾರಣ ಮಾಡುತ್ತಿರುವವರು ಯಾರು?

ಟಿಪ್ಪು ನಾಡು ಕಂಡ ಅಪ್ರತಿಮ ಸಹಿಷ್ಣುತೆಯ ದೊರೆ. ಇತಿಹಾಸದ ಅರಿವಿನ ಕೊರತೆ ಇರುವ ಬೌದ್ಧಿಕ ದಿವಾಳಿಗಳು ಮಾತ್ರ ಆತನನ್ನು ಜರಿಯಬಲ್ಲರು. ಟಿಪ್ಪು ಮುಸ್ಲಿಂ ಎನ್ನುವ ಕಾರಣಕ್ಕೆ ಅವನನ್ನು ಅಪರಾಧಿಯನ್ನಾಗಿಸುವ ಕುತಂತ್ರ ಹಿಂದಿನಿಂದಲೂ ನಡೆದುಬಂದಿದೆ. ಗಾಂಧಿಯನ್ನು ಕೊಂದ ಗೋಡ್ಸೆಯೇ ಅಖಂಡ ಹಿಂದೂಗಳ ದೇವರಾಗಿರುವಾಗ ಉಳಿದಿದ್ದೆಲ್ಲಾ ಏನು? ಖೈರ್ಲಾಂಜಿ, ಬೆಲ್ಚಿ, ಉನಾ, ಬಾಳೆಹೊನ್ನೂರು, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಮಾರಣಹೋಮಗಳಲ್ಲಿ ಹಿಂದೂಗಳು ಇರಲಿಲ್ಲವೇ?

ಪೇಜಾವರರು ದಲಿತ ಕೇರಿಗಳಿಗೆ ಹೋಗುತ್ತಿರುವುದರ ಹಿಂದೆ ಒಂದು ರಹಸ್ಯವಿದೆ! ಹಿಂದೂ ಮತಾಂಧರ ಹಾವಳಿ, ಪಂಕ್ತಿಭೇದ, ಅಸ್ಪೃಶ್ಯತೆ ಆಚರಣೆಗಳಿಂದ ನೊಂದ ದಲಿತರು ಇಂದು ಬೌದ್ಧ ಧರ್ಮ, ಕ್ರೈಸ್ತ ಧರ್ಮವನ್ನು ಆಶ್ರಯಿಸುತ್ತಾ ಸ್ವಾಭಿಮಾನ-ಸಮಾನತೆಯ ಬದುಕನ್ನು ಅರಸುತ್ತಿದ್ದಾರೆ. ಹಿಂದೂತ್ವದ ಕಾಲಾಳುಗಳಾಗಿ ಬಲಿಯಾಗುತ್ತಿದ್ದ ದಲಿತರು ಹೀಗೆ ಗುಳೇ ಹೋಗುವುದರಿಂದ ಹಿಂದೂತ್ವದ ದಂಗೆಗಳಿಗೆ ಜನವಿಲ್ಲದಂತಾಗಿದ್ದಾರೆ. ಆ ಕಾರಣದಿಂದ ಪೇಜಾವರರು ದಲಿತರ ಕೇರಿಗಳಿಗೆ ಹೋಗಿ ಅವರನ್ನು ಸಮಾಧಾನಿಸುವುದು ಕುತಂತ್ರವೇ ಹೊರತು, ದಲಿತರನ್ನು ಮನುಷ್ಯರಂತೆ ಕಂಡು ತಮ್ಮ ಅಷ್ಟಮಠಗಳಲ್ಲಿ ಅಗ್ರ ಪೂಜೆಗೆ ಕೂರಿಸುವ ಪ್ರೀತಿಯಿಂದಲ್ಲ.

ಬನ್ನಿ ಮಠಗಳನ್ನು ಧಿಕ್ಕರಿಸೋಣ, ಮಠಕ್ಕಿಂತ ಮಾನವತೆ ದೊಡ್ಡದು. ಬನ್ನಿ, ಬುದ್ಧ ಬಸವ, ಸಂತ ಶರೀಫ್, ಬಾಬಾ ಸಾಹೇಬರ ಸರ್ವಜನರನ್ನೊಳಗೊಂಡ ಸಂವಿಧಾನದ 'ಮಹಾಮನೆ'ಯನ್ನು ಉಳಿಸೋಣ, ಒಟ್ಟಾಗಿ ಹೋರಾಡೋಣ.

-ಎನ್.ರವಿಕುಮಾರ್, ಶಿವಮೊಗ್ಗ

ಯಾರೂ ನಿರೀಕ್ಷಿಸಿದ ರೀತಿಯಲ್ಲಿ ಉಡುಪಿ ಚಲೋ ಯಶಸ್ವಿಯಾಗಿದೆ. ಕಾರ್ಯಕ್ರಮ ಮುಗಿದರೂ ಅದರ ಕುರಿತ ಚರ್ಚೆಗಳು ಇನ್ನೂ ನಡೆಯುತ್ತಿದೆ. ಪೇಜಾವರ ಶ್ರೀಗಳು ಎಷ್ಟೊಂದು ತಳಮಳಗೊಂಡಿದ್ದಾರೆ ಎಂದರೆ ಅವರು ಇತ್ತೀಚೆಗೆ ನೀಡಿದ ತದ್ವಿರುದ್ಧವಾದ ಪತ್ರಿಕಾ ಹೇಳಿಕೆಗಳೇ ಇದಕ್ಕೆ ಸಾಕ್ಷಿ. "ಉಡುಪಿ ಕೃಷ್ಣ ಮಠದಲ್ಲಿ ಪಂಕ್ತಿ ಭೇದ ಇಲ್ಲ, ಸಂಪ್ರದಾಯ ಬ್ರಾಹ್ಮಣರಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಇದೆ" ಎಂದಿದ್ದಾರೆ ಪೇಜಾವರ ಶ್ರೀಗಳು. ಹಾಗಾದರೆ ಈ ಪ್ರತ್ಯೇಕ ಊಟದ ವ್ಯವಸ್ಥೆಗೆ ಏನು ಹೆಸರು ಎಂದು ಅವರೇ ಉತ್ತರಿಸಬೇಕು.

"ಬ್ರಾಹ್ಮಣರು ಬರುವ ಮುಂಚೆಯೇ ಅಸ್ಪೃಶ್ಯತೆ ಇತ್ತು" ಎನ್ನುವ ಮೂಲಕ ಬ್ರಾಹ್ಮಣರು ಹೊರಗಿನಿಂದ ಬಂದವರು ಎಂದು ಅವರು ಪರೋಕ್ಷವಾಗಿ ಒಪ್ಪಿಕೊಂಡಂತಲ್ಲವೇ? ಹಿಂದೂ ಭಯೋತ್ಪಾದನೆ ಬೆಂಬಲಿಸುವುದಿಲ್ಲ ಎನ್ನುವ ಮೂಲಕ ಹಿಂದೂ ಭಯೋತ್ಪಾದನೆ ಈ ದೇಶದಲ್ಲಿ ಇದೆ ಎಂದು ಒಪ್ಪಿಕೊಂಡಂತಲ್ಲವೇ? ಇದು ಮುಸ್ಲಿಮರ ಒಲೈಕೆಗಾಗಿ ಕಸರತ್ತೆ?

ಮುಸ್ಲಿಮರಲ್ಲೂ ಮಠದ ಭಕ್ತರಿದ್ದಾರೆ ಎಂದು ಅವರ ಮೇಲೆ ನಾಟಕೀಯ ಪ್ರೀತಿ ತೋರಿಸಬೇಡಿ. ಮುಸ್ಲಿಂರ ಬಗ್ಗೆ ಕೆಂಡಕಾರುವ ವಿಎಚ್‌ಪಿ ನಾಯಕ ಪ್ರವೀಣ ತೊಗಾಡಿಯಾಗೆ ಬುದ್ಧಿವಾದ ಹೇಳಿದರೆ ಇದು ನಿಮ್ಮ ಮನದಾಳದಲ್ಲಿ ಮಾತು ಎಂದು ಒಪ್ಪಬಹುದು.

-ಅಬ್ದುಲ್ ರಝಾಕ್, ಕೆರೂರ


ಮಣಿಪಾಲ ಪೈಗಳ ಕೊಕ್ಕೆವಾಣಿ

ಮಣಿಪಾಲ ಪೈಗಳ ಕೇಸರಿವಾಣಿ ಈಗ ಎಷ್ಟೊಂದು ಪಕ್ಷಪಾತಿ ಆಗಿದೆಯೆಂದರೆ ಅದು ಚಲೋ ಉಡುಪಿಯಂತಹ ಇಡೀ ರಾಷ್ಟ್ರದ ಗಮನ ಸೆಳೆದ ಸಮಾವೇಶದ ಬಗ್ಗೆ ಒಂದೇ ಒಂದು ಅಕ್ಷರ ಸುದ್ದಿ ಪ್ರಕಟಿಸದೇ ಸಮಾವೇಶದ ಅದ್ಭುತ ಯಶಸ್ಸಿನ ಬಗ್ಗೆ ತನ್ನ ಮತ್ಸರ ತೋರಿಸಿತ್ತು. ಮೇಲಾಗಿ ಆ ದಿನ ಚಲೋ ಉಡುಪಿ ಆಯೋಜಕರು ಅಲ್ಲಿದ್ದ ಪೊಲೀಸರಿಗೆ ಊಟ ಕೊಡಲಿಲ್ಲವೆಂದು ಸುಳ್ಳು ಸುದ್ದಿಯನ್ನು ಬಾಕ್ಸ್ ಸುದ್ದಿಯಾಗಿ ಹಾಕಿ ವಿಕೃತ ಆನಂದ ಪಟ್ಟಿತ್ತು ಈ ವಿಕಾರವಾಣಿ.

ನಿಜವಾಗಿ ಸಮಾವೇಶಕ್ಕೆ ಎಂಟು ಸಾವಿರ ಜನರು ಬರುತ್ತಾರೆ ಎಂಬ ನಿರೀಕ್ಷೆಯಿಂದ ಅಷ್ಟು ಜನರ ಊಟಕ್ಕೆ ತಯಾರಿ ಮಾಡಲಾಗಿತ್ತು, ಆದರೆ ಸಮಾವೇಶಕ್ಕೆ ಬಂದಿದ್ದು ಏಳು ಸಾವಿರ ಜನರು ಮಾತ್ರ. ಹಾಗಾಗಿ ಒಂದು ಸಾವಿರದಷ್ಟು ಜನರ ಊಟ ಉಳಿದಿತ್ತು. ಸಾಯಂಕಾಲ ನಾಲ್ಕು ಗಂಟೆಯವರೆಗೂ ಸ್ವಯಂಸೇವಕರು ಬಂದವರಿಗೆಲ್ಲಾ ಊಟ ಹಾಕುತ್ತಲೇ ಇದ್ದರು. ಹೆಚ್ಚು ಉಳಿದ ಊಟವನ್ನು ಅಲ್ಲಿಯ ಸುತ್ತಮುತ್ತಲಿದ್ದ ಕಾರ್ಮಿಕರನ್ನು ಕರೆದು ಕೊಡಲಾಗಿತ್ತು. ಪೊಲೀಸರು ಬಂದೋಬಸ್ತ್ ಡ್ಯೂಟಿ ಮೇಲೆ ಇದ್ದಾಗ ಹೊರಗಿನ ಆಹಾರ ಸೇವಿಸಬಾರದು; ಕಾರಣ ಕಿಡಿಗೇಡಿಗಳು ಅದರಲ್ಲಿ ಅಮಲು ಪದಾರ್ಥ ಅಥವಾ ವಿಷ ಬೆರೆಸುವ ಸಾಧ್ಯತೆ ಇರುವುದರಿಂದ ಸಾರ್ವಜನಿಕ ಸ್ಥಳದಲ್ಲಿ ಪೊಲೀಸರು ಊಟ ಮಾಡಬಾರದು ಎಂದು ಇಲಾಖೆಯ ಅಧಿನಿಯಮವೇ ಇದ್ದರೂ ಆ ದಿನ ರುಚಿಯಾದ ಘೀರೈಸ್ ಜತೆ ದಾಲ್ ತೊವ್ವೆ ಮತ್ತು ಬೇಯಿಸಿದ ಮೊಟ್ಟೆ ಇದ್ದುದರಿಂದ ಪೊಲೀಸರು ಮೊದಲೇ ಹೊಟ್ಟೆ ತುಂಬಾ ಊಟ ಮಾಡಿದ್ದರು. ಆದರೂ ಕೊಕ್ಕೆವಾಣಿ ತನ್ನ ಕೊಕ್ಕೆ ಬುದ್ಧಿ ತೋರಿಸಿಯೇ ಬಿಟ್ಟಿತ್ತು.

ವಿಜಯವಾಣಿ ಮತ್ತು ವಿಜಯ ಕರ್ನಾಟಕ ಎಂಬ ಇನ್ನೆರಡು ಕೇಸರಿ ಪತ್ರಿಕೆಗಳ ತೀವ್ರ ಪೈಪೋಟಿಯಿಂದ ದಿನೇದಿನೇ ಕಳೆಗುಂದುತ್ತಿರುವ ಈ ಪೈವಾಣಿ ಈಗ ತನ್ನ ಸರ್ಕ್ಯುಲೇಷನ್ ಉಳಿಸಿಕೊಳ್ಳುವಲ್ಲಿ ಸೋತಿರುವುದರಿಂದ ಮೇಲ್ಜಾತಿಯವರನ್ನು ಒಲೈಸಿ ಸರ್ಕ್ಯುಲೇಷನ್ ಮರಳಿ ಗಳಿಸಲು ಇಂತಹ ಎಲ್ಲಾ ಕಿತಾಪತಿ ಸುಳ್ಳು ಸುದ್ದಿ ಹಾಕುತ್ತಿರುತ್ತದೆ ಅಷ್ಟೇ. ಪ್ರದರ್ಶನಕಾರಿ ಬುದ್ಧಿಯ ಬಂಟರ ಮರಣ ವಾರ್ತೆಗಳಿಂದ ಪೈವಾಣಿಗೆ ಬರುತ್ತಿದ್ದ ಜಾಹೀರಾತು ಆದಾಯವನ್ನು ಈಗ ಇತರ ಪತ್ರಿಕೆಗಳು ಕಬಳಿಸುತ್ತಿರುವುದು ಈ ಮರಣವಾಣಿಯ ನಿದ್ದೆಗೆಡಿಸಿದೆ.

-ಹರೀಶ್ ಎಂ ಶೈ, ಉಡುಪಿ



ಉಡುಪಿ: ಉಡುಪಿ ಬೀಡಿನಗುಡ್ಡೆಯ ಮಹಾತ್ಮಾ ಗಾಂಧಿ ಬಯಲುರಂಗ ಮಂದಿರದಲ್ಲಿ ರವಿವಾರ ನಡೆದ 'ಚಲೋ ಉಡುಪಿ' ಸ್ವಾಭಿಮಾನಿ ಸಂಘರ್ಷ ಜಾಥಾ ಸಮಾರೋಪ ಸಮಾರಂಭದ ಊಟದ ವ್ಯವಸ್ಥೆಯಲ್ಲಿ ಉಂಟಾದ ಅವ್ಯವಸ್ಥೆಯ ಕುರಿತು ಪೊಲೀಸರು ಹರಂ ಆಗಿದ್ದರು. 1 ಗಂಟೆಯ ವೇಳೆಗೆ ಊಟ ವ್ಯವಸ್ಥೆಗೊಳಿಸಲಾಗುವುದು ಎಂದು ಹೇಳಿದ್ದರೂ, 3.30ರ ವರೆಗೂ ಸರಿಯಾಗಿ ಊಟವನ್ನು ವ್ಯವಸ್ಥೆಗೊಳಿಸಿರಲಿಲ್ಲ ಎಂದು ಮಂಗಳೂರು ಕೆಎಸ್‌ಆರ್‌ಪಿ ಪೊಲೀಸರು ದೂರಿದ್ದಾರೆ. ಬಳಿಕವೂ ಅನ್ನ, ಸಾಂಬಾರ್ ಅಷ್ಟನ್ನೇ ನೀಡಿದ್ದಾರೆ ಎಂದವರು ಆರೋಪಿಸಿದ್ದಾರೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...nkesh70@rediffmail.com ಗೆ ನುಡಿ ...ಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ...ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ...ಪ್ತವಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

16 ◀◀ ...ಉಪವಾಸ

ಅದರ ವಿರುದ್ಧ ಪೇಜಾವರ ಶ್ರೀಗಳು ನಡೆಸುವ ಉಪವಾಸ, ಸಾರ್ವಜನಿಕರ ಸಮ್ಮುಖದಲ್ಲಿ ಅವರು ನಡೆಸುವ ಒಂದು ಪ್ರತಿಭಟನೆಯ ರೂಪದಲ್ಲಿರುತ್ತದೆ. ಸಾಮಾನ್ಯವಾಗಿ ಇಂತಹ ಪ್ರತಿಭಟನೆಗಳು ಪ್ರಭುತ್ವದ ದಮನವನ್ನು ವಿರೋಧಿಸುವಂತಹವು; ನಾಗರಿಕರ ಸ್ವಾತಂತ್ರ್ಯದ ಎಲ್ಲೆಗಳನ್ನು ವಿಸ್ತರಿಸಿ, ಪ್ರಜಾಪ್ರಭುತ್ವವನ್ನು ಬಲಪಡಿಸುವುದು ಈ ಉಪವಾಸಗಳ ಉದ್ದೇಶ. ಉದಾಹರಣೆಗೆ ಸ್ವತಂತ್ರ ಭಾರತದ ಎರಡು ಅಸಾಧಾರಣ ಉಪವಾಸ ಸತ್ಯಾಗ್ರಹಗಳು ಇಂತಹ ಘನವಾದ ಉದ್ದೇಶಕ್ಕಾಗಿ ನಡೆದಂತಹವು. 1948ರ ಜನವರಿ 13ರಂದು ಗಾಂಧೀಜಿ ತನ್ನ ಬದುಕಿನ ಕಟ್ಟಕಡೆಯ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಅದು ಸ್ವತಂತ್ರ ಭಾರತದ ಮೊತ್ತ ಮೊದಲ ಉಪವಾಸ ಸತ್ಯಾಗ್ರಹವೂ ಹೌದು. ಗಾಂಧೀಜಿಯವರಿಗೆ ಆಗ 79ರ ಇಳಿ ವಯಸ್ಸು. ಮತೀಯ ಹಿಂಸೆಯಿಂದ ಪಕ್ಷುಬ್ಧಗೊಂಡಿದ್ದ ದೆಹಲಿಯಲ್ಲಿ ಸಂತ್ರಸ್ತರಿಗೆ ನ್ಯಾಯ ಒದಗಿಸುವುದಾಗಿತ್ತು. ದೇಶ ವಿಭಜನೆಯ ಹಿಂಸೆಯಿಂದ ಜನ ಕನಲಿದ್ದರು. ದೆಹಲಿಯ ಬಹುಸಂಖ್ಯಾತ ಹಿಂದೂಗಳು ಮುಸ್ಲಿಮರ ವಿರುದ್ಧ ಸೇಡಿನ ಸಿಟ್ಟಿನಲ್ಲಿ ಕುದಿಯುತ್ತಿದ್ದರು. ಈ ಸನ್ನಿವೇಶದಲ್ಲಿ ಗಾಂಧೀಜಿಯವರ ಈ ಉಪವಾಸ ಒಂದು ಪವಾಡದಂತೆ ಕಾಣುತ್ತದೆ. ತನ್ನ ಉಪವಾಸ ನಿಲ್ಲಿಸಲು ಅವರು ವಿಧಿಸಿದ ಶರತ್ತುಗಳು ಹೀಗಿದ್ದವು:

1) ದೆಹಲಿಯಿಂದ ಒಬ್ಬ ಮುಸ್ಲಿಮನೂ ಉಳಿಯಗೊಡದಂತೆ, ಎಲ್ಲರನ್ನೂ ಹೊರಗೆ ಅಟ್ಟುವ ಯತ್ನಗಳು ನಡೆಯುತ್ತಿವೆ; ಇದು ತಕ್ಷಣ ನಿಲ್ಲಬೇಕು.
2) ಗಲಭೆಯ ಕಾರಣಕ್ಕೆ ತಡೆಹಿಡಿಯಲಾಗಿದ್ದ ದೆಹಲಿಯ ಖ್ವಾಜಾ ಕುತುಬುದ್ದೀನ್ ದರ್ಗಾದ ಉರುಸ್ ನಿಗದಿತ ದಿನಾಂಕದಲ್ಲೇ ನಡೆಯಗೊಡಬೇಕು.
3) ಗುರುದ್ವಾರ ಮತ್ತು ದೇವಾಲಯಗಳನ್ನಾಗಿ ಪರಿವರ್ತಿಸಿದ ಮಸೀದಿಗಳನ್ನು ಮುಸ್ಲಿಮ್ ಸಮುದಾಯಕ್ಕೆ ಮರಳಿಸಬೇಕು.
4) ಮುಸ್ಲಿಮ್ ಪ್ರಜೆಗಳಿಗೆ ಅವರ ಮನೆಗಳಲ್ಲಿ ರಕ್ಷಣೆ ಇರಬೇಕು.
5) ಮುಸ್ಲಿಮರ ಮೇಲೆ ಹಾಕಲಾಗಿರುವ ಆರ್ಥಿಕ ಬಹಿಷ್ಕಾರ ಕೊನೆಗೊಳ್ಳಬೇಕು.
6) ದೇಶವಿಭಜನೆಯ ಒಪ್ಪಂದದ ಪ್ರಕಾರ, ಭಾರತ ಪಾಕಿಸ್ತಾನಕ್ಕೆ ಪಾವತಿ ಮಾಡಬೇಕಾಗಿರುವ ಹಣವನ್ನು ಕೂಡಲೇ ಕೊಡಬೇಕು.

ಸರಕಾರದ ಪ್ರತಿನಿಧಿಗಳು, ವಿವಿಧ ರಾಜಕೀಯ ಪಕ್ಷಗಳ ನಾಯಕರು ಹಾಗೂ ಹಿಂದೂ ಮಹಾಸಭಾ, ಆರ್‌ಎಸ್‌ಎಸ್ ಮುಂತಾದ ಸಂಘಟನೆಗಳು ಈ ಶರತ್ತುಗಳಿಗೆ ತಮ್ಮ ಒಪ್ಪಿಗೆಯನ್ನು ಖುದ್ದಾಗಿ ತಿಳಿಸಿದ ಮೇಲೆ 1948ರ ಜನವರಿ 18ರಂದು ಗಾಂಧೀಜಿ ತನ್ನ ಉಪವಾಸವನ್ನು ಕೊನೆಗೊಳಿಸಿದರು. ಆನಂತರ ಅವರು ಹೆಚ್ಚು ದಿನ ಬದುಕಿರಲಿಲ್ಲ, ಅದೇ ಜನವರಿ 30 ರಂದು ಅವರ ಹತ್ಯೆ ಆಯಿತು.

ಗಾಂಧೀಜಿಯವರ ಈ ಉಪವಾಸದಂತೆ ಪ್ರಭುತ್ವ ಮತ್ತು ನಾಗರಿಕ ಸಮಾಜ ಎರಡರ ನ್ಯಾಯವನ್ನೂ ಪ್ರಶ್ನಿಸಿದ ಇನ್ನೊಂದು ಸತ್ಯಾಗ್ರಹ, ಇರೋಮ್ ಶರ್ಮಿಳ ಅವರದ್ದು. ಗಾಂಧೀಜಿಯವರಾದರೋ 'ಮಹಾತ್ಮ' ಎಂದು ಹೆಸರಾದವರು. ಇರೋಮ್ ಶರ್ಮಿಳ ಮಣಿಪುರ ರಾಜ್ಯದ ಇಂಫಾಲ್ ನಗರದ ಓರ್ವ ಸಾಮಾನ್ಯ ತರುಣಿ. ಆ ರಾಜ್ಯದಲ್ಲಿ ಜ್ಯಾರಿಯಲ್ಲಿರುವ ಸಶಸ್ತ್ರ ಸೈನಿಕರ ವಿಶೇಷ ಅಧಿಕಾರ ಕಾಯ್ದೆ AFSPA ವಿರುದ್ಧ ಅವರು 2000 ನವೆಂಬರ್ 5 ರಂದು ತನ್ನ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದಾಗ ಅವರಿಗೆ 22ರ ಹರೆಯ. ಭಾರತ ಸೈನ್ಯದ ಅಸ್ಸಾಂ ರೈಫಲ್ಸ್ ತುಕಡಿಯ ಸೈನಿಕರು ತನ್ನ ಕಣ್ಣೆದುರೆ ಇಂಫಾಲ್ ನಗರದ ಹೊರವಲಯದಲ್ಲಿ ಭಯೋತ್ಪಾದಕರು ಎಂಬ ಸಂದೇಹದಲ್ಲಿ 10 ಜನ ನಾಗರಿಕರನ್ನು ಗುಂಡಿಟ್ಟು ಕೊಲ್ಲುವುದನ್ನು ನೋಡಿದ ಇರೋಮ್ ಶರ್ಮಿಳ ಸಶಸ್ತ್ರ ಸೈನಿಕರ ವಿಶೇಷ ಅಧಿಕಾರ ಕಾಯ್ದೆಯ ವಿರುದ್ಧ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಈ ಕರಾಳ ಕಾಯ್ದೆ ಸೈನಿಕರಿಗೆ ಅವರ ಕಾನೂನುಬಾಹಿರ ವರ್ತನೆಗಳ ಕುರಿತು ನಾಗರಿಕರು ನ್ಯಾಯಾಲಯಗಳಲ್ಲಿ ದೂರು ದಾಖಲಿಸುವುದರ ವಿರುದ್ಧ ಸಂಪೂರ್ಣ ರಕ್ಷಣೆ ಒದಗಿಸುತ್ತಿತ್ತು.

ಇರೋಮ್ ಶರ್ಮಿಳ ಅವರ ಈ ಉಪವಾಸಕ್ಕೆ ಸರಕಾರ ಮಣಿಯಲಿಲ್ಲ, ಇದೇ ಆಗಸ್ಟ್ ತಿಂಗಳಲ್ಲಿ ಅಂದರೆ ತನ್ನ ಉಪವಾಸ ಪ್ರಾರಂಭಿಸಿದ 16 ವರ್ಷಗಳ ನಂತರ ಇರೋಮ್ ಶರ್ಮಿಳ ಅದನ್ನು ಕೊನೆಗೊಳಿಸುವ ನಿರ್ಧಾರವನ್ನು ಪ್ರಕಟಿಸಿದರು. ಜೊತೆಗೆ ಸಶಸ್ತ್ರ ಸೈನಿಕರ ವಿಶೇಷ ಅಧಿಕಾರ ಕಾಯ್ದೆಯ ವಿರುದ್ಧ ತನ್ನ ಹೋರಾಟವನ್ನು ಮುಂದುವರಿಸುವುದಾಗಿ ಘೋಷಿಸಿದರು. ಗಾಂಧೀಜಿ ಹಾಗೂ ಇರೋಮ್ ಶರ್ಮಿಳ ಅವರ ಉಪವಾಸ ಪ್ರಜೆಗಳ ಹಕ್ಕು, ಸ್ವಾತಂತ್ರ್ಯ ಮತ್ತು ನ್ಯಾಯಕ್ಕಾಗಿ ಪ್ರಭುತ್ವದ ವಿರುದ್ಧ ನಡೆದ ಪ್ರತಿಭಟನೆಗಳಾಗಿದ್ದವು. ಪೇಜಾವರ ಶ್ರೀಗಳವರ ಪ್ರಸ್ತಾಪಿತ ಉಪವಾಸ ಯಾತಕ್ಕಾಗಿ? ಅದು ಜನರ ಶಾಂತಿಯುತ ಪ್ರತಿಭಟನೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಿರಾಕರಿಸುವ ಯತ್ನವಲ್ಲವೇ?

■ ಜೆ. ರಾಜಶೇಖರ

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly

ಹ್ಯಾಂಗೋವರ್‌ನಲ್ಲಿ ನಿರ್ದೇಶಕ


ನಿರ್ದೇಶಕ ವಿಶಲ್ ಭಟ್ ಮತ್ತೊಂದು ಹೊಸ ಸಿನಿಮಾವನ್ನು ಕೈಗೆತ್ತಿಕೊಂಡಿದ್ದಾರೆ. ದುನಿಯಾ ರಶ್ಮಿ ಮುಖ್ಯ ಭೂಮಿಕೆಯ 'ಪ್ರೀತಿ ಕಿತಾಬು' ಎಂಬ ವಿಭಿನ್ನ ರೀತಿಯ ಸಿನಿಮಾ ಮಾಡಿದ್ದ ಇವರು, ಈ ಬಾರಿ ಕಾಮಿಡಿ ವಿತ್ ಸಸ್ಪೆನ್ಸ್ ಥ್ರಿಲ್ಲರ್ ಸ್ಟೋರಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಚಿತ್ರಕ್ಕೆ 'ಹ್ಯಾಂಗೋವರ್' ಎಂದು ಹೆಸರಿಟ್ಟಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ರೀತಿಯ ಸಿನಿಮಾಗಳೇ ಸಕ್ಸೆಸ್ ಆಗುತ್ತಿವೆ. ಹಾಗಾಗಿ ವಿಶಲ್ ಕೂಡ ಅದೇ ಮಾದರಿಯ ಚಿತ್ರವನ್ನು ಮಾಡಲು ಮುಂದಾಗಿದ್ದಾರೆ. ಮೂವರು ನಾಯಕರು ಮತ್ತು ಮೂವರು ಹಿರೋಯಿನ್‌ಗಳ ಸುತ್ತ ಕತೆ ಹೆಣೆದಿದ್ದಾರೆ.



ಸಸ್ಪೆನ್ಸ್ ಮತ್ತು ಥ್ರಿಲ್ಲರ್ ಅಂಶದ ಸಿನಿಮಾ ಇದಾಗಿದ್ದರೂ, ಸಾಕಷ್ಟು ಕಾಮಿಡಿ ಅಂಶಗಳೂ ಇಲ್ಲಿವೆಯಂತೆ. ಇಡೀ ಸಿನಿಮಾವನ್ನು ಕಾಮಿಡಿ ಮೂಲಕವೇ ಹೇಳಲು ಹೊರಟಿರುವುದು ಚಿತ್ರದ ವಿಶೇಷವಂತೆ. "ಸಿನಿಮಾದ ಚಿತ್ರಕತೆ ವಿಭಿನ್ನವಾಗಿದೆ. ರಿವರ್ಸ್ ಸ್ಕ್ರೀನ್ ಪ್ಲೇನಲ್ಲಿ ಸ್ಟೋರಿಯನ್ನು ಹೇಳುತ್ತಿದ್ದೇನೆ. ಹಾಗಾಗಿ ಅದು ವಿಭಿನ್ನ ರೀತಿಯ ಅನುಭವ ನೀಡುತ್ತದೆ" ಎನ್ನುವುದು ನಿರ್ದೇಶಕರ ಮಾತು. ಚಿತ್ರದ ಕಥೆ ಮತ್ತು ಚಿತ್ರಕಥೆಯನ್ನು ನಿರ್ದೇಶಕರೇ ಬರೆದಿದ್ದಾರೆ. ಮೈಸೂರಿನ ಹುಡುಗ ಭರತ್‌ನನ್ನು ಈ ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಪರಿಚಯಿಸುತ್ತಿದ್ದಾರೆ. ಭರತ್ ಈ ಸಿನಿಮಾದಲ್ಲಿ ಸೂರ್ಯ ಅನ್ನೋ ಪಾತ್ರವನ್ನು ನಿರ್ವಹಿಸಲಿದ್ದಾರೆ. ಅಕಿರ ಚಿತ್ರದ ಮೂಲಕ ಛಾಯಾಗ್ರಾಹಕರಾಗಿ ಪರಿಚಯವಾದ ಯೋಗಿ ಅವರ ಸಿನಿಮಾಟೋಗ್ರಫಿ ಚಿತ್ರಕ್ಕಿದೆ. ಉಳಿದ ಪಾತ್ರಗಳ ಆಯ್ಕೆ ನಡೆಯುತ್ತಿದೆ. ಸಿನಿಮಾದ ಮತ್ತೊಂದು ವಿಶೇಷತೆ ಅಂದರೆ, ತೆಲುಗು ಮತ್ತು ಕನ್ನಡದಲ್ಲಿ ಏಕಕಾಲಕ್ಕೆ ಈ ಸಿನಿಮಾ ನಿರ್ಮಾಣ ಆಗಲಿರುವುದು.

ಸಿಲಿಕಾನ್‌ನಲ್ಲಿ ಸೂರಜ್

ದರ್ಶನ್ ಬ್ಯಾನರ್ ಅಡಿಯಲ್ಲಿ ಮೂಡಿಬಂದ 'ಮದುವೆಯ ಮಮತೆಯ ಕರೆಯೋಲೆ' ಸಿನಿಮಾದಿಂದ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಂಡವರು ಸೂರಜ್ ಗೌಡ. ಆನಂತರ ಅವರು ಯಾವುದೇ ಚಿತ್ರಕ್ಕೆ ಸಹಿ ಮಾಡಿರಲಿಲ್ಲ, ಈ ನಡುವೆ ಅವರು ಕಿರುತೆರೆಗೆ ಹೋಗಲಿದ್ದಾರೆ ಅನ್ನುವ ಸುದ್ದಿಯೂ ಕೇಳಿಬಂದಿತ್ತು.



ಈಗ ಸೂರಜ್ ಹೊಸ ಸಿನಿಮಾವನ್ನು ಒಪ್ಪಿಕೊಂಡಿದ್ದಾರೆ. ಶ್ರೀನಗರ ಕಿಟ್ಟಿ ನಾಯಕನಾಗಿ ನಟಿಸುತ್ತಿರುವ 'ಸಿಲಿಕಾನ್ ಸಿಟಿ' ಚಿತ್ರದಲ್ಲಿ ಸೂರಜ್ ನಾಯಕನ ತಮ್ಮನಾಗಿ ಕಾಣಿಸಿಕೊಳ್ಳಲಿದ್ದಾರೆ. ಮೊದಲ ಸಿನಿಮಾದಲ್ಲಿ ಚಾಕ್ಲೆಟ್ ಬಾಯ್ ಆಗಿ ಕಾಣಿಸಿಕೊಂಡಿದ್ದ ಸೂರಜ್‌ಗೆ ಈ ಚಿತ್ರದಲ್ಲಿ ಸಕತ್ ಲುಕ್ ಸಿಕ್ಕಿದೆ. ಹಾಗಾಗಿಯೇ ಪಾತ್ರಕ್ಕೆ ವಿಶೇಷ ತರಬೇತಿಯನ್ನು ಪಡೆಯುತ್ತಿದ್ದಾರೆ. ದೇಹವನ್ನು ಹುರಿಗೊಳಿಸಿಕೊಳ್ಳುತ್ತಿದ್ದಾರೆ. 'ಸಿಲಿಕಾನ್ ಸಿಟಿ'ಯ ಕತೆಯೇ ವಿಭಿನ್ನವಾಗಿದೆಯಂತೆ. ಬೆಂಗಳೂರಿನಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿದ ಚಿತ್ರ ಇದಾಗಿದ್ದು, ಮುರಳಿ ಗುರಪ್ಪ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಮೊನ್ನೆಯಷ್ಟೆ ಚಿತ್ರಕ್ಕೆ ಮುಹೂರ್ತವಾಗಿದೆ.

ಕೊನೆಗೂ ರಚಿತಾಗೆ ಸಿಕ್ತು ಹೊಸ ಸಿನಿಮಾ

ನಟಿ ರಚಿತಾ ರಾಮ್ ಸಿನಿಮಾ ಇಲ್ಲದೇ ಖಾಲಿ ಕೂತಿದ್ದಾರೆ ಅನ್ನುವ ಬೇಸರ ಅವರ ಅಭಿಮಾನಿಗಳಲ್ಲಿತ್ತು, ಅವರೂ ಕೂಡ ರಿಯಾಲಿಟಿ ಷೋ ಮೂಲಕ ಚಾಲ್ತಿಯಲ್ಲಿರಲು ಕಷ್ಟಪಡುತ್ತಿದ್ದರು. ಈ ನಡುವೆ ರಚಿತಾರ ಅಭಿಮಾನಿಗಳಿಗಾಗಿ ಸಂತಸದ ಸುದ್ದಿಯೊಂದು ಹೊರಬಿದ್ದಿದೆ. ಕ್ರೇಜಿಸ್ಟಾರ್ ರವಿಚಂದ್ರನ್ ಪುತ್ರ ಮನೋರಂಜನ್ ಅವರ ಹೊಸ ಸಿನಿಮಾಗೆ ರಚಿತಾ ನಾಯಕಿಯಾಗಿ ಆಯ್ಕೆಯಾಗಿದ್ದಾರೆ.


ಸದ್ಯ ಧ್ರುವ ಸರ್ಜಾ ನಟನೆಯ 'ಭರ್ಜರಿ' ಸಿನಿಮಾದ ಶೂಟಿಂಗ್ ಮುಗಿಸಿರುವ ರಚಿತಾ ರಾಮ್ ಆನಂತರ ಯಾವುದೇ ಸಿನಿಮಾ ಇಲ್ಲದೇ ಪರದಾಡುತ್ತಿದ್ದರು. ವಾರಕ್ಕೊಂದು ಬಾರಿ ಡಾನ್ಸ್ ರಿಯಾಲಿಟಿ ಷೋನ ಶೂಟಿಂಗ್ ಬಿಟ್ಟರೆ, ಮಿಕ್ಕಂತೆ ಯಾವುದೇ ಕೆಲಸ ಅವರಿಗಿರಲಿಲ್ಲ. ಈಗ ರಚಿತಾ ಮುಖದಲ್ಲೂ ಮಂದಹಾಸ ಮೂಡಿದೆ. ಅದರಲ್ಲೂ ಈ ಸಿನಿಮಾವನ್ನು ರಾಕ್‌ಲೈನ್ ವೆಂಕಟೇಶ್ ನಿರ್ಮಾಣ ಮಾಡುತ್ತಿರುವುದರಿಂದ ಹಿರಿಮೆಗೆ ಮತ್ತೊಂದು ಗರಿ ಸಿಕ್ಕಂತಾಗಿದೆ.

ತಮಿಳಿನ 'ವೇಲಾಯ್ ಇಲ್ಲ ಪಟ್ಟಾಧರಿ' ಸಿನಿಮಾದ ರೀಮೇಕ್ ಚಿತ್ರ ಇದಾಗಿದ್ದು, ತಮಿಳಿನಲ್ಲಿ ಧನುಷ್ ಮಾಡಿದ್ದ ಪಾತ್ರವನ್ನು ಕನ್ನಡದಲ್ಲಿ ಮನೋರಂಜನ್ ನಿರ್ವಹಿಸಲಿದ್ದಾರೆ. ಅಮಲಾ ಪೌಲ್ ಪಾತ್ರದಲ್ಲಿ ರಚಿತಾ ಕಾಣಿಸಿಕೊಳ್ಳಲಿದ್ದಾರೆ. 'ರನ್ನ' ಚಿತ್ರ ಖ್ಯಾತಿಯ ನಂದಕಿಶೋರ್ ಚಿತ್ರದ ನಿರ್ದೇಶಕ.



ಸುದೀಪ್ ವಿರುದ್ಧ ಯ...

ಸುದೀಪ್ ಮತ್ತು ಯಶ್ ವಿರುದ್ಧ ಬಣದ ನಟರು ಅನ್ನುವುದು... ಉಳಿದಿಲ್ಲ, ವಯಸ್ಸು ಮತ್ತು ಅನುಭವದಲ್ಲಿ ಸುದೀಪ್ ದೊಡ್ಡ... ಅವರ ಸಿನಿಮಾಗೆ ಈ ಬಾರಿ ಸೆಡ್ಡು ಹೊಡೆಯುತ್ತಿದ್ದಾರೆ ರಾಕಿ... ಯಶ್. ಈ ದೀಪಾವಳಿಯಂದು ಸುದೀಪ್ ಮತ್ತು ಉಪೇಂದ್ರ ನಟನೆಯ 'ಮುಕುಂದ ಮುರಾರಿ' ಮತ್ತು ಯಶ್ ಮುಖ್ಯಭೂಮಿಕೆಯ 'ಸಂತು' ಸಿನಿಮಾ ತೆರೆಗೆ ಬರುತ್ತಿವೆ. ಇದೇ ಮೊದಲ ಬಾರಿಗೆ ಇವರು ಮುಖಾಮುಖಿ ಆಗುತ್ತಿರುವುದರಿಂದ ಬೆಳಕಿನ ಹಬ್ಬಕ್ಕೆ ಮತ್ತಷ್ಟು ರಂಗು ತುಂಬಲಿದೆ.



ಸಾಮಾನ್ಯವಾಗಿ ಸ್ಟಾರ್ ಸಿನಿಮಾಗಳು ರಿಲೀಸ್ ಆಗುವಾಗ ಮತ್ತೊಬ್ಬ ಹೆಸರಾಂತ ನಟನ ಸಿನಿಮಾ ತೆರೆಗೆ ಬ... ಯಾರೂ ಆ ಧೈರ್ಯವನ್ನೂ ಮಾಡುವುದಿಲ್ಲ, ಆದರೆ, ಈ ಬಾರಿ ಅವ... ಯುದ್ಧಕ್ಕೆ ಸ್ಯಾಂಡಲ್‌ವುಡ್ ರಣರಂಗ ಸಿದ್ಧವಾಗಿದೆ. ಮೂವರು ... ಅಪಾರ ಅಭಿಮಾನಿ ಬಳಗವೇ ಇರುವುದರಿಂದ, ಸಾಮಾಜಿಕ ಜಾಲ... ಅವರೆಲ್ಲ ಈಗಿನಿಂದಲೇ ಕಿತ್ತಾಟ ಶುರು ಮಾಡಿದ್ದಾರೆ. ಈ ನಟರ ಸಾ... ಏನೇ ಇದ್ದರೂ ಅದು ಪರಿಣಾಮ ಬೀರುವುದು ನಿರ್ಮಾಪಕರ... ಹಾಗಾಗಿ ಈ ಎರಡೂ ಸಿನಿಮಾಗಳ ನಿರ್ಮಾಪಕರು ಸಂಕಷ್ಟದ... ಎದುರಿಸುತ್ತಿದ್ದಾರೆ. ತಮ್ಮ ನಟರ ಮನವೊಲಿಸುವ ಮೂಲಕ ಒಬ್ಬರ ಸಿ... ದೀಪಾವಳಿಯಂದು ತೆರೆಗೆ ತರಲು ಪ್ಲಾನ್ ಮಾಡಿದ್ದಾರೆ. ಆದರೆ, ... ಒಪ್ಪಿಸುವುದು ಕಷ್ಟ ಅನ್ನುತ್ತಿವೆ ಸ್ಯಾಂಡಲ್‌ವುಡ್ ಮೂಲಗಳು. ಈ ಯು... ಯಾರು ಗೆಲ್ಲುತ್ತಾರೋ ಕಾದು ನೋಡಬೇಕಿದೆ.

ಒಂದಾಗಲಿದ್ದಾರಾ ಈ ಸ್ಟಾರ...

ಕನ್ನಡದಲ್ಲಿ ಮಲ್ಟಿಸ್ಟಾರ್ ಸಿನಿಮಾಗಳು ಹೆಚ್ಚಾಗುತ್ತಿವೆ. ಅದರಲ್ಲೂ ಸುದೀಪ್ ಅನೇಕ ನಟರ ಜತೆ ತೆರೆ ಹಂಚಿಕೊಂಡು ದಾಖಲೆ ಬರೆದಿದ್ದಾರೆ. ಈಗ ಅದೇ ಹಾದಿಯಲ್ಲೇ ಸಾಗುತ್ತಿದ್ದಾರೆ ಯಶ್ ಮತ್ತು ಶಿವರಾಜ್‌ಕುಮಾರ್. ಈ ಜೋಡಿಯು ಮುಂದಿನ ದಿನಗಳಲ್ಲಿ ಜಂಟಿಯಾಗಿ ನಟಿಸಲಿದ್ದಾರೆ ಅನ್ನುವ ಸುದ್ದಿ ಈಗ ಗಾಂಧಿನಗರದಲ್ಲಿ ಸಂಚಲನವುಂಟುಮಾಡಿದೆ. ಸಿನಿಮಾ ಸೆಟ್ಟೇರಲು ಇನ್ನೂ ಒಂದು... ಬೇಕಾಗಬಹುದಾದರೂ, ಸುದ್ದಿಯಂತೂ ಕುತೂಹಲ ಮೂಡಿಸಿ... ಸಿನಿಮಾವನ್ನು ರಾಕ್‌ಲೈನ್ ವೆಂಕಟೇಶ್ ನಿರ್ಮಾಣ ಮಾಡಲಿದ್ದು, ... ನಿರ್ದೇಶಕರೇ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲಿದ್ದಾರಂತೆ. ಆದರೆ, ಆ ನಿ... ಹೆಸರನ್ನು ಬಹಿರಂಗಗೊಳಿಸುತ್ತಿಲ್ಲ ನಿರ್ಮಾಪಕರು. ಬಲ್ಲ ಮೂಲಕಗಳ... ನೃತ್ಯ ನಿರ್ದೇಶಕ ಕಂ ನಿರ್ದೇಶಕ ಹರ್ಷ ಈ ಚಿತ್ರದ ನಿರ್ದೇಶಕರು ಎನ್ನಲಾ... ಯಶ್ ಸದ್ಯ 'ಕೆಜಿಎಫ್' ಸಿನಿಮಾದ ಶೂಟಿಂಗ್‌ಗಾಗಿ ... ಮಾಡಿಕೊಳ್ಳುತ್ತಿದ್ದಾರೆ. ಶಿವರಾಜ್‌ಕುಮಾರ್ ಕೂಡ 'ಸನ್ ಆಫ್ ಬ... ಮನುಷ್ಯ' ಚಿತ್ರೀಕರಣದಲ್ಲಿ ಬಿಜಿಯಲ್ಲಿದ್ದಾರೆ. ಇಬ್ಬರ ಡೇಟ್ ಹೊಂ... ಮಾಡಿಕೊಂಡು ಮುಂದಿನ ವರ್ಷದಲ್ಲಿ ಶೂಟಿಂಗ್ ಶುರು ಮಾಡಲಿ... ನಿರ್ಮಾಪಕರು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com